www.KannadaPrabha.in ಶನಿವಾರ 9.05.2026 • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ Kannada Prabha • Daily • Saturday • 09.05.2026 • Volume 60 • Issue 128 • Pages 14+12+2+4 • Price ₹7 Mangaluru

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಭಾರತ ಟಿ20 ತಂಡದ ನಾಯಕ ಸ್ಥಾನಕ್ಕೆ ಶ್ರೇಯರ್ ಅಯ್ಯರ್?

ಬ್ಯಾಟಿಂಗ್‌ನಲ್ಲಿ ಹಾಲಿ ನಾಯಕ ಸೂರ್ಯಕುಮಾರ್ ಯಾದವ್ ಸತತ ವೈಫಲ್ಯ ಹಿನ್ನೆಲೆ. ಭಾರತ ಟಿ20 ತಂಡದ ನಾಯಕತ್ವ ಶ್ರೇಯಸ್ ಅಯ್ಯರ್‌ಗೆ ವಹಿಸುವ ಸಾಧ್ಯತೆ. ಐಪಿಎಲ್, ದೇಸಿ ಟೂರ್ನಿಗಳಲ್ಲಿ ಉತ್ತಮ ಸಾಧನೆ ತೋರುತ್ತಿರುವ ಶ್ರೇಯಸ್. 10

www.KannadaPrabha.in ಶನಿವಾರ 9.05.2026 • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ Kannada Prabha • Daily • Saturday • 09.05.2026 • Volume 60 • Issue 128 • Pages 14+12 +2 • Price ₹7 Mangaluru

ಕನ್ನಡಪ್ರಭ
ನೇರ.ದಿಟ್ಟ.ನಿರಂತರ



₹40 ಕೋಟಿ ತೆರಿಗೆ: ಜಾರ್ಖಂಡ್ ಬಿಹಾರ ವಲಯಕ್ಕೆ ಧೋನಿ ನಂ.1

ಪ್ರಸಕ್ತ ಹಣಕಾಸು ವರ್ಷದಲ್ಲಿ ₹40 ಕೋಟಿ ತೆರಿಗೆ ಪಾವತಿಸಿದ ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ. ಈ ಮೂಲಕ ಬಿಹಾರ, ಜಾರ್ಖಂಡ್ ತೆರಿಗೆ ವಲಯದಲ್ಲೇ ನಂ.1 ತೆರಿಗೆದಾರನೆಂಬ ಹಿರಿಮೆಗೆ ಜಾರ್ಖಂಡ್ ಮೂಲದ ಕ್ರಿಕೆಟಿಗ ಪಾತ್ರ. 10



ಅಸ್ಸಾಂ, ಬಂಗಾಳದಲ್ಲೂ ಬಿಜೆಪಿ ಮತ ಚೋರಿ: ರಾಹುಲ್ ಆರೋಪ ↘ 9



ಹನಿಟ್ರ್ಯಾಪ್ ಕುರಿತು ನಿಗಾ ಇಟ್ಟಿರಿ: ಆಟಗಾರರಿಗೆ ಬಿಸಿಸಿಐ ಎಚ್ಚರಿಕೆ! ↘10



ವಂದೇ ಮಾತರಂಗೆ ರಾಷ್ಟ್ರಗೀತೆ ರೀತಿ ರಕ್ಷಣೆ ಸರಿಯಲ್ಲ: ಓವೈಸಿ ↘9



ವೆಚ್ಚ ಕಡಿತ: ಏರಿಂಡಿಯಾದ ಸಿಬ್ಬಂದಿ ವೇತನ ಹೆಚ್ಚಳ ವಿಳಂಬ ↘ 9

ಬಿಎಸ್‌ವೈ ಸುವರ್ಣೋತ್ಸವ

ಇಂದಿನ ಸಂಚಿಕೆ ಜತೆ 12 ಪುಟಗಳ ವಿಶೇಷ ಪುರವಣಿ





ಚಿತ್ರದುರ್ಗದಲ್ಲಿಂದು ಬಿಎಸ್‌ವೈ ಅಭಿಮಾನೋತ್ಸಾಹ!

ಬಿಎಸ್‌ವೈ ರಾಜಕೀಯಕ್ಕೆ 50 ವರ್ಷ | ಮಧ್ಯಾಹ್ನ 12 ಗಂಟೆಗೆ ಕಾರ್ಯಕ್ರಮಕ್ಕೆ ಚಾಲನೆ | ಅಮಿತ್ ಶಾ ಭಾಗಿ

• **ರಮೇಶ್ ಬಿದರಕೆರೆ**
ಕನ್ನಡಪ್ರಭ ವಾರ್ತೆ ಚಿತ್ರದುರ್ಗ

ಕರ್ನಾಟಕದ ಜನಪ್ರಿಯ ಜನನಾಯಕ, ರೈತ ಪರ ಹೋರಾಟಗಾರ, ಕರ್ನಾಟಕದಲ್ಲಿ ಬಿಜೆಪಿ ಕಟ್ಟಿ ಬೆಳೆಸಿ, ದಕ್ಷಿಣ ಭಾರತದಲ್ಲಿ ಮೊದಲ ಸಲ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತಂದ ನಾಯಕ ಬಿ.ಎಸ್.ಯಡಿಯೂರಪ್ಪ ರಾಜಕಾರಣಕ್ಕೆ ಬಂದು ಭರ್ತಿ ಅರ್ಧ ಶತಮಾನ ತುಂಬಿದ ಸಂತಸದ ಘಳಿಗೆಯನ್ನು ಸಾಕಾರಗೊಳಿಸಲು ಕೋಟೆನಾಡು ಚಿತ್ರದುರ್ಗದಲ್ಲಿ ಏ. 9ರಂದು ಆಯೋಜಿಸಿರುವ ಅಭಿಮಾನೋತ್ಸವದ ಸಿದ್ಧತೆಗಳು ಪೂರ್ಣಗೊಂಡಿವೆ.

ಚಿತ್ರದುರ್ಗದ ದಾವಣಗೆರೆ ರಸ್ತೆಯ ಶ್ರೀ ಮಾದಾರ ಚನ್ನಯ್ಯ ಗುರುಪೀಠದ ಹಿಂಭಾಗದಲ್ಲಿ 60 ಎಕರೆಗೂ ಹೆಚ್ಚು ಜಾಗದಲ್ಲಿ ಕಾರ್ಯಕ್ರಮಕ್ಕೆ ಕ್ಷಣಗಣನೆ ಆರಂಭವಾಗಿದೆ. ಇಡೀ ಕಾರ್ಯಕ್ರಮದ ಉಸ್ತುವಾರಿಯನ್ನು ಶಾಸಕ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಹಿಸಿಕೊಂಡಿದ್ದಾರೆ.

ತಂದೆಯ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಂಸದ ಬಿ.ವೈ.ರಾಘವೇಂದ್ರ ಅವರು ಟೊಂಕಕಟ್ಟಿ ನಿಂತಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ↘ 13

1 ಲಕ್ಷ ಕಾರ್ಯಕ್ರಮದ ಪ್ರಧಾನ ವೇದಿಕೆಯಲ್ಲಿ ಒಂದು ಲಕ್ಷ ಆಸನ ವ್ಯವಸ್ಥೆ

10 ಲಕ್ಷ ಕಾರ್ಯಕ್ರಮಕ್ಕೆ ಭಾಗಿಯಾಗುವ ಅಭಿಮಾನಿಗಳ ಸಂಖ್ಯೆ 10 ಲಕ್ಷ

250 ಊಟದ ಸಿದ್ಧತೆಗಾಗಿ ಬಾಣಸಿಗರು

200 ಇಷ್ಟು ಮಂದಿ ಮಠಾಧೀಶರು ಕಾರ್ಯಕ್ರಮದಲ್ಲಿ ಭಾಗಿ

112 ಕಾರ್ಯಕ್ರಮಕ್ಕಾಗಿ ಇಷ್ಟು ಅಡಿ ಉದ್ದದ ವೇದಿಕೆ ಸಿದ್ಧ

2500 ಭದ್ರತೆಗಾಗಿ ಪೊಲೀಸರ ನಿಯೋಜನೆ

ಬಿಎಸ್‌ವೈ ಕಾರು ಪ್ರದರ್ಶನ

ದಶಕಗಳ ಹಿಂದೆ ಪಕ್ಷ ಕಟ್ಟುವಾಗ ಬಿಎಸ್‌ವೈ ಅವರು ರಾಜ್ಯಪ್ರವಾಸಕ್ಕೆ ಬಳಸುತ್ತಿದ್ದ ಅಂಬಾಸಿಡರ್‌ಕಾರನ್ನು ಕಾರ್ಯಕ್ರಮ ನಡೆಸುವ ಸ್ಥಳದಲ್ಲಿ ಪ್ರದರ್ಶಿಸಲಾಗಿದೆ.

24 ತಮಟೆಗಳ ಬೃಹತ್ ಹಾರ

ಶುಕ್ರವಾರ ಚಿತ್ರದುರ್ಗದಲ್ಲಿ ನಡೆದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಪುರಪ್ರವೇಶ ವೇಳೆ ಮಾದಿಗ ಸಮುದಾಯದ ಮುಖಂಡರು 40 ಅಡಿ ಎತ್ತರದ 24 ತಮಟೆಗಳಿದ್ದ ಹಾರ ಹಾಕಿದರು

ಪುದುಚೇರಿ ಸಿಎಂ ಆಗಿ ರಂಗಸ್ವಾಮಿ 13ಕ್ಕೆ ಪ್ರಮಾಣ

ಪುದುಚೇರಿ: ಪುದುಚೇರಿಯಲ್ಲಿ ಎನ್‌ಡಿಎ ಕೂಟದ ಎಐಎನ್‌ಆರ್‌ಸಿ ಪಕ್ಷದ ನಾಯಕ ರಂಗಸಾಮಿ ಶಾಸಕಾಂಗ ಪಕ್ಷದ ನಾಯಕನಾಗಿ ಪುನಾರಾಯ್ಕೆ ಆಗಿದ್ದಾರೆ. ಮೇ13ರಂದು ರಂಗಸಾಮಿ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ. ವಿವರ ↘ 9

ತೆಲಂಗಾಣ ಶಾಲೆಗಾಗಿ 800 ವರ್ಷ ಹಳೆಯ ಶಿವ ದೇಗುಲ ಧ್ವಂಸ

ವಾರಂಗಲ್: ಸರ್ಕಾರಿ ಶಾಲೆಯ ನಿರ್ಮಾಣಕ್ಕಾಗಿ ಕಾಕತಿಯ ಕಾಲದ 800 ವರ್ಷ ಪುರಾತನ ಶಿವನ ದೇಗುಲವೊಂದನ್ನು ಇಲ್ಲಿನ ಖಾನಾಪುರ ಮಂಡಲದ ಅಶೋಕ ನಗರದಲ್ಲಿ ಧ್ವಂಸಗೊಳಿಸಲಾಗಿದೆ. ಇದಕ್ಕೆ ಸ್ಥಳೀಯರ ಭಾರೀ ಆಕ್ರೋಶ. ವಿವರ ↘ 9

ಮಧ್ಯಪ್ರಾಚ್ಯ ಬಿಕ್ಕಟ್ಟು: ತೈಲ ಕಂಪನಿಗಳಿಗೆ 30000 ಕೋಟಿ ನಷ್ಟ

ನವದೆಹಲಿ: ಮಧ್ಯಪ್ರಾಚ್ಯ ಸಂಘರ್ಷದ ಬಳಿಕ ಕಚ್ಚಾತೈಲದ ಬೆಲೆ ಏರಿಕೆಯಾದರೂ ಸ್ಥಳೀಯವಾಗಿ ದರ ಏರಿಸದ ಹಿನ್ನೆಲೆಯಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಮಾರ್ಚ್ ಬಳಿಕ 30000 ಕೋಟಿ ರು.ನಷ್ಟು ಭಾರೀ ನಷ್ಟ. ವಿವರ ↘ 9

ಮೇ 15ರ ಒಳಗೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಸಂಭವ

ನವದೆಹಲಿ: ಕಚ್ಚಾತೈಲ ಬೆಲೆ ಗಗನಕ್ಕೇರಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಮೇ15ರೊಳಗೆ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಮಾಡಲಿದೆ ಎನ್ನಲಾಗಿದೆ. ಯುದ್ಧಾರಂಭದ ವೇಳೆ ಬ್ಯಾರೆಲ್‌ಗೆ 70 ಡಾಲರ್ ಇದ್ದ ಕಚ್ಚಾತೈಲ ಬೆಲೆ ಈಗ 110 ಡಾಲರ್‌ದಾಟಿದೆ. ವಿವರ ↘ 10

ಶೃಂಗೇರಿ ಅಂಚೆ ಮರುಮತ ಎಣಿಕೆ: ಕಾಂಗ್ರೆಸ್ ಸುಪ್ರೀಂಗೆ

ನವದೆಹಲಿ: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತ ಮರು ಎಣಿಕೆ ಫಲಿತಾಂಶದ ವಿರುದ್ಧ ಇದೀಗ ಟಿ.ಡಿ.ರಾಜೇಗೌಡ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ. ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ವಿಚಾರಣೆ ಬರುವ ಸಾಧ್ಯತೆ ಇದೆ. ವಿವರ ↘ 6

ವಿಜಯಕ್ಕೆ 118 ಸಮಸ್ಯೆ!

3ನೇ ಬಾರಿ ಗೌರ್ನರ್ ಭೇಟಿಯಾದ ವಿಜಯ್ | ಬಹುಮತಕ್ಕೆ 2 ಕೊರತೆ
ಇಂದೂ ಪ್ರಮಾಣವಚನ ಸ್ವೀಕಾರ ಇಲ್ಲ | ತಮಿಳುನಾಡಿನಲ್ಲಿ ಹೈಡ್ರಾಮಾ

• **ಪಿಟಿಐ** ಚೆನ್ನೈ

ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ ಹಾಗೂ ನಟ ವಿಜಯ್‌ಗೆ ತಮಿಳುನಾಡಿನ ಮುಖ್ಯಮಂತ್ರಿ ಆಗುವ ಯೋಗ ಇನ್ನೂ ತೂಗುಯ್ಯಾಲೆಯಲ್ಲಿದೆ. ಬಹುಮತಕ್ಕೆ ಬೇಕಾದ 118 ಶಾಸಕರ ಪಟ್ಟಿಯನ್ನು ಸಲ್ಲಿಸಲು ಪುನಃ ವಿಜಯ್ ವಿಫಲರಾಗಿದ್ದಾರೆ ಎಂದು ಹೇಳಲಾಗಿದೆ. ಹೀಗಾಗಿ ಶನಿವಾರ ಅವರು ಪ್ರಮಾಣ ವಚನ ಸ್ವೀಕರಿಸುವುದು ಅನುಮಾನವಾಗಿದೆ.

ಶುಕ್ರವಾರ ಸಂಜೆ ವಿಜಯ್ 3ನೇ ಬಾರಿಗೆ ರಾಜ್ಯಪಾಲ ರಾಜೇಂದ್ರ ಅರ್ಲೇಕರ್‌ರನ್ನು ಭೇಟಿ ಮಾಡಿ ಶಾಸಕರ ಬೆಂಬಲ ಪತ್ರ ಸಲ್ಲಿಸಿದರು. ಬಳಿಕ ಶನಿವಾರ ಬೆಳಿಗ್ಗೆ 11 ಗಂಟೆಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ನಿರೀಕ್ಷೆ ಇತ್ತು.

ಆದರೆ ನಾಟಕೀಯ ವಿದ್ಯಮಾನದಲ್ಲಿ, ವಿಜಯ್ ಅವರು ಅಗತ್ಯ ಬಹುಮತಕ್ಕೆ ಬೇಕಾದ 118ರ ಬದಲು ಕೇವಲ 116 ಶಾಸಕರ ಬೆಂಬಲ ಪತ್ರ ಸಲ್ಲಿಸಿದ್ದು, ಇನ್ನೂ 2 ಸ್ಥಾನಗಳ ಕೊರತೆ ಎದುರಿಸುತ್ತಿದ್ದಾರೆ ಎಂದು ಗೊತ್ತಾಗಿದೆ. ಹೀಗಾಗಿ ಅವರನ್ನು ಸರ್ಕಾರ ರಚನೆಗೆ ಆಹ್ವಾನಿಸಲು ರಾಜ್ಯಪಾಲರು ನಿರಾಕರಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಡಿಸಿಎಂ ಸ್ಥಾನ ಕೋರಿದ ವಿಸಿಕೆ: 234 ಸ್ಥಾನಗಳ ಪೈಕಿ 108 ಸ್ಥಾನ ಗೆದ್ದಿರುವ ಟಿವಿಕೆಗೆ ಬಹುಮತಕ್ಕೆ 118 ಸ್ಥಾನದ ಅಗತ್ಯವಿತ್ತು. ಕಾಂಗ್ರೆಸ್‌ನ 5 ಶಾಸಕರು 3 ದಿನ ಹಿಂದೆ ಟಿವಿಕೆ ಬೆಂಬಲಿಸಿದ್ದರು. ಈ ಮೂಲಕ ಅವರ ಬಲ 112ಕ್ಕೇರಿತ್ತು. ↘ 13



- ಟಿವಿಕೆಯ 107, ಕಾಂಗ್ರೆಸ್‌ನ 5, ಎಡಪಕ್ಷಗಳ 4 ಸೇರಿ ಟಿವಿಕೆ ಬಲ 116ಕ್ಕೆ ಏರಿಕೆ
- ಆದರೆ ಡಿಸಿಎಂ ಸ್ಥಾನಕ್ಕೆ ಪಟ್ಟು ಹಿಡಿದ ವಿಸಿಕೆಯಿಂದ ಇನ್ನೂ ಬೆಂಬಲ ಪ್ರಕಟ ಇಲ್ಲ
- ಹೀಗಾಗಿ ಶುಕ್ರವಾರ ಗೌರ್ನರ್ ಭೇಟಿ ವೇಳೆ 118 ಹೆಸರು ಸಲ್ಲಿಕೆಗೆ ವಿಜಯ್ ವಿಫಲ
- ಪರಿಣಾಮ ಸರ್ಕಾರ ರಚನೆಗೆ ವಿಜಯ್‌ಗೆ ಅನುಮತಿ ನೀಡಲು ಗೌರ್ನರ್ ನಕಾರ
- ಹೀಗಾಗಿ ಶನಿವಾರ ಶಪಥ ಇಲ್ಲ

ಕಾಂಗ್ರೆಸ್ಸಿನ ಎಲ್ಲಾ ಐವರು ಶಾಸಕರು ಬೆಂಗಳೂರಿಗೆ

ಚೆನ್ನೈ: ತಮಿಳುನಾಡು ಸರ್ಕಾರ ರಚನೆ ಕಸರತ್ತು ರಾಜಕೀಯ ಈಗ ಕರ್ನಾಟಕಕ್ಕೂ ಪ್ರವೇಶಿಸಿದೆ. ವಿಜಯ್ ಅವರ ಟಿವಿಕೆಗೆ ಬೆಂಬಲ ಪ್ರಕಟಿಸಿರುವ ಎಲ್ಲ 5 ಕಾಂಗ್ರೆಸ್ ಶಾಸಕರು ಬೆಂಗಳೂರಿಗೆ ಬಂದಿದ್ದಾರೆ. ಕುದುರೆ ವ್ಯಾಪಾರ ತಪ್ಪಿಸಲು ಅವರನ್ನು ಕರ್ನಾಟಕ ಡಿಸಿಎಂ ಡಿ.ಕೆ. ಶಿವಕುಮಾರ್‌ಬೆಂಗಳೂರಿಗೆ ಕರೆಸಿಕೊಂಡು ರೆಸಾರ್ಟ್ ಒಂದರಲ್ಲಿ ಆಶ್ರಯ ಒದಗಿಸಿದ್ದಾರೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ರಾಜ್ಯಪಾಲರೇಕೆ ವಿಜಯ್‌ಗೆ ಆಹ್ವಾನ ಕೊಡುತ್ತಿಲ್ಲ?

ಚೆನ್ನೈ: ಏಕೈಕ ದೊಡ್ಡ ಪಕ್ಷಕ್ಕೆ ರಾಜ್ಯಪಾಲರು ಸರ್ಕಾರ ರಚನೆಗೆ ಆಹ್ವಾನಿಸಬೇಕು ಎಂಬ ನಿಯಮ ಇದೆ. ಇಲ್ಲಿ ವಿಜಯ್ ಮೊದಲು ಸರ್ಕಾರ ರಚನೆಗೆ ಹಕ್ಕು ಮಂಡಿಸುವಾಗ ತಮ್ಮದು 'ಏಕೈಕ ದೊಡ್ಡ ಪಕ್ಷ' ಎಂದು ಹೇಳಿ 108 ಶಾಸಕರ ಬೆಂಬಲ ಪತ್ರ ಕೊಟ್ಟಿದ್ದರೆ ಸಾಕಿತ್ತು.

ಅದನ್ನು ರಾಜ್ಯಪಾಲರು ಮನ್ನಿಸುವ ಸಾಧ್ಯತೆಯೂ ಇತ್ತು ಎಂದು ತಜ್ಞರು ಹೇಳಿದ್ದಾರೆ. 'ಆದರೆ ಅವರು ಕಾಂಗ್ರೆಸ್‌ನ 5 ಶಾಸಕರ ಬೆಂಬಲ ಸೇರಿ 112 ಶಾಸಕರ ಬೆಂಬಲ ಪತ್ರ ನೀಡಿದರು. ಇದು 'ಮೈತ್ರಿ ಸರ್ಕಾರ ರಚನೆಯ ಹಕ್ಕು ಮಂಡನೆ' ಎಂದು ರಾಜ್ಯಪಾಲರು ಭಾವಿಸಿದರು. ಹೀಗಾಗಿ ಅವರು 'ಮೈತ್ರಿ ಸರ್ಕಾರ ರಚನೆಗೆ 118 ಶಾಸಕರ ಬೆಂಬಲ ಬೇಕು' ಎಂದು ವಿಜಯ್‌ರನ್ನು ವಾಪಸು ಕಳಿಸಿದರು' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್ಸಿಂದ ನಮ್ಮನ್ನು ದೂರದಲ್ಲಿ ಕೂರಿಸಿ: ಸಂಸತ್‌ಗೆ ಡಿಎಂಕೆ

ಸ್ಪೀಕರ್‌ಗೆ ಕನಿಮೋಳಿಯಿಂದ ಪತ್ರ ಇಂಡಿ ಕೂಟಕ್ಕೂ ವಿದಾಯ ಸಂಭವ

ಚೆನ್ನೈ: ಟಿವಿಕೆ ಜತೆ ಕಾಂಗ್ರೆಸ್ ಪಕ್ಷದ ಮೈತ್ರಿ ಬಹುಕಾಲದ ಮಿತ್ರ ಡಿಎಂಕೆಯನ್ನು ಸಿಟ್ಟಿಗೆಬ್ಬಿಸಿದ್ದು ರಾಷ್ಟ್ರದಲ್ಲೇ ಮೈತ್ರಿ ಕಡಿತಕ್ಕೆ ಮುಂದಾದಂತಿದೆ. ಇದರ ಮೊದಲ ಸಂಕೇತವಾಗಿ ಗುರುವಾರ ನಡೆದ ಡಿಎಂಕೆ ಸಭೆಯಲ್ಲಿ ಕಾಂಗ್ರೆಸ್‌ವಿರುದ್ಧಆಕ್ರೋಶವ್ಯಕ್ತಪಡಿಸಲಾಗಿದೆ. ಇನ್ನೊಂದು ಕಡೆ, 'ಲೋಕಸಭೆಯಲ್ಲಿ ಕಾಂಗ್ರೆಸ್ ಜತೆ ಇನ್ನು ನಾವು ಕೂರಲ್ಲ. ಪ್ರತ್ಯೇಕ ಆಸನ ವ್ಯವಸ್ಥೆ ಮಾಡಿ' ಎಂದು ಸದನದ ಸ್ಪೀಕರ್‌ಗೆ ಡಿಎಂಕೆ ಸಂಸದೆ ಕನಿಮೋಳಿ ಪತ್ರ ಬರೆದಿದ್ದಾರೆ. ಕಾಂಗ್ರೆಸ್ ಜತೆ ಡಿಎಂಕೆ ಮೈತ್ರಿ ಕಡಿದುಕೊಂಡರೆ ವಿಪಕ್ಷಗಳ ಇಂಡಿಯಾ ಕೂಟದಿಂದ ಕೂಡ ಅದು ಹೊರಬಂದಂತೆ ಎನ್ನಲಾಗುತ್ತಿದೆ.



ಸ್ಟಾಲಿನ್‌ಗೆ ಬೇಸರ: ಕಾಂಗ್ರೆಸ್ ನಡೆ ಬಗ್ಗೆ ಮಾತನಾಡಿದ ಡಿಎಂಕೆ ನಾಯಕರೊಬ್ಬರು, ಪಕ್ಷದ ನಾಯಕ ಎಂ.ಕೆ. ಸ್ಟಾಲಿನ್ ತೀವ್ರ ಬೇಸರಗೊಂಡಿದ್ದಾರೆ ಎಂದಿದ್ದಾರೆ. 'ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು, ಕಾಂಗ್ರೆಸ್‌ನಿಂದ ಬಿಜೆಪಿಗೆ ಸೇರ್ಪಡೆಗೊಂಡಿದ್ದಕ್ಕಾಗಿ ಅವರನ್ನು ನೀವು (ರಾಹುಲ್ ಗಾಂಧಿ) ದೇಶದ್ರೋಹಿ ಎಂದು ಕರೆದಿದ್ದೀರಿ. ↘ 13

ಡಿಎಂಕೆಗೇಕೆ ಸಿಟ್ಟು?


- ಹಲವು ವರ್ಷಗಳಿಂದ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಜತೆ ಮೈತ್ರಿ ಹೊಂದಿದ್ದ ಡಿಎಂಕೆ
- ಆದರೆ ತ.ನಾಡು ಚುನಾವಣೆ ಬಳಿಕ ವಿಜಯ್‌ರ ಟಿವಿಕೆ ಪಕ್ಷ ಬೆಂಬಲಿಸಿದ್ದ ಕಾಂಗ್ರೆಸ್
- ಕಾಂಗ್ರೆಸ್‌ನ ಈ ನಡೆ ಬಗ್ಗೆ ಡಿಎಂಕೆ ಮೈತ್ರಿಕೂಟದ ಸಭೆಯಲ್ಲಿ ಸಿಎಂ ಸ್ಟಾಲಿನ್ ಕಿಡಿ
- ಕಷ್ಟದ ಸಮಯದಲ್ಲಿ ಹಲವು ಬಾರಿ ಬೆಂಬಲಿಸಿದ್ದರೂ ಇದೀಗ ಕಾಂಗ್ರೆಸ್ ಕೈಕೊಟ್ಟ ಆರೋಪ
- ಹೀಗಾಗಿ ಲೋಕಸಭೇಲಿ ಪ್ರತ್ಯೇಕ ಸ್ಥಾನಕ್ಕಾಗಿ ಸ್ಪೀಕರ್ ಡಿಎಂಕೆ ನಾಯಕರ ಮನವಿ
- ಶೀಘ್ರವೇ ಕಾಂಗ್ರೆಸ್ ನೇತೃತ್ವದ ಇಂಡಿಯಾ ಕೂಟಕ್ಕೂ ಡಿಎಂಕೆ ವಿದಾಯ ಹೇಳುವ ಸಂಭವ

ರಾಜಕೀಯ ಶಕ್ತಿ ಬಳಸಿ ಐಪಿಎಲ್ ಶಿಫ್ಟ್: ಡಿಕೆಶಿ

ಬಿಸಿಸಿಐನ ಉಚಿತ ಟಿಕೆಟ್ ವಾದ ಬೋಗಸ್ ಗುಜರಾತ್ ಲಾಭಕ್ಕಾಗಿ ಫೈನಲ್ ಸ್ಥಳ ಬದಲು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಐಪಿಎಲ್ ಫೈನಲ್ ಪಂದ್ಯ ಅಹಮದಾಬಾದ್‌ಗೆ ಸ್ಥಳಾಂತರಿಸಿರುವ ವಿಚಾರದಲ್ಲಿ ಬಿಸಿಸಿಐ ಸುಳ್ಳು ಹೇಳುತ್ತಿದೆ. ರಾಜಕೀಯ ಪ್ರಭಾವ ಬಳಸಿ ಫೈನಲ್ ಪಂದ್ಯ ಸ್ಥಳಾಂತರಿಸಿದ್ದು ಗುಜರಾತ್‌ನ ಲಾಭಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಕಿಡಿಕಾರಿದ್ದಾರೆ. ಜೊತೆಗೆ ಬೆಂಗಳೂರಿನಲ್ಲಿ ಐಪಿಎಲ್ ಪಂದ್ಯ ವೀಕ್ಷಿಸಲು ಶಾಸಕರಿಗೆ ತಲಾ 2 ಟಿಕೆಟ್ ನೀಡುತ್ತಿದ್ದರು ಎಂದು ಹೇಳಿದ್ದಾರೆ. ವಿವರ ↘ 6



ರಾಜ್ಯ ಸರ್ಕಾರಕ್ಕಾಗಿ 1650 ಐಪಿಎಲ್ ಟಿಕೆಟ್ ಬೇಡಿಕೆ?

ಉಳಿದ ಟಿಕೆಟ್ ರಿಯಾಯಿತಿ ದರಕ್ಕೆ ಕೋರಿಕೆ 10000 ಎಕ್ಸ್ಟ್ರಾ ಟಿಕೆಟ್ ಬಗ್ಗೆ ಬಿಸಿಸಿಐ ಸ್ಪಷ್ಟನೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ, ಬಿಸಿಸಿಐ ಬಳಿ ಬೇಡಿಕೆ ಇಟ್ಟಿದ್ದ ಐಪಿಎಲ್ ಫೈನಲ್‌ನ 10000 ಹೆಚ್ಚುವರಿ ಟಿಕೆಟ್ ಪೈಕಿ ಶಾಸಕರು, ಸರ್ಕಾರ, ತಜ್ಞರ ಸಮಿತಿಗೆ ಕೊಡಬೇಕಿದ್ದಿದ್ದು 1650 ಉಚಿತ ಟಿಕೆಟ್. ಉಳಿದ ಟಿಕೆಟ್‌ಗಳನ್ನು ಕ್ಲಬ್‌ಗಳಿಗೆ, ಅವರ ಕುಟುಂಬ ಸದಸ್ಯರಿಗೆನೀಡಲುರಿಯಾಯಿತಿ ದರದಲ್ಲಿ ನೀಡುವಂತೆ ರಾಜ್ಯ ಕ್ರಿಕೆಟ್ ಸಂಸ್ಥೆ ಮನವಿ ಮಾಡಿತ್ತು ಎಂದು ಬಿಸಿಸಿಐ ಮೂಲಗಳು ತಿಳಿಸಿದ್ದಾಗಿ ಪಿಟಿಐ ಸುದ್ದಿಸಂಸ್ಥೆ ವರದಿ ಮಾಡಿದೆ. ವಿವರ ↘ 6



ಪ.ಬಂಗಾಳಕ್ಕೆ ಸುವೇಂದು ಮೊದಲ ಬಿಜೆಪಿ ಸಿಎಂ

ದೀದಿ ಸೋಲಿಸಿದವಗೆ ಗಾದಿ: ಇಂದು ಪ್ರಮಾಣ ಮೋದಿ, ಶಾ ಭಾಗಿ | ಮಹಿಳೆ ಸೇರಿ 2 ಡಿಸಿಎಂ?

ಕೋಲ್ಕತಾ: ಪಶ್ಚಿಮ ಬಂಗಾಳ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನಾಗಿ ಸುವೇಂದು ಅಧಿಕಾರಿ ಅವರನ್ನು ಶುಕ್ರವಾರ ಆಯ್ಕೆ ಮಾಡಲಾಗಿದೆ. ಅವರು ಶನಿವಾರ ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆಯುವ ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಇತರರು ಭಾಗಿಯಾಗಲಿದ್ದಾರೆ. ವಿವರ ↘ 9




ವಂಚನೆ | ದಾಳಿ ಸ್ಥಳದಲ್ಲಿದ್ದ ಮಾಹಿತಿ ಮೂಲಕ ಬಹಿರಂಗ

ಸಿಂದೂರ ವೇಳೆ ಪಾಕ್‌ಗೆ ನೆರವು: ಮೊದಲ ಬಾರಿ ಚೀನಾ ಒಪ್ಪಿಗೆ

ಪಾಕ್ ದಾಳಿ ಮಾಡುವಾಗ ಸ್ಥಳದಲ್ಲಿದ್ದ ಚೀನೀ ತಂತ್ರಜ್ಞ

ನವದೆಹಲಿ: ಕಳೆದ ವರ್ಷ ಭಾರತ ನಡೆಸಿದ 'ಆಪರೇಷನ್ ಸಿಂದೂರ' ವೇಳೆ ಪಾಕಿಸ್ತಾನಕ್ಕೆ ತಾಂತ್ರಿಕ ನೆರವು ನೀಡಿದ್ದಾಗಿ ಮೊದಲ ಬಾರಿಗೆ ಚೀನಾ ಒಪ್ಪಿಕೊಂಡಿದೆ. ಚೀನಾದ ಸರ್ಕಾರಿ ಟೀವಿ ವಾಹಿನಿ 'ಸಿಸಿಟೀವಿ', ಚೀನಾದ ವಾಯುಯಾನ ಉದ್ಯಮ ನಿಗಮ (ಎವಿಐಸಿ) ಮತ್ತು ಸಂಶೋಧನಾ ಸಂಸ್ಥೆಯ ಎಂಜಿನಿಯರ್‌ಗಳ ಜತೆ ನಡೆಸಿದ ಸಂದರ್ಶನಗಳನ್ನು ಪ್ರಸಾರ ಮಾಡಿದ್ದು ಅದರಲ್ಲಿ, 4 ದಿನಗಳ ಯುದ್ಧದ ವೇಳೆ ಪಾಕಿಸ್ತಾನಿ ಸಿಬ್ಬಂದಿ ಜತೆ ಕೆಲಸ ಮಾಡಿದ ಬಗ್ಗೆ ಎಂಜಿನಿಯರ್‌ಜಾಂಗ್ ಹೆಂಗ್ ಮಾತನಾಡಿದ್ದಾರೆ.



'ನಾವು ಸಪೋರ್ಟ್ ಬೇಸ್‌ನಲ್ಲಿ ನಿರಂತರವಾಗಿ ಫೈಟರ್ ಜೆಟ್‌ಗಳ ಘರ್ಜನೆ ವಾಯುದಾಳಿಯ ಸೈರನ್‌ಗಳು ಮೊಳಗುವುದನ್ನು ಕೇಳಿದ್ದೇವೆ' ಎಂದಿದ್ದಾರೆ. ↘ 13

ಚೀನಾ ತಂತ್ರಜ್ಞ ಹೇಳಿದ್ದು

- ಚೀನಾದ ಸುದ್ದಿವಾಹಿನಿಯಲ್ಲಿ ಚೀನಾ ವೈಮಾನಿಕ ತಂತ್ರಜ್ಞರ ಸಂದರ್ಶನ ಪ್ರಸಾರ
- ಸಂದರ್ಶನದಲ್ಲಿ ಭಾರತದ ದಾಳಿಗೆ ತುತ್ತಾದ ಪಾಕ್ ಪ್ರದೇಶದಲ್ಲಿ ಇದ್ದ ಬಗ್ಗೆ ಸುಳಿವು
- ಸಪೋರ್ಟ್ ಬೇಸ್‌ನಲ್ಲಿ ಯುದ್ಧ ವಿಮಾನಗಳ ಭಾರೀ ಸದ್ದು ಕೇಳುತ್ತಿತ್ತೆಂದ ತಂತ್ರಜ್ಞ
- ಅಲ್ಲಿನ ಬೆಳವಣಿಗೆಯಿಂದ ದೈಹಿಕ, ಮಾನಸಿಕವಾಗಿ ಆಯಾಸದ ಬಗ್ಗೆ ಮಾಹಿತಿ
- ಇದು ಯುದ್ಧದ ವೇಳೆ ಪಾಕ್‌ಗೆ ಚೀನಾ ನೆರವು ನೀಡಿದ್ದಕ್ಕೆ ಸಾಕ್ಷ್ಯ ಎಂಬ ವಿಶ್ಲೇಷಣೆ


ಎಚ್ಚರಿಕೆ | ವಿವಿಧ ಸಂಘಟನೆಗಳ ಜೊತೆ ಸಿಎಂ, ಡಿಸಿಎಂ ಸಭೆ

ಬಂಗಾಳ ಬೆನ್ನಲ್ಲೇ ರಾಜ್ಯದಲ್ಲೂ ಮತಪಟ್ಟಿ ಪರಿಷ್ಕರಣೆ ಅಲರ್ಟ್

ಮುನ್ನೆಚ್ಚರಿಕೆಗೆ ಸರ್ಕಾರಕ್ಕೆ ಸಂಘಟನೆಗಳಿಂದ ಮನವಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದೇಶದ ವಿವಿಧ ರಾಜ್ಯಗಳಲ್ಲಿ ಚುನಾವಣಾ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯಿಂದ (ಎಸ್‌ಐಆರ್) ಉಂಟಾಗಿರುವ ಅನಾಹುತಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದ್ದು, ರಾಜ್ಯದಲ್ಲಿ ಸೂಕ್ತ ಮುನ್ನೆಚ್ಚರಿಕೆ ವಹಿಸಿ ಅರ್ಹರ ಮತದಾನದ ಹಕ್ಕು ಸಂರಕ್ಷಿಸಬೇಕು ಎಂದು ಚರ್ಚಿಸಲಾಗಿದೆ.



ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೇರಿ ಪ್ರಮುಖ ಸಚಿವರು ಹಾಗೂ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ↘ 13

ಎಸ್‌ಐಆರ್‌ಗೆ ಆಕ್ಷೇಪ

- ಪ.ಬಂಗಾಳದಲ್ಲಿ ಭಾರೀ ವಿವಾದಕ್ಕೆ ಕಾರಣವಾಗಿದ್ದ ಮತಪಟ್ಟಿ ಪರಿಷ್ಕರಣೆ ಪ್ರಕ್ರಿಯೆ
- ರಾಜ್ಯದಲ್ಲೂ ಪರಿಷ್ಕರಣೆಗೆ ಪೂರ್ವ ಪ್ರಕ್ರಿಯೆಗಳಿಗೆ ಚುನಾವಣಾ ಆಯೋಗದ ಸಿದ್ಧತೆ ಶುರು
- ಈ ಹಿನ್ನೆಲೆಯಲ್ಲಿ ಸಿಎಂ, ಡಿಸಿಎಂ ಜೊತೆಗೆ ವಿವಿಧ ಸಂಘಟನೆಗಳಿಂದ ಸಮಾಲೋಚನೆ
- ರಾಜ್ಯದಲ್ಲಿ ಪರಿಷ್ಕರಣೆ ತಡೆ ಇಲ್ಲವೇ ಪ್ರಕ್ರಿಯೆ ಮೇಲೆ ತೀವ್ರ ನಿಗಾಕ್ಕೆ ಸರ್ಕಾರಕ್ಕೆ ಮನವಿ
- ಶಾಸಕರ ಜೊತೆಗೆ ಚರ್ಚಿಸಿ ಮತ್ತೊಮ್ಮೆ ನಿಮ್ಮೊಂದಿಗೆ ಸಮಾಲೋಚಿಸುವೆ: ಸಭೆಗೆ ಸಿಎಂ

ಹೋರ್ಮುಜ್‌ನಲ್ಲಿ ಇರಾನ್, ಅಮೆರಿಕ ಪರಸ್ಪರ ಗುಂಡೇಟು

ಕದನ ವಿರಾಮ ನಡುವೆ ಹಡಗಿನ ಮೇಲೆ ದಾಳಿ ಇರಾನಿಂದ ಕ್ಷಿಪಣಿ ದಾಳಿ: ಯುಎಇ ಆರೋಪ

ವಾಷಿಂಗ್ಟನ್: ಕದನ ವಿರಾಮದ ನಡುವೆಯೇ ಇರಾನ್ ಮತ್ತು ಅಮೆರಿಕದ ಪಡೆಗಳು ಗುರುವಾರ ರಾತ್ರಿ ಹಾಗೂ ಶುಕ್ರವಾರ ಸಂಜೆ 2 ಬಾರಿ ಹೋರ್ಮುಜ್ ಜಲಸಂಧಿಯಲ್ಲಿ ಪರಸ್ಪರರ ಮೇಲೆ ದಾಳಿ ನಡೆಸಿದ್ದು, ಮತ್ತೊಮ್ಮೆ ಯುದ್ಧಾತಂಕ ಸೃಷ್ಟಿಸಿದೆ. ಈ ದಾಳಿಗೆ ಇರಾನ್ ಮತ್ತು ಅಮೆರಿಕ ಪರಸ್ಪರರ ಮೇಲೆ ಆರೋಪ– ಪ್ರತ್ಯಾರೋಪ ಮಾಡಿವೆ. ಇಷ್ಟಾದರೂ ಜಲಸಂಧಿಯಲ್ಲಿ ಕದನ ವಿರಾಮ ಮುಂದುವರಿಯಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ಪಷ್ಟಪಡಿಸಿದ್ದಾರೆ. ↘ 13



ಏನು ನಡೆಯಿತು?

- ಸದ್ಯ ಅಮೆರಿಕ– ಇರಾನ್ ನಡುವೆ ಮಧ್ಯಪ್ರಾಚ್ಯದಲ್ಲಿ ಕದನ ವಿರಾಮ ಜಾರಿಯಲ್ಲಿ
- ಗುರುವಾರ, ಶುಕ್ರವಾರ ಹೋರ್ಮುಜ್ ಜಲಸಂಧಿಯಲ್ಲಿ ಪರಸ್ಪರರ ಹಡುಗುಗಳ ಮೇಲೆ ಗುಂಡಿನ ದಾಳಿ
- ಪರಸ್ಪರ ಮೇಲೆ ದಾಳಿ ಬಗ್ಗೆ ಅಮೆರಿಕ, ಇರಾನ್‌ನಿಂದ ಆರೋಪ, ಪ್ರತ್ಯಾರೋಪ
- ನಮ್ಮ ಮೇಲೆ ಇರಾನ್‌ನಿಂದ ಡ್ರೋನ್, ಕ್ಷಿಪಣಿ ದಾಳಿ: ಯುಎಇನಿಂದ ಆರೋಪ

Kannada Prabha • Daily • Saturday • 09.05.2026 • Volume 60 • Issue 128 • Pages 14+12+2+4 • Price ₹7 Mangaluru

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಇಂದು ಅಭಿಮಾನೋತ್ಸವ | ಚಿತ್ರದುರ್ಗಕ್ಕೆ ಮಾಜಿ ಸಿಎಂ ಪ್ರವೇಶ

ಬಿಎಸ್‌ವೈಗೆ ಅದ್ದೂರಿ ಸ್ವಾಗತ

ಪೂರ್ಣಕುಂಭ ಹೊತ್ತು, ಕೈಯಲ್ಲಿ ಒನಕೆ ಹಿಡಿದು ಸ್ತ್ರೀಯರಿಂದ ಸಂಭ್ರಮ
'ಮಿನಿ ದಸರಾ' ಮಾದರಿಯಲ್ಲಿ ಕರುನಾಡಿನ ಜಾನಪದ ನೃತ್ಯಗಳ ವೈಭವ
ಸೇಬು, ತಮಟೆ ಹಾರ ಹಾಕಿ, ಹೂವುಮಳೆ ಸುರಿಸಿ ಬಿಎಸ್‌ವೈ ಮೆರವಣಿಗೆ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಜೀವನಕ್ಕೆ ಐವತ್ತು ವರ್ಷ ಸಂದ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿರುವ 'ಬಿಎಸ್‌ವೈ ಅಭಿಮಾನೋತ್ಸವ'ದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಯಡಿಯೂರಪ್ಪ ಅವರು ಶುಕ್ರವಾರ ಚಿತ್ರದುರ್ಗಕ್ಕೆ ಆಗಮಿಸಿದಾಗ ಕೋಟೆ ನಾಡಿನ ಜನ ಅದ್ದೂರಿಯಾಗಿ ಸ್ವಾಗತ ಕೋರಿದರು. 'ಮಿನಿ ದಸರಾ' ಮಾದರಿಯಲ್ಲಿ ಮೆರವಣಿಗೆ ಮಾಡಿದ್ದು ವಿಶೇಷವಾಗಿತ್ತು.

ಬಿಎಸ್‌ವೈ ಅದ್ದೂರಿ ಪುರಪ್ರವೇಶ: ಸಂಜೆ ನಾಲ್ಕು ಗಂಟೆಗೆ ಯಡಿಯೂರಪ್ಪ ಚಿತ್ರದುರ್ಗ ಪುರಪ್ರವೇಶ ಮಾಡಬೇಕಿತ್ತು. ಆದರೆ ಬಿಎಸ್‌ವೈ ಆಗಮನ ಆದಾಗ ಸೂರ್ಯ ನಿಧಾನವಾಗಿ ಮೋಡದಿಂದ ಮರೆಯಾಗುತ್ತಿದ್ದ. ಇದೇ ಗೋಧೂಳಿ ಸಮಯದಲ್ಲಿ ನೇರವಾಗಿ ಪುಷ್ಪಾಲಂಕೃತ ವಾಹನ ಏರಿದ ಯಡಿಯೂರಪ್ಪ ಅವರು ನೆರೆದಿದ್ದ ಅಭಿಮಾನಿ ಸಮೂಹದತ್ತ ಕೈ ಬೀಸಿದರು. ರಾಜಕೀಯ ನಾಯಕರು ಹಾಗೂ ರೈತರು ಗಾಳಿಯಲ್ಲಿ ಹಸಿರು ಶಾಲು ಬೀಸಿ ಯಡಿಯೂರಪ್ಪ ಅವರ ರೈತ ಪರ ಹೋರಾಟದ ನೆನಪು ಮಾಡಿದರು. ಸಾವಿರಕ್ಕೂ ಹೆಚ್ಚು ಮಂದಿ ಕೈಯಲ್ಲಿ ನೇಗಿಲು ಎತ್ತಿ ಹಿಡಿದು ಮೆರವಣಿಗೆಗೆ ಒಕ್ಕಲುತನದ ಸ್ಪರ್ಶ ನೀಡಿದರು. ಕ್ರೇನ್ ಸಹಾಯದಿಂದ ಬಿಎಸ್‌ವೈ ಅವರ ಮೇಲೆ ಹೂ ಮಳೆಗರೆಯಲಾಯಿತು.

ಯಡಿಯೂರಪ್ಪ ಅವರು ಪುಷ್ಪಾಲಂಕೃತ ಸಾರೋಟ್‌ನಲ್ಲಿ ಸಾಗಬೇಕಿತ್ತು. ಆದರೆ ಅವರ ಜೊತೆಗೆ ಬಹಳಷ್ಟು ನಾಯಕರು ಸಾಗುವುದು ಕಷ್ಟವೆಂಬ ಕಾರಣಕ್ಕೆ ವಾಹನವೊಂದಕ್ಕೆ ಪುಷ್ಪಾಲಂಕಾರ ಮಾಡಿ ಅದರಲ್ಲಿ ಬಿಎಸ್‌ವೈ ಅವರ ಮೆರಣಿಗೆ ನಡೆಸಲಾಯಿತು. ↘ 13


ಶುಕ್ರವಾರ ಚಿತ್ರದುರ್ಗ ನಗರ ಪ್ರವೇಶಿಸಿದ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರಿಗೆ ಅದ್ದೂರಿ ಸ್ವಾಗತ

25ನೇ ವರ್ಷದ ಸಂಭ್ರಮ

ಕರಾವಳಿ ಪ್ರಭಾವಳಿ

ಗರಿಷ್ಠ 32 c | ಕನಿಷ್ಠ 26 c

ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಉತ್ತಮ ಮಳೆ

ಮುಂದಿನ 2–3 ದಿನ ಮಳೆ ಸಾಧ್ಯತೆ: ಹವಾಮಾನ ಇಲಾಖೆ ಮುನ್ಸೂಚನೆ | ವಾಯುಭಾರ ಕುಸಿತದ ದಿಕ್ಕು ಕ್ಷಣಕ್ಷಣಕ್ಕೂ ಬದಲು

• **ಕನ್ನಡಪ್ರಭ ವಾರ್ತೆ** ಮಂಗಳೂರು

ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಶುಕ್ರವಾರ ಸಂಜೆ ವೇಳೆಗೆ ಉತ್ತಮ ಮಳೆಯಾಗಿದೆ. ಬಿಸಿಲ ಬೇಗೆಯಿಂದ ಕಂಗೆಟ್ಟಿದ್ದ ಜನತೆಗೆ ವರುಣನ ಸಿಂಚನ ಸ್ವಲ್ಪ ಮಟ್ಟಿಗೆ ತಂಪು ನೀಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕಡಬ, ಸುಳ್ಯ, ಬೆಳ್ತಂಗಡಿ, ಪುತ್ತೂರು ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಹಲವೆಡೆ ಒಂದು ಗಂಟೆಗೂ ಅಧಿಕ ಸಮಯ ಉತ್ತಮ ಮಳೆಯಾಗಿದೆ. ಶುಕ್ರವಾರ ಬೆಳಗ್ಗೆ ಮೋಡ ಕವಿದ ವಾತಾವರಣ ಕಂಡುಬಂದಿತ್ತು.

ಮುಂದಿನ 2-3 ದಿನ ಮಳೆಯ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಗಾಳಿಯ ಬೀಸುವ ಪ್ರಮಾಣ ಹೆಚ್ಚಳ, ಗುಡುಗು ಸಹಿತ ಮಿಂಚು ಅನುಭವವಾಗಲಿದೆ. ಅರಬ್ಬಿ ಸಮುದ್ರದಲ್ಲಿ ಗಾಳಿಯ ವೇಗ ಹೆಚ್ಚಳವಾಗುತ್ತಿದೆ. ಶನಿವಾರ ಕಾಸರಗೋಡು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಅಲ್ಲಲ್ಲಿ ಸಂಜೆ, ರಾತ್ರಿ ಗುಡುಗು ಸಹಿತ ಮಳೆಯ ಮುನ್ಸೂಚನೆ ಇದೆ. ಹಗಲು ಬಿಸಿಲು, ಸೆಖೆ ಹೆಚ್ಚಿರುವುದರಿಂದ ಮಳೆಯೊಂದಿಗೆ ಗಾಳಿಯ ವೇಗವೂ ಹೆಚ್ಚಿರಬಹುದು.

ಬಂಗಾಳಕೊಲ್ಲಿಯಲ್ಲಿ ಮೇ 11ರಂದು ಸೃಷ್ಟಿಯಾಗಲಿರುವ ವಾಯುಭಾರ ಕುಸಿತವು ಇದೀಗ ತೀವ್ರ ಕುತೂಹಲ ಹಾಗೂ ಅನಿಶ್ಚಿತತೆಗೆ ಕಾರಣವಾಗಿದೆ. ಈ ಹವಾಮಾನ ವೈಪರೀತ್ಯವು ದಕ್ಷಿಣ ಕನ್ನಡ ಸೇರಿದಂತೆ ರಾಜ್ಯದ ಕರಾವಳಿ ಜಿಲ್ಲೆಗಳ ಮೇಲೆ ನೇರ ಪರಿಣಾಮ ಬೀರಲಿದೆಯೇ ಅಥವಾ ಇಲ್ಲವೇ ಎಂಬ ಗೊಂದಲ ಸೃಷ್ಟಿಯಾಗಿದ್ದು, ಹವಾಮಾನ ಇಲಾಖೆಯು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ವಾಯುಭಾರ ಕುಸಿತದ ದಿಕ್ಕು ಮತ್ತು ತೀವ್ರತೆಯು ಕ್ಷಣಕ್ಷಣಕ್ಕೂ ಬದಲಾಗುತ್ತಿರುವುದರಿಂದ, ಕರಾವಳಿ ಭಾಗದಲ್ಲಿ ಹವಾಮಾನದ ಏರಿಳಿತ ಉಂಟಾಗುವ ಸಾಧ್ಯತೆ ದಟ್ಟವಾಗಿದೆ. ವಾಯುಭಾರ ಕುಸಿತವು ಚಂಡಮಾರುತವಾಗಿ ಪರಿವರ್ತಿತಗೊಂಡು ಭೂಭಾಗದ ಕಡೆಗೆ ಚಲಿಸಿದರೆ, ಸಮುದ್ರದಿಂದ ತೇವಾಂಶಭರಿತ ಗಾಳಿಯನ್ನು ಸೆಳೆಯುವ ಕಾರಣ ಕರಾವಳಿಯಲ್ಲಿ ಮೋಡಕವಿದ ವಾತಾವರಣ ಉಂಟಾಗಬಹುದು. ಇದರಿಂದ ಬಿಸಿಲಿನ ತಾಪಮಾನದಲ್ಲಿ ತಾತ್ಕಾಲಿಕ ಇಳಿಕೆಯಾಗುವ ಸಾಧ್ಯತೆಯಿದೆ.

ರೈಲು ಹಳಿಗೆ ಮರ ಬಿದ್ದು ಸಂಚಾರ ವ್ಯತ್ಯಯ

• **ಕನ್ನಡಪ್ರಭ ವಾರ್ತೆ ಬಂಟ್ವಾಳ**

ಶುಕ್ರವಾರ ಸಂಜೆ ದ.ಕ. ಜಿಲ್ಲೆಯ ಗ್ರಾಮಾಂತರ ಭಾಗದಲ್ಲಿ ಸುರಿದ ಭಾರಿ ಗಾಳಿ, ಮಳೆಯಿಂದಾಗಿ ಬಂಟ್ವಾಳ ತಾಲೂಕು ನೇರಳಕಟ್ಟೆ ಹಾಗೂ ಕಬಕ ಪುತ್ತೂರು ನಡುವೆ ರೈಲ್ವೆ ಹಳಿ ಮೇಲೆ ಮರ ಬಿದ್ದ ಕಾರಣ ವಿದ್ಯುತ್ ತಂತಿ ಹಾನಿಗೊಳಗಾಗಿದ್ದು, ರೈಲು ಸಂಚಾರದಲ್ಲಿಯೂ ವ್ಯತ್ಯಯ ಉಂಟಾಗಿದೆ. ನೇರಳಕಟ್ಟೆ ಮತ್ತು ಕಬಕ ಪುತ್ತೂರು ನಡುವೆ ಮರ ಬಿದ್ದ ಪರಿಣಾಮ ವಿದ್ಯುತ್ ಲೈನ್ ಹಾನಿಗೊಳಗಾಗಿದೆ., ಇದರಿಂದಾಗಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದ್ದು, ವಿದ್ಯುತ್ ಎಂಜಿನ್ ಮೂಲಕ ಸಂಚರಿಸುವ ರೈಲು ಸಂಖ್ಯೆ 56627 ಮಂಗಳೂರು ಸೆಂಟ್ರಲ್ ನಿಂದ ಸುಬ್ರಹ್ಮಣ್ಯ ರೋಡ್ ಕಡೆಗೆ ತೆರಳುವ ಪ್ಯಾಸೆಂಜರ್ ರೈಲನ್ನು ನೇರಳಕಟ್ಟೆ ಹಾಲ್ ನಲ್ಲಿ ನಿಲ್ಲಿಸಲಾಗಿತ್ತು, ವಿದ್ಯುತ್ ಸಂಪರ್ಕವಿಲ್ಲದ ಕಾರಣ ಈ ರೈಲಿಗೆ ಮುಂದೆ ಚಲಿಸಲು ಸಾಧ್ಯವಾಗದೆ, 7.55 ಕ್ಕೆ ಬಂಟ್ವಾಳದಿಂದ ಹೊರಡಬೇಕಿದ್ದ ರೈಲು 2 ತಾಸು ವಿಳಂಬವಾಗಿ ಬಂಟ್ವಾಳದಿಂದ ಹೊರಟಿದೆ. ಮತ್ತೊಂದೆಡೆ, ಡೀಸೆಲ್ ಇಂಜಿನ್ ಮೂಲಕ ಸಂಚರಿಸುವ ರೈಲು ಸಂಖ್ಯೆ 16586 ಮುರುಡೇಶ್ವರ ದಿಂದ ಬಂದ ಸರ್‌ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು ಎಕ್ಸ್‌ಪ್ರೆಸ್, ನಿಗದಿತ ಸಮಯಕ್ಕಿಂತ ಸುಮಾರು ಅರ್ಧ ತಾಸು ವಿಳಂಬವಾಗಿ ಬಂಟ್ವಾಳದಿಂದ ಹೊರಟಿದೆ ರೈಲ್ವೇ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

ಮೂಲ್ಕಿ ಪರಿಸರದಲ್ಲಿ ಸಾಧಾರಣ ಮಳೆ: ಕೃತಕ ನೆರೆ

ಶಿಮಂತೂರು ದೇವಸ್ಥಾನದ ರಸ್ತೆ, ಕೆಸರುಮಯವಾಗಿ ವಾಹನ ಸಂಚಾರಕ್ಕೆ ತೀವ್ರ ತೊಂದರೆ

• **ಕನ್ನಡಪ್ರಭ ವಾರ್ತೆ** ಮೂಲ್ಕಿ

ಮೂಲ್ಕಿ, ಹಳೆಯಂಗಡಿ, ಕಿನ್ನಿಗೋಳಿ, ಕಟೀಲು ಸೇರಿದಂತೆ ಮೂಲ್ಕಿ ಪರಿಸರದಲ್ಲಿ ಶುಕ್ರವಾರ ಸಂಜೆ ಬಳಿಕ ಸಾಧಾರಣ ಮಳೆಯಾಗಿದೆ.

ಮೂಲ್ಕಿ ತಾಲೂಕು ವ್ಯಾಪ್ತಿಯಲ್ಲಿ ಕಳೆದ ಎರಡು ದಿನ ಸುರಿದ ಭಾರಿ ಮಳೆಗೆ ಗ್ರಾಮೀಣ ಪ್ರದೇಶದಲ್ಲಿ ಸಮಸ್ಯೆಯಾಗಿದ್ದು, ಮೂಲ್ಕಿ ತಾಲೂಕು ವ್ಯಾಪ್ತಿಯ ಕಿಲ್ಪಾಡಿ ಹಾಗೂ ಅತಿಕಾರಿಬೆಟ್ಟು ಗ್ರಾಪಂ ವ್ಯಾಪ್ತಿಯ ಗ್ರಾಮೀಣ ಭಾಗದ ರಸ್ತೆಗಳು ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ರಸ್ತೆಯಲ್ಲಿ ಮಳೆ ನೀರು ಹರಿಯುತ್ತಿದ್ದು, ರಸ್ತೆಯಲ್ಲಿ ಕೆಲ ಕಡೆ ಕೃತಕ ಕೆರೆ ಸೃಷ್ಟಿಯಾಗಿದೆ. ಮೂಲ್ಕಿ-ಮೂಡುಬಿದಿರೆ ರಾಜ್ಯ ಹೆದ್ದಾರಿಯ ಕುಬೆವೂರು ರೈಲ್ವೆ ಮೇಲ್ಸೇತುವೆಯಿಂದ ಒಳ ರಸ್ತೆ ಶಿಮಂತೂರು ದೇವಸ್ಥಾನದ ರಸ್ತೆ ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ಅವ್ಯವಸ್ಥೆಯ ಆಗರವಾಗಿದೆ. ಪ್ರತಿ ಮಳೆಗಾಲದಲ್ಲಿ ಈ ರಸ್ತೆಯ ಕೆಲವು ಕಡೆಗಳಲ್ಲಿ ಕೃತಕ ನೆರೆ ಉಂಟಾಗುತ್ತಿದೆ.

ಗುರುವಾರ ಬೆಳಗ್ಗೆ ಸುರಿದ ಭಾರಿ ಮಳೆಗೆ ರಸ್ತೆಯಲ್ಲಿ ತುಂಬಾ ನೀರುನಿಂತಿದ್ದು, ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಯಿತು. ಪ್ರತಿ ಮಳೆಗಾಲದಲ್ಲಿ ಈ ಭಾಗದಲ್ಲಿ ಕೃತಕ ನೆರೆ ಉಂಟಾಗಿ ರಸ್ತೆ ಮುಳುಗುತ್ತದೆ ಅಲ್ಲದೆ ಕೃಷಿ ನಾಶ ಸಂಭವಿಸುತ್ತದೆ. ಈ ಬಗ್ಗೆ ಅನೇಕ ಬಾರಿ ಸ್ಥಳೀಯರು ಪಂಚಾಯಿತಿಗೆ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಪ್ರಥಮ ಮಳೆಗೆ ಹೀಗಾದರೆ ಮುಂದಿನ ಮಳೆಗಾಲ ಕಳೆಯುವುದು ಹೇಗೆ? ಈ ಭಾಗದ ಜನರ ಸಮಸ್ಯೆ ಹೇಳುವವರು ಕೇಳುವವರು ಯಾರು ಇಲ್ಲದಂತಾಗಿದೆ ಎಂದು ಸ್ಥಳೀಯರಾದ ಸುಗಂಧಿ ಪೂಜಾರಿ ತಿಳಿಸಿದ್ದಾರೆ.



ಶಿಮಂತೂರು ದೇವಸ್ಥಾನದ ರಸ್ತೆ ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ಅವ್ಯವಸ್ಥೆಯ ಆಗರವಾಗಿದೆ.

- ಗುರುವಾರ ಬೆಳಗ್ಗೆ ಸುರಿದ ಭಾರಿ ಮಳೆಗೆ ರಸ್ತೆಯಲ್ಲಿ ತುಂಬಾ ನೀರುನಿಂತಿದ್ದು, ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಯಿತು. ಪ್ರತಿ ಮಳೆಗಾಲದಲ್ಲಿ ಈ ಭಾಗದಲ್ಲಿ ಕೃತಕ ನೆರೆ ಉಂಟಾಗಿ ರಸ್ತೆ ಮುಳುಗುತ್ತದೆ ಅಲ್ಲದೆ ಕೃಷಿ ನಾಶ ಸಂಭವಿಸುತ್ತದೆ. ಈ ಬಗ್ಗೆ ಅನೇಕ ಬಾರಿ ಸ್ಥಳೀಯರು ಪಂಚಾಯಿತಿಗೆ ಮನವಿ ಸಲ್ಲಿಸಿದರೂ ಕ್ರಮ ಕೈಗೊಂಡಿಲ್ಲ. ಹೀಗಾದರೆ ಮುಂದಿನ ಮಳೆಗಾಲ ಕಳೆಯುವುದು ಹೇಗೆ ಎಂದು ಜನರು ಪ್ರಶ್ನಿಸುತ್ತಿದ್ದಾರೆ.

- ಮೂಲ್ಕಿ ತಾಲೂಕು ವ್ಯಾಪ್ತಿಯಲ್ಲಿ ಕಳೆದ ಎರಡು ದಿನ ಸುರಿದ ಭಾರಿ ಮಳೆಗೆ ಗ್ರಾಮೀಣ ಪ್ರದೇಶದಲ್ಲಿ ಸಮಸ್ಯೆಯಾಗಿದ್ದು, ಮೂಲ್ಕಿ ತಾಲೂಕು ವ್ಯಾಪ್ತಿಯ ಕಿಲ್ಪಾಡಿ ಹಾಗೂ ಅತಿಕಾರಿಬೆಟ್ಟು ಗ್ರಾಪಂ ವ್ಯಾಪ್ತಿಯ ಗ್ರಾಮೀಣ ಭಾಗದ ರಸ್ತೆಗಳು ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ರಸ್ತೆಯಲ್ಲಿ ಮಳೆ ನೀರು ಹರಿಯುತ್ತಿದ್ದು, ರಸ್ತೆಯಲ್ಲಿ ಕೆಲ ಕಡೆ ಕೃತಕ ಕೆರೆ ಸೃಷ್ಟಿಯಾಗಿದೆ.

ಸುಳ್ಯ, ಬಂಟ್ವಾಳದಲ್ಲಿ ಗಾಳಿ ಮಳೆ ಅಬ್ಬರ

ಸುಳ್ಯ/ಬಂಟ್ವಾಳ: ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಭಾಗಗಳಲ್ಲಿ ಗುಡುಗು ಮಿಂಚು ಸಹಿತ ಮಳೆಯಾಗಿದೆ. ಸುಡುಬಿಸಿಲಿನಿಂದ ಬಳಲುತ್ತಿದ್ದ ಜನರಿಗೆ ಮಳೆ ತಂಪೆರೆದಿದೆ. ಸುಳ್ಯದಲ್ಲಿ ಒಂದು ಗಂಟೆ ಕಾಲ ಗುಡುಗು ಸಹಿತ ಮಳೆ ಸುರಿದಿದೆ. ಬಂಟ್ವಾಳ ತಾಲೂಕಿನಲ್ಲಿ ವಿವಿಧೆಡೆ ಭಾರಿ ಗಾಳಿ ಮಳೆಯಾಗಿದೆ. ಗುಡುಗು ಸಿಡಿಲಿಗೆ ವಿದ್ಯುತ್ ಸರಬರಾಜು ವ್ಯತ್ಯಯಗೊಂಡಿದೆ.

ಪುತ್ತೂರು: ಗುಡುಗು, ಮಿಂಚು ಸಹಿತ ಗಾಳಿ ಮಳೆ

ಪುತ್ತೂರು: ಪುತ್ತೂರಿನ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶುಕ್ರವಾರ ಸಂಜೆ ಗುಡುಗು, ಮಿಂಚು ಸಹಿತ ಗಾಳಿ ಮಳೆಯಾಗಿದೆ. ಸಂಜೆ ಸುಮಾರು 6 ಗಂಟೆಗೆ ಆರಂಭಗೊಂಡ ಮಳೆಯು ಸುಮಾರು ಒಂದು ಗಂಟೆ ಸುರಿಯಿತು.

- ಪುತ್ತೂರಿನ ನಗರ ಪ್ರದೇಶಗಳಲ್ಲಿ ಶುಕ್ರವಾರ ಸಂಜೆ ಗುಡುಗು, ಸಹಿತ ಗಾಳಿ ಮಳೆಯಾಗಿದೆ.

ಕಾರ್ಕಳ, ಹೆಬ್ರಿ ತಾಲೂಕು ವ್ಯಾಪ್ತಿಯಲ್ಲಿ ಸಂಜೆ ಮಳೆ, ವಿವಿಧೆಡೆ ಆಸ್ತಿ ಹಾನಿ

ಅಜೆಕಾರು, ಕೆರುವಾಶೆ, ಮಾಳ, ಹೆರ್ಮುಂಡೆಯಲ್ಲಿ ಗುಡುಗು, ಮಿಂಚಿನ ವರ್ಷಧಾರೆ | ಅಡಕೆ, ತೆಂಗಿನ ತೋಟಗಳಿಗೂ ಜೀವಕಳೆ

• **ಕನ್ನಡಪ್ರಭ ವಾರ್ತೆ** ಕಾರ್ಕಳ

ವಿಪರೀತ ಉರಿ ಬಿಸಿಲು ಮತ್ತು ಭಾರಿ ಸೆಖೆಯಿಂದ ಕಂಗೆಟ್ಟಿದ್ದ ಕಾರ್ಕಳ ಹಾಗೂ ಹೆಬ್ರಿ ತಾಲೂಕಿನ ಜನತೆಗೆ ಶುಕ್ರವಾರ ಸಂಜೆ ಸುರಿದ ಮಳೆ ನೆಮ್ಮದಿ ತಂದಿದೆ.

ಕಾರ್ಕಳ ತಾಲೂಕಿನ ಅಜೆಕಾರು, ಶಿರ್ಲಾಲು, ಕೆರುವಾಶೆ, ಮಾಳ, ನೂರಲ್ ಬೆಟ್ಟು, ಹೆರ್ಮುಂಡೆ ಹಾಗೂ ಬಜಗೋಳಿ ಭಾಗಗಳಲ್ಲಿ ಗುಡುಗು ಮತ್ತು ಮಿಂಚಿನ ಸಹಿತ ಭಾರಿ ಮಳೆಯಾಗಿದ್ದು, ಸುಡು ಬಿಸಿಲಿನಿಂದ ಕಾದಿದ್ದ ಭೂಮಿಯನ್ನು ತಂಪಾಗಿಸಿದೆ. ಬೆಳಗ್ಗೆಯಿಂದಲೇ ಸೆಖೆಯ ಬೇಗೆಯಲ್ಲಿ ಬೆಂದಿದ್ದ ಜನರಿಗೆ ಸಂಜೆ ವೇಳೆಗೆ ಸುರಿದ ಮಳೆ ಹೊಸ ಚೈತನ್ಯ ನೀಡಿದೆ.

ಹೆಬ್ರಿ ತಾಲೂಕಿನ ಮುನಿಯಾಲು, ಅಂಡಾರು, ಮುದ್ರಾಡಿ, ಕಬ್ಬಿನಾಲೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲೂ ಉತ್ತಮ ಮಳೆಯಾದ ವರದಿಯಾಗಿದೆ. ಮುಂಜಾನೆಯಿಂದಲೇ ಮೋಡ ಕವಿದ ವಾತಾವರಣ ಕಂಡುಬಂದಿದ್ದು, ಸಂಜೆ ವೇಳೆಗೆ ಏಕಾಏಕಿ ಆರಂಭವಾದ ಮಳೆಯು ಕೆಲ ಕಾಲ ಜೋರಾಗಿ ಸುರಿಯಿತು. ಕಳೆದ ಕೆಲವು ದಿನಗಳಿಂದ ಹೆಚ್ಚಾದ ತಾಪಮಾನದಿಂದಾಗಿ ಜನಜೀವನ ತೊಂದರೆಗೊಳಗಾಗಿತ್ತು ಮತ್ತು ಕುಡಿಯುವ ನೀರಿನ ಆತಂಕವೂ ಎದುರಾಗಿತ್ತು. ಈಗ ಸುರಿದಿರುವ ಈ ಮಳೆಯು ವಾತಾವರಣವನ್ನು ತಂಪಾಗಿಸುವ ಮೂಲಕ ಬೇಸಿಗೆಯ ದಗೆಯನ್ನು ದೂರ ಮಾಡಿದೆ. ಈ ಮಳೆಯಿಂದಾಗಿ ಅಡಕೆ, ತೆಂಗಿನ ತೋಟಗಳಿಗೂ ಜೀವ ಕಳೆ ಬಂದಂತಾಗಿದ್ದು, ಕೃಷಿಕರ ಮುಖದಲ್ಲಿ ಮಂದಹಾಸ ಮೂಡಿಸಿದೆ. ಒಟ್ಟಾರೆಯಾಗಿ ಕಾರ್ಕಳ ಮತ್ತು ಹೆಬ್ರಿ ಪರಿಸರದ ಜನತೆ ವರುಣನ ಆಗಮನದಿಂದ ನಿಟ್ಟುಸಿರು ಬಿಡುವಂತಾಗಿದೆ.

ಅಲ್ಲಲ್ಲಿ ಹಾನಿ: ತಾಲೂಕಿನಲ್ಲಿ ಶುಕ್ರವಾರ ಸಂಜೆ ಸುರಿದ ಗಾಳಿ-ಮಳೆಗೆ ವಿವಿಧೆಡೆ ಹಾನಿ ಸಂಭವಿಸಿದೆ.

ಕಲ್ಯ ಗ್ರಾಮದ ಅಶೋಕನಗರದಲ್ಲಿ ಚಂದ್ರಶೇಖರ್ ಆಚಾರ್ಯ ಅವರ ಮನೆ ಸಮೀಪ ಸಂಜೆ ಸುಮಾರು 6 ಗಂಟೆ ವೇಳೆಗೆ ಸಿಡಿಲು ಬಡಿದು ಅಂದಾಜು 10,000 ರು. ಮೊತ್ತದ ನಷ್ಟ ಉಂಟಾಗಿದೆ. ಕಾರ್ಕಳ ತಾಲೂಕಿನ ಕಾರ್ಕಳ ಗ್ರಾಮದ ಬಂಗ್ಲೆಗುಡ್ಡೆ ಸದ್ಭಾವನಗರ ನಿವಾಸಿ ಮಾಧವ ಅವರ ಮನೆಗೆ ಗಾಳಿ-ಮಳೆ ಸಂದರ್ಭ ಮರ ಬಿದ್ದು ಸುಮಾರು 10,000 ರು.ನಷ್ಟು ಹಾನಿಯಾಗಿದೆ. ಕಡ್ತಲ ಗ್ರಾಮದ ಆನಂದ ನಾಯಕ್ ಅವರ ಅಡಕೆ ತೋಟದಲ್ಲಿ ಹಲವು ಅಡಕೆ ಮರಗಳು ಮುರಿದುಬಿದ್ದು, ಅಂದಾಜು 10,000 ರು.ನಷ್ಟು ನಷ್ಟ ಉಂಟಾಗಿದೆ.



ವಿದ್ಯುತ್ ಉಪಕರಣಗಳಿಗೆ ಹಾನಿ

- ಚಂದ್ರಶೇಖರ್ ಆಚಾರ್ಯ ಅವರ ಮನೆ ಸಮೀಪ ಸಂಜೆ ಸುಮಾರು 6 ಗಂಟೆ ವೇಳೆಗೆ ಸಿಡಿಲು ಬಡಿದು ಅಂದಾಜು 10,000 ರು. ಮೊತ್ತದ ನಷ್ಟ ಉಂಟಾಗಿದೆ. ಕಾರ್ಕಳ ತಾಲೂಕಿನ ಕಾರ್ಕಳ ಗ್ರಾಮದ ಬಂಗ್ಲೆಗುಡ್ಡೆ ಸದ್ಭಾವನಗರ ನಿವಾಸಿ ಮಾಧವ ಅವರ ಮನೆಗೆ ಗಾಳಿ–ಮಳೆ ಸಂದರ್ಭ ಮರ ಬಿದ್ದು ಸುಮಾರು 10,000 ರು.ನಷ್ಟು ಹಾನಿಯಾಗಿದೆ. ಕಡ್ತಲ ಗ್ರಾಮದ ಆನಂದ ನಾಯಕ್ ಅವರ ಅಡಕೆ ತೋಟದಲ್ಲಿ ಹಲವು ಅಡಕೆ ಮರಗಳು ಮುರಿದುಬಿದ್ದು ಹಾನಿಯಾಗಿದೆ.

ಸುದ್ದಿ ಸಿಂಚನ

ಸಾವಿನ ಬಳಿಕ ಅಂಗಾಂಶ ದಾನ: ಬಾಲಕೃಷ್ಣ ಭಟ್ ಕುಟುಂಬ ಮಾದರಿ

• **ಕನ್ನಡಪ್ರಭವಾರ್ತೆ ಉಳ್ಳಾಲ**

ಉಳ್ಳಾಲ ತಾಲೂಕು ಕೈರಂಗಳದ ನಿವಾಸಿಯಾಗಿದ್ದ 57 ವರ್ಷದ ಬಾಲಕೃಷ್ಣ ಭಟ್ ಅವರು ಇತ್ತೀಚೆಗೆ, ಇಂಟ್ರಾಕ್ರೇನಿಯಲ್ ಬ್ಲೀಡ್‌ನಿಂದ ಮೃತಪಟ್ಟ ಬಳಿಕ, ಅವರ ಕುಟುಂಬ ಮಾನವೀಯತೆ ಮತ್ತು ಸಮಾಜಸೇವೆಯ ಅಪೂರ್ವ ಉದಾಹರಣೆಯಾಗಿ ದೇಹದ ಅಂಗಾಂಶ ದಾನಕ್ಕೆ ಒಪ್ಪಿಗೆ ನೀಡಿದೆ.



ಜೀವಿತಾವಧಿಯಲ್ಲೇ ಮರಣಾನಂತರ ದೇಹದಾನ ಮಾಡುವ ಇಚ್ಛೆಯನ್ನು ಬಾಲಕೃಷ್ಣ ಭಟ್ ವ್ಯಕ್ತಪಡಿಸಿದ್ದರು. ಅವರ ಈ ಮಹತ್ಕಾರ್ಯವನ್ನು ಗೌರವಿಸಿದ ಕುಟುಂಬಸ್ಥರು ಟಿಷ್ಯೂ ಮತ್ತು ಗ್ರಾಫ್ಟ್ ದಾನಕ್ಕೆ ಸಮ್ಮತಿ ಸೂಚಿಸಿದ್ದು, ಇದರಿಂದ ಅನೇಕ ರೋಗಿಗಳಿಗೆ ನೆರವಾಗುವ ಜೊತೆಗೆ ವೈದ್ಯಕೀಯ ಶಿಕ್ಷಣ ಹಾಗೂ ಚಿಕಿತ್ಸೆಗೆ ಮಹತ್ವದ ಕೊಡುಗೆ ದೊರಕಿದೆ. ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯ ಟ್ರಾನ್ಸ್‌ಪ್ಲಾಂಟ್ ಸಂಯೋಜಕಿ ಪದ್ಮಾವತಿ ಹಾಗೂ ಅಕ್ಷತಾ ಶೆಟ್ಟಿ ಅವರ ತುರ್ತು ಕರೆ ಮೇರೆಗೆ, ಜಸ್ಟಿಸ್ ಕೆ.ಎಸ್. ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ಡಾ. ಶಾಂತರಾಮ ಶೆಟ್ಟಿ ಟಿಷ್ಯೂ ಬ್ಯಾಂಕ್‌ನ ತಜ್ಞರ ತಂಡ ತಕ್ಷಣ ಅಂಗಾಗ ಸಂಗ್ರಹ ಕಾರ್ಯಾಚರಣೆಗೆ ಮುಂದಾಯಿತು. ಡಾ. ವರುಣ್ ಶೆಟ್ಟಿ ನೇತೃತ್ವದ ತಂಡದಲ್ಲಿ ಡಾ. ನಿರ್ಮಲ್ ಬಾಬು, ಡಾ. ವಿನಯ್ ಕುಮಾರ್, ಡಾ. ಅನೂಪ್ ಹೆಗ್ಡೆ ಹಾಗೂ ಪ್ಲಾಸ್ಟಿಕ್ ಸರ್ಜರಿ ವಿಭಾಗದ ಡಾ. ಸಂದೇಶ್ ಭಾಗವಹಿಸಿದ್ದರು. ತಂಡವು ಮೃತದೇಹದಿಂದ ಎರಡೂ ಉಲ್ನಾ, ಎರಡೂ ಹ್ಯೂಮರಸ್, ಎರಡೂ ಫೀಮರ್, ಎರಡೂ ಟಿಬಿಯಾ ಎಲುಬುಗಳು ಹಾಗೂ ಚರ್ಮದ ಗ್ರಾಫ್ಟ್‌ಗಳನ್ನು ಯಶಸ್ವಿಯಾಗಿ ಸಂಗ್ರಹಿಸಿತು. ದೇಹದ ಗೌರವ ಕಾಪಾಡುವ ಉದ್ದೇಶದಿಂದ ಮತ್ತು ಯಾವುದೇ ವಿಕೃತತೆ ಉಂಟಾಗದಂತೆ ವಿಶೇಷ ಪ್ಲಾಸ್ಟಿಕ್ ಎಲುಬುಗಳನ್ನು ಮರುಸ್ಥಾಪಿಸಲಾಯಿತು. ಈ ಕಾರ್ಯಾಚರಣೆಗೆ ವೆನ್‌ಲಾಕ್ ಸರ್ಕಾರಿ ಆಸ್ಪತ್ರೆ ಹಾಗೂ ಜಸ್ಟಿಸ್ ಕೆ. ಎಸ್. ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ಆಡಳಿತ ಮಂಡಳಿ, ನರ್ಸಿಂಗ್ ಸಿಬ್ಬಂದಿ, ಸ್ನಾತಕೋತ್ತರ ವೈದ್ಯರು, ಪ್ಯಾರಾಮೆಡಿಕಲ್ ಸಿಬ್ಬಂದಿ ಮತ್ತು ಟಿಷ್ಯೂ ಬ್ಯಾಂಕ್ ಸಿಬ್ಬಂದಿಯ ಸಂಪೂರ್ಣ ಸಹಕಾರ ದೊರಕಿತು. ಬಾಲಕೃಷ್ಣ ಭಟ್ ಬಾಣಸಿಗರಾಗಿ ಮುಡಿಪು ಪರಿಸರದಲ್ಲಿ ಪ್ರಸಿದ್ಧರು, ಅನಾರೋಗ್ಯಪೀಡಿತರಾಗಿದ್ದಾಗ ತಮ್ಮ ಮನೆಮಂದಿಯಲ್ಲಿ ಮರಣಾನಂತರ ಅಂಗಾಂಗ ದಾನದ ಇಚ್ಛೆ ವ್ಯಕ್ತಪಡಿಸಿದ್ದರು.

ವೈಶಾಖ ನಟನಂ: ದೇವಿಚಂದನಾ ‘ಕೃಷ್ಣ ಚರಿತಂ’ ನೃತ್ಯಾರ್ಚನೆ

• **ಕನ್ನಡಪ್ರಭ ವಾರ್ತೆ ಮಂಗಳೂರು**

ಬೇಕಲ ಗೋಕುಲಂ ಗೋಶಾಲೆಯ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಮೂರನೇ ಆವೃತ್ತಿಯ ವೈಶಾಖ ನಟನಂ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಖ್ಯಾತ ಚಲನಚಿತ್ರ ಹಾಗೂ ಕಿರುತೆರೆ ಕಲಾವಿದೆ ದೇವಿಚಂದನಾ ಅವರು ಶ್ರೀಕೃಷ್ಣ ಚರಿತಂ ಆಧಾರಿತ ಭರತನಾಟ್ಯ ಪ್ರದರ್ಶಿಸಿದರು.

ಧೇನು ಮಂಟಪದಲ್ಲಿ ನಡೆದ ಈ ಪ್ರದರ್ಶನದಲ್ಲಿ ಕಲಾವಿದೆಯು ಪೂತನಿ, ಪಾಂಚಾಲಿ ಹಾಗೂ ಯಶೋದೆಯ ಪಾತ್ರಗಳಿಗೆ ಜೀವತುಂಬುವ ಮೂಲಕ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು. ಆರೋಗ್ಯದ ಕಾರಣಗಳಿಂದಾಗಿ ಸುದೀರ್ಘ ಕಾಲ ನೃತ್ಯರಂಗದಿಂದ ದೂರವಿದ್ದ ದೇವಿಚಂದನಾ ಅವರಿಗೆ, ಈ ಎರಡು ಗಂಟೆಗಳ ಸುದೀರ್ಘ ನೃತ್ಯ ಪ್ರದರ್ಶನ ಕಲಾಕ್ಷೇತ್ರಕ್ಕೆ ನೀಡಿದ ಪ್ರಬಲ ಪುನರಾಗಮನದ ಮುದ್ರೆ ಎನಿಸಿತು. ಭಾಗ್ಯಲಕ್ಷ್ಮಿ ಗುರುವಾಯೂರ್ ಅವರ ಗಾಯನವು ನೃತ್ಯದ ಮೆರುಗನ್ನು ಇಮ್ಮಡಿಗೊಳಿಸಿತು.

ಇದೇ ವೇದಿಕೆಯಲ್ಲಿ ಪ್ರಸಿದ್ಧ ನೃತ್ಯಗಾರ್ತಿ ಪ್ರಷೀಜಾ ಗೋಪಿನಾಥ್ ಅವರ ಮೋಹಿನಿಯಾಟ್ಟಂ ಪ್ರದರ್ಶನ ಕಲಾಭಿಮಾನಿಗಳ ವಿಶೇಷ ಗಮನ ಸೆಳೆಯಿತು. ನಂತರ ಚೆನ್ನೈನ ಸಾತ್ವಿಕಾ ಗೋಪಿನಾಥ್ ಅವರು ತಮ್ಮ ತಂದೆಯವರು ಗೋಶಾಲೆಗಾಗಿ ವಿಶೇಷವಾಗಿ ರಚಿಸಿ ಸಿದ್ಧಪಡಿಸಿದ ‘ವರ್ಣಂ’ಗೆ ಚರಣಗಳನ್ನಿಡುವ ಮೂಲಕ ಧೇನು ಮಂಟಪಕ್ಕೆ ಸಾಂಸ್ಕೃತಿಕ ಕಳೆಯನ್ನು ನೀಡಿದರು.



ದೇವಿಚಂದನಾ ಮತ್ತು ತಂಡದವರಿಂದ ನೃತ್ಯ ಪ್ರದರ್ಶನ ನಡೆಯಿತು

ಅದಾನಿ ಕಿಶೋರ್ ಆಳ್ವರಿಗೆ ಮಹಾತ್ಮ ಗಾಂಧಿ ಸಬರಮತಿ ಸಂತ ಪ್ರಶಸ್ತಿ

ವಾಣಿಜ್ಯ, ಮೂಲಸೌಕರ್ಯ ಅಭಿವೃದ್ಧಿ ಕ್ಷೇತ್ರದ ಸಾಧಕ



ಕಿಶೋರ್ ಆಳ್ವರಿಗೆ ಮಹಾತ್ಮ ಗಾಂಧಿ ಸಬರಮತಿ ಸಂತ ಪ್ರಶಸ್ತಿ ಪ್ರದಾನ ಮಾಡಲಾಯಿತು

• **ಕನ್ನಡಪ್ರಭ ವಾರ್ತೆ** ಉಡುಪಿ

ಅದಾನಿ ಸಮೂಹದ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಅಧ್ಯಕ್ಷ ಕಿಶೋರ್ ಆಳ್ವ ಅವರಿಗೆ ಅವರಿಗೆ ಪ್ರತಿಷ್ಠಿತ ಮಹಾತ್ಮ ಗಾಂಧಿ ಸಬರಮತಿ ಸಂತ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಗಾಂಧಿ ಸ್ಮೃತಿ ಸಂಸ್ಥೆ ವತಿಯಿಂದ ಬೆಂಗಳೂರಿನ ಸರ್‌ಎಂ. ವಿಶ್ವೇಶ್ವರಯ್ಯ ಸಭಾಂಗಣ ದಲ್ಲಿ ಆಯೋಜಿಸಲಾದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ಕಾರ್ಯಕ್ರಮದಲ್ಲಿ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಸನಾತನ ಫೌಂಡೇಶನ್‌ನ ಅಧ್ಯಕ್ಷರು, ಅಸೋಚೆಮ್ ಕರ್ನಾಟಕ ಅಧ್ಯಕ್ಷರು, ಬಿಸಿಐಸಿಯ ಮಾಜಿ ಅಧ್ಯಕ್ಷರಾಗಿರುವ ಕಿಶೋರ್ ಆಳ್ವಾ ಅವರು, ಕರ್ನಾಟಕದಲ್ಲಿ ಕೈಗಾರಿಕಾ ವೃದ್ಧಿಗೆ ಉತ್ತೇಜನ ನೀಡುವುದು, ವಾಣಿಜ್ಯ ಮತ್ತು ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳಿಗೆ ಬಲ ತುಂಬುವುದು, ಹೂಡಿಕೆ ಅವಕಾಶಗಳನ್ನು ವಿಸ್ತರಿಸುವುದು ಹಾಗೂ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಹಿತಾಸಕ್ತಿ ವಲಯಗಳ ಸಮನ್ವಯದ ಮೂಲಕ ರಾಜ್ಯದ ಸಾಮಾಜಿಕ-ಆರ್ಥಿಕ ಪ್ರಗತಿಗೆ ನೀಡಿದ ವಿಶಿಷ್ಟ ಸೇವೆಯನ್ನು ಪರಿಗಣಿಸಿ ಶ್ರೀ ಕಿಶೋರ್ ಆಳ್ವ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕಾರ್ಯಕ್ರಮದಲ್ಲಿ ವಿಪ ಸದಸ್ಯ ಪ್ರತಾಪ್ ಸಿಂಹ ನಾಯಕ್, ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಸಂಪತ್ ರಾಜ್ ಅವರು ಈ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾಮಗಾರಿ ವೀಕ್ಷಣೆ | ದ.ಕ. ಜಿಲ್ಲಾಧಿಕಾರಿ ಜೊತೆ ಕಾಮಗಾರಿ ವೀಕ್ಷಿಸಿದ ಉಸ್ತುವಾರಿ ಸಚಿವರು

ಸುಲ್ತಾನ್‌ಬತ್ತೇರಿ ಸೇತುವೆ ಸೆಪ್ಟೆಂಬರ್‌ಗೆ ಲೋಕಾರ್ಪಣೆ: ಸಚಿವ ದಿನೇಶ್

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮಂಗಳೂರಿನ ಸುಲ್ತಾನ್‌ಬತ್ತೇರಿಯಲ್ಲಿ ಗುರುಪುರ ನದಿಗೆ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನಿರ್ಮಾಣ ಆಗುತ್ತಿರುವ ಸೇತುವೆಯನ್ನು ಸೆಪ್ಟೆಂಬರ್‌ನಲ್ಲಿ ಲೋಕಾರ್ಪಣೆ ಮಾಡಲಾಗುವುದು ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಭರವಸೆ ನೀಡಿದರು.

ಅವರು ಶುಕ್ರವಾರ ಜಿಲ್ಲಾಧಿಕಾರಿ ದರ್ಶನ್ ಅವರೊಂದಿಗೆ ಸುಲ್ತಾನ್‌ಬತ್ತೇರಿ ಸೇತುವೆ ಕಾಮಗಾರಿಯನ್ನು ವೀಕ್ಷಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದು ಪತ್ರಕರ್ತರಿಗೆ ಮಾಹಿತಿ ನೀಡಿದರು.

ಸುಲ್ತಾನ್‌ಬತ್ತೇರಿ ಸೇತುವೆ ಕಾಮಗಾರಿ ಈಗಾಗಲೇ ಭರದಿಂದ ನಡೆಯುತ್ತಿದೆ. ಈ ಸೇತುವೆ ಉತ್ತಮ ತಂತ್ರಜ್ಞಾನ ಮತ್ತು ಆಕರ್ಷಕಣೆಯನ್ನೊಳಗೊಂಡಿದೆ. ಜೂನ್‌ನಲ್ಲಿ 100 ಮೀಟರ್‌ನ ಬೋ-ಸ್ಟ್ರಿಂಗ್ ಗರ್ಡರ್‌ನ್ನು ಮೇಲಕ್ಕೆ ಏರಿಸಲಾಗುತ್ತದೆ. ಬಳಿಕ ಇಲ್ಲಿ ಬೋಟ್‌ಗಳಿಗೆ ಓಡಾಡಲು ವ್ಯವಸ್ಥೆ ಮಾಡಲು ಸೂಚಿಸಲಾಗಿದೆ. ಆಗಸ್ಟ್ ಅಂತ್ಯಕ್ಕೆ ಸೇತುವೆ ಕಾಮಗಾರಿ ಪೂರ್ಣಗೊಳಿಸಿ, ಸೆಪ್ಟೆಂಬರ್‌ನಲ್ಲಿ ಸೇತುವೆ ಲೋಕಾರ್ಪಣೆಗೊಳಿಸುವ ಗುರಿ ಇಟ್ಟುಕೊಳ್ಳಲಾಗಿದೆ ನೀಡಿದರು.



ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸುಲ್ತಾನ್‌ಭತ್ತೇರಿ ಸೇತುವೆ ಕಾಮಗಾರಿ ವೀಕ್ಷಿಸಿದರು

ಇಲ್ಲಿನ ಸೇತುವೆ ಸುಲ್ತಾನ್‌ಬತ್ತೇರಿಯಿಂದ ತಣ್ಣೀರ್ ಬಾವಿ ಸಂಪರ್ಕಿಸಲಿದ್ದು. ಈ ಹಿಂದೆ ಸುತ್ತು ಬಳಸಿ ಸಂಚಾರ ಮಾಡಬೇಕಾಗಿತ್ತು, ಇಲ್ಲಿ ಸೇತುವೆ ನಿರ್ಮಾಣಗೊಂದಿಗೆ ಆ ಭಾಗದವರಿಗೆ ಮಂಗಳೂರು ಸಂಪರ್ಕಕ್ಕೆ ಹತ್ತಿರದ ಸಂಪರ್ಕವಾಗಲಿದೆ. ಈ ಮೂಲಕ ಇಲ್ಲಿನ ಸ್ಥಳೀಯರಿಗೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದರು.

ನೀರಿನ ಆಳ ಹಾಗೂ ಸೇತುವೆಯ ಎತ್ತರ ಇಲ್ಲಿ ಯಾವುದೇ ರೀತಿಯ ಸಹಜ ಚಟುವಟಿಕೆಗಳಿಗೆ ತೊಂದರೆ ಆಗದಂತೆ ರಾಷ್ಟ್ರೀಯ ಜಲಮಾರ್ಗ ಮಾರ್ಗಸೂಚಿಯಡಿ ಮಾಡಲಾಗುತ್ತಿದೆ. ಸೇತುವೆಯಲ್ಲಿ ಎಲ್ಲ ತೆರನಾದ ವಾಹನಗಳು ಓಡಾಟಕ್ಕೆ ಅನುಕೂಲವಾಗುವ ರೀತಿಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಮಂಗಳೂರು ನಗರಕ್ಕೆ ಇದೊಂದು ಪ್ರಮುಖ ಹಾಗೂ ಮಹತ್ವದ ಯೋಜನೆ ಎಂದವರು ಹೇಳಿದರು.

ಬ್ಲ್ಯೂಫ್ಲ್ಯಾಗ್ ಬೀಚ್‌ಗೂ ಈ ಸೇತುವೆ ಎರಡನೇ ಸಂಪರ್ಕ ರಸ್ತೆಯಾಗಿ ಬಳಕೆಯಾಗಲಿದೆ. ಇದರಿಂದ ಪ್ರವಾಸೋದ್ಯಕ್ಕೂ ಒತ್ತು ನೀಡಿದಂತಾಗುತ್ತದೆ. ಸ್ಥಳೀಯ ಜನರ ಸಂಚಾರದ ಜತೆಗೆ ವಾಣಿಜ್ಯ ಹಾಗೂ ಪ್ರವಾಸೋದ್ಯಮ ಚಟುವಟಿಕೆಗಳಿಗೂ ಈ ಸೇತುವೆಯಿಂದ ಸಹಕಾರವಾಗಲಿದೆ ಎಂದರು.

- ಇಲ್ಲಿ ನಿರ್ಮಾಣವಾಗುತ್ತಿರುವ 285 ಮೀಟರ್ ಉದ್ದದ ವಾಹನ ಸಂಚಾರ ಸೇತುವೆಯಲ್ಲಿ 100 ಮೀಟರ್ ವಿಸ್ತಾರ ಬೋ–ಸ್ಟ್ರಿಂಗ್ ಸೇತುವೆ ಅಳವಡಿಸಲಾಗಿದ್ದು, ಇದು ನ್ಯಾಷನಲ್ ವಾರ್‌ವೇಸ್ 43 ನಿಯಮಾವಳಿಗಳ ಪ್ರಕಾರ ಹೈಡ್‌ಟೈಡ್ ಲೈನ್ ನಿಂದ 10 ಮೀಟರ್ ಎತ್ತರ ಹೊಂದಿದೆ. ಈ ಸೇತುವೆ ಒದಗಿಸಲಾಗಿರುವ 100 ಮೀಟರ್ ವ್ಯಾಪ್ತಿಯ ಬೋ–ಸ್ಟ್ರಿಂಗ್ ಗರ್ಡರ್ ಭಾರತದ ಅತಿ ದೊಡ್ಡ ಬೌಸ್ಟ್ರಿಂಗ್ ಆಗಿದೆ ಎಂದು ಎಂಜಿನಿಯರ್ ತಿಳಿಸಿದ್ದಾರೆ.

ಸೇತುವೆ ಕಾಮಗಾರಿ ವೀಕ್ಷಿಸಿದ ಉಸ್ತುವಾರಿ ಸಚಿವರು ಅಧಿಕಾರಿಗಳು, ಎಂಜಿನಿಯರ್‌ಗಳಿಗೆ ಮಾರ್ಗದರ್ಶನಗಳನ್ನು ನೀಡಿದರು. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಗೇರು ಅಭಿವೃದ್ಧಿ ಮಂಡಳಿ ಅಧ್ಯಕ್ಷೆ ಮಮತಾ ಗಟ್ಟಿ, ಸ್ಮಾರ್ಟ್‌ಸಿಟಿ ಎಂಡಿ ಡಾ.ಸಂತೋಷ್ ಕುಮಾರ್, ಮೆನೇಜರ್ ಅರುಣ್ ಪ್ರಭಾ ಮತ್ತಿತರರಿದ್ದರು.

ಸುದ್ದಿ ಸಿಂಚನ

17ರಿಂದ ಪುನರೂರು ಪ್ರತಿಷ್ಠಾನ ಬೇಸಿಗೆ ಶಿಬಿರ

ಮೂಲ್ಕಿ: ಪುನರೂರು ಪ್ರತಿಷ್ಠಾನ ಆಶ್ರಯದಲ್ಲಿ ಜನ ವಿಕಾಸ ಸಮಿತಿ ಮೂಲ್ಕಿ ಸಹಕಾರದಲ್ಲಿ ಬಾಲ ವಿಕಾಸ ಶಿಬಿರ-2026 (ಮಕ್ಕಳ ಬೌದ್ಧಿಕ ಬೆಳವಣಿಗೆಗಾಗಿ ಉಚಿತ ಬೇಸಿಗೆ ಶಿಬಿರ)ವು ಪುನರೂರು ಶ್ರೀ ವಿಶ್ವನಾಥ ದೇವಸ್ಥಾನದ ಸಭಾಂಗಣದಲ್ಲಿ ಮೇ 17ರಿಂದ 24ರವರೆಗೆ ಬೆಳಿಗ್ಗೆ 8 ಗಂಟೆಯಿಂದ ಸಂಜೆ 4ರವರೆಗೆ ಜರುಗಲಿದೆ.

ಶಿಬಿರದಲ್ಲಿ ಯೋಗ ಶಿಕ್ಷಕ ಜಯ ಮುದ್ದು ಶೆಟ್ಟಿ ಅವರಿಂದ ಯೋಗ ತರಬೇತಿ, ರಂಗ ನಟ, ನಿರ್ದೇಶಕ ತಾರನಾಥ್ ಉರ್ವ ಅವರಿಂದ ಅಭಿನಯ ತರಬೇತಿ, ಶಿಮಂತೂರು ಶ್ರೀ ಶಾರದಾ ಸೆಂಟ್ರಲ್ ಸ್ಕೂಲ್ ನ ಪ್ರಾಂಶುಪಾಲ ಜಿತೇಂದ್ರ ವಿ. ರಾವ್, ಹೆಜಮಾಡಿ ಅವರಿಂದ ಶ್ಲೋಕ ಕಂಠ ಪಾಠ, ಹಳೆಯಂಗಡಿಯ ಖ್ಯಾತ ಗಾಯಕ, ಭಜನೆ ಶಿಕ್ಷಕ ಸುರೇಶ್ ಆಚಾರ್ಯರಿಂದ ಭಜನೆ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕತ ಶಿಕ್ಷಕ ವೆಂಕಿ ಫಲಿಮಾರ್ ಅವರಿಂದ ಆವೆ ಮಣ್ಣಿನ ಕಲಾಕೃತಿ ರಚನೆ ಮತ್ತು ಕರಕುಶಲ ತರಬೇತಿ ನಡೆಯಲಿದೆ.

ಶಿಬಿರಾರ್ಥಿಗಳು ಅರ್ಜಿಯೊಂದಿಗೆ ಆಧಾರ್ ಪ್ರತಿಯನ್ನು1 ಭಾವಚಿತ್ರದೊಂದಿಗೆ ನೀಡಬೇಕು. ಮೊದಲು ಬಂದ 50 ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು. ಮೂಲ್ಕಿ ತಾಲೂಕು ಮಟ್ಟದ 8ರಿಂದ 12 ವರ್ಷ ವಯೋಮಿತಿಯ ಮಕ್ಕಳಿಗೆ ಮಾತ್ರ ಅವಕಾಶ. ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ 10-05-2026.

ಹೆಚ್ಚಿನ ಮಾಹಿತಿಗಾಗಿ 9341223111 ದೂರವಾಣಿ ಸಂಖ್ಯೆಯನ್ನು ವಾಟ್ಸ್ ಆ್ಯಪ್ ಮುಖಾಂತರ ಸಂಪರ್ಕಿಸುವಂತೆ ಪುನರೂರು ಪ್ರತಿಷ್ಠಾನದ ಅಧ್ಯಕ್ಷ ದೇವಪ್ರಸಾದ್ ಪುನರೂರು ಮತ್ತು ಜನ ವಿಕಾಸ ಸಮಿತಿ ಮೂಲ್ಕಿ ಅಧ್ಯಕ್ಷ ಸುರೇಶ್ ರಾವ್ ಪಿ.ಎಸ್. ತಿಳಿಸಿದ್ದಾರೆ.

ಆದಿಶಕ್ತಿ ಅಂತರಘಟ್ಟೆ ಅಮ್ಮ ದೇವಾಲಯದ ವಾರ್ಷಿಕೋತ್ಸವ

ಕುಶಾಲನಗರ: ಕುಶಾಲನಗರ ಬೈಚನಹಳ್ಳಿಯ ಶ್ರೀ ಆದಿಶಕ್ತಿ ಅಂತರಘಟ್ಟೆ ಅಮ್ಮ ದೇವಾಲಯದ 11ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ ಭಕ್ತಿ ಭಾವದಿಂದ ನಡೆಯಿತು.

ಬೆಳಗ್ಗೆ ಗಣಪತಿ ಹೋಮ, ದುರ್ಗಾ ಹೋಮ, ನವ ಶಕ್ತಿ ಅಭಿಷೇಕ, ಪಂಚಾಮೃತ ಅಭಿಷೇಕ ನಡೆದು ಮಹಾಮಂಗಳಾರತಿ ತೀರ್ಥಪ್ರಸಾದ ನಂತರ ಅನ್ನಸಂತರ್ಪಣೆ ನಡೆಯಿತು. ಕೃಷ್ಣಮೂರ್ತಿ ಭಟ್ ನೇತೃತ್ವದ ಅರ್ಚಕರ ತಂಡದಿಂದ ಪೂಜಾ ವಿಧಿ ವಿಧಾನಗಳು ಜರುಗಿದವು.

ಕುಶಾಲನಗರ ದೇವಾಲಯಗಳ ಒಕ್ಕೂಟದ ಪ್ರತಿನಿಧಿಗಳು ಫಲ ತಾಂಬೂಲದೊಂದಿಗೆ ಆಗಮಿಸಿ ಸಾಮೂಹಿಕ ಪೂಜೆ ಸಲ್ಲಿಸಿದರು.

ಮಡಿಕೇರಿ ಶಾಸಕ ಡಾ ಮಂತರ್‌ಗೌಡ ದೇವಾಲಯಕ್ಕೆ ಆಗಮಿಸಿ ಪೂಜೆ ಸಲ್ಲಿಸಿ ಶುಭ ಕೋರಿದರು. ಗ್ರಾಮ ಸೇರಿದಂತೆ ಸುತ್ತಮುತ್ತಲ ಭಕ್ತಾದಿಗಳು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ದೇವಾಲಯ ಸೇವಾ ಸಮಿತಿ ಅಧ್ಯಕ್ಷರಾದ ವಿ ಗಿರೀಶ್, ಗೌರವಾಧ್ಯಕ್ಷರಾದ ಗೋವಿಂದರಾಜು ಉಪಾಧ್ಯಕ್ಷರಾದ ಬಿ ಎಸ್ ಗಣೇಶ್, ಕಾರ್ಯದರ್ಶಿ ಬಿ ಎಂ ಜಗದೀಶ್, ಖಜಾಂಚಿ ಜಗದೀಶ್ ದೇವಾಲಯ ಅರ್ಚಕರಾದ ಸ್ವಾಮಿ ಇದ್ದರು.

ಮಾಹೆ ಎಂಐಟಿಗೆ ಸಿಎಫ್ಎ ಇನ್‌ಸ್ಟಿಟ್ಯೂಟ್ ಮಾನ್ಯತೆ

ಮಣಿಪಾಲದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮಾಣಪತ್ರ ಹಸ್ತಾಂತರ | ಎಂಐಟಿ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಶಿಕ್ಷಣ ಅನುಕೂಲ

• **ಕನ್ನಡಪ್ರಭ ವಾರ್ತೆ** ಮಣಿಪಾಲ

ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ವಿವಿಯ ಅಂಗ ಸಂಸ್ಥೆ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು (ಎಂಐಟಿ)ಗೆ ಪ್ರತಿಷ್ಠಿತ ಸಿಎಫ್ಎ ಇನ್‌ಸ್ಟಿಟ್ಯೂಟ್ ವಿಶ್ವವಿದ್ಯಾಲಯದಿಂದ ಮಾನ್ಯತೆ ಸಿಕ್ಕಿದ್ದು, ಎಂಐಟಿಯು ಈ ಮಾನ್ಯತೆಪಡೆದಭಾರತದಮೊದಲಮತ್ತುಏಕೈಕಎಂಜಿನಿಯರಿಂಗ್ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಮೇ 6ರಂದು ಮಣಿಪಾಲದಲ್ಲಿ ನಡೆದ ರ್ಕಾಯಕ್ರಮದಲ್ಲಿ ಸಿಎಫ್ಎ ಇನ್‌ಸ್ಟಿಟ್ಯೂಟ್‌ನ ಪ್ರತಿನಿಧಿಗಳಾದ ಸೈಮ್ ಫಕಿಹ್ ಮತ್ತು ಕುಮಾರಿ ಅಂಜನಾ ನಹರ್‌ಅವರು ಮಾಹೆಯ ಕುಲಸಚಿವ ಡಾ. ಪಿ. ಗಿರಿಧರ್‌ಕಿಣಿ ಅವರಿಗೆ ಈ ಮಾನ್ಯತೆ ಪ್ರಮಾಣಪತ್ರ ಅಧಿಕೃತವಾಗಿ ಹಸ್ತಾಂತರಿಸಿದರು.

ಎಂಐಟಿ ನಿರ್ದೇಶಕರಾದ ಕಮಾಂಡರ್(ಡಾ) ಅನಿಲ್ ರಾಣಾ ಮತ್ತು ಡಾ. ಕುಂಚಂ ಶ್ಯಾಮ್ ಪ್ರಸಾದ್, ಎಂಐಟಿ ಸ್ಕೂಲ್ ಆಫ್ ಬೇಸಿಕ್ ಸೈನ್ಸಸ್, ಹ್ಯುಮಾನಿಟೀಸ್ ಅಂಡ್ ಮ್ಯಾನೇಜ್‌ಮೆಂಟ್‌ನ ಸಹ ಡೀನ್ ಡಾ. ಯೋಗೇಶ್ ಪೈ ಪಿ. ಹಾಗೂ ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ಈ ಮಾನ್ಯತೆಯಿಂದ ಎಂಐಟಿ ವಿದ್ಯಾರ್ಥಿಗಳಿಗೆ ಹಣಕಾಸು ತಂತ್ರಜ್ಞಾನದ ಕ್ಷೇತ್ರದಲ್ಲಿ ಜಾಗತಿಕ ಮಟ್ಟದ ಶಿಕ್ಷಣ ದೊರೆಯಲಿದೆ. ಈ ಮಾನ್ಯತೆಯು ವಿದ್ಯಾರ್ಥಿಗಳಿಗೆ ಉನ್ನತ ಗುಣಮಟ್ಟದ ಅಧ್ಯಯನ ಸಾಮಗ್ರಿಗಳನ್ನು ಒದಗಿಸುವುದಲ್ಲದೆ, ಉದ್ಯಮದ ತಜ್ಞರೊಂದಿಗೆ ಸಂಪರ್ಕ ಸಾಧಿಸಲು ಮತ್ತು ವಿವಿಧ ವಿದ್ಯಾರ್ಥಿವೇತನಗಳನ್ನು ಪಡೆಯಲು ದಾರಿಯಾಗಲಿದೆ.

ಜಾಗತಿಕ ಮಟ್ಟದಲ್ಲಿ ಹಣಕಾಸು ಮತ್ತು ಹೂಡಿಕೆ ಕ್ಷೇತ್ರದಲ್ಲಿ ಅತ್ಯುನ್ನತ ಗುಣಮಟ್ಟವನ್ನು ಕಾಪಾಡಿಕೊಳ್ಳುವ ಸಿಎಫ್ಎ ಇನ್ ಸ್ಟಿಟ್ಯೂಟ್‌ನೊಂದಿಗೆ ಕೈಜೋಡಿಸಿರುವುದು ಎಂಐಟಿಯಲ್ಲಿ ಎಂಜಿನಿಯರಿಂಗ್ ಶಿಕ್ಷಣದ ಜತೆಗೆ ಹಣಕಾಸು ಕ್ಷೇತ್ರದ ಜಾಗತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಅತ್ಯಂತ ಮಹತ್ವದ್ದಾಗಿದೆ.



ಮಣಿಪಾಲದ ಎಂಐಟಿಗೆ ಸಿಎಫ್ಎ ಇನ್‌ಸ್ಟಿಟ್ಯೂಟ್ ಮಾನ್ಯತೆಯನ್ನು ಹಸ್ತಾಂತರಿಸಲಾಯಿತು.

■ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ವಿವಿಯ ಅಂಗ ಸಂಸ್ಥೆ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು (ಎಂಐಟಿ)ಗೆ ಪ್ರತಿಷ್ಠಿತ ಸಿಎಫ್ಎ ಇನ್‌ಸ್ಟಿಟ್ಯೂಟ್ ವಿಶ್ವವಿದ್ಯಾಲಯದಿಂದ ಮಾನ್ಯತೆ ಸಿಕ್ಕಿದ್ದು, ಎಂಐಟಿಯು ಈ ಮಾನ್ಯತೆ ಪಡೆದ ಭಾರತದ ಮೊದಲ ಮತ್ತು ಏಕೈಕ ಎಂಜಿನಿಯರಿಂಗ್ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಸಿಎಸ್-ಎಫ್‌ಟಿ ಕೋರ್ಸ್ ಎಂಐಟಿಯ 2023ರಿಂದ ಬಿಟೆಕ್ (ಕಂಪ್ಯೂಟರ್‌ಸೈನ್ಸ್ ಮತ್ತು ಫೈನಾನ್ಶಿಯಲ್ ಟೆಕ್ನಾಲಜಿ) ಎಂಬ ವಿನೂತನ ಕೋರ್ಸನ್ನು ಆರಂಭಿಸಿದೆ. ಕಂಪ್ಯೂಟರ್‌ಸೈನ್ಸ್ ಜತೆಗೆ ಹಣಕಾಸು, ಅನಲಿಟಿಕ್ಸ್, ತಂತ್ರಜ್ಞಾನಗಳನ್ನು ಒಳಗೊಂಡ ಅಂತರಶಿಸ್ತೀಯ ಕೋರ್ಸ್ ಪರಿಚಯಿಸಿದ ದೇಶದ ಮೊದಲ ಮತ್ತು ಏಕೈಕ ಸಂಸ್ಥೆ ಎಂಬ ಕೀರ್ತಿಗೆ ಎಂಐಟಿ ಪಾತ್ರವಾಗಿದೆ. ಇಂದಿನ ಆಧುನಿಕ ಉದ್ಯೋಗ ಮಾರುಕಟ್ಟೆಗೆ ಪೂರಕವಾದ ಪರಿಣಿತರನ್ನು ಸಿದ್ಧಪಡಿಸುವಲ್ಲಿ ಎಂಐಟಿ ಮಹತ್ವದ ಪಾತ್ರ ವಹಿಸುತ್ತಿದೆ.

ಉಜಿರೆ ಎಸ್‌ಡಿಎಂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಬಿಒಬಿ ಬಗ್ಗಿ ವಾಹನ ಕೊಡುಗೆ

4.65 ಲಕ್ಷ ರು ಮೌಲ್ಯ | ಪರಿಸರ ಸ್ನೇಹಿ, ಶಬ್ದ ರಹಿತ ವಾಹನ


ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಹೊರ ಆವರಣದೊಳಗೆ ಸಂಚರಿಸಲು ಬಗ್ಗಿ ವಾಹನ ಸೇವೆ ಒದಗಿಸಿರುವುದು.

• **ಕನ್ನಡಪ್ರಭವಾರ್ತೆ** ಬೆಳ್ತಂಗಡಿ

ವಯೋವೃದ್ಧರು ಮತ್ತು ಅಶಕ್ತರಿಗೆ ಉಜಿರೆ ಎಸ್.ಡಿ.ಎಂ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಹೊರ ಆವರಣದೊಳಗೆ ಸಂಚರಿಸಲು ಬಗ್ಗಿ ವಾಹನ ಸೇವೆ ಒದಗಿಸಲಾಗಿದೆ.

ಪರಿಸರಸ್ನೇಹಿ ಮತ್ತು ಶಬ್ದರಹಿತ ವಾಹನ ಇದಾಗಿದ್ದು, ನಡೆಯಲು ಕಷ್ಟ ಪಡುವವರಿಗೆ ಆಸ್ಪತ್ರೆಯ ಹೊರ ಆವರಣದಲ್ಲಿ ಸಂಚರಿಸಲು ಬಹು ಉಪಯುಕ್ತವಾಗಿದೆ. 4.65 ಲಕ್ಷ ರು ಮೌಲ್ಯದ ಈ ವಾಹನವನ್ನು ಬ್ಯಾಂಕ್ ಆಫ್ ಬರೋಡಾ ಬ್ಯಾಂಕಿನವರು ಉಚಿತವಾಗಿ ನೀಡಿದ್ದು, ಬ್ಯಾಂಕ್ ಆಫ್ ಬರೋಡಾ ಪ್ರಾದೇಶಿಕ ಮೇನೇಜರ್ ಗಣೇಶ್ ಉಜಿನ ಮತ್ತು ಜನರಲ್ ಮೇನೇಜರ್ ರಾಜೇಶ್ ಖನ್ನಾ ಅವರು ಡಾ. ಡಿ ವೀರೇಂದ್ರ ಹೆಗ್ಗಡೆ ಅವರಿಗೆ ಬಗ್ಗಿ ವಾಹನದ ಕೀಯನ್ನುಹಸ್ತಾಂತರಿಸಿದರು.

ಈ ಸಂದರ್ಭ ಹೇಮಾವತಿ ವಿ. ಹೆಗ್ಗಡೆ, ಉಜಿರೆಎಸ್ .ಡಿ.ಎಂ ಮಲ್ಟಿ ಸ್ಪೆಷಾಲಿಟಿಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಂ. ಜನಾರ್ದನ್, ಬ್ಯಾಂಕ್ ಆಫ್ ಬರೋಡಾ ಬ್ಯಾಂಕಿನ ಉಜಿರೆ ಶಾಖೆಯ ಮೇನೇಜರ್ ಶಿವರಾಮ ಹಾಗೂ ಧರ್ಮಸ್ಥಳ ಶಾಖೆಯ ಮೇನೇಜರ್ ಚೈತನ್ಯಾನಂದ ಎನ್.ಇದ್ದರು.

ನೂತನ ಸದಸ್ಯರ ಸೇರಿಸಿ ಸಂಸ್ಥೆ ಬಲಪಡಿಸಿ: ರಾಮಕೃಷ್ಣ ಪಿ.ಕೆ.

ಮಂಗಳೂರು: ರೋಟರಿ ಮಂಗಳೂರು ಸಿಟಿ ಸಂಸ್ಥೆಯ ಸ್ಥಾಪನಾ ದಿನಾಚರಣೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

ರೋಟರಿ ಸಂಸ್ಥೆಯ ಸದಸ್ಯರು ಸಂಸ್ಥೆಯಲ್ಲಿ ಕ್ರಿಯಾಶೀಲರಾಗಿ ಶ್ರಮಿಸಿ ಸಮಾಜಸೇವಾ ಕಾರ್ಯ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ನೂತನ ಸದಸ್ಯರನ್ನು ಸೇರ್ಪಡಿಸಿ ಸಂಸ್ಥೆಯನ್ನು ಬಲಪಡಿಸಿ ಯಶಸ್ಸು ಸಾಧಿಸಬೇಕು ಎಂದು ಮೈಸೂರು ನಗರ ಮೂಲದ ಖ್ಯಾತ ಕೈಗಾರಿಕೋದ್ಯಮಿ ಹಾಗೂ ರೋಟರಿ ಜಿಲ್ಲಾ 3181 ಗವರ್ನರ್ ರಾಮಕೃಷ್ಣ ಪಿ.ಕೆ. ಸಲಹೆ ನೀಡಿದರು.

ಅವರು ಗುರುವಾರ ನಗರದ ಮಂಗಳೂರು ಕ್ಲಬ್ ಸಭಾಂಗಣದಲ್ಲಿ ಆಯೋಜಿಸಿದ ರೋಟರಿ ಮಂಗಳೂರು ಸಿಟಿ ಸಂಸ್ಥೆಯ ಸ್ಥಾಪನಾ ದಿನಾಚರಣೆಯಲ್ಲಿ ಸಂಸ್ಥೆಗೆ ಅಧಿಕೃತ ಭೇಟಿ ನೀಡಿ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದರು.

ರೋಟರಿ ಅಂತರಾಷ್ಟ್ರೀಯ ಪ್ರತಿಷ್ಠಾನಕ್ಕೆ ಉದಾರ ದಾನ ನೀಡಬೇಕು ಎಂದು ಕರೆ ನೀಡಿದರು. ಅಂತರಾಷ್ಟ್ರೀಯ ರೋಟರಿ ಆಂದೋಲನಕ್ಕೆ ಭಾರತೀಯ ರೋಟರಿ ಸಂಸ್ಥೆಗಳ ಕೊಡುಗೆ ಅಪಾರ ಮತ್ತು ಅಮೂಲ್ಯ ಎಂದರು.

ರೋಟರಿ ಜಿಲ್ಲಾ ಸಹಾಯಕ ಗವರ್ನರ್ ರೋ.ರವಿಶಂಕರ್‌ರಾವ್ ಗೌರವ ಅತಿಥಿಯಾಗಿ ಪಾಲ್ಗೊಂಡು ಪದಾಧಿಕಾರಿಗಳಿಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡಿದರು.

ರೋ.ಡಾ.ರಂಜನ್ ಸಂಪಾದಕತ್ವದ ಸಂಸ್ಥೆಯ ಗೃಹ ವಾರ್ತಾ ಪತ್ರಿಕೆ ಸಿಟಿ ಬಿಟ್ಸ್ ಆಂಡ್ ಬೈಟ್ಸ್ ಯನ್ನು ಬಿಡುಗಡೆಗೊಳಿಸಿ ಸಂಸ್ಥೆಯ ಸಮಾಜಸೇವಾ ಕಾರ್ಯ ಚಟುವಟಿಕೆಗಳ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಸಂಸ್ಥೆಯ ಸ್ಥಾಪನಾ ಸದಸ್ಯರಾದ ರೋ. ಡಾ.ರಂಜನ್, ರೋ.ಸರಿತಾ ಡಿಸೋಜಾ, ರೋ.ಪ್ರಶಾಂತ್ ರೈ, ರೋ.ಭಸವ ಕುಮಾರ್, ರೋ.ಸುದೇಶ್ ಅವರನ್ನು ಗೌರವಿಸಲಾಯಿತು.

ಸಂಸ್ಥೆಯ ಅಧ್ಯಕ್ಷೆ ರೋ.ಸಜ್ನಾ ಭಾಸ್ಕರ್ ಅಧ್ಯಕ್ಷತೆ ವಹಿಸಿ ಸ್ವಾಗತಿಸಿದರು. ಕಾರ್ಯದರ್ಶಿ ರೋ.ಪದ್ಮನಾಭ್ ನಾಯ್ಕ್ ವರದಿ ಮಂಡಿಸಿದರು.

ಸಂಸ್ಥೆಯ ಸಲಹೆಗಾರ ರೋ.ರಾಜೇಂದ್ರ ಕಲ್ಬಾವಿ, ವಲಯ ಪ್ರತಿನಿಧಿ ರೋ.ಪ್ರಶಾಂತ್ ರೈ ಇದ್ದರು.

ರೋ. ಕೆನ್ಯೂಟ್ ಪಿಂಟೋ ಅತಿಥಿಗಳನ್ನು ಗುರುತಿಸಿ ಗೌರವಿಸಿದರು. ಕಾರ್ಯದರ್ಶಿ ರೋ. ಪದ್ಮನಾಭ್ ನಾಯ್ಕ್ ವಂದಿಸಿದರು.



ರೋಟರಿ ಮಂಗಳೂರು ಸಿಟಿ ಸಂಸ್ಥೆಯ ಸ್ಥಾಪನಾ ದಿನದಲ್ಲಿ ಹಾಜರಿದ್ದ ಗಣ್ಯರು.

■ ರೋಟರಿ ಅಂತರಾಷ್ಟ್ರೀಯ ಪ್ರತಿಷ್ಠಾನಕ್ಕೆ ಉದಾರ ದಾನ ನೀಡಬೇಕು ಎಂದು ಕರೆ ನೀಡಿದರು. ಅಂತರಾಷ್ಟ್ರೀಯ ರೋಟರಿ ಆಂದೋಲನಕ್ಕೆ ಭಾರತೀಯ ರೋಟರಿ ಸಂಸ್ಥೆಗಳ ಕೊಡುಗೆ ಅಪಾರ ಮತ್ತು ಅಮೂಲ್ಯ ಎಂದರು.

ರಾಮಕೃಷ್ಣ ಕೋ-ಓಪರೇಟಿವ್ ಸೊಸೈಟಿ ಪ್ರತಿಭಾ ಪುರಸ್ಕಾರ

'ಸಂಘದ ಸದಸ್ಯರ ಪ್ರತಿಭಾವಂತ ಮಕ್ಕಳಿಂದ ಅರ್ಜಿ ಆಹ್ವಾನ'

• **ಕನ್ನಡಪ್ರಭ ವಾರ್ತೆ** ಮಂಗಳೂರು

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ. ಮಂಗಳೂರು ಇದರ ವತಿಯಿಂದ ಸಂಘದ ಸದಸ್ಯರ ಪ್ರತಿಭಾವಂತ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈಯವರು ತಿಳಿಸಿದ್ದಾರೆ.


ಕೆ.ಜೈರಾಜ್ ಬಿ. ರೈ

ಸಂಘದ ಸದಸ್ಯರ ಮಕ್ಕಳಿಗೆ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 95 ಹಾಗೂ ಅದಕ್ಕಿಂತ ಹೆಚ್ಚು ಅಂಕ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 90 ಹಾಗೂ ಅದಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮತ್ತು 2025-26ನೇ ಸಾಲಿನ ಶೈಕ್ಷಣಿಕ ಸಾಲಿನಲ್ಲಿ ಪಿಯುಸಿ ಉತ್ತೀರ್ಣರಾಗಿ, 2026-27ನೇ ಶೈಕ್ಷಣಿಕ ಸಾಲಿನಲ್ಲಿ

1. ಎಂ.ಬಿ.ಬಿ.ಎಸ್/ಬಿಡಿಎಸ್/ಆಯುಷ್/ವೆಟರ್ನರಿ ಮುಂತಾದ ವೈದ್ಯಕೀಯ ಶಿಕ್ಷಣ ಪದವಿ/ಸ್ನಾತಕೋತ್ತರ ವ್ಯಾಸಂಗವನ್ನು ರಾಷ್ಟ್ರೀಯ ನೀಟ್ ಪರೀಕ್ಷೆ ಮುಖೇನ ಸರ್ಕಾರಿ ಕಾಲೇಜಿನಲ್ಲಿ ಮೆರಿಟ್ ಸೀಟ್‌ನಲ್ಲಿ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೆ

2. ಎಂಜಿನಿಯರಿಂಗ್ ಪದವಿ/ಸ್ನಾತಕ್ಕೋತ್ತರ ವ್ಯಾಸಂಗವನ್ನು ರಾಜ್ಯ ಮತ್ತು ರಾಷ್ಟ್ರೀಯ ಪ್ರವೇಶ ಪರೀಕ್ಷೆ (ಸಿಇಟಿ/ಜೆಇಇ) ಪರೀಕ್ಷೆ ಮುಖೇನ ಸರ್ಕಾರಿ ಕಾಲೇಜಿನಲ್ಲಿ ಮೆರಿಟ್ ಸೀಟ್‌ನಲ್ಲಿ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ಡಿಪ್ಲೊಮಾ ನಂತರ ಎಂಜಿನಿಯರಿಂಗ್ ಪದವಿಯ ವ್ಯಾಸಂಗವನ್ನು ರಾಜ್ಯ (ಸಿಇಟಿ) ಪರೀಕ್ಷೆ ಮುಖೇನ ಸರ್ಕಾರಿ ಕಾಲೇಜಿನಲ್ಲಿ ಮೆರಿಟ್ ಸೀಟ್‌ನಲ್ಲಿ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೆ,

3. ಅಗ್ರಿಕಲ್ಚರಲ್/ಫಿಶರೀಶ್ ಮತ್ತು ವೆಟರ್ನರಿ ಪದವಿ/ಸ್ನಾತಕ್ಕೋತ್ತರ ಪದವಿ ರಾಜ್ಯ ಸಿಇಟಿ ಪರೀಕ್ಷೆ ಮುಖೇನ ಸರ್ಕಾರಿ ಕಾಲೇಜಿನಲ್ಲಿ ಮೆರಿಟ್ ಸೀಟ್‌ನಲ್ಲಿ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೆ,

4. ಕಾನೂನು ಪದವಿ / ಸ್ನಾತಕೋತ್ತರ ವ್ಯಾಸಂಗವನ್ನು ಸಿಎಲ್‌ಇಟಿ ಪರೀಕ್ಷೆ ಮುಖೇನ ರಾಷ್ಟ್ರೀಯ ಕಾನೂನು ಕಾಲೇಜಿನಲ್ಲಿ ಮೆರಿಟ್ ಸೀಟ್‌ನಲ್ಲಿ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೆ,

5. ಎಂ.ಎ/ಎಂ.ಕಾಂ./ಎಂ.ಬಿ.ಎ/ಎಂ.ಎಸ್.ಎಸ್ಸಿ/ಎಂ.ಇಡಿ ಪದವಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ,

6. ಪಾಲಿಟೆಕ್ನಿಕ್ ಡಿಪ್ಲೊಮಾ /ಐ.ಟಿ.ಐ/ಬಿ.ಪಿ.ಇ.ಡಿ/ಬಿ.ಇ.ಡಿ./ಡಿ.ಇ.ಡಿ ಯಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ,

7. ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಕೋರ್ಸ್‌ಗಳಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿಭಾ ಪುರಸ್ಕಾರದ ಅರ್ಜಿಗಳು ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯ ಎಲ್ಲ ಶಾಖೆಗಳಲ್ಲಿ ಮತ್ತು ಸಂಘದ ಅಧಿಕೃತ ವೆಬ್‌ಸೈಟ್ http://ramakrishnacredit.com/ ನಲ್ಲಿ ಲಭ್ಯವಿದ್ದು ಜೂನ್ 15, 2026 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಸದಸ್ಯರು ಇದರ ಸದುಪಯೋಗ ಪಡೆಯುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಲಿಸುತ್ತಿರುವಾಗಲೇ ಹೃದಯಾಘಾತ: ಬಸ್ ಚಾಲಕ ಮೃತ್ಯು

ಕೊಡಗಿನಲ್ಲಿ ಘಟನೆ | ಖಾಸಗಿ ಬಸ್ ಭಾಗಶಃ ಪಲ್ಟಿ | ಪ್ರಯಾಣಿಕರು ಪಾರು

• **ಕನ್ನಡಪ್ರಭ ವಾರ್ತೆ** ಮಡಿಕೇರಿ

ಚಲಿಸುತ್ತಿರುವಾಗಲೇ ಚಾಲಕನಿಗೆ ಹೃದಯಾಘಾತ ಸಂಭವಿಸಿ ಬಸ್ ಅಪಘಾತಕ್ಕೀಡಾದ ಘಟನೆ ಮಡಿಕೇರಿ ಸಮೀಪದ ತಾಳತ್ ಮನೆ ಬಳಿ ಶುಕ್ರವಾರ ಮುಂಜಾನೆ 5 ಗಂಟೆ ಸುಮಾರಿಗೆ ನಡೆದಿದೆ. ಬೆಂಗಳೂರು ಮೂಲದ ಶಿವಕುಮಾರ್(50) ಮೃತರು.

ಬೆಂಗಳೂರಿನಿಂದ ಹೊರಟ ಖಾಸಗಿ ಬಸ್ ಮಡಿಕೇರಿ ಸಮೀಪದ ತಲುಪುತ್ತಿದ್ದಂತೆ ಚಾಲಕನಿಗೆ ತೀವ್ರ ಹೃದಯಾಘಾತ ಸಂಭವಿಸಿದೆ.

ಪರಿಣಾಮ ಬಸ್ ರಸ್ತೆ ಪಕ್ಕದ ಇಳಿಜಾರಿಗೆ ವಾಲಿಕೊಂಡಿದೆ. ತನಗೆ ಹೃದಯಘಾತವಾಗುತ್ತಿದ್ದಂತೆ ಚಾಲಕ ಬಸ್ ನಿಲ್ಲಿಸುವ ಪ್ರಯತ್ನ ಮಾಡಿದ್ದಾರೆ. ಹೃದಯಾಘಾತ ತೀವ್ರವಾಗುತ್ತಿದ್ದಂತೆ ಚಾಲಕ ಚರಂಡಿಯ ಬಳಿ ಬಸ್ ನಿಲ್ಲಿಸಿದ್ದಾರೆ. ಈ ವೇಳೆ ಬಸ್ ಕೊಂಚ ವಾಲಿಕೊಂಡಿದೆ. ಆದರೆ ಪ್ರಯಾಣಿಕರ ಜೀವಕ್ಕೇನು ಅಪಾಯವಾಗಿಲ್ಲ. ತಕ್ಷಣವೇ ಚಾಲಕನನ್ನು ಮಡಿಕೇರಿ ಬಳಿಯ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಾಲಕ ಈ ಸಂದರ್ಭ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಮಡಿಕೇರಿ ಸಂಚಾರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ರಸ್ತೆ ಬದಿಯಲ್ಲಿ ಬಸ್ ವಾಲಿಕೊಂಡು ನಿಂತ ಕಾರಣ ಹೆದ್ದಾರಿಯಲ್ಲಿ ಇತರ ವಾಹನ ಸಂಚಾರಕ್ಕೆ ಯಾವುದೇ ಅಡೆ ತಡೆ ಆಗಿಲ್ಲ. ಇತ್ತ ಘಟನೆಯಿಂದ ಆತಂಕಗೊಂಡ ಪ್ರಯಾಣಿಕರಿಗೆ ಬೇರೆ ವಾಹನಗಳ ವ್ಯವಸ್ಥೆ ಮಾಡಲಾಗಿದೆ.



■ ಚಲಿಸುತ್ತಿರುವಾಗಲೇ ಚಾಲಕನಿಗೆ ಹೃದಯಾಘಾತ ಸಂಭವಿಸಿ ಬಸ್ ಅಪಘಾತಕ್ಕೀಡಾದ ಘಟನೆ ಮಡಿಕೇರಿ ಸಮೀಪದ ತಾಳತ್ ಮನೆ ಬಳಿ ಶುಕ್ರವಾರ ಮುಂಜಾನೆ 5 ಗಂಟೆ ಸುಮಾರಿಗೆ ನಡೆದಿದೆ.

■ ಬೆಂಗಳೂರಿನಿಂದ ಹೊರಟ ಖಾಸಗಿ ಬಸ್ ಮಡಿಕೇರಿ ಸಮೀಪದ ತಲುಪುತ್ತಿದ್ದಂತೆ ಚಾಲಕನಿಗೆ ತೀವ್ರ ಹೃದಯಾಘಾತ ಸಂಭವಿಸಿದೆ. ಪರಿಣಾಮ ಬಸ್ ರಸ್ತೆ ಪಕ್ಕದ ಇಳಿಜಾರಿಗೆ ವಾಲಿಕೊಂಡಿದೆ

ಸಮಾಜಮುಖಿ | ವಿಶ್ವ ರೆಡ್‌ಕ್ರಾಸ್ ದಿನಾಚರಣೆ ಉದ್ಘಾಟನೆ

ಉದಾತ್ತ ಸೇವಾ ಕಾರ್ಯಗಳಿಗೆ ರೆಡ್‌ಕ್ರಾಸ್ ಪ್ರೇರಣೆ: ವೇದವ್ಯಾಸ ಕಾಮತ್

• **ಕನ್ನಡಪ್ರಭ ವಾರ್ತೆ** ಮಂಗಳೂರು

ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ರಕ್ತದಾನ, ವಿಪತ್ತು ನಿರ್ವಹಣೆಯಂತಹ ಉದಾತ್ತ ಕಾರ್ಯಗಳಲ್ಲಿ ತೊಡಗಿರುವ ರೆಡ್‌ಕ್ರಾಸ್ ಸಂಸ್ಥೆ ಮಾನವೀಯ ಸೇವೆಯಲ್ಲಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಮತ್ತು ಯುವ ಜನತೆಗೆ ಪ್ರೇರಣೆಯಾಗಿದೆ ಎಂದು ಮಂಗಳೂರು ದಕ್ಷಿಣ ಶಾಸಕ ವೇದವ್ಯಾಸ ಕಾಮತ್ ಹೇಳಿದರು.

ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ವತಿಯಿಂದ ಯೂತ್ ರೆಡ್‌ಕ್ರಾಸ್ ಮಂಗಳೂರು ವಿ.ವಿ. ಸಹಯೋಗದಲ್ಲಿ ನಗರದ ರೆಡ್‌ಕ್ರಾಸ್ ಶತಮಾನೋತ್ಸವ ಭವನದ ಪ್ರೇರಣಾ ಸಭಾಂಗಣದಲ್ಲಿ ಶುಕ್ರವಾರ ನಡೆದ ವಿಶ್ವ ರೆಡ್‌ಕ್ರಾಸ್ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ರೆಡ್‌ಕ್ರಾಸ್ ದ.ಕ.ಜಿಲ್ಲಾ ಘಟಕ ಬಡವರಿಗೆ ತುರ್ತು ಸಂದರ್ಭ ಉಚಿತವಾಗಿ ರಕ್ತ ಪೂರೈಸಲು ಮುಂದಾಗಿದ್ದು ಸಾರ್ವಜನಿಕ ಸಂಘ, ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳು ರಕ್ತದಾನ ಶಿಬಿರಗಳನ್ನು ಆಯೋಜಿಸುವ ಮೂಲಕ ರೆಡ್‌ಕ್ರಾಸ್‌ನ ಮಾನವೀಯ ಸೇವೆಗೆ ಸಹಕರಿಸಬೇಕು ಎಂದು ಶಾಸಕರು ವಿನಂತಿಸಿದರು.

ರೆಡ್‌ಕ್ರಾಸ್ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಲಾದ ಯೂತ್ ರೆಡ್‌ಕ್ರಾಸ್ ವಿಚಾರ ಸಂಕಿರಣದಲ್ಲಿ ಸುರತ್ಕಲ್ ಎನ್‌ಐಟಿಕೆಯ ಸಹ ಪ್ರಾಧ್ಯಾಪಕಿ ಡಾ.ರಶ್ಮಿ ಸುಧೀರ್‌ಉಚ್ಚಿಲ್ ಮತ್ತು ಡಿ ಅಡಿಕ್ಷನ್ ಸಮಾಲೋಚಕಿ ಡಾ.ಕುಸುಮ್ ತಂತ್ರಿ ಡೆಸಾ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

ರೆಡ್‌ಕ್ರಾಸ್ ಜಿಲ್ಲಾ ಘಟಕದ ಉಪಾಧ್ಯಕ್ಷ ಡಾ. ಬಿ.ಸಚ್ಚಿದಾನಂದ ರೈ, ಖಜಾಂಜಿ ಗುರುದತ್ ನಾಯಕ್, ನಿರ್ದೇಶಕರಾದ ಡಾ.ಸತೀಶ್ ರಾವ್, ಪಿ.ಬಿ.ಹರೀಶ್ ರೈ, ರಾಘವೇಂದ್ರ ರಾವ್ ಇದ್ದರು.

ಯೂತ್ ರೆಡ್‌ಕ್ರಾಸ್ ಉಪ ಸಮಿತಿ ನಿರ್ದೇಶಕಿ ಡಾ.ಸುಮನ ಬಿ. ಸ್ವಾಗತಿಸಿದರು. ಮಂಗಳೂರು ವಿ.ವಿ. ಯೂತ್ ರೆಡ್‌ಕ್ರಾಸ್‌ನ ನೋಡಲ್ ಅಧಿಕಾರಿ ಡಾ.ಗಾಯಂತ್ರಿ ಎನ್. ವಂದಿಸಿದರು. ವಿದ್ಯಾರ್ಥಿನಿ ರಕ್ಷಾ ನಿರೂಪಿಸಿದರು.

ಯೂತ್ ರೆಡ್‌ಕ್ರಾಸ್ ವಿಚಾರ ಸಂಕಿರಣದಲ್ಲಿ ನಡೆದ ಯೂತ್ ರೆಡ್‌ಕ್ರಾಸ್ ವಿಚಾರ ಮಂಡನೆ ಸ್ಪರ್ಧೆಯಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿಚಾರ ಮಂಡನೆ ಸ್ಪರ್ಧಾ ವಿಜೇತರು: ಪ್ರಥಮ : ಸುನೈನಾ (ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪುಂಜಾಲಕಟ್ಟೆ), ದ್ವಿತೀಯ : ಝೀನತ್ ಝುಲ್ಫಾ (ಯೇನೆಪೋಯ ಆಯುರ್ವೇದ ಮೆಡಿಕಲ್ ಕಾಲೇಜ್, ಮಂಗಳೂರು), ತೃತೀಯ : ಕೌಶಿಕ್ (ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು).



ಶಾಸಕ ವೇದವ್ಯಾಸ್ ಕಾಮತ್ ಮಾತನಾಡುತ್ತಿರುವುದು.

■ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ರಕ್ತದಾನ, ವಿಪತ್ತು ನಿರ್ವಹಣೆಯಂತಹ ಉದಾತ್ತ ಕಾರ್ಯಗಳಲ್ಲಿ ತೊಡಗಿರುವ ರೆಡ್‌ಕ್ರಾಸ್ ಸಂಸ್ಥೆ ಮಾನವೀಯ ಸೇವೆಯಲ್ಲಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಮತ್ತು ಯುವ ಜನತೆಗೆ ಪ್ರೇರಣೆಯಾಗಿದೆ ಎಂದು ಮಂಗಳೂರು ದಕ್ಷಿಣ ಶಾಸಕ ವೇದವ್ಯಾಸ ಕಾಮತ್ ಹೇಳಿದರು.

ಸರ್ಕಾರಕ್ಕೆ ಮೂರು ವರ್ಷ ತುಂಬಿದ ಬಳಿಕ ಸಂಪುಟ ವಿಸ್ತರಣೆ: ದಿನೇಶ್ ಗುಂಡೂರಾವ್

• **ಕನ್ನಡಪ್ರಭ ವಾರ್ತೆ** ಮಂಗಳೂರು



ಸರ್ಕಾರಕ್ಕೆ ಮೂರು ವರ್ಷ ತುಂಬಿದ ನಂತರ ಸಚಿವ ಸಂಪುಟ ವಿಸ್ತರಣೆ ಮಾಡಬೇಕು ಎಂಬ ತೀರ್ಮಾನ ಇದೆ. ಕೇರಳದಲ್ಲಿ ಸರ್ಕಾರ ರಚನೆ ಆದ ನಂತರ ನಮ್ಮ ವರಿಷ್ಠರು ಕರ್ನಾಟಕದ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ದ.ಕ.ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಅವರು ಶುಕ್ರವಾರ ಮಂಗಳೂರಿನಲ್ಲಿ ಪತ್ರಕರ್ತರ ಜೊತೆ ಮಾತನಾಡಿದರು.

ಯಾರು ಏನೇನು ಪ್ರಯತ್ನ ಮಾಡ್ತಾ ಇದಾರೋ ನನಗೆ ಗೊತ್ತಿಲ್ಲ. ಯಾರು ಯಾವ ದಿನಾಂಕ ನಿಗದಿ ಮಾಡಲು ಸಾಧ್ಯವಿಲ್ಲ.

ಅಂತಿಮವಾಗಿ ನಮ್ಮ ಹೈಕಮಾಂಡ್, ಖರ್ಗೆ, ರಾಹುಲ್ ಗಾಂಧಿ, ಸೋನಿಯಾ ಗಾಂಧಿ ತೀರ್ಮಾನ ತಗೆದುಕೊಳ್ಳುತ್ತಾರೆ. ಸಮಯ, ಮುಹೂರ್ತ ಎಲ್ಲಾ ಅವರ ವಿವೇಚನೆಗೆ ಬಿಟ್ಟಿರುವಂತದ್ದು ಎಂದರು.

ತಮಿಳುನಾಡಿನಲ್ಲಿ ಸಚಿವ ಸ್ಥಾನಕ್ಕೆ ಕಾಂಗ್ರೆಸ್ ಭಿಕ್ಷೆ ಬೇಡುತ್ತಿದೆ ಎಂಬ ಚಲವಾದಿ ನಾರಾಯಣಸ್ವಾಮಿ ಹೇಳಿಕೆಗೆ ಸಂಬಂಧಿಸಿದಂತೆ ಉತ್ತರಿಸಿದ ದಿನೇಶ್ ಗುಂಡೂರಾವ್, ಅವರ ಹೆಸರು ಓಡ್ತಾ ಇರ್ಬೇಕು ಅಂತಾ ಇಂತ ಹೇಳಿಕೆ ಕೊಡ್ತಾರೆ. ಅಂತಹ ಪ್ರಶ್ನೆಗೆ ಉತ್ತರ ಕೊಡೊ ಅವಶ್ಯಕತೆ ಇಲ್ಲ. ರಾಹುಲ್ ಗಾಂಧಿ ಮತ್ತು ವಿಜಯ್‌ಗೆ ಮೊದಲಿಂದನೂ ಸ್ನೇಹ-ಸಂಪರ್ಕವಿತ್ತು. ಬಹಳ ಹಿಂದೆ ಅವರು ಎನ್‌ಎಸ್‌ಯುಐಗೆ ಬರಬೇಕು ಅಂತಾ ಕೂಡ ಇತ್ತು.


8 ವರ್ಷದ ಹಿಂದೆ ಮಾತುಕತೆ ನಡೆದಿತ್ತು ಎಂದರು.

ರಾಜ್ಯದಲ್ಲಿ ತಾಪಮಾನ
ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಕಲಬುರಗಿ	ಬೀದರ್	ರಾಯಚೂರು	ಚಿತ್ರದುರ್ಗ	ವಿಜಯಪುರ
ಗರಿಷ್ಠ	39.8	38.4	37.6	36.4	36.0
ಕನಿಷ್ಠ	26.2	22.6	27.0	23.1	22.5

11 ಜಿಲ್ಲೇಲಿ ಕ್ವಿಂಟಲ್‌ಗೆ ₹7721ರಂತೆ ಸೂರ್ಯಕಾಂತಿ ಖರೀದಿಗೆ ಆದೇಶ

ಬೆಂಗಳೂರು: ಬೆಂಬಲ ಬೆಲೆ ಯೋಜನೆ ಅಡಿ 2025-26ನೇ ಸಾಲಿನ ಹಿಂಗಾರು ಹಂಗಾಮಿನ ಸೂರ್ಯಕಾಂತಿಯನ್ನು ಪ್ರತಿ ಕ್ವಿಂಟಲ್‌ಗೆ 7,721 ರು. ದರದಲ್ಲಿ ಖರೀದಿಗೆ ಸಚಿವ ಶಿವಾನಂದ ಪಾಟೀಲ ಆದೇಶ ಮಾಡಿದ್ದಾರೆ. ಕೇಂದ್ರ ಸರ್ಕಾರದ



ಬೆಂಬಲ ಬೆಲೆ ಮಾರ್ಗಸೂಚಿಗಳ ಅನ್ವಯ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ವಿಜಯಪುರ, ಚಾಮರಾಜನಗರ, ಚಿತ್ರದುರ್ಗ, ಗದಗ, ಕಲಬುರಗಿ, ವಿಜಯನಗರ, ರಾಯಚೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಖರೀದಿ ಕೇಂದ್ರಗಳನ್ನು ತೆರೆಯಲು ನಿರ್ದೇಶನ ನೀಡಿದ್ದಾರೆ. ನಾಫೆಡ್ ಮತ್ತು ಎನ್‌ಸಿಸಿಎಫ್ ಸಂಸ್ಥೆಗಳನ್ನು ಕೇಂದ್ರ ಸರ್ಕಾರದ ಖರೀದಿ ಸಂಸ್ಥೆಗಳನ್ನಾಗಿ ಹಾಗೂ ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾ ಮಂಡಳವನ್ನು ರಾಜ್ಯ ಸರ್ಕಾರದ ಖರೀದಿ ಸಂಸ್ಥೆಗಳನ್ನಾಗಿ ನೇಮಿಸಲಾಗಿದೆ.

ನವಜಾತ ಶಿಶುಗಳಲ್ಲಿನ ಜನ್ಮಜಾತ ಮೆಟಬಾಲಿಕ್ ಕಾಯಿಲೆ ಪತ್ತೆಗೆ ಆದೇಶ

ಬೆಂಗಳೂರು: ನವಜಾತ ಶಿಶುಗಳಲ್ಲಿ ಜನ್ಮಜಾತವಾಗಿರುವ ಅಪರೂಪದ ಮೆಟಬಾಲಿಕ್ (ಚಯಾಪಚಯ) ಕಾಯಿಲೆಗಳನ್ನು ಪತ್ತೆ ಹಚ್ಚಲು ಬೆಂಗಳೂರು ನಗರ, ಗ್ರಾಮಾಂತರ ಹಾಗೂ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಸಾರ್ವತ್ರಿಕ ನವಜಾತ ಶಿಶು ತಪಾಸಣೆ ಯೋಜನೆ ಅನುಷ್ಠಾನಕ್ಕೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ನವಜಾತಶಿಶುಗಳಲ್ಲಿಜನ್ಮಜಾತಹೈಪೋಥೈರಾಯ್ಡಿಸಮ್, ಅಡ್ರಿನಲ್ ಹೈಪರ್‌ಪ್ಲಾಸಿಯಾ (ಸಿಎಚ್), ಗ್ಯಾಲಕ್ಟೋಸೀಮಿಯಾ, ಫಿನೈಲ್‌ಕೆಟೋನೂರಿಯಾ ಮತ್ತು ಮೆಟಬಾಲಿಕ್ ಅಸ್ವಸ್ಥತೆಗಳನ್ನು ಪತ್ತೆ ಹಚ್ಚಲು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ 2.58 ಕೋಟಿ ರು.ಗಳನ್ನು ಎನ್‌ಎಚ್‌ಎಂ ಅಡಿ ಒದಗಿಸಲಾಗಿದೆ. ತುಮಕೂರು, ಬಳ್ಳಾರಿ, ಚಿತ್ರದುರ್ಗ, ವಿಜಯನಗರ ಜಿಲ್ಲೆಗಳಿಗೆ 2.79 ಕೋಟಿ ರು. ಅನುದಾನ ನೀಡಲಾಗಿದೆ. ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳದಲ್ಲಿ 5.58 ಕೋಟಿ ರು. ವೆಚ್ಚದಲ್ಲಿ ಪರೀಕ್ಷೆಗೆ ಇಲಾಖೆ ಸೂಚಿಸಿದೆ.

ಪೆನ್ನಾರ್ ನೀರು ನ್ಯಾಯಾಧಿಕರಣ ಸ್ಥಾಪನೆಗಾಗಿ 5 ತಿಂಗಳ ಅವಕಾಶ

ನವದೆಹಲಿ: ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಹರಿಯುವ ಪೆನ್ನಾರ್ ನದಿ ನೀರು ಹಂಚಿಕೆ ಸಂಬಂಧ ನ್ಯಾಯಾಧಿಕರಣ ಸ್ಥಾಪನೆಗೆ ಸೆಪ್ಟೆಂಬರ್‌ವರೆಗೂ ಕಾಲಾವಕಾಶ ನೀಡಿ ಆದೇಶ ಹೊರಡಿಸಿದೆ. ಪೆನ್ನಾರ್‌ನದಿ ನೀರು ಹಂಚಿಕೆ ಸಂಬಂಧ ಅರ್ಜಿಯು ನ್ಯಾ.ವಿಕ್ರಮನಾಥ್ ನೇತೃತ್ವದ ದ್ವಿಸದಸ್ಯ ಪೀಠದಲ್ಲಿ ವಿಚಾರಣೆಗೆ ಬಂದಿತ್ತು. ಈ ಹಿಂದಿನ ವಿಚಾರಣೆಯಲ್ಲಿ ಇನ್ನೊಂದು ತಿಂಗಳಿನಲ್ಲಿ ನ್ಯಾಯಾಧಿಕರಣ ಸ್ಥಾಪನೆ ಮಾಡುವಂತೆ ಸುಪ್ರೀಂಕೋರ್ಟ್ ಸೂಚಿಸಿತ್ತು. ಶುಕ್ರವಾರ ವಿಚಾರಣೆ ನಡೆಸಿದ ನ್ಯಾಯಪೀಠದ ಎದುರು ಕೇಂದ್ರ ಜಲಶಕ್ತಿ ಸಚಿವಾಲಯ ಪರ ವಕೀಲರು ಹಾಜರಾಗಿ ಹೆಚ್ಚಿನ ಸಮಯ ಕೋರಿದರು. ಒಂದು ತಿಂಗಳಲ್ಲಿ ನ್ಯಾಯಾಧಿಕರಣ ಸ್ಥಾಪನೆ ಸಾಧ್ಯವಿಲ್ಲ, ಸಚಿವ ಸಂಪುಟ ಅನುಮೋದನೆಯಾಗಬೇಕು.ನ್ಯಾಯಮಂಡಳಿಯಅಧ್ಯಕ್ಷರನೇಮಕವಾಗಬೇಕು. ಈಪ್ರಕ್ರಿಯೆ ಪೂರ್ಣಗೊಳ್ಳಲು ಆರು ತಿಂಗಳ ಸಮಯಬೇಕು ಎಂದು ಕೋರಿದರು. ಕೇಂದ್ರ ಸರ್ಕಾರದ ಮನವಿಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ಸೂಚಿಸಿತು.

ಕೊಟ್ಟ ಹಣ ವಾಪಸ್ ಕೇಳಿದ ವೃದ್ಧೆಯ ಕೊಂದು ಶೌಚ ಗುಂಡೀಲಿ ಹೂತಿಟ್ಟ

ಕೆ.ಆರ್.ನಗರ (ಮೈಸೂರು): ತನ್ನಿಂದ ಪಡೆದಿದ್ದ 75000 ರು. ಹಣವನ್ನು ವಾಪಸ್ ಕೊಡುವಂತೆ ಕೇಳಿದ ವೃದ್ಧೆಯನ್ನು ವ್ಯಕ್ತಿಯೊಬ್ಬ ಉಸಿರುಗಟ್ಟಿಸಿ ಕೊಂದು ಶೌಚಾಲಯದ ಯುಜಿಡಿ ಗುಂಡಿಯಲ್ಲಿ ಹೂತು ಹಾಕಿದ ಅಮಾನವೀಯ ಘಟನೆ ಕೆ.ಆರ್.ನಗರ ತಾಲೂಕಿನ ತಿಪ್ಪೂರು ಗ್ರಾಮದಲ್ಲಿ ನಡೆದಿದೆ. ಗೌರಮ್ಮ (90) ಕೊಲೆಯಾದವರು. ಗೌರಮ್ಮ ಅವರಿಂದ 15 ದಿನಗಳ ಹಿಂದೆ ವೀರಭದ್ರ ಎನ್ನುವ ವ್ಯಕ್ತಿ ₹75000 ಹಣ ಪಡೆದಿದ್ದ. ವಾರ ಕಳೆದ ನಂತರ ಹಣ ಕೊಡು ಎಂದು ಗೌರಮ್ಮ ಕೇಳಿದಾಗ, ರಾತ್ರಿ ವೇಳೆ ವೃದ್ಧೆ ಮನೆಗೆ ಹೋಗಿ ಕಪಾಳಕ್ಕೆ ಹೊಡೆದು ಉಸಿರುಗಟ್ಟಿಸಿ ಕೊಂದು ಮನೆಯ ಹಿಂದಿರುವ ಶೌಚಾಲಯದ ಯುಜಿಡಿ ಗುಂಡಿಗೆ ಹಾಕಿ ಮುಚ್ಚಿದ್ದಾನೆ. ಗೌರಮ್ಮ ಕಾಣದಿರುವ ಬಗ್ಗೆ ಮಕ್ಕಳು ಹುಡುಕಾಟ ನಡೆಸಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ವಿಚಾರಣೆ ವೇಳೆ ಗೌರಮ್ಮನನ್ನು ತಾನೇ ಕೊಂದಿದ್ದಾಗಿ ವೀರಭದ್ರ ಒಪ್ಪಿಕೊಂಡಿದ್ದಾನೆ ಎನ್ನಲಾಗಿದೆ.

ಸುದ್ದಿ ಸಿಂಚನ

ಅಂಜನಾದ್ರಿಗೆ ₹2.5 ಕೋಟಿಯ ಚಿನ್ನಾಭರಣ ಅರ್ಪಿಸಿದ ಉದ್ಯಮಿ

ಗಂಗಾವತಿ: ಆಂಜನೇಯನ ಜನ್ಮಸ್ಥಳ ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಅಂಜನಾದ್ರಿ ಬೆಟ್ಟದ ಆಂಜನೇಯಸ್ವಾಮಿಗೆ ಎಎಂಆರ್ ಗ್ರೂಪ್‌ನ ಅಧ್ಯಕ್ಷ ಡಾ.ಎ.ಮಹೇಶ ರೆಡ್ಡಿ ಕುಟುಂಬಸ್ಥರು ಸುಮಾರು ₹2.5 ಕೋಟಿ ಮೌಲ್ಯದ ಚಿನ್ನಾಭರಣ ಅರ್ಪಿಸಿದರು. ಅತ್ಯಂತ ಕಲಾತ್ಮಕವಾಗಿ ವಿನ್ಯಾಸಗೊಳಿಸಿದ ಬಂಗಾರದ ಪ್ರಭಾವಳಿ, ಛತ್ರಿ, ಕಿರೀಟ ಹಾಗೂ ಗದೆಯನ್ನು ಶುಕ್ರವಾರದ ಶುಭ ಮೂಹರ್ತದಲ್ಲಿ ಧಾರ್ಮಿಕ ವಿಧಿ-ವಿಧಾನ ನೆರವೇರಿಸಿ ಆಂಜನೇಯಸ್ವಾಮಿಗೆ ಅರ್ಪಿಸುವ ಮೂಲಕ ತಮ್ಮ ಸೇವೆ ಸಲ್ಲಿಸಿದರು.

ಕಾನೂನು ವಿವಿ ಸಿಂಡಿಕೇಟ್‌ಗೆ 5 ಸದಸ್ಯರ ನಾಮನಿರ್ದೇಶನ

ಬೆಂಗಳೂರು: ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿವಿಯ ಸಿಂಡಿಕೇಟ್ ಸದಸ್ಯರನ್ನಾಗಿ ಐವರನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ನಾಮ ನಿರ್ದೇಶನ ಮಾಡಿದ್ದಾರೆ. ರಾಜ್ಯ ಸರ್ಕಾರ ಸಲ್ಲಿಸಿದ್ದ ಹೆಸರುಗಳನ್ನು ರಾಜ್ಯಪಾಲರು ನಾಮನಿರ್ದೇಶನ ಮಾಡಿದ್ದಾರೆ. ಸಾಮಾನ್ಯ ವರ್ಗದಿಂದ ಎಸ್.ಬಿ.ರಾಜಣ್ಣ, ಇತರ ಹಿಂದುಳಿದ ವರ್ಗದಿಂದ ರಮೇಶ್ ಆರ್.ಬಡ್ನೂರ್, ಧ್ರುವ ರಾಜಣ್ಣಪ್ಪನವರ್, ಪರಿಶಿಷ್ಟ ಜಾತಿಯಿಂದ ಲೋಕೇಶ್ ಕೆ.ಜಿ. ಮತ್ತು ಪರಿಶಿಷ್ಟ ಜಾತಿ (ಮಹಿಳೆ) ಕೋಟಾದಿಂದ ಪದ್ಮಾವತಿ ಎಚ್.ಮಾನೆರನ್ನು ನೇಮಿಸಲಾಗಿದೆ.

ಶಿವಮೊಗ್ಗ: ಬೈಕ್ ಡಿಕ್ಕಿ ಹೊಡೆದು ಚಿರತೆ ಸಾವು

ಶಿವಮೊಗ್ಗ: ಬೈಕ್ ಡಿಕ್ಕಿ ಹೊಡೆದು ಚಿರತೆ ಮೃತಪಟ್ಟಿರುವ ಘಟನೆ ತುಮಕೂರು ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಮಂಡಗದ್ದೆ ಬಳಿ ನಡೆದಿದೆ. ಶುಕ್ರವಾರ ಮಧ್ಯಾಹ್ನ ಬೈಕ್ ಸವಾರ ಶಿವಮೊಗ್ಗ ಮಾರ್ಗದಿಂದ ತೀರ್ಥಹಳ್ಳಿಗೆ ತೆರಳುತ್ತಿದ್ದ ವೇಳೆ ಚಿರತೆ ಅಡ್ಡ ಬಂದಿದೆ. ಇದರಿಂದ ನಿಯಂತ್ರಣ ತಪ್ಪಿದ ಬೈಕ್ ಸವಾರ ಚಿರತೆಗೆ ಡಿಕ್ಕಿ ಹೊಡೆದಿದ್ದಾನೆ. ಇದರ ಪರಿಣಾಮ ತೀವ್ರ ಗಾಯಗೊಂಡ ಚಿರತೆ ಸ್ಥಳದಲ್ಲೇ ಸಾವನ್ನಪ್ಪಿದ್ದು, ಸವಾರನಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಕುತ್ತಾರು ಜಂಕ್ಷನ್ ವೃತ್ತ ನಿರ್ಮಾಣ ವಿವಾದ

ಉಳ್ಳಾಲ: ಕುತ್ತಾರು ಜಂಕ್ಷನ್‌ನಲ್ಲಿ ನಿರ್ಮಾಣವಾಗಲಿರುವ ವೃತ್ತಕ್ಕೆ ಸಂಬಂಧಿಸಿದಂತೆ ಉದ್ಭವಿಸಿದ ವಿವಾದ ರಾಜಕೀಯ ಹಾಗೂ ಸಾಮಾಜಿಕ ವಲಯದಲ್ಲಿ ಚರ್ಚೆಗೆ ಕಾರಣ ವಾಗಿದೆ. ಗುರುವಾರ ರಾತ್ರಿ ಖಾಸಗಿ ಕಾರ್ಯ ಕ್ರಮವೊಂದರಲ್ಲಿ ಭಾಗವಹಿಸಿದ್ದ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್‌ಅವರನ್ನು ಕೆಲವರು ಪ್ರಶ್ನಿಸಿ, ಕೊರಗಜ್ಜನ ಹೆಸರಿನ ಬಳಕೆಗೆ ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ವಾಹನ ತಡೆದು ₹3 ಲಕ್ಷ ಪೀಕಿದ ಬಳ್ಳಾರಿ ಎಸ್‌ಪಿ ಗನ್‌ಮ್ಯಾನ್ ಸಸ್ಪೆಂಡ್


ಬಳ್ಳಾರಿ: ಪಡಿತರ ಅಕ್ಕಿ ಸಾಗಿಸುತ್ತಿದ್ದ ವಾಹನ ತಡೆದು ₹3 ಲಕ್ಷ ವಸೂಲಿ ಮಾಡಿದ ಆರೋಪದ ಮೇರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರ ಅಂಗರಕ್ಷಕ (ಗನ್ ಮ್ಯಾನ್)ನನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಗನ್‌ಮ್ಯಾನ್ ದೇವರಾಜ್, ಇನ್ನೊಬ್ಬನನ್ನು ಬಂಧಿಸಲಾಗಿದ್ದು, ಮತ್ತೊಬ್ಬ ತಲೆ ಮರೆಸಿಕೊಂಡಿದ್ದಾನೆ. ಎಸ್ಪಿ ಡಾ। ಸುಮನ್ ಡಿ.ಪನ್ನೇಕರ್‌ಅವರ ಗನ್‌ಮ್ಯಾನ್ ದೇವರಾಜ್ ಏ.28ರಂದು ಪಡಿತರ ಅಕ್ಕಿ ಸಾಗಾಟ ವಾಹನವನ್ನು ತಡೆದು ತಾವು ಎಸ್ಪಿ ಸ್ಕ್ವಾಡ್ ಎಂದು ಹೇಳಿ, ₹3 ಲಕ್ಷ ವಸೂಲಿ ಮಾಡಿದ್ದರೆಂದು ವಾಹನ ಮಾಲಿಕ ದೂರು ನೀಡಿದ್ದಾರೆ.

ರಾಜಕೀಯ ಪ್ರಭಾವ ಬಳಸಿ ಐಪಿಎಲ್ ಫೈನಲ್ ಶಿಫ್ಟ್: ಡಿಕೆ

ಬಿಸಿಸಿಐ ಹೇಳಿಕೆ ಬೋಗಸ್ | ಗುಜರಾತ್‌ನ ಲಾಭಕ್ಕಾಗಿ ಈ ನಿರ್ಧಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಐಪಿಎಲ್ ಫೈನಲ್ ಪಂದ್ಯ ಅಹಮದಾಬಾದ್‌ಗೆ ಸ್ಥಳಾಂತರಿಸಿರುವ ವಿಚಾರದಲ್ಲಿ ಬಿಸಿಸಿಐ ಸಂಪೂರ್ಣ ಮಾಹಿತಿ ನೀಡದೆ, ಸುಳ್ಳು ಹೇಳುತ್ತಿದೆ. ರಾಜಕೀಯ ಪ್ರಭಾವ ಬಳಸಿ ಐಪಿಎಲ್ ಫೈನಲ್ ಪಂದ್ಯವನ್ನು ಬೆಂಗಳೂರಿನಿಂದ ಅಹಮದಾಬಾದ್‌ಗೆ ಸ್ಥಳಾಂತರಿಸಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಕಿಡಿಕಾರಿದ್ದಾರೆ.



ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಬಿಸಿಸಿಐ ಕಾರ್ಯದರ್ಶಿ ಬೋಗಸ್ ಹೇಳಿಕೆ ನೀಡುತ್ತಿದ್ದು, ಸಂಪೂರ್ಣ ಮಾಹಿತಿ ನೀಡಿಲ್ಲ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಾವಳಿ ವೀಕ್ಷಿಸಲು ಶಾಸಕರಿಗೆತಲಾ2 ಟಿಕೆಟ್ ನೀಡುತ್ತಿದ್ದರು. ಅದುಹೆಚ್ಚಾಗುತ್ತದೆಯೇ? ನಮ್ಮ ಮೇಲೆ ಆರೋಪಿಸುತ್ತಿರುವ ಬಿಜೆಪಿ-ಜೆಡಿಎಸ್ ನಾಯಕರು, ತಾವು ಪಡೆದಿದ್ದ ಟಿಕೆಟ್ ವಾಪಸ್ ಕೊಡಬೇಕಿತ್ತು. ನಮ್ಮ ಶಾಸಕರಿಗೆ ಅವರದ್ದೇ ಸ್ಥಾನ, ಗೌರವವಿದೆ ಎಂದರು.

ಐಪಿಎಲ್ ಪಂದ್ಯ ಸ್ಥಳಾಂತರ ಬಿಜೆಪಿ ನಾಯಕತ್ವದಲ್ಲಿ ನಡೆಯುತ್ತಿದೆ. ಗುಜರಾತ್‌ಗೆ ದೊಡ್ಡ ಆರ್ಥಿಕ ಅನುಕೂಲ ಮಾಡಿಕೊಡಲು ಸ್ಥಳಾಂತರ ಮಾಡಲಾಗಿದೆ. ಅಹಮದಾಬಾದ್‌ನಲ್ಲಿ 1 ಲಕ್ಷದವರೆಗೆ ಆಸನವಿದೆ. ಆದರಿಂದ ದೊಡ್ಡ ಲಾಭವಾಗುತ್ತದೆ ಎಂದು ಬಿಸಿಸಿಐ ಈ ಕ್ರಮ ಕೈಗೊಂಡಿದೆ. ಅದರ ಜತೆಗೆ ರಾಜಕೀಯ ಪ್ರಭಾವವೂ ಇದಕ್ಕೆ ಕಾರಣ. ಪ್ರತಿವರ್ಷ ಇದೇ ರೀತಿ ಐಪಿಎಲ್ ಫೈನಲ್ ಪಂದ್ಯ ಸ್ಥಳಾಂತರಿಸಲಾಗುತ್ತಿದೆ ಎಂದರು.

ರಾಜ್ಯದಲ್ಲೂ 2 ದೊಡ್ಡ ಕ್ರೀಡಾಂಗಣ ನಿರ್ಮಾಣಕ್ಕೆ ಅನುಮತಿಸಲಾಗಿದೆ. ಅದರ ಜತೆಗೆ ಚಿನ್ನಸ್ವಾಮಿ ಕ್ರೀಡಾಂಗಣವನ್ನು 60 ಸಾವಿರ ಆಸನ ಸಾಮರ್ಥ್ಯಕ್ಕೆ ಶಿಫಾರಸು ಮಾಡಲಾಗಿದೆ ಎಂದರು.

ಶಾಸಕರು, ಅಧಿಕಾರಿಗಳಿಗೆ 1650 ಟಿಕೆಟ್‌ಗೆ ಬೇಡಿಕೆ?

ನಿಗದಿತ 15% ಜತೆಗೆ 10057 ಹೆಚ್ಚುವರಿ ಟಿಕೆಟ್ ಕೇಳಿದ್ದ ಕೆಎಸ್‌ಸಿಎ?

ಬೆಂಗಳೂರು: ಬೆಂಗಳೂರಿನಿಂದ ಐಪಿಎಲ್ ಫೈನಲ್ ಸ್ಥಳಾಂತರಗೊಳ್ಳಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) 10057 ಹೆಚ್ಚುವರಿ ಕಾಂಪ್ಲಿಮೆಂಟರಿ ಟಿಕೆಟ್‌ಗಳನ್ನು ಕೇಳಿದ್ದೇ ಕಾರಣ ಎಂದು ಬಿಸಿಸಿಐ ಮೂಲಗಳು ತಿಳಿಸಿರುವುದಾಗಿ ಪಿಟಿಐ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಈ ಬಗ್ಗೆ ಪಿಟಿಐಗೆ ಪ್ರತಿಕ್ರಿಯೆ ನೀಡಿ ರುವ ಐಪಿಎಲ್ ಅಧ್ಯಕ್ಷ ಅರುಣ್ ಧುಮಾಲ್, 'ಕ್ರೀಡಾಂಗಣದ ಆಸನ ಸಾಮರ್ಥ್ಯ 35000 ಇರುವಾಗ, ಇಷ್ಟು ದೊಡ್ಡ ಪ್ರಮಾಣದಲ್ಲಿ ಉಚಿತ, ರಿಯಾಯಿತಿ ದರದಲ್ಲಿ ಟಿಕೆಟ್ ಕೇಳುವುದು ಸೂಕ್ತವಲ್ಲ. ಹೀಗಾಗಿ, ಬೆಂಗಳೂರಲ್ಲಿ ಫೈನಲ್ ನಡೆಸುವುದು ಅಸಾಧ್ಯ ಎನಿಸಿ ಸ್ಥಳಾಂತರಕ್ಕೆ ನಿರ್ಧರಿಸಿದೆವು' ಎಂದಿದ್ದಾರೆ.

ಕೆಎಸ್‌ಸಿಎ ಕೇಳಿದ 10057 ಟಿಕೆಟ್‌ಗಳ ಪೈಕಿ 900 ಟಿಕೆಟ್‌ಗಳು ಎಂಎಲ್‌ಎ/ಎಂಎಲ್‌ಸಿಗಳಿಗೆ, 750 ಟಿಕೆಟ್‌ಗಳು ತಜ್ಞರ ಸಮಿತಿ ಹಾಗೂ ಸರ್ಕಾರದ ಇತರೆ ಇಲಾಖೆಗಳಿಗೆ ನೀಡಲು ಬೇಕಿದ್ದವು. ಇದಲ್ಲದೇ, ರಿಯಾಯಿತಿ ದರದಲ್ಲೂ ಸಾವಿರಾರು ಟಿಕೆಟ್‌ಗೆ ಬೇಡಿಕೆ ಬಂದಿತ್ತು ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ತನ್ನ ಕ್ರಿಕೆಟ್ ಕ್ಲಬ್‌ಗಳಿಗೆ ಕೊಡಲು ತಲಾ 2000 ರುಪಾಯಿಗೆ ಪಿ3 ಸ್ಟ್ಯಾಂಡ್‌ನ 3007 ಟಿಕೆಟ್ ಹಾಗೂ ಸದಸ್ಯರ ಪತ್ನಿ, ಮಕ್ಕಳಿಗೆ ಮೆಂಬರ್ಸ್ ಸ್ಟ್ಯಾಂಡ್‌ನ 900 ಟಿಕೆಟ್‌ಗೆ ಬೇಡಿಕೆ ಬಂದಿತ್ತು. ಅಲ್ಲದೆ, ಕೆಎಸ್‌ಸಿಎ ಆಜೀವ ಸದಸ್ಯರಿಗೆ ನೀಡಲು ಎಂ4 ಸ್ಟ್ಯಾಂಡ್‌ನ 1000 ಟಿಕೆಟ್‌ಗಳನ್ನು ತಲಾ 2000ದಿಂದ 3500 ರು.ಗೆ ಕೊಡುವಂತೆ ಕೋರಲಾಗಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

ಕೆಎಸ್‌ಸಿಎಗೆ ಶೇ.15ರಷ್ಟು ಉಚಿತ ಕೋಟಾ ಜೊತೆ 10000 ಹೆಚ್ಚುವರಿ ಟಿಕೆಟ್ ನೀಡಿದರೆ, ಅಭಿಮಾನಿಗಳಿಗೆ ಉಳಿಯುವುದು 20000 ಟಿಕೆಟ್ ಮಾತ್ರ. ನಿಯಮದ ಪ್ರಕಾರ ಇದು ಸೂಕ್ತವಲ್ಲ ಎನ್ನುವ ನಿರ್ಧಾರವನ್ನು ಬಿಸಿಸಿಐ ಕೈಗೊಂಡಿತು ಎನ್ನಲಾಗಿದೆ.

ಶಾಸಕರಿಗೆ ಕೊಡೋದು 2 ಫ್ರೀ ಟಿಕೆಟ್ ಅಷ್ಟೇ: ಪರಮೇಶ್ವರ್

ಲಾಭಕ್ಕಾಗಿ ಐಪಿಎಲ್ ಫೈನಲ್ ಶಿಫ್ಟ್: ಸಚಿವ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶಾಸಕರು ಟಿಕೆಟ್ ಕೇಳಿದ್ದಕ್ಕಾಗಿ ಐಪಿಎಲ್ ಫೈನಲ್ ಪಂದ್ಯವನ್ನು ಗುಜರಾತ್‌ಗೆ ಸ್ಥಳಾಂತರಿಸಲಾಗಿದೆ ಎಂಬ ಆರೋಪ ಆಧಾರ ರಹಿತ. ಈ ಕುರಿತು ಬಿಸಿಸಿಐ ಅಥವಾ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ನೇರವಾಗಿ ಹೇಳಿಕೆ ನೀಡಲಿ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.



ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ ರಾಜ್ಯದಲ್ಲಿ ವಿಧಾನಸಭೆ, ವಿಧಾನ ಪರಿಷತ್ ಎರಡೂ ಸೇರಿ 300 ಶಾಸಕರಿದ್ದಾರೆ. ಒಬ್ಬರಿಗೆ ಎರಡು ಟಿಕೆಟ್‌ಗಳನ್ನು ನೀಡಲಾಗುತ್ತಿದ್ದು ಒಟ್ಟು 600 ಟಿಕೆಟ್ ನೀಡುವ ಕಾರಣಕ್ಕಾಗಿ ಸ್ಥಳಾಂತರ ಮಾಡುತ್ತಿದ್ದೇವೆ ಎಂದು ಹೇಳಲಿ. ಯಾರಿಗೆಲ್ಲ ಟಿಕೆಟ್ ಕೊಟ್ಟಿದ್ದಾರೆ? ಎಷ್ಟು ಜನರಿಗೆ ಟಿಕೆಟ್ ಕೊಟ್ಟಿದ್ದಾರೆ ಹೇಳಲಿ. ಎದುರಾಳಿ ತಂಡದ ಸಿಎಸ್‌ಕೆಯವರೂ ಯಾರಿಗೆಲ್ಲ ಟಿಕೆಟ್ ಕೊಟ್ಟಿದ್ದಾರೆ ಎಂಬುದನ್ನು ಹೇಳಲಿ ಎಂದು ಸವಾಲು ಹಾಕಿದ್ದಾರೆ.

ಏನು ಬೇಕಿದ್ರೂ ಟೀಕಿಸಲಿ: ಬಿಜೆಪಿ, ಜೆಡಿಎಸ್‌ನವರು ಏನಾದರೂ ಟೀಕೆ ಮಾಡಿಕೊಳ್ಳಲಿ. ಅವರ ಅವಧಿಯಲ್ಲಿ ಕ್ರೀಡೆಗೆ ಎಷ್ಟು ಪ್ರೋತ್ಸಾಹ ನೀಡುತ್ತಿದ್ದರು ಎಂದು ಎಲ್ಲರಿಗೂ ಗೊತ್ತಿದೆ ಎಂದು ವ್ಯಂಗ್ಯವಾಡಿದ ಗೃಹ ಸಚಿವರು, ಅಹಮದಾಬಾದ್ ಸ್ಟೇಡಿಯಂನಲ್ಲಿ 1 ಲಕ್ಷ ಆಸನಗಳಿವೆ. ಹೆಚ್ಚಿನ ಲಾಭವಾಗುತ್ತದೆ ಎಂದು ಫೈನಲ್ ಸ್ಥಳಾಂತರ ಮಾಡಲಾಗಿದೆ. ಇದಕ್ಕೂ, ರಾಜ್ಯ ಸರ್ಕಾರಕ್ಕೂ ಸಂಬಂಧವಿಲ್ಲ ಎಂದರು.

ಅಮಿತ್ ಶಾ ದುಡ್ಡು ಕೊಟ್ಟು ಐಪಿಎಲ್‌ಗೆ ಹೋಗ್ತಾರಾ?: ಪ್ರಿಯಾಂಕ್ ಖರ್ಗೆ ಪ್ರಶ್ನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಐಪಿಎಲ್ ಫೈನಲ್ ಪಂದ್ಯ ಸ್ಥಳಾಂತರ ವಿವಾದಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿರುವ ಸಚಿವ ಪ್ರಿಯಾಂಕ್ ಖರ್ಗೆ, ಅಹಮದಾಬಾದ್‌ನಲ್ಲಿ ಪಂದ್ಯ ನಡೆದರೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಪಂದ್ಯ ವೀಕ್ಷಣೆಗೆ ಹೋಗುವುದಿಲ್ಲವೇ? ಅವರು ದುಡ್ಡು ಕೊಟ್ಟು ಟಿಕೆಟ್ ಖರೀದಿ ಮಾಡಿ ಹೋಗುತ್ತಾರಾ? ಎಂದು ಪ್ರಶ್ನಿಸಿದರು. ರಾಜ್ಯದಲ್ಲಿ ಐಪಿಎಲ್ ಟಿಕೆಟ್ ಕುರಿತು ಸದನದಲ್ಲಿ ಮಾತನಾಡಿದ್ದೇ ವಿರೋಧ ಪಕ್ಷದ ನಾಯಕ ಆರ್.ಅಶೋಕ್. ಅದಕ್ಕೆ ಉಳಿದ ಶಾಸಕರು ಧ್ವನಿಗೂಡಿಸಿದರು. ಸುಮ್ಮನೆ ಶಾಸಕರ ಮೇಲೆ ಬಿಸಿಸಿಐ ಹೇಳುತ್ತಿದೆ ಎಂದರು. ಕರ್ನಾಟಕಕ್ಕೆ ಬಂಡವಾಳ ಆಕರ್ಷಿಸುವುದರಲ್ಲಿ ಅನ್ಯಾಯ ಮಾಡುತ್ತಿರುವ ರೀತಿಯಲ್ಲೇ ಐಪಿಎಲ್ ಫೈನಲ್ ಸ್ಥಳಾಂತರಿಸಲಾಗಿದೆ ಎಂದರು.

ಸರ್ಕಾರ 10000 ವಿವಿಐಪಿ ಟಿಕೆಟ್ ಕೇಳಿದ್ದೇ ಫೈನಲ್ ಶಿಫ್ಟ್‌ಗೆ ಕಾರಣ: ನಿಖಿಲ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಿಂದ ಐಪಿಎಲ್ ಫೈನಲ್ ಪಂದ್ಯ ಕೈತಪ್ಪಲು ರಾಜ್ಯ ಕಾಂಗ್ರೆಸ್ ಸರ್ಕಾರವು 10000 ಉಚಿತ ವಿವಿಐಪಿ ಟಿಕೆಟ್‌ಗೆ ಬೇಡಿಕೆಯಿಟ್ಟಿದ್ದೇ ಅಸಲಿ ಕಾರಣ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪಿಸಿದ್ದಾರೆ. ಕಾಂಗ್ರೆಸ್ ಸರ್ಕಾರವು ಕ್ರೀಡಾಂಗಣದ ಸಾಮರ್ಥ್ಯ ಸಾಲುತ್ತಿಲ್ಲ ಎಂಬ ಸುಳ್ಳು ಕಥೆಗಳನ್ನು ಹೇಳುತ್ತಿದ್ದರೆ, ಇತ್ತ ಬಿಸಿಸಿಐ ಸತ್ಯವನ್ನೇ ಬಿಚ್ಚಿಟ್ಟಿದೆ ಎಂದು ನಿಖಿಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ವ್ಯಕ್ತಿತ್ವ ಪರೀಕ್ಷೆ'ಗೆ ಏಜೆಂಟ್‌ಗಳ ಹಾವಳಿ: ಕೆಪಿಎಸ್‌ಸಿ ಎಚ್ಚರಿಕೆ

ವಾಮಮಾರ್ಗ ಬೇಡ: ಅಭ್ಯರ್ಥಿಗಳಿಗೆ ಸೂಚನೆ ಅನುಚಿತ ಮಾರ್ಗ ಹಿಡಿದರೆ ಕ್ರಿಮಿನಲ್ ಕೇಸ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಗೆಜೆಟೆಡ್ ಪ್ರೊಬೆಷನರ್384 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯ ಅಂತಿಮ ಹಂತವಾಗಿರುವ 'ವ್ಯಕ್ತಿತ್ವ ಪರೀಕ್ಷೆ'ಯಲ್ಲಿ ಅಭ್ಯರ್ಥಿಗಳಿಗೆ ನೆರವಾಗುವುದಾಗಿ ಏಜೆಂಟರು, ಮಧ್ಯವರ್ತಿಗಳು ಅಭ್ಯರ್ಥಿಗಳಿಗೆ ಆಮಿಷ ಒಡ್ಡುತ್ತಿದ್ದು,ಈಬಗ್ಗೆಎಚ್ಚರಿಕೆಯಿಂದಿರುವಂತೆ ಕೆಪಿಎಸ್‌ಸಿ ತಿಳಿಸಿದೆ.

2023-24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್‌ಗ್ರೂಪ್-ಎ ಮತ್ತು ಬಿ ವೃಂದದ 384 ಹುದ್ದೆಗಳ ವ್ಯಕ್ತಿತ್ವ ಪರೀಕ್ಷೆ ಹಾಗೂ ಮೂಲ ದಾಖಲೆಗಳ ಪರಿಶೀಲನೆ ಆರಂಭವಾಗಿದ್ದು, ಮೇ 10ರವರೆಗೆ ನಡೆಯಲಿದೆ. ಈ ನಡುವೆ ವ್ಯಕ್ತಿತ್ವ ಪರೀಕ್ಷೆ ಬಗ್ಗೆ ಹಬ್ಬುತ್ತಿರುವ ವದಂತಿ ಕುರಿತು ಆತಂಕಗೊಂಡು, ಕೆಪಿಎಸ್‌ಸಿಗೆ ಅಭ್ಯರ್ಥಿಗಳು ಕರೆ ಮಾಡುತ್ತಿದ್ದಾರೆ.

ವ್ಯಕ್ತಿತ್ವ ಪರೀಕ್ಷೆಗೆ ಸಂಬಂಧಿಸಿ ಅಭ್ಯರ್ಥಿಗಳು ಯಾವುದೇ ಮಧ್ಯವರ್ತಿಗಳು, ಏಜೆಂಟ್‌ಗಳು, ಆಯೋಗದ ಅಧಿಕಾರಿ, ಸಿಬ್ಬಂದಿ ಅಥವಾ ಅನ್ಯವ್ಯಕ್ತಿಗಳ ಮುಖಾಂತರ ಹಣ ನೀಡುವುದು, ಇನ್ನಿತರೆ ವಾಮ ಮಾರ್ಗಗಳನ್ನು ಅನುಸರಿಸಿ ಆಯ್ಕೆ ಹೊಂದಲು ಪ್ರಯತ್ನಿಸಿದಲ್ಲಿ, ಅಂಥ ಅಭ್ಯರ್ಥಿಗಳ ವಿರುದ್ಧಕಾನೂನುಕ್ರಮಕೈಗೊಳ್ಳಲಾಗುವುದು ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಕೆ.ಜ್ಯೋತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನುಚಿತ ಮಾರ್ಗ ಅನುಸರಿಸಿರುವುದು ಗೊತ್ತಾದರೆಅಭ್ಯರ್ಥಿಗಳವಿರುದ್ಧಕ್ರಿಮಿನಲ್ ಕೇಸ್ ದಾಖಲಿಸಲಾಗುತ್ತದೆ. ಅಭ್ಯರ್ಥಿತ್ವ ರದ್ದಾಗಲಿದೆ ಎಂದು ಎಚ್ಚರಿಸಲಾಗಿದೆ.

ರಾತ್ರಿ ಇಡೀ ಹಳ್ಳದಲ್ಲಿ ಕೂತಿದ್ದ 1.5 ವರ್ಷದ ಮಗುವಿನ ರಕ್ಷಣೆ

ಚಿಕ್ಕಮಗಳೂರಿನ ಎಸ್ಟೇಟಲ್ಲಿ ಕಾಣೆ ಆಗಿದ್ದ ಮಗು ಮಗುವಿಗಾಗಿ 12 ಗಂಟೆ ಹುಡುಕಿದ ಪೊಲೀಸ್

• **ಕನ್ನಡಪ್ರಭ ವಾರ್ತೆ** ಕೊಟ್ಟಿಗೆಹಾರ

ಸತತ 12 ಗಂಟೆ ಕಾಲ ಏಕಾಂಗಿಯಾಗಿ ಕಡು ಕತ್ತಲೆ, ಮಳೆಯಲ್ಲಿ ಇಡೀ ರಾತ್ರಿ ಕಳೆದ ಒಂದೂವರೆ ವರ್ಷದ ಮಗುವನ್ನು ಪೊಲೀಸರು ಸುರಕ್ಷಿತವಾಗಿ ಪತ್ತೆ ಮಾಡಿ ಸಂರಕ್ಷಿಸಿದ ಘಟನೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಬಾಳೂರು ಠಾಣೆ ವ್ಯಾಪ್ತಿ ನಡೆದಿದೆ.



ಮಧ್ಯಪ್ರದೇಶದ ಭೋಪಾಲ್ ಮೂಲದ ಗೋನು ಹಾಗೂ ಸೋನಾ ದಂಪತಿ ಮೂರು ದಿನಗಳ ಹಿಂದೆ ಕೆಲಸಕ್ಕಾಗಿ ಕೆಳಗೂರು ಟೀ ಎಸ್ಟೇಟ್‌ಗೆ ಬಂದಿದ್ದರು. ಇವರ ಮಗ ಒಂದೂವರೆ ವರ್ಷದ ಶಿವಂ ಗುರುವಾರ ಸಂಜೆ 5 ಗಂಟೆ ಸುಮಾರಿಗೆ ಕಾಣೆಯಾಗಿದ್ದನು. ಹುಡುಕಾಟ ನಡೆಸಿದ ಪೋಷಕರು ಬಾಳೂರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು. ಪೊಲೀಸರು, ಎಸ್ಟೇಟ್ ಸಿಬ್ಬಂದಿ, ಪೋಷಕರು ಗುರುವಾರ ತಡ ರಾತ್ರಿ ವರೆಗೆ ಹುಡುಕಾಟ ನಡೆಸಿದ್ದರು. ಆದರೂ ಮಗು ಪತ್ತೆಯಾಗಿರಲಿಲ್ಲ.


ಶುಕ್ರವಾರ ಬೆಳಗ್ಗೆ ಡಾಗ್ ಸ್ಕ್ವಾಡ್ ಹಾಗೂ ಥರ್ಮಲ್ ಡ್ರೋನ್ ಬಳಸಿ ಕಾರ್ಯಾಚರಣೆ ಮುಂದುವರಿಸಲಾಯಿತು. ಈ ವೇಳೆ ಮನೆಯಿಂದ ಸುಮಾರು 350 ಮೀಟರ್ ದೂರದಲ್ಲಿ ಇರುವ ಹಳ್ಳದಲ್ಲಿ ಮಗು ಪತ್ತೆಯಾಗಿದೆ.

ವಾಹನ ನೋಂದಣಿಗೆ ಆಧಾರ್ ಇ-ಕೆವೈಸಿ ಕಡ್ಡಾಯ ಸೂಕ್ತ: ಕೃಷ್ಣ

ಅಧಿಕಾರಿಗಳಿಗೆ ಸಲಹೆ ನೀಡಿದ ಕೃಷ್ಣಬೈರೇಗೌಡ ಜನರಿಗೆ ಸುಲಭವಾಗಿ ಸೇವೆ ಸಿಗಬೇಕು: ಸಚಿವ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಾಹನಗಳ ನೋಂದಣಿಗೆ ಆಧಾರ್ ಇ-ಕೆವೈಸಿ ಕಡ್ಡಾಯ ಮಾಡುವುದು ಸೂಕ್ತ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಭಿಪ್ರಾಯ ಪಟ್ಟಿದ್ದಾರೆ.



ವಿಕಾಸಸೌಧದಲ್ಲಿ ಶುಕ್ರವಾರ ಸಕಾಲ ಸೇವೆಗಳ ಅಡಿ ನೀಡಲಾಗುತ್ತಿರುವ ಸೇವೆಗಳಿಗೆ ಮತ್ತಷ್ಟು ವೇಗ ನೀಡುವ ಸಂಬಂಧ ಅಧಿಕಾರ ಸಭೆ ನಡೆಸಿ ಮಾತನಾಡಿ, ಚಾಲನಾ ಪರವಾನಗಿ ಪಡೆಯಲು ಆಧಾರ್ ಕಡ್ಡಾಯ ಮಾದರಿಯಲ್ಲಿವಾಹನಗಳನೋಂದಣಿಗೆ ಆಧಾರ್ ಇ-ಕೆವೈಸಿ ಏಕೆ ಕಡ್ಡಾಯ ಮಾಡಬಾರದು ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಸಕಾಲ ಗ್ಯಾರಂಟಿ ಸೇವೆಯನ್ನು ನಿಗದಿತ ಸಮಯಕ್ಕೆ ನೀಡಬೇಕು. ಈ ನಿಟ್ಟಿನಲ್ಲಿ ಸಕಾಲಕ್ಕೆ ಸಂಬಂಧಿಸಿದ ಎಲ್ಲಾ ಇಲಾಖೆಯ ಸೇವೆ ಬಗೆಗಿನ ದತ್ತಾಂಶ ಬೆರಳ ತುದಿಯಲ್ಲಿ ಇರಬೇಕು. ಅದಕ್ಕಾಗಿಯೇ ಕಳೆದ ಎರಡೂವರೆ ವರ್ಷಗಳಿಂದ ನಿರಂತರವಾಗಿ ಸಕಾಲ ಕುಟುಂಬ ಡೇಟಾಬೇಸ್ ಅಪ್‌ಡೇಟ್ ಮಾಡಲಾಗುತ್ತಿದೆ. ಕೆಲ ಸೇವೆಗಳನ್ನು ಆಟೋಮೇಷನ್ ಮಾಡುವ ಅಗತ್ಯವಿದೆ ಎಂದು ಸಚಿವರು ಹೇಳಿದರು.ಸೇವೆಗಳ ಆಟೋಮೇಷನ್ ಮಾಡಿದರೆ ಜನರಿಗೆ ಸೇವೆ ಶೀಘ್ರವಾಗಿ ಸಿಗಲಿದೆ ಎಂದು ಸಚಿವರು ಅಭಿಪ್ರಾಯಿಸಿದರು.

ಕೆಎಸ್‌ಒಯು: ಮುಂದುವರೆದ ಸರ್ಕಾರ-ರಾಜ್ಯಪಾಲರ ಫೈಟ್

ಕೆಎಸ್‌ಒಯು ಬ್ಯಾಂಕ್ ಖಾತೆ ಸ್ಥಗಿತ ಕ್ರಮ ರಾಜ್ಯ ಸರ್ಕಾರದ ವಿರುದ್ಧ ಗವರ್ನರ್ ಗರಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ (ಕೆಎಸ್‌ಒಯು) ಶಿಷ್ಟಾಚಾರ ಉಲ್ಲಂಘನೆ, ಹಣದುರುಪಯೋಗ ಆರೋಪದ ಪ್ರಕರಣ ಸಂಬಂಧ ಬ್ಯಾಂಕ್ ಖಾತೆಗಳ ಸ್ಥಗಿತ ವಿಚಾರವಾಗಿ ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ಪತ್ರ ಜಟಾಪಟಿ ಮುಂದುವರೆದಿದೆ.

ಕೆಎಸ್‌ಒಯುನ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಕೂಡಲೇ ಕ್ರಮ ವಾಪಸ್ ಪಡೆಯಲು ಸೂಚಿಸಿದ್ದಾರೆ.

ಈ ಸಂಬಂಧ ರಾಜ್ಯಪಾಲರ ನಿರ್ದೇಶನಾನುಸಾರ ಅವರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್, ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಖುಷ್ಬೂ ಅವರಿಗೆ ಪತ್ರ ಬರೆದಿದ್ದಾರೆ. ವಿವಿಯಲ್ಲಿ ಯಾವುದೇ ಅಕ್ರಮಗಳು ನಡೆದಿದ್ದರೂ, ಅದರ ತನಿಖೆಯನ್ನು ಕಾನೂನುಬದ್ಧವಾಗಿ ನಡೆಸಬೇಕು. ಅದನ್ನು ಬಿಟ್ಟು ಇಡೀ ವಿವಿಯ ಆರ್ಥಿಕ ವ್ಯವಹಾರವನ್ನೇ ಸ್ಥಗಿತಗೊಳಿಸುವುದು ಸರಿಯಲ್ಲ. ಖಾತೆ ಸ್ಥಗಿತ ಒಂದು 'ಅಪಕ್ವ ಮತ್ತು ಅತಿರೇಕದ ಕ್ರಮ'. ಇದು ವಿವಿಯ ದೈನಂದಿನ ಕಾರ್ಯಚಟುವಟಿಕೆಗಳಿಗೆದೊಡ್ಡಅಡ್ಡಿಯಾಗಿದೆ ಎಂದು ಪತ್ರದಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ಕೊಂಚ ರಿಲೀಫ್ ತಾಪಮಾನ 3-5 ಡಿಗ್ರಿ ಸೆಲ್ಸಿಯಸ್‌ನಷ್ಟು ಇಳಿಕೆ


ರಾಜ್ಯದ ಬಹುತೇಕ ಕಡೆ ಈಗ 40 ಡಿಗ್ರಿಗಿಂತ ಕಮ್ಮಿ ತಾಪಮಾನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಉತ್ತರ ಒಳನಾಡು, ಕರಾವಳಿ ಸೇರಿ ರಾಜ್ಯದ ವಿವಿಧೆಡೆ ಹಗುರದಿಂದ ಸಾಧಾರಣ ಮಳೆಯಾಗಿರುವುದರಿಂದ ಶುಕ್ರವಾರದಂದು ಎಲ್ಲಾ ಜಿಲ್ಲೆಗಳಲ್ಲಿ ತಾಪಮಾನದಲ್ಲಿ 3 ರಿಂದ 5 ಡಿಗ್ರಿ ಸೆಲ್ಸಿಯಸ್‌ನಷ್ಟು ಇಳಿಕೆಯಾಗಿದೆ. ಭಾರೀ ಬಿಸಿಲಿನಿಂದ ಕಂಗೆಟ್ಟಿದ್ದ ಜನತೆ ಸ್ವಲ್ಪ ನಿರಾಳರಾಗಿದ್ದಾರೆ.

ಕರಾವಳಿಯ ಮಂಗಳೂರು ವಿಮಾನ ನಿಲ್ದಾಣ ಮತ್ತು ಶಕ್ತಿನಗರದಲ್ಲಿ ತಾಪಮಾನವು ಗರಿಷ್ಠ 5 ಡಿಗ್ರಿ ಸೆಲ್ಸಿಯಸ್‌ವರೆಗೆ ಕಡಿಮೆಯಾಗಿದೆ. ಹೊನ್ನಾವರ, ವಿಜಯಪುರ, ಹಾವೇರಿ, ಕೊಪ್ಪಳ ಮತ್ತು ದಾವಣಗೆರೆ ಜಿಲ್ಲೆಗಳಲ್ಲೂ ಉಷ್ಣಾಂಶ ಇಳಿಕೆಯಾಗಿದೆ.

ಉತ್ತರ ಒಳನಾಡಿನ ಕಲಬುರಗಿ, ಬೀದರ್‌ಮತ್ತಿತರ ಜಿಲ್ಲೆಗಳಲ್ಲಿ 43 ಡಿಗ್ರಿ ಸೆಲ್ಸಿಯಸ್‌ವರೆಗೆ ಇರುತ್ತಿದ್ದ ಗರಿಷ್ಠ ತಾಪಮಾನ, ಶುಕ್ರವಾರದಂದು ಕಲಬುರಗಿಯಲ್ಲಿ ಗರಿಷ್ಠ 38.8 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಬೀದರ್‌ನಲ್ಲಿ 37.8, ಬಳ್ಳಾರಿ 37.3, ವಿಜಯಪುರ ಮತ್ತು ಧಾರವಾಡದಲ್ಲಿ ತಲಾ 37 ಹಾಗೂ ಬಾಗಲಕೋಟೆಯಲ್ಲಿ



36.9 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.

ದಕ್ಷಿಣ ಒಳನಾಡಿನ ಮೂಡಿಗೆರೆ, ಬೆಂಗಳೂರು ಜಿಕೆವಿಕೆ ಮತ್ತು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 32.6 ಡಿಗ್ರಿ ಸೆಲ್ಸಿಯಸ್, ಚಂದೂರಾಯನಹಳ್ಳಿಯಲ್ಲಿ 33.1 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.


ಮುಂದಿನ ಎರಡು ದಿನ ರಾಜ್ಯದ ವಿವಿಧೆಡೆ ಭಾಗಶಃ ಮೋಡ ಮುಸುಕಿದ ವಾತಾವರಣ ಇರಲಿದ್ದು, ತಾಪಮಾನದಲ್ಲಿ ಗಮನಾರ್ಹ ಬದಲಾವಣೆ ಇರುವುದಿಲ್ಲ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮೊರೆ ಅರ್ಜಿ ನಾಡಿದ್ದು ವಿಚಾರಣೆಗೆ ಬರುವ ಸಾಧ್ಯತೆ

ಶೃಂಗೇರಿ ಮರುಮತ ಎಣಿಕೆ ವಿರುದ್ಧ ಸುಪ್ರೀಂಗೆ ರಾಜೇಗೌಡ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತ ಮರು ಎಣಿಕೆ ಫಲಿತಾಂಶದ ವಿರುದ್ಧ ಇದೀಗ ಟಿ.ಡಿ.ರಾಜೇಗೌಡ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.



ರಾಜೇಗೌಡ ಪರ ವಕೀಲರು ಸಲ್ಲಿರುವ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ವಿಚಾರಣೆ ಬರುವ ಸಾಧ್ಯತೆ ಇದೆ. ಗುರುವಾರವೇ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಕೆ ಮಾಡಲಾಗಿದೆ ಎಂದು 'ಕನ್ನಡಪ್ರಭ'ಕ್ಕೆ ವಕೀಲ ಸುಧೀರ್ ಕುಮಾರ್ ಮುರೊಳ್ಳಿ ಮಾಹಿತಿ ನೀಡಿದ್ದಾರೆ.

ಯಾವ ಅಂಶಗಳ ಮೇಲೆ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಕೆ ಮಾಡಲಾಗಿದೆ ಎಂಬುದರ ಬಗ್ಗೆ ಮಾಹಿತಿ ಲಭ್ಯವಿಲ್ಲ. 2023ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡ 201 ಮತದಿಂದ ಜಯಿಸಿದ್ದರು. ಪರಾಜಿತ ಬಿಜೆಪಿ ಅಭ್ಯರ್ಥಿ ಜೀವರಾಜ್ ಅಂಚೆ ಮತ ಎಣಿಕೆಯಲ್ಲಿ ಲೋಪವಾಗಿದ್ದು, ತಿರಸ್ಕೃತ 279 ಅಂಚೆ ಮತ ಪುನರ್ ಪರಿಶೀಲಿಸಬೇಕೆಂದು ಹೈಕೋರ್ಟ್ ಮೊರೆ ಹೋಗಿದ್ದರು. ಮೇ 2 ರಂದು ಚುನಾವಣಾ ಆಯೋಗ ಪರಿಶೀಲನೆ ಮತ್ತು ಮರು ಎಣಿಕೆ ನಡೆಸಿತ್ತು.

ಈ ವೇಳೆ 2023ರಲ್ಲಿ ಕಾಂಗ್ರೆಸ್‌ನ ರಾಜೇಗೌಡರು ಪಡೆದ ಅಂಚೆ ಮತದ ಪೈಕಿ ಬರೋಬ್ಬರಿ 255 ಮತ ಹಾಗೂ ಬಿಜೆಪಿಯ ಜೀವರಾಜ್ ಪಡೆದ ಮತಗಳ ಪೈಕಿ 2 ಮತ ಅಸಿಂಧು ಆಗಿದ್ದವು. ಹೀಗಾಗಿ, 2023ರಲ್ಲಿ ಜಯಶಾಲಿಯಾಗಿದ್ದ ಟಿ.ಡಿ.ರಾಜೇಗೌಡ 52 ಮತಗಳ ಅಂತರದಿಂದ ಪರಾಭವಗೊಂಡಿದ್ದರು. ಬಿಜೆಪಿ ಅಭ್ಯರ್ಥಿ ಜೀವರಾಜ್ 52 ಮತದಿಂದ ಗೆಲುವು ಸಾಧಿಸಿದ್ದರು. ನೂತನವಾಗಿ ಆಯ್ಕೆಯಾಗಿರುವ ಬಿಜೆಪಿಯ ಜೀವರಾಜ್ ಹೈಕೋರ್ಟ್‌ಗೆ ಎಫ್‌ಐಆರ್ ರದ್ದಿಗೆ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯ ಎಫ್‌ಐಆರ್ ರದ್ದಿಗೆ ತಡೆಯಾಜ್ಞೆ ನೀಡಿದೆ. ಈ ಹಿನ್ನೆಲೆಯಲ್ಲಿ ಇದೀಗ ಕಾಂಗ್ರೆಸ್ ಪಕ್ಷದ ಟಿ.ಡಿ.ರಾಜೇಗೌಡ ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

ಸಲೂನ್‌ಗೆ ಬಂದ ಮಂಗಕ್ಕೆ ಹೇರ್‌ಕಟ್ ಮಾಡಿದ ಕ್ಷೌರಿಕ

ಪ್ರತಿದಿನವೂ ಬಂದು ಕನ್ನಡಿ ನೋಡುತ್ತಿದ್ದ ಕೋತಿ ಚಾಮರಾಜನಗರ ಜಿಲ್ಲೇಲಿ ಅಪರೂಪದ ಘಟನೆ

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ಚೇಷ್ಟೆಗೆ ಹೆಸರಾಗಿರುವ ಕೋತಿಗಳು ಒಮ್ಮೊಮ್ಮೆ ತಮ್ಮ ವಿಶೇಷ ವರ್ತನೆಗಳಿಂದ ಎಲ್ಲರ ಗಮನ ಸೆಳೆಯುತ್ತವೆ. ಜೊತೆಗೆ, ನೋಡುಗರ ಮೊಗದಲ್ಲಿ ನಗುವನ್ನು ಉಕ್ಕಿಸುತ್ತವೆ.



ಅದರಂತೆ, ಚಾಮರಾಜನಗರ ತಾಲೂಕಿನ ಸಂತೇಮರಹಳ್ಳಿಯಲ್ಲಿ ಕೋತಿಗೆ ಹೇರ್‌ಕಟ್ ಮಾಡಿದ ಅಪರೂಪದ ಘಟನೆ ನಡೆದಿದೆ.

ಗ್ರಾಮದ ದೇವು ಸಲೂನ್ ಎಂಬಲ್ಲಿಗೆ ಕೋತಿಯೊಂದು ದಿನವೂ ಬಂದು ಹೋಗುತ್ತಿತ್ತು. ಕನ್ನಡಿ ನೋಡುತ್ತಾ ಕುಳಿತುಕೊಳ್ಳುತ್ತಿತ್ತು. ಇದನ್ನು ಗಮನಿಸಿದ ಸಲೂನ್ ಮಾಲೀಕ ದೇವರಾಜ್ ಗದರಿಸಿದರೂ ಕೋತಿ ಸಲೂನ್ ಬಿಟ್ಟು ಹೋಗುತ್ತಿರಲಿಲ್ಲ. ಗುರುವಾರದಂದು ಸಲೂನ್‌ಗೆ ಬಂದ ಮಂಗನನ್ನು ಕಂಡ ದೇವರಾಜ್ ಮೊದಲು ತಲೆ ಬಾಚಿದ್ದಾರೆ. ಪ್ರೀತಿಯಿಂದ ತಲೆ ಬಾಚಿದ್ದನ್ನು ಗಮನಿಸಿದ ಕೋತಿ ಮನುಷ್ಯರಂತೆ ತಲೆ ಬಗ್ಗಿಸಿ ಕುಳಿತಿದೆ. ನಂತರ ಹೇರ್ ಸ್ಟೈಲ್ ಮಾಡಿದ್ದು, ಅಲ್ಲಿಯೇ ಇದ್ದ ಗ್ರಾಹಕರೊಬ್ಬರು ವಿಡಿಯೋ ಸೆರೆ ಹಿಡಿದಿದ್ದಾರೆ.

ರಾಜ್ಯದಲ್ಲಿ ತಾಪಮಾನ
ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಹಾವೇರಿ	ಶಿವಮೊಗ್ಗ	ಕೊಪ್ಪಳ	ಬಾಗಲಕೋಟೆ	ಮೈಸೂರು
ಗರಿಷ್ಠ	36.0	35.8	35.7	35.2	34.2
ಕನಿಷ್ಠ	22.4	21.4	24.1	25.4	22.0

ಸಿಎಂ ಕುರ್ಚಿ ಗೊಂದಲ ವಿಚಾರ ಬಗ್ಗೆ ಶೀಘ್ರ ದಿಲ್ಲೀಲಿ ಸಭೆ: ಸತೀಶ್


ದಾವಣಗೆರೆ: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಗೊಂದಲ ಇದ್ದು, ಈ ವಿಚಾರದ ಬಗ್ಗೆ ನಾನು ಉತ್ತರ ಕೊಡುವುದಿಲ್ಲ. ಆದಷ್ಟು ಬೇಗನೆ ಇಂತಹ ಗೊಂದಲ ಬಗೆಹರಿಸಬೇಕು ಎಂದು ಸಚಿವ ಸತೀಶ್ ಜಾರಕಿಹೊಳಿ ಪಕ್ಷದ ಹೈಕಮಾಂಡ್‌ಗೆ



ಒತ್ತಾಯಿಸಿದ್ದಾರೆ. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಹೈಕಮಾಂಡ್ ಬಯಸಿದರೆ 5 ವರ್ಷ ನಾನೇ ಸಿಎಂ ಎಂಬುದಾಗಿ ಸಿದ್ದರಾಮಯ್ಯ ಹೇಳಿದ್ದು, ಆ ಕುರಿತು ನಾನು ಪ್ರತಿಕ್ರಿಯೆ ನೀಡಲ್ಲ. ಆದರೆ, ಪಕ್ಷದಲ್ಲಿ ಗೊಂದಲ ಇರುವುದು ನಿಜ. ಶೀಘ್ರವೇ ದೆಹಲಿಯಲ್ಲಿ ಸಭೆ ಇದೆ. ಅಲ್ಲಿ ಗೊಂದಲ ಬಗೆಹರಿಸಬೇಕು ಎಂಬುದು ನಮ್ಮ ಮನವಿಯಾಗಿದೆ. ಯಾರು ಮುಖ್ಯಮಂತ್ರಿ ಆಗುತ್ತಾರೋ ಇಲ್ಲವೋ ನಮಗೆ ಗೊತ್ತಿಲ್ಲ. ಮೊದಲು ಗೊಂದಲ ಬಗೆಹರಿಸಬೇಕಾಗಿದೆ ಎಂದು ಹೇಳಿದರು.

ಡಿಎಂಕೆ-ಎಐಎಡಿಎಂಕೆ ಸೇರಿ ಸರ್ಕಾರ ಮಾಡೋ ನಂಬಿಕೆ ನನಗಿಲ್ಲ: ಎಚ್‌ಡಿಕೆ

ಹೊಳೆನರಸೀಪುರ: ಕೆಲವೊಂದು ಸಂದರ್ಭದಲ್ಲಿ ಸರ್ಕಾರ ರಚನೆ ವಿಚಾರದಲ್ಲಿ ಆಯಾ ರಾಜ್ಯದ ರಾಜ್ಯಪಾಲರು ಅವರದ್ದೇ ಆದ ಕಾನೂನು ಪಂಡಿತರ ಸಲಹೆ ಮೇರೆಗೆ ನಿರ್ಧಾರವನ್ನು ತೆಗೆದುಕೊಂಡಿದ್ದನ್ನು ಕಂಡಿದ್ದೇವೆ. ತಮಿಳುನಾಡು



ಗೌರ್ನರ್ ಸ್ಪಷ್ಟ ಬಹುಮತದ ಸಂಖ್ಯೆ ಸ್ಪಷ್ಟಪಡಿಸಿ ಎಂದಿದ್ದಾರೆ. ಡಿಎಂಕೆ-ಎಐಎಡಿಎಂಕೆ ಸೇರಿ ಸರ್ಕಾರ ಮಾಡುವುದು ಊಹಾಪೋಹ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು. ತಾಲೂಕಿನ ಹಳೇಕೋಟೆಯ ಬೆಟ್ಟದ ಶ್ರೀ ರಂಗನಾಥಸ್ವಾಮಿ ದೇವಾಲಯದಲ್ಲಿ ಶುಕ್ರವಾರ ಪೂಜೆ ಸಲ್ಲಿಸಿ ಮಾತನಾಡಿ, ಟಿವಿಕೆ ಪಕ್ಷದ ನಾಯಕ, ನಟ ವಿಜಯ್ ಅವರು ಬಹುಮತ ಸಾಬೀತುಪಡಿಸಲು ಪ್ರಯತ್ನ ಮಾಡುತ್ತಿದ್ದು, ಎರಡು ದಿನದಲ್ಲಿ ಅಸ್ಪಷ್ಟತೆ ಸರಿಪಡಿಸುವ ಸಾಧ್ಯತೆ ಇದೆ ಎಂದರು.

ಮೀಸಲಾತಿ ಹೆಚ್ಚಳ: ಕೇಂದ್ರಕ್ಕೆ ಸರ್ವ ಪಕ್ಷ ನಿಯೋಗ ತೆರಳಲಿ-ಉಗ್ರಪ್ಪ


ಚಿಕ್ಕಮಗಳೂರು: ಎಸ್ಸಿ, ಎಸ್ಟಿ, ಒಬಿಸಿ ಮೀಸಲಾತಿಯನ್ನು ಶೇ.56ಕ್ಕೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ಕೇವಲ ಪತ್ರ ಬರೆದರೆ ಸಾಲದು. ಪತ್ರಗಳಿಗೆ ಮಾವಿನ ಕಾಯಿ ಉದುರುವುದಿಲ್ಲ. ಕೂಡಲೇ ಸಿಎಂ ಸಿದ್ದರಾಮಯ್ಯನವರು ಸರ್ವ ಪಕ್ಷ ನಿಯೋಗ



ದೊಂದಿಗೆ ತೆರಳಿ ಪ್ರಧಾನಿ ಮೋದಿ ಅವರಿಗೆ ಒತ್ತಡ ಹಾಕುವಂತೆ ಕೆಪಿಸಿಸಿ ಉಪಾಧ್ಯಕ್ಷ, ವಾಲ್ಮೀಕಿ ಸಮುದಾಯ ಮುಖಂಡ ವಿ.ಎಸ್.ಉಗ್ರಪ್ಪ ಆಗ್ರಹಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೀಸಲಾತಿ ಪ್ರಮಾಣ ಶೇ.56ಕ್ಕೆ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ 2023ರಲ್ಲಿ ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ, ಈ ಕಾಯ್ದೆಗೆ ಕೋರ್ಟ್ ತಡೆಯಾಜ್ಞೆ ನೀಡಿದೆ. ಮೀಸಲಾತಿ ಹೆಚ್ಚಳವಾಗಬೇಕಾದರೆ ಕೇಂದ್ರ ಇದನ್ನು ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಸೇರಿಸಿ ಊರ್ಜಿತಗೊಳಿಸಬೇಕು. ಆಗ ಸೌಲಭ್ಯ ಸಿಗುತ್ತೆ ಎಂದರು.

ಕೆಪಿಸಿಸಿ ಒಬಿಸಿ ವಿಭಾಗದ ಅಧ್ಯಕ್ಷ ಹುದ್ದೆಗೆ ಡಿಕೆಶಿ ಆಪ್ತ ಶ್ರೀನಿವಾಸ್

ಬೆಂಗಳೂರು: ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರಾಗಿ ವಿಧಾನ ಪರಿಷತ್ ಸದಸ್ಯರಾದ ಡಿ.ಟಿ.ಶ್ರೀನಿವಾಸ್ ಅವರನ್ನು ನೇಮಕ ಮಾಡಲಾಗಿದೆ. ಡಿ.ಕೆ.ಶಿವಕುಮಾರ್ ಅವರ ಆಪ್ತರಾಗಿರುವ ಶ್ರೀನಿವಾಸ್ ಅವರನ್ನು ಕಳೆದ ವರ್ಷವೇ



ಒಬಿಸಿ ವಿಭಾಗದ ಅಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು. ಬಿಜೆಪಿಯ ಮಾಜಿ ಶಾಸಕಿ ಹಾಗೂ ಹಾಲಿ ಕಾಂಗ್ರೆಸ್‌ನಲ್ಲಿರುವ ಪೂರ್ಣಿಮಾ ಶ್ರೀನಿವಾಸ್ ಅವರ ಪತಿ ಶ್ರೀನಿವಾಸ್ ಅವರನ್ನು ಒಬಿಸಿ ಅಧ್ಯಕ್ಷರನ್ನಾಗಿ ನೇಮಿಸಿದ್ದಕ್ಕೆ ಪಕ್ಷದ ಕೆಲವರಿಂದ ವಿರೋಧ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಎಐಸಿಸಿ ಒಬಿಸಿ ಘಟಕದ ಅಧ್ಯಕ್ಷ ಅಜಯ್ ಯಾದವ್ ಅವರು ಶ್ರೀನಿವಾಸ್ ನೇಮಕಕ್ಕೆ ತಡೆ ನೀಡಿದ್ದರು. ಇದೀಗ ಖುದ್ದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರಿಂದಲೇ ಶ್ರೀನಿವಾಸ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿರುವ ಆದೇಶ ಹೊರಬಿದ್ದಿದೆ.

ಸುದ್ದಿ ಸಿಂಚನ

ಜನರ ಅಭಿಪ್ರಾಯ ಪಡೆದು ಪಕ್ಷ ಕಟ್ಟುವೆ: ಯತ್ನಾಳ್

ಕೊಪ್ಪಳ: ಹೊಸ ಪಕ್ಷ ಕಟ್ಟುವ ಕುರಿತು ಈಗಲೇ ಏನು ಹೇಳಲು ಆಗದು, ರಾಜ್ಯಾದ್ಯಂತ ಸುತ್ತಾಟ ನಡೆಸಿ ಜನರ ಅಭಿಪ್ರಾಯ ಪಡೆದ ನಂತರ ಹೊಸ ಪಕ್ಷ ಕಟ್ಟುವ ತೀರ್ಮಾನ ಮಾಡುತ್ತೇನೆ ಎಂದು ಶಾಸಕ ಬಸನಗೌಡ ಯತ್ನಾಳ್ ಹೇಳಿದ್ದಾರೆ. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಹದಗೆಟ್ಟು ಹೋಗಿದೆ. ಯಾರಾದರೂ ಸಿಎಂ ಆಗಲಿ ನಮಗೆ ಗೊತ್ತಿಲ್ಲ. ಆದರೆ, ಉತ್ತಮ ಆಡಳಿತ ಕೊಡಲಿ ಎಂದರು.

ಕೇರಳ ಸರ್ಕಾರ ರಚನೆ ಬಳಿಕ ಸಂಪುಟ ವಿಸ್ತರಣೆ: ದಿನೇಶ್ ಗುಂಡೂರಾವ್

ಮಂಗಳೂರು: ರಾಜ್ಯ ಸರ್ಕಾರಕ್ಕೆ ಮೂರು ವರ್ಷ ತುಂಬಿದ ಬಳಿಕ ಸಚಿವ ಸಂಪುಟ ವಿಸ್ತರಣೆ ಮಾಡಬೇಕು ಎಂಬ ತೀರ್ಮಾನವಿದ್ದು, ಕೇರಳದಲ್ಲಿ ಸರ್ಕಾರ ರಚನೆ ಆದ ನಂತರ ನಮ್ಮ ವರಿಷ್ಠರು ಕರ್ನಾಟಕದ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿ, 'ಪಕ್ಷದಲ್ಲಿ ಯಾರು ಏನೇನು ಪ್ರಯತ್ನ ಮಾಡ್ತಾ ಇದಾರೋ ನನಗೆ ಗೊತ್ತಿಲ್ಲ. ಯಾರು ಯಾವ ದಿನಾಂಕ ನಿಗದಿ ಮಾಡಲು ಸಾಧ್ಯವಿಲ್ಲ. ಅಂತಿಮವಾಗಿ ಎಐಸಿಸಿ ಅಧ್ಯಕ್ಷ ಖರ್ಗೆ, ರಾಹುಲ್, ಸೋನಿಯಾ ತೀರ್ಮಾನ ತಗೆದುಕೊಳ್ಳುತ್ತಾರೆ. ಸಮಯ, ಮುಹೂರ್ತ ಎಲ್ಲಾ ಅವರ ವಿವೇಚನೆಗೆ ಬಿಟ್ಟದ್ದು' ಎಂದರು.

ಶೃಂಗೇರಿ ಕ್ಷೇತ್ರದ ಮತ ಡಕಾಯಿತಿಯನ್ನು ಸಿಎಂ ಸಾಬೀತುಪಡಿಸಲಿ: ರವಿ

ಚಿಕ್ಕಮಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಮತ ಡಕಾಯಿತಿ ನಡೆದಿದೆ ಎಂದು ಸಿಎಂ ಸಿದ್ದರಾಮಯ್ಯ ಆರೋಪ ಮಾಡಿದ್ದು, ಅದಕ್ಕೆ ಪುರಾವೆಗಳಿದ್ದರೆ ಸಾಬೀತುಪಡಿಸಲಿ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಸವಾಲು ಹಾಕಿದ್ದಾರೆ. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಯಾರೇ ಮತ ಡಕಾಯಿತಿ ಮಾಡಿದರು ಅವರ ಮೇಲೆ ಕಠಿಣ ಶಿಕ್ಷೆ ಆಗಲಿ. ಅದನ್ನು ಬಿಟ್ಟು ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ. ಸಿಎಂ ಸಿದ್ದರಾಮಯ್ಯ ಅವರು ಹಿರಿಯರಿದ್ದಾರೆ. ಅವರ ಬಳಿ ದಾಖಲೆಗಳಿದ್ದರೆ ಅದನ್ನು ಸಾಬೀತುಪಡಿಸಲಿ ಎಂದರು.

X ಫೈಲ್ಸ್

ತಮಿಳುನಾಡು ಡೀಲ್ ಮಾಡಿಸುವೆ: ಪಾಕ್


ಅಮೆರಿಕ ಇರಾನ್ ಥರ ಡಿಎಂಕೆ-ಅಣ್ಣಾ ಡಿಎಂಕೆ ನಡುವೆಯೂ ಡೀಲ್ ಮಾಡಿಸಲು ಇಸ್ಲಾಮಾಬಾದ್‌ನಲ್ಲಿ ಶೆಹಬಾಜ್ ಷರೀಫ್ ಸಂಧಾನ ಸಭೆ ಏರ್ಪಡಿಸುವೆ ಎಂದಿದ್ದಾರಂತೆ!

- **ಪಾಕೀಟು ತಜ್ಞ**


ಇದು ಉಂಟು, ಆದಿಲ್ಲ!

ಬಂಗಾಳಿಗರು ರಾಜೀನಾಮೆ ಪತ್ರ ಪಡೆಯಲು ಹೆಣಗಾಡುತ್ತಿದ್ದಾರೆ. ತಮಿಳರು ನೇಮಕಾತಿ ಪತ್ರ ಪಡೆಯಲು ಹೆಣಗಾಡುತ್ತಿದ್ದಾರೆ. ಮಲಯಾಳಿಗಳು ರಾಜೀನಾಮೆ ಪತ್ರ ಮತ್ತು ನೇಮಕಾತಿ ಪತ್ರ ಎರಡೂ ಹೊಂದಿದ್ದಾರೆ. ಆದರೆ ನೇಮಕಾತಿ ಪತ್ರಕ್ಕೆ ಹೆಸರೇ ಇಲ್ಲ!!

- **ಆರ್‌ಎಚ್**



ಯಡಿಯೂರಪ್ಪಗೆ ಕ್ರೇನ್ ಮೂಲಕ 24 ತಮಟೆಗಳ 40 ಅಡಿ ಹಾರ ಹಾಕಲಾಯಿತು.



ಮಾಜಿ ಸಿಎಂ ಯಡಿಯೂರಪ್ಪ ಜೊತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ.



ಯಡಿಯೂರಪ್ಪ ಅವರ ಮೆರವಣಿಗೆ ವೇಳೆ ನೆರೆದಿದ್ದ ಸಾವಿರಾರು ಅಭಿಮಾನಿಗಳು

ಬಿಎಸ್‌ವೈಗೆ ನಾರಿಯರು, ರೈತರಿಂದ ಅದ್ಧೂರಿ ಸ್ವಾಗತ

ಚಿತ್ರದುರ್ಗದಲ್ಲಿ ಕಳೆಕಟ್ಟಿದ ಬಿಎಸ್‌ವೈ ಅಭಿಮಾನೋತ್ಸವ | ಮಾಜಿ ಸಿಎಂಗೆ ಪೂರ್ಣಕುಂಭ ಸ್ವಾಗತ, ನಗರದಲ್ಲಿ ಅದ್ಧೂರಿ ಮೆರವಣಿಗೆ

- **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜಕೀಯಕ್ಕೆ ಬಂದು 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಆಯೋಜಿಸಿರುವ ಅಭಿ ಮಾನೋತ್ಸವದ ಅಂಗವಾಗಿ ಶುಕ್ರವಾರ ಸಂಜೆ ಚಿತ್ರದುರ್ಗ ಪುರಪ್ರವೇಶ ಮಾಡಿದ ಬಿಎಸ್‌ವೈ ಅವರಿಗೆ ಮಹಿಳೆಯರು ಪೂರ್ಣಕುಂಭ ಸ್ವಾಗತ ಕೋರಿದರು. ಜೊತೆಗೆ ಹಲಗೆ ಸದ್ದಿಗೆ ಕುಣಿದು ಕುಪ್ಪಳಿಸಿ ನೆರೆದಿದ್ದವರ ಗಮನ ಸೆಳೆದರು.

ಯಡಿಯೂರಪ್ಪ ಅವರು ಸೂರ್ಯಾಸ್ತದ ವೇಳೆಗೆ 6 ಗಂಟೆ ಸುಮಾರಿಗೆ ಚಿತ್ರದುರ್ಗ ಪ್ರವೇಶಿಸಿದರು. ಬಸವೇಶ್ವರ ಪ್ರತಿಮೆ ಪಕ್ಕದಿಂದ ಹೊರಟ ಮೆರವಣಿಗೆ ಆರಂಭದಲ್ಲಿ ಮಹಿಳೆಯರು ಪೂರ್ಣ ಕುಂಭ ಸ್ವಾಗತ ಕೋರಿದರು. ನಂತರ ಒನಕೆ ಹಿಡಿದು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ವಿಜಯಗರಜಿಲ್ಲೆಯಿಂದ ಆಗಮಿಸಿದ್ದ ಐದು ನೂರಕ್ಕೂ ಹೆಚ್ಚು ಮಹಿಳೆಯರು ಅತ್ಯಂತ ಸಂಭ್ರಮದಿಂದಲೇ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮಹಿಳೆಯರು ಅತ್ಯಂತ ಶಿಸ್ತುಬದ್ಧರಾಗಿ ಮೆರವಣಿಗೆ ಜತೆ ಹೆಜ್ಜೆ ಹಾಕಿದರು.



ಚಿತ್ರದುರ್ಗಕ್ಕೆ ಆಗಮಿಸಿದ ಯಡಿಯೂರಪ್ಪ ಅವರಿಗೆ ನೂರಾರು ಮಹಿಳೆಯರು ಪೂರ್ಣಕುಂಭ ಸ್ವಾಗತ ಕೋರಿದರು.

ವೇದಿಕೆ ಹತ್ತಿರವೇ ಹೆಲಿಪ್ಯಾಡ್

ಕೇಂದ್ರ ಗೃಹಮಂತ್ರಿ ಅಮಿತ್ ಶಾ ಅವರು ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ಮುಗಿಸಿ ನೇರವಾಗಿ ಶಿವಮೊಗ್ಗದ ವಿಮಾನ ನಿಲ್ದಾಣಕ್ಕೆ ಬಂದು ಅಲ್ಲಿಂದ ಹೆಲಿಕಾಪ್ಟರ್‌ಮೂಲಕ ಚಿತ್ರದುರ್ಗಕ್ಕೆ ಆಗಮಿಸಲಿದ್ದು, ಅದಕ್ಕಾಗಿ ಕಾರ್ಯಕ್ರಮದ ಹಿಂಬದಿಯಲ್ಲಿ ಹೆಲಿಪ್ಯಾಡ್ ನಿರ್ಮಿಸಲಾಗಿದೆ.

ಬೃಹತ್ ಕಟೌಟುಗಳು


ಯಡಿಯೂರಪ್ಪ ಅವರ ಬಣ್ಣ ಬಣ್ಣದ ಕಟೌಟ್‌ಗಳು, ಫ್ಲೆಕ್ಸ್‌ಗಳು, ಕೇಸರಿ ಬಣ್ಣದಲ್ಲಿ ವಿವಿಧ ಅಲಂಕಾರಗಳನ್ನು ಮಾಡಲಾಗಿದೆ.' ಸಂಸದ ಗೋವಿಂದ ಕಾರಜೋಳ, ವಿಜಯೇಂದ್ರ ಅವರ ಕಟೌಟುಗಳೂ ಎಲ್ಲರ ಗಮನ ಸೆಳೆಯುತ್ತಿವೆ.

ಮಾದಿಗ ಸಮುದಾಯದಿಂದ ಬಿಎಸ್‌ವೈಗೆ 24 ತಮಟೆಗಳ 40 ಅಡಿಯ ಬೃಹತ್ ಹಾರ

ಬಿಎಸ್ ವೈ ಅಭಿಮಾನೋತ್ಸವದ ಅಂಗವಾಗಿ ಶುಕ್ರವಾರ ಚಿತ್ರದುರ್ಗದಲ್ಲಿ ಹಮ್ಮಿಕೊಳ್ಳಲಾದ ಯಡಿಯೂರಪ್ಪ ಪುರಪ್ರವೇಶ ಮೆರವಣಿಗೆಯಲ್ಲಿ ಮಾದಿಗ ಸಮುದಾಯದ ಮುಖಂಡರು ಹಲಗೆ ಹಾರ ಹಾಕುವುದರ ಮೂಲಕ ಗಮನ ಸೆಳೆದರು. ಮೆರವಣಿಗೆ ಅಂಬೇಡ್ಕರ್‌ಪ್ರತಿಮೆ ಬಳಿ ಆಗಮಿಸಿದಾಗ ಕ್ರೇನ್ ಸಹಾಯದಿಂದ ಯಡಿಯೂರಪ್ಪ ಅವರಿಗೆ ಅರ್ಪಿಸಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಸುಮಾರು 40 ಅಡಿ ಎತ್ತರದ 24 ತಮಟೆಗಳಿದ್ದ ಹಾರ ಇದಾಗಿತ್ತು.

ಪಾರ್ಕಿಂಗ್ ಸ್ಥಳಗಳಿಗೆ ನಾಡಿನ ನದಿಗಳ ಹೆಸರು

ಚಿತ್ರದುರ್ಗದ ಮಾದಾರ ಚೆನ್ನಯ್ಯ ಗುರುಪೀಠದ ಹಿಂಭಾಗದ ವಿಶಾಲ ಪ್ರದೇಶದಲ್ಲಿ ಬೃಹತ್ ಪೆಂಡಾಲ್ ನಿರ್ಮಾಣ ಮಾಡಿ ಆಯೋಜಿಸಿರುವ ಅಭಿಮಾನೋತ್ಸವಕ್ಕೆ ಆಗಮಿಸುವ ಅಭಿಮಾನಿಗಳು, ಕಾರ್ಯಕರ್ತರು, ವಿಐಪಿ, ವಿವಿಐಪಿಗಳ ವಾಹನ ನಿಲುಗಡೆಯ ಸ್ಥಳಗಳಿಗೆ ನಾಡಿನ ಪ್ರಮುಖ ನದಿಗಳ ಹೆಸರನ್ನು ಇಡಲಾಗಿದೆ. ದಾವಣಗೆರೆ, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಹಾವೇರಿ ಕಡೆಯಿಂದ ಬರುವ ವಾಹನಗಳಿಗೆ 'ವೇದಾವತಿ', ವಿಐಪಿ, ವಿವಿಐಪಿಗಳಿಗೆ ವಾಹನಗಳಿಗೆ 'ಕಾವೇರಿ',



ಬೆಂಗಳೂರು, ತುಮಕೂರು, ಹಾಸನ, ಮಂಡ್ಯ, ಮೈಸೂರು ಕಡೆಗಳಿಂದ ಬರುವ ವಾಹನಗಳಿಗೆ 'ಭದ್ರಾ', ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು ಕಡೆಗಳಿಂದ ಬರುವ ವಾಹನಗಳ ನಿಲುಗಡೆ ಸ್ಥಳಕ್ಕೆ 'ತುಂಗಾ' ಹೆಸರಿಡಲಾಗಿದೆ.

ಅಭಿಮಾನೋತ್ಸವದಲ್ಲಿ ಬಿಎಸ್‌ವೈ ಕಾರು ಆಕರ್ಷಣೆ!

ಅಂಬಾಸಿಡರ್ ಕಾರಲ್ಲಿ ರಾಜ್ಯ ಸುತ್ತಿ ಪಕ್ಷ ಕಟ್ಟಿದ್ದಾರೆ | ಪಕ್ಷ ಸಂಘಟನೆಯಲ್ಲಿ ಕಾರಿನ ಪಾತ್ರವೂ ಇದೆ
ಈ ಕಾರನ್ನು ರಾಜ್ಯದ ಜನ ಮರೆಯಲ್ಲ: ಬಿವೈವಿ | ಕಾರ್ ಮುಂದೆ ಸೆಲ್ಫಿ ಕ್ಲಿಕ್ಕಿಸಿಕೊಂಡ ಅಭಿಮಾನಿಗಳು

- **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಬಿ.ಎಸ್.ಯಡಿಯೂರಪ್ಪರ ರಾಜಕೀಯ ಆರಂಭದ ದಿನಗಳಲ್ಲಿ ಬಳಸಿದ್ದ ಅಂಬಾಸಿಡರ್‌ಕಾರನ್ನು ಕಾರ್ಯಕ್ರಮ ನಡೆಯುವ ಪ್ರದೇಶಕ್ಕೆ ತರಲಾಗಿದೆ. ಇದು ಪ್ರಮುಖ ಆಕರ್ಷಣೆಯಾಗಿದ್ದು, ಎಲ್ಲರೂ ಬಂದು ಕಾರಿನ ಬಳಿ ಫೋಟೋ ಕ್ಲಿಕ್ಕಿಸಿಕೊಳ್ಳುತ್ತಿದ್ದಾರೆ.



ಬಿಎಸ್‌ವೈ ತಮ್ಮ ರಾಜಕೀಯ ಜೀವನದಲ್ಲಿ ಬಳಸಿದ ಸಿಕೆಆರ್45 ನಂಬರಿನ ಹಿಂದೂಸ್ತಾನ್ ಅಂಬಾಸಿಡರ್‌ಕಾರಿನ ಬಗ್ಗೆ ಮಾಹಿತಿ ನೀಡಿದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಈ ಕಾರನ್ನು ರಾಜ್ಯದ ಜನ ಈಗಲೂ ನೆನಪಿನಲ್ಲಿ ಇಟ್ಟುಕೊಂಡಿದ್ದಾರೆ ಎಂದರು.



ಯಡಿಯೂರಪ್ಪ ಅವರ ಮೇಲೆ ಜನ ಯಾವ ರೀತಿಯ ಪ್ರೀತಿ ಮತ್ತು ಅಭಿಮಾನ ತೋರುತ್ತಾರೋ ಅದೇ ಸಿಕೆಆರ್45 ನಂಬರಿನ ಕಾರಿಗೂ ಜನ ಪ್ರೀತಿ ತೋರುತ್ತಾರೆ. ಆ ಕಾಲದಲ್ಲಿ ಕೇವಲ ನಗರಕ್ಕೆ ಸೀಮಿತವಾಗಿದ್ದ ಬಿಜೆಪಿಯನ್ನು ಹಳ್ಳಿಹಳ್ಳಿಗೆ ತೆಗೆದುಕೊಂಡು ಹೋಗಿ ಪಕ್ಷದ ಸಂಘಟನೆ ಬಲಪಡಿಸಲು ಬಿಎಸ್‌ವೈ ಸಾಕಷ್ಟು ಶ್ರಮಿಸಿದರು. ಬಿಎಸ್‌ವೈ ಅವರೊಂದಿಗೆ ಅನಂತ ಕುಮಾರ್, ಡಿ.ಎಚ್.ಶಂಕರಮೂರ್ತಿ ಅವರು ಇದೇ ಕಾರಿನಲ್ಲಿ ಪ್ರವಾಸ ಮಾಡಿದ್ದಾರೆ. ಆ ದಿನಗಳಲ್ಲಿ ರಸ್ತೆಗಿಂತ ಗುಂಡಿಗಳೇ ಹೆಚ್ಚಿದ್ದವು. ಯಡಿಯೂರಪ್ಪ ಇದೇ ಕಾರನ್ನು ಸದಾ ಬಳಸುತ್ತಿದ್ದರು. ಅವರ ಪ್ರವಾಸಕ್ಕೆ ಶಕ್ತಿ ತುಂಬಿದ್ದು ಈ ಕಾರು ಎಂದರು.

ಶಂಕರ್ ಎಂಬುವರು 10 ವರ್ಷ ಚಾಲಕರಾಗಿದ್ದರು. ಮಂಜಣ್ಣ ಎಂಬ ಮತ್ತೊಬ್ಬರು ಚಾಲಕರಾಗಿದ್ದರು. ನಮ್ಮ ಕುಟುಂಬ ಸದಸ್ಯರಂತೆ ಹದಿನೈದು ವರ್ಷ ಕಾರು ಓಡಿಸಿದ್ದಾರೆ. ಒಮ್ಮೆ ಮಾತ್ರ ಕಾರು ಅಡಿಮೇಲಾಗಿದ್ದು ಮತ್ತೆ ಯಾವುದೇ ಅವಘಡ ಸಂಭವಿಸಿಲ್ಲ. ಸುರಕ್ಷಿತವಾಗಿ ಸಸಸರಾಜ್ಯದಲ್ಲಿ ಬಿಎಸ್‌ವೈ ಅವರನ್ನು ಈ ಕಾರು ಸುತ್ತಾಡಿಸಿದೆ. ಇದರ ಮೇಲೆ ಅವರಿಗೆ ಅಪಾರ ಪ್ರೀತಿ ಇದೆ ಎಂದರು.

ಅಭಿಮಾನೋತ್ಸವ: 10 ಲಕ್ಷ ಮಂದಿಗೆ ಊಟ ವ್ಯವಸ್ಥೆ

ಚಿತ್ರದುರ್ಗ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ, ಪುರಪ್ರವೇಶ ಕಾರ್ಯಕ್ರಮಕ್ಕೆ ಆಗಮಿಸುವ ಅಭಿಮಾನಿಗಳ ಹಸಿವು ನೀಗಿಸಲು ಟೊಮೆಟೋ ಬಾತ್, ಮೊಸರನ್ನ, ಮೈಸೂರು ಪಾಕ್ ಸಿದ್ಧವಾಗುತ್ತಿದೆ. ಹತ್ತು ಲಕ್ಷ ಅಭಿಮಾನಿಗಳು ಆಗಮಿಸುವ ನಿರೀಕ್ಷೆಯಲ್ಲಿ ಅವರಿಗೆ ಊಟದ ವ್ಯವಸ್ಥೆ ಮಾಡುವುದು ಸವಾಲಿನ ಕೆಲಸವಾಗಿದೆ. ಸರಾಗಗೊಳಿಸುವ ನಿಟ್ಟಿನಲ್ಲಿ ಸರಳ ಊಟದ ವ್ಯವಸ್ಥೆಗೆ ಮೊರೆ ಹೋಗಲಾಗಿದೆ. ಟೊಮೆಟೋ ಬಾತ್, ಮೊಸರನ್ನ ಸೂಕ್ತವೆಂದು ತೀರ್ಮಾನಿಸಲಾಗಿದೆ.


ಶುಕ್ರವಾರ ಸುದ್ದಿಗಾರರಿಗೆ ಮಾಹಿತಿ ನೀಡಿದ ಸಂಸದ ಗೋವಿಂದ ಕಾರಜೋಳ, .ಮೈಸೂರು, ಬೆಂಗಳೂರು, ಚಿತ್ರದುರ್ಗ, ತುಮಕೂರು ಮೊದಲಾದ 5 ಕಡೆಯ ಪ್ರಮುಖ ಅಡುಗೆಯವರಿಗೆ ನಿರ್ವಹಣೆ ಕೊಟ್ಟಿದ್ದೇವೆ. ಊಟ ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಗಲಿದೆ. ಅರ್ಧ ಲೀಟರ್ ಕುಡಿಯುವ ನೀರನ್ನೂ ಕೊಡುತ್ತೇವೆ. ಸಂಜೆ 6ರವರೆಗೂ ಊಟ ಮುಂದುವರೆಯುತ್ತದೆ ಎಂದರು.

ನಾನು, ಅನಂತ್ ಸೈಕಲ್‌ನಲ್ಲಿ ಸುತ್ತಾಡಿ ಪಕ್ಷ ಕಟ್ಟಿದ್ವಿ ಬಿಎಸ್‌ವೈ

ನಾವಿಬ್ಬರು ರಾಜ್ಯಾದ್ಯಂತ ಪ್ರವಾಸ ಮಾಡಿದ್ದೆವು ನಮ್ಮ ಪರಿಶ್ರಮದಿಂದ ಬಿಜೆಪಿ ಅಧಿಕಾರಕ್ಕೆ ಬಂತು

- **ಕನ್ನಡಪ್ರಭ ವಾರ್ತೆ** ದಾವಣಗೆರೆ

ಚಿತ್ರದುರ್ಗದಲ್ಲಿ ಮೇ 9ಕ್ಕೆ ಅಭಿಮಾನೋತ್ಸವಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಜನಸೇರುವ ನಿರೀಕ್ಷೆಯಿದೆ. ಆ ಕಾರ್ಯಕ್ರಮದ ನಂತರ ನಾನು ಮಾತನಾಡುತ್ತೇನೆ ಎಂದು ಬಿಜೆಪಿ ಹಿರಿಯ ನಾಯಕ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.



ಚಿತ್ರದುರ್ಗದಲ್ಲಿ ಮೇ 9ರಂದು ನಡೆಯುವ ಅಭಿನಂದನೋತ್ಸವದಲ್ಲಿ ಪಾಲ್ಗೊಳ್ಳಲು ಕುಟುಂಬ ಸಮೇತರಾಗಿ ನಗರದ ಹೊರವಲಯದ ರೆಸಾರ್ಟ್‌ಗೆ ಶುಕ್ರವಾರ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದರು. ಬಹಳ ಪ್ರೀತಿ, ವಿಶ್ವಾಸದಿಂದ ಎಲ್ಲರೂ ಸೇರಿ, ಕಾರ್ಯಕ್ರಮ ಮಾಡುತ್ತಿದ್ದಾರೆ ಎಂದರು. ಸೈಕಲ್‌ನಲ್ಲಿ ನಾನು, ಅನಂತಕುಮಾರ್ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೆವು. ಇದೆಲ್ಲದರ ಕಾರಣದಿಂದ ಬಿಜೆಪಿ ಅಧಿಕಾರಕ್ಕೆ ಬಂದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. 2028ರ ಚುನಾವಣೆಗೆ ಅಭಿನಂದನೋತ್ಸವ ರಣಕಹಳೆಯ ಎಂಬುದನ್ನು ಕಾದು ನೋಡೋಣ ಎಂದು ಯಡಿಯೂರಪ್ಪ ಅವರು ತಿಳಿಸಿದರು.


ರೆಸಾರ್ಟ್‌ನಲ್ಲಿ ಬಿಎಸ್‌ವೈ ಭೇಟಿಯಾದ ಕಾರ್ಯಕರ್ತರು: ಯಡಿಯೂರಪ್ಪನವರ ಪುತ್ರಿ ಅರುಣಾದೇವಿ ಸೇರಿದಂತೆ ಇಡೀ ಕುಟುಂಬ ಸದಸ್ಯರು ರೆಸಾರ್ಟ್‌ಗೆ ಬಂದಿದ್ದರು. ಯಡಿಯೂರಪ್ಪ ಅವರನ್ನು ನೋಡಲು, ಭೇಟಿಯಾಗಲು ಅನೇಕ ಕಾರ್ಯಕರ್ತರು, ಅಭಿಮಾನಿಗಳು ರೆಸಾರ್ಟ್‌ಗೆ ಆಗಮಿಸಿದ್ದರು. ರೆಸಾರ್ಟ್ ಮುಂದೆ ಸೇರಿದ್ದ ನೂರಾರು ಅಭಿಮಾನಿಗಳು, ಯಡಿಯೂರಪ್ಪ ಅವರ ಪರವಾಗಿ ಘೋಷಣೆಗಳನ್ನು ಕೂಗಿ, ಸ್ವಾಗತಿಸಿದರು.

ಕಿಡಿ ಕೇಂದ್ರ ಸರ್ಕಾರದ್ದು ಸಂವಿಧಾನ ವಿರೋಧಿ ನಿರ್ಧಾರ

ಜಿ ರಾಮ್ ಜಿ ಕಾಯ್ದೆ ವಿರುದ್ಧ ಹೋರಾಟ: ಸಚಿವ ಪ್ರಿಯಾಂಕ್

- **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಬಿ ಜಿ ರಾಮ್ ಜಿ ಕಾಯ್ದೆ ತರುವುದಕ್ಕೂ ಮುಂಚೆ ನಮ್ಮೊಂದಿಗೆ ಕೇಂದ್ರ ಸರ್ಕಾರ ಮಾತುಕತೆ ನಡೆಸಿಲ್ಲ. ಸಂವಿಧಾನ, ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಕ್ಕೆ ಆರ್ಥಿಕ ಹೊರೆಯಾಗುವುದಾದರೆ ನಮ್ಮ ಗಮನಕ್ಕೆ ತರಬೇಕು. ಆದರೆ, ಅದನ್ನು ಮಾಡಿಲ್ಲ. ಇದು ಸಂವಿಧಾನ ವಿರೋಧಿ ನಿರ್ಧಾರವಾಗಿದ್ದು, ಅದರ ವಿರುದ್ಧ ಹೋರಾಟ ಮಾಡುತ್ತೇವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಕ್ಕೆ ಆರ್ಥಿಕ ಹೊರೆಯಾಗುವಂಥ ಯೋಜನೆ ತರುವುದಕ್ಕೂ ಮುನ್ನ ಆ ರಾಜ್ಯದ ಗಮನಕ್ಕೆ ತರಬೇಕು. ಆದರೆ, ಸಂವಿಧಾನ ವಿರೋಧಿಯಾಗಿ ವಿಬಿ ಗ್ರಾಮ್ ಜಿ ಕಾಯ್ದೆಯನ್ನು ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ಜಾರಿಗೊಳಿಸಲು ಮುಂದಾಗಿದೆ. ಕಾಯ್ದೆ ತರುವುದಕ್ಕೂ ಮುನ್ನ ನಮ್ಮೊಂದಿಗೆ ಮಾತುಕತೆ ನಡೆಸಿಲ್ಲ. ಈ ಎಲ್ಲದರ ಕುರಿತು ನಾವು ಹೋರಾಟ ಮಾಡುತ್ತೇವೆ ಎಂದರು.


ರಾಜಭವನ ಬಿಜೆಪಿ ಕಚೇರಿಗಳಾಗುತ್ತಿವೆ: ತಮಿಳುನಾಡು ಸರ್ಕಾರ ರಚನೆಯಲ್ಲಿ ರಾಜ್ಯಪಾಲರ ನಡೆ ಕುರಿತು ಪ್ರತಿಕ್ರಿಯಿಸಿದ ಪ್ರಿಯಾಂಕ್, ತಮಿಳುನಾಡಿನಲ್ಲಿ ಸರ್ಕಾರ ರಚನೆಗೆ ರಾಜ್ಯಪಾಲರು ಅಡ್ಡಿಪಡಿಸಿದ್ದರು. ಬೇರೆ ರಾಜ್ಯಗಳಲ್ಲಿ ಈ ರೀತಿ ಸನ್ನಿವೇಶವಿದ್ದಾಗ ಸರ್ಕಾರ ರಚನೆಗೆ ಅನುಮತಿಸಲಾಗಿತ್ತು. ಬಹುಮತ ರಾಜ್ಯಪಾಲರ ಬಳಿ ಸಾಬೀತುಪಡಿಸುವ ಅವಶ್ಯಕತೆಯಿಲ್ಲ. ಸದನದ ಒಳಗೆ ಸಾಬೀತುಪಡಿಸಬೇಕು. ಅದಕ್ಕೂ ಮುಂಚೆಯೇ ಶಾಸಕರ ಬೆಂಬಲವಿರುವ ಪತ್ರ ನೀಡಿದೆ ಎನ್ನುವುದು ಸರಿಯಲ್ಲ. ಕಳೆದೊಂದು ದಶಕದಿಂದ ರಾಜ್ಯಪಾಲರ ಕಚೇರಿಗಳು ಬಿಜೆಪಿ ಮತ್ತು ಆರ್‌ಎಸ್‌ಎಸ್ ಕಚೇರಿಯಾಗಿ ಬಳಕೆಯಾಗುತ್ತಿವೆ. ಸಂವಿಧಾನಿಕ ಹುದ್ದೆಯಲ್ಲಿದ್ದು ರಾಜಕೀಯ ಮಾಡಬಾರದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಿರೀಕ್ಷೆ ಸಚಿವ ಸ್ಥಾನ ಒಲಿಯುವ ಭರವಸೆ | ಹೊಸಬರಿಗೆ ಕೇಳಿದ್ದೇವೆ

ತಿಂಗಳಾಂತ್ಯಕ್ಕೆ ಸಚಿವ ಸಂಪುಟ ವಿಸ್ತರಣೆ ಆಗಲಿದೆ: ಸಲೀಂ

- **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಮೇ ತಿಂಗಳಾಂತ್ಯಕ್ಕೆ ಸಚಿವ ಸಂಪುಟ ವಿಸ್ತರಣೆ ಆಗಲಿದ್ದು, ಹೈಕಮಾಂಡ್ ಸೂಕ್ತ ನಿರ್ಧಾರ ಕೈಗೊಳ್ಳಲಿದೆ. ನನಗೂ ಸಚಿವ ಸ್ಥಾನ ಸಿಗುವ ಭರವಸೆ ಇದೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ವಿಶ್ವಾಸ ವ್ಯಕ್ತಪಡಿಸಿದರು.



ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉಪ ಚುನಾವಣೆ ಹಿನ್ನೆಲೆ ಸಚಿವ ಸಂಪುಟ ವಿಸ್ತರಣೆ ವಿಳಂಬವಾಗಿದ್ದು, ತಿಂಗಳಾಂತ್ಯದಲ್ಲೇ ಸಂಪುಟ ವಿಸ್ತರಣೆ ಆಗುವ ಸಾಧ್ಯತೆ ಇದೆ. ಹೊಸಬರಿಗೆ ಅವಕಾಶ ಮಾಡಿಕೊಡಿ ಎಂದು ಹೈಕಮಾಂಡ್‌ಗೆ ಮನವಿ ಮಾಡಿದ್ದೇವೆ. ಅಂತಿಮವಾಗಿ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ ಎಂದರು.

ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆ 2028ರ ಚುನಾವಣೆಯ ದಿಕ್ಸೂಚಿ ಎಂದು ಬಿಜೆಪಿಯೇ ಹೇಳಿಕೊಂಡಿತ್ತು. ಎರಡು ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲವು ಸಾಧಿಸಿದೆ. ಕಾಂಗ್ರೆಸ್ 2028ರಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬರಲಿದೆ. ಜನಪರ ಆಡಳಿತ ಹಾಗೂ ಗ್ಯಾರಂಟಿಗಳ ನೀಡಿದ ಹಿನ್ನೆಲೆ ಜನರು ಕಾಂಗ್ರೆಸ್ ಗೆಲ್ಲಿಸುವ ಮೂಲಕ ಇನ್ನಷ್ಟು ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ ಎಂದರು.


- ಉಪ ಚುನಾವಣೆ ಹಿನ್ನೆಲೆ ವಿಳಂಬವಾಗಿದ್ದ ಸಂಪುಟ ಶೀಘ್ರದಲ್ಲಿಯೇ ವಿಸ್ತರಣೆ
- ಸಂಪುಟ ವಿಸ್ತರಣೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರವೇ ಅಂತಿಮ
- ಉಪ ಚುನಾವಣೆಯಲ್ಲಿ ಜನರು ಆಡಳಿತ, ಗ್ಯಾರಂಟಿಗೆ ಗೆಲುವು ನೀಡಿದ್ದಾರೆ
- ಉಪ ಚುನಾವಣೆ ಗೆಲುವು 2028ರ ಅಸೆಂಬ್ಲಿ ಚುನಾವಣೆಗೆ ದಿಕ್ಸೂಚಿ, ಮತ್ತೆ ಅಧಿಕಾರ

ರೈಲ್ವೆ ಇಲಾಖಾ ಬಡ್ತಿ ಪರೀಕ್ಷೆಯನ್ನು ಕನ್ನಡದಲ್ಲೂ ನಡೆಸಿ: ನಿಖಿಲ್ ಮನವಿ

ರೈಲ್ವೆ ಸಚಿವರಾದ ವೈಷ್ಣವ್, ಸೋಮಣ್ಣಗೆ ಪತ್ರ

- **ಕನ್ನಡಪ್ರಭ ವಾರ್ತೆ** ಬೆಂಗಳೂರು

ನೈಋತ್ಯ ರೈಲ್ವೆ ಇಲಾಖಾ ಬಡ್ತಿ ಪರೀಕ್ಷೆಗಳನ್ನು ಕನ್ನಡ ಭಾಷೆಯಲ್ಲೂ ನಡೆಸುವಂತೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.



ನೈಋತ್ಯ ರೈಲ್ವೆ ಇಲಾಖಾ ಬಡ್ತಿ ಪರೀಕ್ಷೆಗಳನ್ನು ಹಿಂದಿ, ಇಂಗ್ಲಿಷ್‌ನಲ್ಲಿ ಮಾತ್ರ ನಡೆಸಲಾಗುತ್ತಿದೆ. ನೈಋತ್ಯ ರೈಲ್ವೆ ವ್ಯಾಪ್ತಿಯಲ್ಲಿ ಕರ್ನಾಟಕದ ಬಹುಭಾಗ ಬರುವುದರಿಂದ, ಇಲ್ಲಿನ ಕನ್ನಡಿಗ ಉದ್ಯೋಗಿಗಳಿಗೆ ಕನ್ನಡದಲ್ಲೂ ಬರೆಯಲು ಅವಕಾಶ ಕಲ್ಪಿಸಿದರೆ ಅನುಕೂಲವಾಗಲಿದೆ ಎಂದರು.

ಆಗಸ್ಟ್ 2024ರಲ್ಲಿ ರೈಲ್ವೆ ಮಂಡಳಿ ಹೊರಡಿಸಿರುವ ಆದೇಶದ ಪ್ರಕಾರ, ಎಲ್ಲಾ ವಲಯ ರೈಲ್ವೆಗಳಲ್ಲಿ ಇಲಾಖಾ ಪರೀಕ್ಷೆಗಳನ್ನು ಹಿಂದಿ, ಇಂಗ್ಲಿಷ್ ಜೊತೆಗೆ ಪ್ರಾದೇಶಿಕ ಭಾಷೆಗಳಲ್ಲೂ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಈ ಆದೇಶದ ಅನುಸಾರ ನೈಋತ್ಯ ರೈಲ್ವೆಯಲ್ಲೂ ಕನ್ನಡದಲ್ಲಿ ಪರೀಕ್ಷೆ ನಡೆಸಲು ಕ್ರಮ ಕೈಗೊಳ್ಳುವಂತೆ ಅವರು ಕೋರಿದ್ದಾರೆ.

ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಆದ್ಯತೆ ಸಿಗುವುದು ಸಹಜ. ರೈಲ್ವೆ ಇಲಾಖೆಯ ಮುಂದಿನ ಎಲ್ಲಾ ಇಲಾಖಾ ಪರೀಕ್ಷೆಗಳಲ್ಲೂ ಕನ್ನಡಕ್ಕೆ ಅವಕಾಶ ಕಲ್ಪಿಸುವುದರಿಂದ ನಮ್ಮ ರಾಜ್ಯದ ಉದ್ಯೋಗಿಗಳಿಗೆ ಬಡ್ತಿ ಅವಕಾಶಗಳು ಹೆಚ್ಚಲಿವೆ. ಈ ಸಂಬಂಧ ಪರಿಶೀಲಿಸಿ, ಕನ್ನಡದಲ್ಲೂ ಪರೀಕ್ಷೆ ನಡೆಸಲು ಸೂಕ್ತ ನಿರ್ದೇಶನ ನೀಡುವಂತೆ ನಿಖಿಲ್ ಮನವಿ ಮಾಡಿದ್ದಾರೆ.

ಕನ್ನಡಪ್ರಭ
ಶನಿವಾರ 9.05.2026

ಸುದ್ದಿ ಸಿಂಚನ

ಎಸ್‌ಟಿಪಿಗಳ ನಿರ್ವಹಣೆಗೆ ಹೆಚ್ಚು ಅನುದಾನ ನೀಡಿ: ಸರ್ಕಾರಕ್ಕೆ ಆಗ್ರಹ

ಮಂಗಳೂರು: ಫಲ್ಗುಣಿ ನದಿಗೆ ಒಳಚರಂಡಿ ತ್ಯಾಜ್ಯ ನೀರನ್ನು ನೇರವಾಗಿ ಬಿಡುತ್ತಿರುವುದು ಹಾಗೂ ವಿವಿಧ ಭಾಗಗಳಲ್ಲಿ ಒಳಚರಂಡಿ ಸೋರಿಕೆ ಸಂಭವಿಸುತ್ತಿರುವ ಪರಿಣಾಮ ಮೀನುಗಳು ಸಾವಿಗೀಡಾಗುತ್ತಿದ್ದು, ಸರ್ಕಾರವೇ ಪರೋಕ್ಷ ಕಾರಣ ಎಂದು ಮಂಗಳೂರು



ಉತ್ತರ ಶಾಸಕ ಡಾ.ಭರತ್ ಶೆಟ್ಟಿ ಆರೋಪಿಸಿದ್ದಾರೆ. ಅಲ್ಲದೆ ಎಸ್‌ಟಿಪಿಗಳ ನಿರ್ವಹಣೆಗೆ ಪಾಲಿಕೆಗಳಿಗೆ ಸರ್ಕಾರ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಅವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಸ್‌ಟಿಪಿಗಳನ್ನು (ಮಲಿನ ನೀರು ಶುದ್ಧೀಕರಣ ಘಟಕ) ಸಮರ್ಪಕವಾಗಿ ನಿರ್ವಹಣೆ ಮಾಡದೇ ಇರುವುದರಿಂದ ಈ ಸಮಸ್ಯೆ ಮತ್ತಷ್ಟು ಗಂಭೀರವಾಗುತ್ತಿದೆ. ಸರ್ಕಾರದಿಂದ ನಿರ್ವಹಣಾ ವೆಚ್ಚಕ್ಕೆ ಅಗತ್ಯ ಅನುದಾನ ಬಿಡುಗಡೆ ಆಗದೇ ಇರುವುದರಿಂದ ಘಟಕಗಳ ಕಾರ್ಯಕ್ಷಮತೆ ಕುಂಠಿತಗೊಂಡಿದೆ ಎಂದು ಅವರು ಆರೋಪಿಸಿದ್ದಾರೆ. ಒಳಚರಂಡಿ ತ್ಯಾಜ್ಯ ನೀರನ್ನು ನದಿಗಳಿಗೆ ಹರಿಸುವ ಮೂಲಕ ಸರ್ಕಾರವೇ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿರುವುದು ಖಂಡನೀಯ ಸಂಗತಿ. ತಕ್ಷಣವೇ ಎಸ್‌ಟಿಪಿಗಳ ಸಮರ್ಪಕ ನಿರ್ವಹಣೆಗೆ ಅಗತ್ಯ ಅನುದಾನ ಬಿಡುಗಡೆ ಮಾಡಿ, ತಾಂತ್ರಿಕ ದೋಷಗಳನ್ನು ಸರಿಪಡಿಸಿ, ನದಿಗಳ ಮಾಲಿನ್ಯ ತಡೆಗೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಭರತ್ ಶೆಟ್ಟಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಶಿಮಂತೂರು ದೇವಳ: ಬ್ರಹ್ಮಕಲಶೋತ್ಸವ ದಿನಾಚರಣೆ ಇಂದು

ಮೂಲ್ಕಿ: ಮೂಲ್ಕಿ ಸಮೀಪದ ಶಿಮಂತೂರು ಶ್ರೀ ಆದಿ ಜನಾರ್ಧನ ದೇವಸ್ಥಾನದಲ್ಲಿ ಮೇ 9ರಂದು ಬ್ರಹ್ಮಕಲಶೋತ್ಸವ ದಿನಾಚರಣೆ ನಡೆಯಲಿದೆ. ಮೇ 9 ರಂದು ಶನಿವಾರ ಬೆಳಿಗ್ಗೆ 6.30ರಿಂದ ತುಲಾಭಾರ ಸೇವೆ, 8 ಗಂಟೆಗೆ 108 ತೆಂಗಿನಕಾಯಿಗಳ ಗಣಯಾಗ, ಮಧ್ಯಾಹ್ನ ಮಹಾಪೂಜೆ, ಮಹಾ ಅನ್ನಸಂತರ್ಪಣೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

10ರಂದು ಮೋಕ್ಷಧಾಮ ಶಿಲಾನ್ಯಾಸ: ಶಿಮಂತೂರು ಶ್ರೀ ಆದಿಜನಾರ್ದನ ದೇವಸ್ಥಾನದಲ್ಲಿ ಮೇ 10 ಭಾನುವಾರ ಬೆಳಗ್ಗೆ 7 ಗಂಟೆಗೆ ಕ್ಷೇತ್ರದ ತಂತ್ರಿಗಳಾದ ವೇದವ್ಯಾಸ ತಂತ್ರಿಗಳ ನೇತೃತ್ವದಲ್ಲಿ ಮೋಕ್ಷದಾಮ ಶಿಲಾನ್ಯಾಸ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕಡಂದಲೆ ಕಲ್ಲೋಳಿ ರಸ್ತೆ ದುರಸ್ತಿಗೆ ಸ್ಥಳೀಯ ನಾಗರಿಕರ ಆಗ್ರಹ

ಮೂಡುಬಿದಿರೆ: ಕಡಂದಲೆ ಗ್ರಾಮದ ಕಲ್ಲೋಳಿ ರಸ್ತೆಯು ಸಂಪೂರ್ಣವಾಗಿ ಹದಗೆಟ್ಟಿದ್ದು, ಸುಗಮ ಸಂಚಾರಕ್ಕೆ ಅಡ್ಡಿ ಉಂಟಾಗಿದ್ದು, ಸೂಕ್ತ ವ್ಯವಸ್ಥೆ ಕಲ್ಪಿಸಲು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಈ ಭಾಗದಲ್ಲಿ ನೂರಾರು ಮನೆಗಳಿದ್ದು ಸಾವಿರಾರು ಮತದಾರರಿದ್ದರೂ ರಸ್ತೆಯ ಸ್ಥಿತಿ ಶೋಚನೀಯವಾಗಿದೆ. ಇದರಿಂದಾಗಿ ಯಾವುದೇ ವಾಹನಗಳು ಈ ರಸ್ತೆಯಲ್ಲಿ ಸಂಚರಿಸಲು ಸಾಧ್ಯವಾಗುತ್ತಿಲ್ಲ. ತುರ್ತು ಸಂದರ್ಭಗಳಲ್ಲಿ ಆಟೋ ಚಾಲಕರು ಕೂಡ ಈ ಭಾಗಕ್ಕೆ ಬರಲು ನಿರಾಕರಿಸುತ್ತಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ. ಮಳೆಗಾಲ ಹತ್ತಿರ ಬರುತ್ತಿರುವುದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿ, ನೆರೆ ಹಾವಳಿ ಮರುಕಳಿಸದಂತೆ ರಸ್ತೆ ದುರಸ್ತಿಪಡಿಸಬೇಕು ಎಂದು ಒತ್ತಾಯಿಸಿ ಶಾಸಕ ಉಮಾನಾಥ ಕೋಟ್ಯಾನ್ ಅವರಿಗೆ ಮನವಿ ಸಲ್ಲಿಸಲಾಯಿತು. ಅರುಣ್ ಶೆಟ್ಟಿ, ಆತಿತ್ ಶೆಟ್ಟಿ, ಸುನಿಲ್ ಪೂಜಾರಿ, ಸಂತೋಷ ಶೆಟ್ಟಿಗಾರ್, ನಾಗೇಶ್ ಶೆಟ್ಟಿಗಾರ್, ಅಶ್ವಥ್ ಪೂಜಾರಿ, ಸಂದೀಪ್ ಪೂಜಾರಿ, ಭರತ್ ಶೆಟ್ಟಿ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ನೆರೆ ಸಂಭಾವ್ಯ ಪ್ರದೇಶಗಳಲ್ಲಿ ಮುನ್ನೆಚ್ಚರಿಕೆಗೆ ಸಚಿವ ಸೂಚನೆ

ಮಳೆಗಾಲ ಪೂರ್ವ ಸಿದ್ಧತಾ ಸಭೆಯಲ್ಲಿ ದ.ಕ. ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಭಾಗಿ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮುಂಬರುವ ಮಳೆಗಾಲದಲ್ಲಿ ನೆರೆ ಮತ್ತು ನೀರು ನಿಲ್ಲಬಹುದಾದ ಪ್ರದೇಶಗಳನ್ನು ಮೊದಲೇ ಗುರುತಿಸಿ ಅಗತ್ಯ ಮುನ್ನೆಚ್ಚರಿಕೆ ವಹಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಳೆಗಾಲ ಪೂರ್ವ ಸಿದ್ಧತೆ ಬಗ್ಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಳೆದ ವರ್ಷ ನೆರೆ ಬಂದ ಪ್ರದೇಶಗಳು ಹಾಗೂ ಭೂಕುಸಿತವಾದ ಜನವಸತಿ ಪ್ರದೇಶಗಳಿಗೆ ಅಧಿಕಾರಿಗಳು ತಕ್ಷಣವೇ ಭೇಟಿ ನೀಡಿ ದುರಂತ, ಅಪಾಯ ತಡೆಯಲು ಈಗಿಂದಲೇ ಕ್ರಮವಹಿಸಬೇಕು. ಚರಂಡಿ, ರಾಜಕಾಲುವೆಗಳ ಹೂಳೆತ್ತುವ ಕಾರ್ಯವನ್ನು ತ್ವರಿತಗೊಳಿಸಬೇಕು.



ಮಳೆಗಾಲ ಪೂರ್ವ ಸಿದ್ಧತೆ ಸಭೆ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಂಬಂಧ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ಹೆಚ್.ವಿ. ದರ್ಶನ್ ಮಾತನಾಡಿ, ಚರಂಡಿ ಮತ್ತು ರಾಜಕಾಲುವೆಗಳ ಹೂಳೆತ್ತುವ ಕಾರ್ಯ ಪ್ರಗತಿಯಲ್ಲಿದೆ. ಸಮುದ್ರ ಕೊರೆತ ಉಂಟಾಗಬಹುದಾದ 8 ಪ್ರದೇಶಗಳನ್ನು ಗುರುತಿಸಿ ಅಪಾಯದ ಪ್ರಮಾಣವನ್ನು ತಗ್ಗಿಸಲು ಕ್ರಮವಹಿಸಲಾಗಿದೆ. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ತುರ್ತು ವಿಪತ್ತು ನಿರ್ವಹಣೆಗೆ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ನಿಯಂತ್ರಣ ಕೊಠಡಿಗಳನ್ನು ತೆರೆಯಲಾಗಿದೆ ಎಂದು ಹೇಳಿದರು.

■ ಮುಂಬರುವ ಮಳೆಗಾಲದಲ್ಲಿ ನೆರೆ ಮತ್ತು ನೀರು ನಿಲ್ಲಬಹುದಾದ ಪ್ರದೇಶಗಳನ್ನು ಮೊದಲೇ ಗುರುತಿಸಿ ಅಗತ್ಯ ಮುನ್ನೆಚ್ಚರಿಕೆ ವಹಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸೂಚಿಸಿದರು.

ಮಂಗಳೂರಿನಲ್ಲಿ ಎಸ್.ಡಿ.ಆರ್.ಎಫ್ ತಂಡ ಈಗಾಗಲೇ ಕಾರ್ಯನಿರ್ವಹಿಸುತ್ತಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ (ಎನ್.ಡಿ.ಆರ್.ಎಫ್) ಮೇ ಅಂತ್ಯಕ್ಕೆ ಆಗಮಿಸುವ ಸಾಧ್ಯತೆ ಇದೆ ಎಂದು ಅವರು ಹೇಳಿದರು.

ಸಂಭವನೀಯ ಪ್ರವಾಹ ಪೀಡಿತ 92 ಪ್ರದೇಶಗಳನ್ನು ಹಾಗೂ ಭೂ ಕುಸಿತ ಉಂಟಾಗಬಹುದಾದ 88 ಸ್ಥಳಗಳನ್ನು ಗುರುತಿಸಿ ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ನೀಡಲಾಗುತ್ತಿದೆ. ಮಂಗಳೂರು ನಗರದಲ್ಲಿ ರಾಜಕಾಲುವೆಗಳ ಬೃಹತ್ ಚರಂಡಿಗಳ ಹೂಳನ್ನು ಜೆಸಿಬಿ ಮೂಲಕ ತೆಗೆಯಲಾಗುತ್ತಿದ್ದು, ಈಗಾಗಲೇ ಬಹುತೇಕ ರಾಜಕಾಲುವೆಗಳ ಹೂಳು ತೆಗೆಯಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ದ.ಕ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ್ ಕಾರ್ಬಾರಿ, ಪೊಲೀಸ್ ಅಧೀಕ್ಷಕ ಡಾ. ಅರುಣ್ ಕೆ, ಡಿ.ಸಿ.ಎಫ್. ರವಿಶಂಕರ್, ಮಂಗಳೂರು ಉಪವಿಭಾಗಾಧಿಕಾರಿ ಮೀನಾಕ್ಷಿ ಆರ್ಯ ಮತ್ತಿತರರು ಇದ್ದರು.

ಖನಿಜ ಪ್ರತಿಷ್ಠಾನ ನಿಧಿ ಬಳಕೆ ಚರ್ಚಿಸಲು ಶೀಘ್ರ ಸಭೆ: ದಿನೇಶ್ ಗುಂಡೂರಾವ್

ದ.ಕ. ಡಿಸಿ ಕಚೇರಿಯಲ್ಲಿ ಖನಿಜ ಪ್ರತಿಷ್ಠಾನ ನಿಧಿ ಬಳಕೆ ಬಗ್ಗೆ ಸಭೆ



ಮಂಗಳೂರು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿಯಲ್ಲಿ ಖನಿಜ ಪ್ರತಿಷ್ಠಾನ ನಿಧಿ ಬಳಕೆಯ ಬಗ್ಗೆ ಸಭೆ ನಡೆಯಿತು.

• **ಕನ್ನಡಪ್ರಭ ವಾರ್ತೆ** ಮಂಗಳೂರು

ಗಣಿಗಾರಿಕೆಯಿಂದ ಹಾನಿಯಾದ ಪ್ರದೇಶಗಳ ಸುಧಾರಣೆ ಮತ್ತು ಸಂತ್ರಸ್ತರ ಉಪಯೋಗಕ್ಕಾಗಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯ ಬಳಕೆಯ ಬಗ್ಗೆ ಚರ್ಚಿಸಲು ಶೀಘ್ರದಲ್ಲೇ ಜಿಲ್ಲೆಯ ಶಾಸಕರೊಂದಿಗೆ ಸಭೆ ನಡೆಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಅವರು ಶುಕ್ರವಾರ ದ.ಕ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯ ಬಳಕೆಯ ಬಗ್ಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕ್ರಷರ್, ಕಲ್ಲು ಗಣಿಗಾರಿಕೆ, ಮರಳುಗಾರಿಕೆ ಸೇರಿದಂತೆ ವಿವಿಧ ಗಣಿಗಾರಿಕೆಗಳಿಂದ ತೊಂದರೆಗೀಡಾದ ಪ್ರದೇಶಗಳಲ್ಲಿ ರಸ್ತೆ, ಶಾಲೆ ಮತ್ತು ಅಂಗನವಾಡಿ ಕಟ್ಟಡ ಸೇರಿದಂತೆ ಮೂಲ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯಲ್ಲಿ ಅವಕಾಶವಿದೆ. 2015ರಿಂದ ಇದುವರೆಗೆ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯಲ್ಲಿ 47.62 ಕೋಟಿ ರು. ಮೊತ್ತ ಸಂಗ್ರಹವಾಗಿದೆ. ಗಣಿಗಾರಿಕೆ ರಾಯಲ್ಟಿಯ ಶೇ. 10ರಷ್ಟನ್ನು ಖನಿಜ ಪ್ರತಿಷ್ಠಾನ ನಿಧಿಗೆ ಸಂಗ್ರಹಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಜಿಲ್ಲೆಯ ಶಾಸಕರೊಂದಿಗೆ ಅತಿ ಶೀಘ್ರವೇ ಸಭೆ ನಡೆಸಿ ಈ ಮೊತ್ತವನ್ನು ಸದ್ಬಳಕೆ ಮಾಡಲು ಚರ್ಚಿಸಲಾಗುವುದು ಎಂದು ತಿಳಿಸಿದರು.

■ ಗಣಿಗಾರಿಕೆಯಿಂದ ಹಾನಿಯಾದ ಪ್ರದೇಶಗಳ ಸುಧಾರಣೆ ಮತ್ತು ಸಂತ್ರಸ್ತರ ಉಪಯೋಗಕ್ಕಾಗಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯ ಬಳಕೆಯ ಬಗ್ಗೆ ಚರ್ಚಿಸಲು ಶೀಘ್ರದಲ್ಲೇ ಜಿಲ್ಲೆಯ ಶಾಸಕರೊಂದಿಗೆ ಸಭೆ ನಡೆಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ. ಮಾತನಾಡಿ, ಗಣಿಗಾರಿಕೆ ಪ್ರದೇಶದ 5 ಕಿ.ಮೀ. ವ್ಯಾಪ್ತಿಯ ಪ್ರದೇಶದಲ್ಲಿ ಹಾನಿಯಾದ ಪ್ರದೇಶಗಳನ್ನು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಈ ನಿಧಿಯಲ್ಲಿ ಅವಕಾಶವಿದೆ. ಈಗಾಗಲೇ 342 ಲಕ್ಷ ರು. ವೆಚ್ಚದಲ್ಲಿ 57 ವಿವಿಧ ಕಾಮಗಾರಿಗಳು ಈ ನಿಧಿಯಲ್ಲಿ ಪೂರ್ಣಗೊಂಡಿದೆ. ಕೋವಿಡ್ ಸಂದರ್ಭದಲ್ಲಿ ವಿವಿಧ ಆರೋಗ್ಯ ಸೌಲಭ್ಯಗಳಿಗಾಗಿ ಖನಿಜ ಪ್ರತಿಷ್ಠಾನ ನಿಧಿಯಲ್ಲಿ 1.59 ಕೋಟಿ ರು. ವೆಚ್ಚ ಮಾಡಲಾಗಿದೆ ಎಂದರು.

ನಗರ ಪೊಲೀಸ್ ಆಯುಕ್ತ ಸುಧೀರ್‌ಕುಮಾರ್‌ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ ಕಾರ್ಬಾರಿ, ಪೊಲೀಸ್ ಅಧೀಕ್ಷಕ ಡಾ.ಅರುಣ್ ಕೆ, ಗಣಿ ಇಲಾಖೆ ಉಪನಿರ್ದೇಶಕ ಸಂದೀಪ್, ಮಂಗಳೂರು ಉಪವಿಭಾಗಾಧಿಕಾರಿ ಮೀನಾಕ್ಷಿ ಆರ್ಯ ಮತ್ತಿತರರು ಇದ್ದರು.

ವಿದ್ಯಾರ್ಥಿಗಳು ಮನೆಯಲ್ಲೇ ಉಳಿದು ಪರೀಕ್ಷೆಗಳಿಗೆ ತಯಾರಿ

ಮಂಗಳೂರು: ಸಿಎಫ್‌ಎಲ್ ಸಂಸ್ಥೆ 25 ಮಂದಿ 99 ಪರ್ಸೆಂಟೈಲ್ ಮೀರಿದ ಸಾಧನೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಭಾರತದ ಪ್ರಮುಖ ಇಂಜಿನಿಯರಿಂಗ್ ಸಂಸ್ಥೆಗಳಾದ ಐಐಟಿ, ಎನ್‌ಐಟಿ, ಐಐಐಟಿ ಗಳಿಗೆ ಪ್ರವೇಶ ಪಡೆಯಲು ಅಗತ್ಯವಾದ ಸ್ಪರ್ಧಾತ್ಮಕ ತರಬೇತಿ ನೀಡುವ ಮಂಗಳೂರಿನ ಸಿಎಫ್‌ಎಲ್ ಸಂಸ್ಥೆಯ 25 ವಿದ್ಯಾರ್ಥಿಗಳು ಜೆಇಇ ಮೈನ್ 2026ರಲ್ಲಿ 99 ಪರ್ಸೆಂಟೈಲ್ ಮೀರಿದ್ದಾರೆ. 4 ಮಂದಿ ಶೇ. 99.9 ಮೇಲ್ಪಟ್ಟು, 13 ಮಂದಿ ಶೇ.99. ಮೇಲ್ಪಟ್ಟು, 25 ಮಂದಿ 99% ಮೇಲ್ಪಟ್ಟು, 52 ಮಂದಿ ಶೇ.97 ಮೇಲ್ಪಟ್ಟು ರಾಷ್ಟ್ರೀಯ ಸರಾಸರಿಗಿಂತ ಸುಮಾರು 10 ಪಟ್ಟು ಹೆಚ್ಚು ಸಾಧನೆ ಮಾಡಿದ್ದಾರೆ.2026ರ ಜೆಇಇ ಮೈನ್ ಪರೀಕ್ಷೆಯಲ್ಲಿ ಸಿಎಫ್‌ಎಲ್‌ನ 25 ವಿದ್ಯಾರ್ಥಿಗಳು 99 ಪರ್ಸೆಂಟೈಲ್ ಮೀರಿದ್ದು, ದೇಶದ ಸುಮಾರು 13 ಲಕ್ಷ ವಿದ್ಯಾರ್ಥಿಗಳಲ್ಲಿ ಟಾಪ್ 13,000ರಲ್ಲಿ ಸ್ಥಾನ ಪಡೆದಿದ್ದಾರೆ. ಇವರಲ್ಲಿ 4 ಮಂದಿ 99.9 ಪರ್ಸೆಂಟೈಲ್ ಮೀರಿಸಿ ಟಾಪ್ 1,300ರಲ್ಲಿ ಸ್ಥಾನ ಗಳಿಸಿದ್ದಾರೆ. ಈ ಸಾಧನೆ ಸಂಸ್ಥೆಯನ್ನು ಇನ್ನಷ್ಟು ಉನ್ನತ ಶಿಖರಕ್ಕೆ ಏರಿಸಿದೆ. ಉತ್ತಮ ಕೋಚಿಂಗ್ ಪಡೆಯಲು





ಕೋಟಾ, ಹೈದರಾಬಾದ್ ಅಥವಾ ಬೆಂಗಳೂರು ಹೋಗಬೇಕೆಂಬ ಕಲ್ಪನೆ ಈಗ ಅಗತ್ಯವಿಲ್ಲ. ಅದೇ ಮಟ್ಟದ ತರಬೇತಿ ನಮ್ಮ ಮಂಗಳೂರಿನಲ್ಲೇ ಸಿಎಫ್‌ಎಲ್ ಮೂಲಕ ಲಭ್ಯವಾಗಿದೆ. ಈ ವಿದ್ಯಾರ್ಥಿಗಳು ತಮ್ಮ ಮನೆಯಲ್ಲೇ ಉಳಿದುಕೊಂಡು ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಿರುವುದು ವಿಶೇಷ.

ಅಬ್ಧಿ ಸನ್ನಯ್ಯ (99.96), ಆದಿತ್ಯ ರಾವ್ (99.95), ರಿಶೋನ್ ಫರ್ನಾಂಡಿಸ್ (99.93), ಮೃಣಾಲ್ ಡಿ.ಭಟ್ (99.90), ಲಾರೆನ್ ಮೇರಿಯನ್ ಪಟ್ರಾವ್ (99.89) ಅಂಕಗಳನ್ನು ಪಡೆದಿದ್ದಾರೆ. ಭುವನ್ ಶೆಟ್ಟಿ, ರಿಶಿತ್ ಪಿ, ಮೀನಾಕ್ಷಿ ಉನ್ನಿಥನ್, ರಿಶಾಭ್ ನಾಯಕ್, ಮೊಹಕ್ ಎಸ್ ರಾಜ್, ಅಕ್ಷಿತ್ ರಾಮ್ ಕೆ, ಸನತ್ ಸಂಜಯ್ ಶೆಟ್, ಇರಾ ಜೈನ್, ನಿರೀಕ್ಷಾ ಎನ್, ಸ್ವಾಗತ್ ಶೆಟ್ಟಿ ಮೊದಲಾದವರು ಉತ್ತಮ ಸಾಧನೆ ಮಾಡಿದ್ದಾರೆ. 40 ಮಂದಿ ಶೇ.98 ಮೇಲ್ಪಟ್ಟು, 52 ಮಂದಿ ಶೇ.97 ಮೇಲ್ಪಟ್ಟು ಫಲಿತಾಂಶದೊಂದಿಗೆ ಸಾಧನೆ ಮಾಡಿದ್ದಾರೆ ಎಂದು ಸಂಸ್ಥೆ ತಿಳಿಸಿದೆ.

ಎಸ್.ಕೆ.ಗೋಲ್ಡ್‌ಸ್ಮಿತ್ಸ್ ಸೊಸೈಟಿಗೆ ಡಾ.ಕೆ.ಎಸ್. ರಾಜಣ್ಣ ಭೇಟಿ



ಎಸ್.ಕೆ.ಗೋಲ್ಡ್‌ಸ್ಮಿತ್ಸ್ ಸೊಸೈಟಿಗೆ ಭೇಟಿ ನೀಡಿದ 2024ರಲ್ಲಿ ಪದ್ಮಶ್ರೀ ಪುರಸ್ಕೃತ ಡಾ.ಕೆ.ಎಸ್. ರಾಜಣ್ಣ.

• **ಕನ್ನಡಪ್ರಭ ವಾರ್ತೆ** ಮಂಗಳೂರು

ಎಸ್.ಕೆ.ಗೋಲ್ಡ್‌ಸ್ಮಿತ್ಸ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ ಲಿ. ಮಂಗಳೂರು ಇದರ ಆಡಳಿತ ಕಚೇರಿ 'ವಿಶ್ವಸೌಧ'ಕ್ಕೆ ಜನಪರ ಸೇವಾ ವಿಶ್ವರೂಪಿ ಸಾಧಕ, ರಾಜ್ಯ ಮತ್ತು ರಾಷ್ಟ್ರದ ಮೊಟ್ಟ ಮೊದಲ ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995 ರ ರಾಜ್ಯ ಆಯುಕ್ತರಾಗಿ ಸೇವೆ ಸಲ್ಲಿಸಿದ, 2024ರಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಕೆ. ಎಸ್. ರಾಜಣ್ಣ ಭೇಟಿ ನೀಡಿದರು.

ಅಧ್ಯಕ್ಷ ಪಿ. ಉಪೇಂದ್ರ ಆಚಾರ್ಯ, ಉಪಾಧ್ಯಕ್ಷ ಎ. ಆನಂದ ಆಚಾರ್ಯ, ಪ್ರಧಾನ ವ್ಯವಸ್ಥಾಪಕ ಯಜ್ಞೇಶ್ವರ, ನಿರ್ದೇಶಕರಾದ ಕೆ. ಯಜ್ಞೇಶ್ವರ ಆಚಾರ್ಯ, ವೈ.ವಿ. ವಿಶ್ವಜ್ಞಮೂರ್ತಿ, ವಿ.ಜಯ ಆಚಾರ್ ಉಪಸ್ಥಿತಿಯಲ್ಲಿ ಗೌರವ ಪೂರ್ವಕವಾಗಿ ಅಭಿನಂದಿಸಲಾಯಿತು.

ಡಾ. ಕೆ. ಎಸ್. ರಾಜಣ್ಣ ಸಂಸ್ಥೆಯ ವಜ್ರಮಹೋತ್ಸವದ ಪ್ರಯುಕ್ತ ಆಯೋಜಿಸಿರುವ 60 ಸಾಮಾಜಿಕ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ ಪ್ರಶಂಸಿಸಿ ಶುಭ ಹಾರೈಸಿದರು ಮತ್ತು ಸಂಸ್ಥೆಯ ಕಾರ್ಯವೈಖರಿಯನ್ನು ಶ್ಲಾಘಿಸಿದರು.

ತಪಾಸಣಾ ಅವಕಾಶ | ಡಯಗ್ನೋಸ್ಟಿಕ್ ಜಾಲ ವಿಸ್ತರಣೆ | ದಿನಪೂರ್ತಿ ಇಲ್ಲಿ ಸೇವೆ ಲಭ್ಯ

ಪುತ್ತೂರು ಮಹಾವೀರ ಮೆಡಿಕಲ್ ಸೆಂಟರ್‌ನಲ್ಲಿ ಕೆಎಂಸಿ ಲ್ಯಾಬ್

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮಂಗಳೂರಿನ ಕೆಎಂಸಿ ಆಸ್ಪತ್ರೆ ತನ್ನ ವಿಶ್ವಾಸಾರ್ಹ ಡಯಗ್ನೋಸ್ಟಿಕ್ ಜಾಲವನ್ನು ಮತ್ತಷ್ಟು ವಿಸ್ತರಿಸಿ, ಪುತ್ತೂರಿನ ಮಹಾವೀರ ಮೆಡಿಕಲ್ ಸೆಂಟರ್‌ನಲ್ಲಿ ಕೆಎಂಸಿ ಲ್ಯಾಬೋರೇಟರಿ ಸೇವೆಗಳನ್ನು ಪ್ರಾರಂಭಿಸಿದೆ.

ಇದರ ಮೂಲಕ ಆಧುನಿಕ ಪ್ರಯೋಗಾಲಯ ಪರೀಕ್ಷೆಗಳು ಹಾಗೂ ತಜ್ಞರ ಡಯಗ್ನೋಸ್ಟಿಕ್ ಸೇವೆಗಳು ಸ್ಥಳೀಯ ಸಮುದಾಯಕ್ಕೆ ಇನ್ನಷ್ಟು ಸಮೀಪವಾಗಲಿವೆ. ಈ ಹೊಸ ಕೇಂದ್ರ ಪುತ್ತೂರು ಮತ್ತು ಸುತ್ತಮುತ್ತಲಿನ ಪ್ರದೇಶದ ಜನರಿಗೆ ಸುಲಭವಾಗಿ, ಸಮಯೋಚಿತವಾಗಿ ಮತ್ತು ಉನ್ನತ ಮಟ್ಟದ ಗುಣಮಟ್ಟದ ಡಯಗ್ನೋಸ್ಟಿಕ್ ಸೇವೆಗಳನ್ನು ಒದಗಿಸಲಿದೆ. ಇದು ಮೂರು ದಶಕಗಳಿಗಿಂತ ಹೆಚ್ಚು ಆರೋಗ್ಯ ಸೇವಾ ಅನುಭವದ ಬೆಂಬಲ ಹೊಂದಿದೆ.

ಮಹಾವೀರ ಮೆಡಿಕಲ್ ಸೆಂಟರ್‌ನ ಎಂ.ಡಿ ಡಾ.ಅಶೋಕ್ ಪಡಿವಾಳ್ ಮಾತನಾಡಿ, ಪುತ್ತೂರಿನ ಜನರಿಗೆ 28 ವರ್ಷಗಳಿಂದ ಗುಣಮಟ್ಟದ ಆರೋಗ್ಯ ಸೇವೆ ನೀಡುತ್ತಿರುವ ಈ ಸಂದರ್ಭದಲ್ಲಿ, ಮಹಾವೀರ ಹೆಲ್ತ್‌ಕೇರ್‌ಸೆಂಟರ್‌ತನ್ನ ಸೇವೆಗೆ ಮತ್ತೊಂದು ಗರಿಮೆಯನ್ನು ಸೇರಿಸಿಕೊಂಡಿದ್ದು, ತನ್ನ ಆವರಣದಲ್ಲಿ ಲ್ಯಾಬ್ ಸೆಂಟರ್‌ಆರಂಭಿಸಲು ಕೆಎಂಸಿ ಆಸ್ಪತ್ರೆ ಮಂಗಳೂರಿನೊಂದಿಗೆ ಸಹಭಾಗಿತ್ವ ಮಾಡಿಕೊಂಡಿದೆ ಎಂದರು.

ಡಾ.ಸುರೇಶ್ ಪುತ್ತೂರಾಯ, ಡಾ. ರಾಜೇಶ್ವರಿ ಪಡಿವಾಳ್, ಡಾ. ಪ್ರದೀಪ್, ಡಾ. ನಾಗಶ್ರೀ, ಡಾ. ಅರ್ಚನಾ, ಡಾ. ಸಚಿನ್ ಅವರಂತಹ ಹಿರಿಯ ವೈದ್ಯರು ರೋಗಿಗಳ ಜೀವ ಉಳಿಸುವುದರ ಜೊತೆಗೆ ಅವರ ಜೀವನಮಟ್ಟವನ್ನು ಉತ್ತಮಗೊಳಿಸಲು ಸಮರ್ಪಿತರಾಗಿದ್ದಾರೆ. ಜನರಲ್ ಮೆಡಿಸಿನ್, ಆರ್ಥೋಪೆಡಿಕ್ಸ್, ಗೈನಕಾಲಜಿ, ಇಎನ್‌ಟಿ ಹಾಗೂ ಡಯಾಲಿಸಿಸ್ ಸೇರಿದಂತೆ ವ್ಯಾಪಕವಾದ ಓಪಿ ಮತ್ತು ಐಪಿ ಸೇವೆಗಳ ಜೊತೆಗೆ, 28ನೇ ವಾರ್ಷಿಕೋತ್ಸವದ ಅಂಗವಾಗಿ ಡಾ. ಆಶಾ ಪುತ್ತೂರಾಯ ಅವರ ಪರಿಣತಿಯೊಂದಿಗೆ ನೇತ್ರ ಚಿಕಿತ್ಸಾ ಸೇವೆಯನ್ನೂ ಆರಂಭಿಸಲಾಗಿದೆ. ಇದರ ಮೂಲಕ ಪುತ್ತೂರಿನ ಜನರಿಗೆ ಸಮಗ್ರ ಗುಣಮಟ್ಟದ ಆರೋಗ್ಯ ಸೇವೆಯನ್ನು ಒದಗಿಸಲಾಗುತ್ತಿದೆ ಎಂದರು.

ಕೆಎಂಸಿ ಆಸ್ಪತ್ರೆ ಮಂಗಳೂರಿನ ಕ್ಲಸ್ಟರ್ ಡೈರೆಕ್ಟರ್ ಪ್ರಮೋದ್ ಕುಂದರ್ ಮಾತನಾಡಿ, ವಿಶ್ವಾಸಾರ್ಹ ಡಯಗ್ನೋಸ್ಟಿಕ್ ಸೇವೆಗಳನ್ನು ಸಮುದಾಯದ ಇನ್ನಷ್ಟು ಹತ್ತಿರಕ್ಕೆ ತರುತ್ತಿದ್ದೇವೆ. ಜನರು ದೂರ ಪ್ರಯಾಣಿಸುವ ತೊಂದರೆ ಇಲ್ಲದೆ ಗುಣಮಟ್ಟದ ಲ್ಯಾಬ್ ಸೇವೆಗಳನ್ನು ಪಡೆಯುವಂತೆ ಮಾಡುವುದೇ ನಮ್ಮ ಉದ್ದೇಶ. ಜೊತೆಗೆ ನಿಖರತೆ ಮತ್ತು ರೋಗಿ ಆರೈಕೆಯಲ್ಲಿ ನಮ್ಮೊಂದಿಗೆ ಸಂಬಂಧಿಸಿದ ಅತ್ಯುನ್ನತ ಮಾನದಂಡಗಳನ್ನು ನಾವು ಕಾಪಾಡಿಕೊಳ್ಳುತ್ತಿದ್ದೇವೆ ಎಂದರು.



ಪುತ್ತೂರಿನ ಮಹಾವೀರ ಮೆಡಿಕಲ್ ಸೆಂಟರ್‌ನಲ್ಲಿ ಪ್ರಯೋಗಾಲಯ ಸೇವೆ.

ಸಮಗ್ರ ಪರೀಕ್ಷಾ ಕೇಂದ್ರ

ಮಹಾವೀರ ಮೆಡಿಕಲ್ ಸೆಂಟರ್‌ನ ಕೆಎಂಸಿ ಲ್ಯಾಬೋರೇಟರಿ ಸೇವೆಗಳು ಅರ್ಹ ಲ್ಯಾಬ್ ತಜ್ಞರ ಬೆಂಬಲದೊಂದಿಗೆ ಸಮಗ್ರ ಪರೀಕ್ಷಾ ಸೇವೆಗಳನ್ನು ಒದಗಿಸಲಿವೆ. ರೋಗಿಗಳು 24/7 ಲ್ಯಾಬ್ ಸಹಾಯ, ನೋಂದಾಯಿತ ವಾಟ್ಸಾಪ್ ಸಂಖ್ಯೆಗೆ ನೇರವಾಗಿ ವರದಿಗಳನ್ನು ಪಡೆಯುವ ಸೌಲಭ್ಯ ಹಾಗೂ ಕೆಎಂಸಿ ಲ್ಯಾಬೋರೇಟರಿ ಸೇವೆಗಳ ಎನ್‌ಎಬಿಎಲ್ ಮಾನ್ಯತೆ ಪಡೆದ ಮಂಗಳೂರು ಸೌಲಭ್ಯಗಳಿಂದ ಬೆಂಬಲಿತ ಪರೀಕ್ಷಾ ಮಾನದಂಡಗಳ ಪ್ರಯೋಜನ ಪಡೆಯಲಿದ್ದಾರೆ.

ಪರಿಸರ ಸಂರಕ್ಷಣೆ ಎಲ್ಲರ ಜವಾಬ್ದಾರಿ: ಡಾ.ಚೂಂತಾರು

• **ಕನ್ನಡಪ್ರಭ ವಾರ್ತೆ** ಮಂಗಳೂರು

ವನಮಹೋತ್ಸವ ಕೇವಲ ಒಂದು ದಿನಕ್ಕೆ ಸೀಮಿತವಾಗಬಾರದು. ಗಿಡ ನೆಟ್ಟು ಪೋಷಿಸಿ ಪರಿಸರ ಉಳಿಸಲು ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಹಸಿರು ಇದ್ದರೆ ಉಸಿರು. ಹಸಿರು ಇಲ್ಲವಾದಲ್ಲಿ ಜೀವನ ದುಸ್ತರವಾಗಬಹುದು ಎಂದು ದ.ಕ. ಜಿಲ್ಲಾ ರೆಡ್ ಕ್ರಾಸ್ ಸಂಸ್ಥೆಯ ಮಾಜಿ ಸಭಾಪತಿ ಡಾ. ಮುರಲಿ ಮೋಹನ್ ಚೂಂತಾರು ಹೇಳಿದರು. ರೋಟರಿ ಕ್ಲಬ್ ಮಂಗಳೂರು ಹಿಲ್ ಸೈಡ್ ಮತ್ತು ಲಯನ್ಸ್ ಕ್ಲಬ್ ಮಂಗಳೂರು ಅಶೋಕ ನಗರ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ರೆಡ್ ಕ್ರಾಸ್ ದಿನಾಚರಣೆ ಅಂಗವಾಗಿ ವನಮಹೋತ್ಸವ ಕಾರ್ಯಕ್ರಮ ಶುಕ್ರವಾರ ಲಯನ್ ಅಶೋಕ ಸೇವಾ ಮಂದಿರದ ಆವರಣದಲ್ಲಿ ನಡೆಯಿತು.



ಅಂತಾರಾಷ್ಟ್ರೀಯ ರೆಡ್ ಕ್ರಾಸ್ ದಿನಾಚರಣೆ ಅಂಗವಾಗಿ ಗಿಡ ನಾಟಿ ನಡೆಯಿತು.

ಲಯನ್ ಅಶೋಕ ಸೇವಾ ಮಂದಿರದ ಟ್ರಸ್ಟಿ ಲಯನ್ ಡಾ.ನವೀನ್ ಶೆಟ್ಟಿ, ರೋಟರಿ ಕ್ಲಬ್ ಹಿಲ್ ಸೈಡ್ ಅಧ್ಯಕ್ಷ ಪೀಟರ್‌ಆಂಟೋನಿ ಪಿಂಟೋ, ಕಾರ್ಯದರ್ಶಿ ವಾಸುದೇವ ಶೆಟ್ಟಿಗಾರ್, ರೆಡ್ ಕ್ರಾಸ್ ಸದಸ್ಯ ಅಜಯ್ ಇದ್ದರು. ಸುಮಾರು 10 ಹಣ್ಣಿನ ಗಿಡಗಳನ್ನು ನೆಡಲಾಯಿತು.

ಮಹಾರುದ್ರ ಯಾಗಕ್ಕೆ ಡಿ.ಕೆ.ಶಿವಕುಮಾರ್‌ಗೆ ಆಹ್ವಾನ

• **ಕನ್ನಡಪ್ರಭ ವಾರ್ತೆ** ಉಡುಪಿ

ಇಲ್ಲಿನ ಕೊಡವೂರು ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಪ್ರಸಾದ್ ರಾಜ್ ಕಾಂಚನ್ ನೇತೃತ್ವದಲ್ಲಿ ನಡೆಯಲಿರುವ ಮಹಾರುದ್ರ ಯಾಗಕ್ಕೆ ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಅವರಿಗೆ ಬೆಂಗಳೂರಿನಲ್ಲಿ ಆಮಂತ್ರಣ ಪತ್ರಿಕೆ ನೀಡಿ ಅಹ್ವಾನಿಸಲಾಯಿತು.

ಈ ಮಹಾ ಯಾಗದ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಭಾ ಕಾರ್ಯಕ್ರಮಗಳ ಉದ್ಘಾಟನೆಗೆ ರಾಜ್ಯ ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವ ರಾಮಲಿಂಗ ರೆಡ್ಡಿ ಅವರಿಗೆ, ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ವಿಧಾನ ಪರಿಷತ್ ಸದಸ್ಯೆ ಆರತಿಕೃಷ್ಣ ಮತ್ತು ಇತರ ಗಣ್ಯರನ್ನು ಮಹಾರುದ್ರ ಯಾಗ ಸಮಿತಿ ಸೇವಾಕರ್ತರು, ಮಹಾರುದ್ರ ಯಾಗ ಸಮಿತಿ ಕಾರ್ಯಾಧ್ಯಕ್ಷರು ಆಗಿರುವ ಪ್ರಸಾದ್ ರಾಜ್ ಕಾಂಚನ್ ಆಮಂತ್ರಣಪತ್ರಿಕೆ ನೀಡಿ ಅಹ್ವಾನಿಸಿದರು.



ಮಹಾರುದ್ರ ಯಾಗಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬೆಂಗಳೂರಿನಲ್ಲಿ ಆಮಂತ್ರಣ ಪತ್ರಿಕೆ ನೀಡಿ ಆಹ್ವಾನಿಸಲಾಯಿತು.

ಮಹಾರುದ್ರ ಯಾಗ ಸಮಿತಿ ಪ್ರಧಾನ ಸಂಚಾಲಕ ಕೃಷ್ಣಮೂರ್ತಿ ಆಚಾರ್ಯ ಕಿನ್ನಿಮುಲ್ಕಿ, ತಾರನಾಥ ಪೂಜಾರಿ ಉಪಸ್ಥಿತರಿದ್ದರು.

ಸುದ್ದಿ ಸಿಂಚನ

ಹೃದಯಾಘಾತ: ಬೆಳ್ತಂಗಡಿ ಯುವಕ ಸಾವು



ಬೆಳ್ತಂಗಡಿ: ಮುಂಡಾಜೆ ಗ್ರಾಮದ ಸೋಮಂತಡ್ಕದ ಅಗರಿ ರಸ್ತೆ ನಿವಾಸಿ ಪ್ರವೀಣ್ ಕುಮಾರ್ ಎಸ್. (35) ಹೃದಯಾಘಾತದಿಂದ ಮೇ 8ರಂದು ನಿಧನರಾದರು. ಬೆಳಿಗ್ಗೆ ಜಾವ ಅವರಿಗೆ ಮನೆಯಲ್ಲಿ ಎದೆನೋವು ಕಾಣಿಸಿಕೊಂಡಿದ್ದು, ಬಳಿಕ ಬೆಳ್ತಂಗಡಿ ಸರಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಅವರು ಚಿಕಿತ್ಸೆ ಸ್ಪಂದಿಸದೆ ನಿಧನರಾದರು. ಕಂಪನಿಯೊಂದರ ಉದ್ಯೋಗಿಯಾಗಿದ್ದ ಅವರು ಪ್ರಸ್ತುತ ಮನೆಯಿಂದಲೇ ಕಾರ್ಯನಿರ್ವಹಿಸುತ್ತಿದ್ದರು. ಅವರಿಗೆ ತಾಯಿ, ಪತ್ನಿ ಹಾಗೂ ಪುತ್ರ ಇದ್ದಾರೆ.

ಅವಹೇಳನಕಾರಿ ಪೋಸ್ಟ್: ಪುತ್ತೂರಲ್ಲಿ ದೂರು

ಪುತ್ತೂರು: ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ರಂಗ ಕಲಾವಿದ ಸುಂದರ್‌ರೈ ಮಂದಾರ ಹಾಗೂ ಅವರ ಕುಟುಂಬದ ವಿರುದ್ಧ ಅವಹೇಳನಕಾರಿ ಪೋಸ್ಟ್‌ಗಳನ್ನು ಹಾಕಿ ಬೆದರಿಕೆಯೊಡ್ಡಿರುವ ಕುರಿತಂತೆ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮಹೇಶ್ ಶೆಟ್ಟಿ ತಿಮರೋಡಿ ಸೇರಿದಂತೆ ಸತೀಶ್ ಕುಮಾರ್‌ರೈ ಪಡುಮಲೆ, ಕುಡ್ಲ ರಾಂಪೇಜ್, ಪ್ರಸನ್ನ ರವಿ ಮತ್ತು ಇತರರ ವಿರುದ್ಧ ದೂರು ನೀಡಲಾಗಿದೆ. ಮಹೇಶ್ ಶೆಟ್ಟಿ ತಿಮರೋಡಿಗೆ ಸಂಬಂಧಿಸಿದ ಪ್ರಕರಣವೊಂದರ ದೂರುದಾರ ಸುಂದರ್‌ರೈ ಮಂದಾರ ಅವರನ್ನು ಗುರಿಯಾಗಿಸಿ ಕಳೆದ ಏಪ್ರಿಲ್ ತಿಂಗಳಲ್ಲಿ ಆರೋಪಿಗಳು ಫೇಸ್ ಬುಕ್‌ನಲ್ಲಿ ದೂರುದಾರರ ಬಗ್ಗೆ ಮತ್ತು ಅವರ ಕುಟುಂಬದ ಬಗ್ಗೆ ಕೆಟ್ಟದಾಗಿ, ಅಶ್ಲೀಲವಾಗಿ ಯಕ್ಷಗಾನ ಮಾದರಿ ಹಾಡುಗಳನ್ನು ರಚಿಸಿ ಪೋಸ್ಟ್‌ಗಳನ್ನು ಹಾಕಿದ್ದಾರೆ. ಈ ಪೋಸ್ಟ್‌ಗಳ ಮೂಲಕ ದೂರುದಾರರಾದ ಸುಂದರ್‌ರೈ ಮಂದಾರ ಅವರಿಗೆ ಮಾನಸಿಕ ಕಿರುಕುಳ ನೀಡಿ ಅವರ ಕಾರ್ಯಕ್ರಮವನ್ನು ಮುಂಬೈಯಲ್ಲಿ ನಡೆಯಲು ಬಿಡುವುದಿಲ್ಲ ಎಂದು ಬೆದರಿಕೆಯೊಡ್ಡಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.

ಕಡಬ: ಗುಂಡ್ಯ ಹೊಳೆಯಲ್ಲಿ ಸ್ನಾನಕ್ಕಿಳಿದ ಇಬ್ಬರು ವಿದ್ಯಾರ್ಥಿನಿಯರು ಮುಳುಗಿ ಸಾವು

ಕುಟ್ರುಪ್ಪಾಡಿ ಕೊಲ್ಯದಕಟ್ಟ: ನೀರಿನ ಆಳ ಅರಿಯದೆ ಆಟಕ್ಕಿಳಿದಿದ್ದವರು ದುರಂತ ಅಂತ್ಯ

• **ಕನ್ನಡಪ್ರಭ ವಾರ್ತೆ** ಉಪ್ಪಿನಂಗಡಿ

ಕಡಬ ತಾಲೂಕಿನ ಕುಟ್ರುಪ್ಪಾಡಿ ಗ್ರಾಮದಲ್ಲಿ ಹರಿಯುವ ಗುಂಡ್ಯ ಹೊಳೆಯ ಕೊಲ್ಯದಕಟ್ಟ ಎಂಬಲ್ಲಿ ಸ್ನಾನಕ್ಕೆಂದು ನೀರಿಗಿಳಿದ ಇಬ್ಬರು ವಿದ್ಯಾರ್ಥಿನಿಯರು ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ಶುಕ್ರವಾರ ಸಂಜೆ ನಡೆದಿದೆ.

ಮೃತ ವಿದ್ಯಾರ್ಥಿನಿಯರನ್ನು ಕುಟ್ರುಪ್ಪಾಡಿ ಗ್ರಾಮದ ಪೂವತೀಂಗಲ್ ಮನೆ ನಿವಾಸಿ ಹರೀಶ್ ಪಿ.ಕೆ. ಎಂಬವರ ಪುತ್ರಿ ಅರ್ಪಿತಾ (15) ಹಾಗೂ ಅವರ ಅಕ್ಕ ಶಕುಂತಲಾ ಅವರ ಪುತ್ರಿ ಸುನಿತ (21) ಎಂದು ಗುರುತಿಸಲಾಗಿದೆ.

ಹರೀಶ್ ಅವರ ಮನೆಗೆ ನೆಂಟರಾಗಿ ಬಂದ ಮಕ್ಕಳ ಜೊತೆಗೆ ಹೊಳೆಯಲ್ಲಿ ನೀರಿನಾಟವಾಡುವಸಲುವಾಗಿನೀರಿಗಿಳಿದ ವೇಳೆ ಈ ದುರ್ಘಟನೆ ಸಂಭವಿಸಿದೆ. ಒಟ್ಟು ಆರು ಮಂದಿ ಸಂಬಂಧಿಕರಿದ್ದ ಈ ತಂಡದಲ್ಲಿ ನೀರಿನ ಆಳ ತಿಳಿಯದೆ ನೀರಿಗಿಳಿದಿದ್ದ ಅರ್ಪಿತಾ ಹಾಗೂ ಸುನಿತ ನೀರಲ್ಲಿ ಮುಳುಗಿ ಕಾಣಸಿದ್ದಾಗ ಭಯಗೊಂಡ ಗುಂಪಿನಲ್ಲಿದ್ದ ಬಾಲಕನೊಬ್ಬ ಹೊಳೆ ಪಕ್ಕದ ಮನೆಯವರಿಗೆ ಮಾಹಿತಿ ತಿಳಿಸಿದ್ದಾನೆ.

ಕೂಡಲೇ ಸ್ಥಳೀಯ ನಿವಾಸಿ ಜಾರ್ಜ್ ಎಂಬವರು ನೀರಿಗೆ ಧುಮುಕಿ ನೀರಿನಲ್ಲಿ ಮುಳುಗಿದ್ದ ಇಬ್ಬರನ್ನು ಮೇಲಕ್ಕೆತ್ತಿದರು. ಆದರೆ ಆ ವೇಳೆಗಾಗಲೇ ಅವರಿಬ್ಬರೂ ಮೃತಪಟ್ಟಿದ್ದರು. ಕಡಬ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನೆಗೆ ಸಂಬಂಧಿಸಿ ಹರೀಶ್ ಪಿ.ಕೆ. ದೂರಿನಂತೆ ಕಡಬ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

■ ಹರೀಶ್ ಅವರ ಮನೆಗೆ ನೆಂಟರಾಗಿ ಬಂದ ಮಕ್ಕಳ ಜೊತೆಗೆ ಹೊಳೆಯಲ್ಲಿ ನೀರಿನಾಟವಾಡುವ ಸಲುವಾಗಿ ನೀರಿಗಿಳಿದ ವೇಳೆ ಈ ದುರ್ಘಟನೆ ಸಂಭವಿಸಿದೆ. ಒಟ್ಟು ಆರು ಮಂದಿ ಸಂಬಂಧಿಕರಿದ್ದ ಈ ತಂಡದಲ್ಲಿ ನೀರಿನ ಆಳ ತಿಳಿಯದೆ ನೀರಿಗಿಳಿದಿದ್ದ ಅರ್ಪಿತಾ ಹಾಗೂ ಸುನಿತ ನೀರಲ್ಲಿ ಮುಳುಗಿ ಕಾಣಸಿದ್ದಾಗ ಭಯಗೊಂಡ ಗುಂಪಿನಲ್ಲಿದ್ದ ಬಾಲಕನೊಬ್ಬ ಹೊಳೆ ಪಕ್ಕದ ಮನೆಯವರಿಗೆ ಮಾಹಿತಿ ತಿಳಿದ್ದಾನೆ.

ತಲೆ ಮರೆಸಿದ್ದ ಆರೋಪಿಯ ಸೆರೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಕಳವು ಹಾಗೂ ಗೋಹತ್ಯೆ ನಿಷೇಧ ಕಾಯ್ದೆ ಸಂಬಂಧಿತ ಪ್ರಕರಣಗಳಲ್ಲಿ ನ್ಯಾಯಾಲಯದಿಂದ ಜಾರಿಯಾಗಿದ್ದ ಜಾಮೀನು ರಹಿತ ವಾರಂಟ್ ಗಳನ್ನು ತಪ್ಪಿಸಿಕೊಂಡು 2018 ರಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸಲಾಗಿದೆ.

ಕಾಸರಗೋಡು ಜಿಲ್ಲೆ ಉಪ್ಪಳ ಪೈವಳಿಕೆಯ ಅಟ್ಟೂಬಕ್ಕರ್ ಸಿದ್ದಿಕ್ ಅಲಿಯಾಸ್ ಕಾಪ್ರಿ ಸಿದ್ದಿಕ್ ಬಂಧಿತ ಆರೋಪಿ.

ಈತನ ವಿರುದ್ಧ ಮಂಗಳೂರು ನಗರದ ಉಳ್ಳಾಲ, ಕೊಣಾಜೆ ಹಾಗೂ ಕಂಕನಾಡಿ ಪೊಲೀಸ್ ಠಾಣೆಗಳಲ್ಲಿ 3 ಜಾಮೀನು ರಹಿತ ವಾರಂಟ್ ಗಳು ಬಾಕಿ ಇದೆ.

ಇದರಲ್ಲಿ ಎರಡು ಗೋಹತ್ಯೆ ನಿಷೇಧ ಕಾಯ್ದೆಯಡಿ ದಾಖಲಾಗಿದ್ದ ಪ್ರಕರಣಗಳು.

ಆರೋಪಿ 8 ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ನಗರದಲ್ಲಿ ತಲೆಮರೆಸಿಕೊಂಡಿರುವ ವಾರಂಟು ಆರೋಪಿಗಳ ಪತ್ತೆಯ ಬಗ್ಗೆ ವಿಶೇಷ ತಂಡ ರಚಿಸಲಾಗಿದ್ದು, ಆರೋಪಿಯ ಚಲನವಲನಗಳ ಕುರಿತು ಮಾಹಿತಿ ಸಂಗ್ರಹಿಸಿ ಕಾರ್ಯಾಚರಣೆ ನಡೆಸಿದ ಪಿಎಸ್ಐ ಸಿದ್ದಪ್ಪ ಹಾಗೂ ಸಿಬಂದಿ ತಂಡ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಬಂಧಿತನನ್ನು ಮುಂದಿನ ಕಾನೂನು ಕ್ರಮಕ್ಕಾಗಿ ಉಳ್ಳಾಲ ಪೊಲೀಸ್ ಠಾಣೆಗೆ ಹಸ್ತಾಂತರಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ನ್ಯಾಯಾಲಯ ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

ಪುತ್ತೂರು ಮೆಸ್ಕಾಂ ಜನಸಂಪರ್ಕ ಸಭೆ 13ರಂದು

ಮಂಗಳೂರು: ಮೇ 12ರಂದು ನಿಗದಿಯಾಗಿದ್ದ ಪುತ್ತೂರು ನಗರ ಉಪವಿಭಾಗ ಮತ್ತು ಪುತ್ತೂರು ಗ್ರಾಮಾಂತರ ಉಪವಿಭಾಗಗಳಿಗೆ ಸಂಬಂಧಿಸಿದ ಜನ ಸಂಪರ್ಕ ಸಭೆಯನ್ನು ಮೇ 13 ಕ್ಕೆ ಮುಂದೂಡಲಾಗಿದೆ. ಆ ದಿನ ಸಮಯ ಬೆಳಗ್ಗೆ 110 ರಿಂದ12ರವರೆಗೆಪುತ್ತೂರು ನಗರ ಉಪವಿಭಾಗ ಕಚೇರಿಯಲ್ಲಿ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿ ಕಾರಿಗಳು ಭಾಗವಹಿಸಲಿದ್ದಾರೆ. ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸಲಾಗುತ್ತದೆ. ದೂರವಾಣಿ ಕರೆಯ ಮೂಲಕವೂ ಸಂಪರ್ಕಿಸಿ, ಅಹವಾಲು ಸಲ್ಲಿಸಬಹುದಾಗಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 08251-230393

ಎಂಡಿಎಂಎ ಮಾರಾಟಕ್ಕೆ ಯತ್ನ: ಮೂವರು ಆರೋಪಿಗಳ ಬಂಧನ

• **ಕನ್ನಡಪ್ರಭ ವಾರ್ತೆ** ಮಂಗಳೂರು

ನಗರದ ಕರಾವಳಿ ಉತ್ಸವ ಮೈದಾನದ ಬಳಿ ಎಂಡಿಎಂಎ ಮಾರಾಟ ಮಾಡಲು ಯತ್ನಿಸುತ್ತಿದ್ದ ಮೂವರು ಆರೋಪಿಗಳನ್ನು ಉರ್ವ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಿಪಾಝಿಲ್ ಸುಲೈಮಾನ್ ರಿಯಾಝ್ (20), ಭಾಷಾ ಸವಾದ್ (19) ಮಹಮ್ಮದ್ ನಬಿಲ್ (20) ಬಂಧಿತ ಆರೋಪಿಗಳು.

ಪೊಲೀಸರು ಗಸ್ತು ಕರ್ತವ್ಯದಲ್ಲಿದ್ದಾಗ ಕರಾವಳಿ ಉತ್ಸವ ಮೈದಾನ ಬಳಿ ಮೂವರು ಯುವಕರು ಒಂದು ಸ್ಕೂಟರ್ ನಲ್ಲಿ ಹೆಲ್ಮೆಟ್ ಧರಿಸದೆ ಪಂಪ್ ಹೌಸ್ ಪಕ್ಕದ ಅಡ್ಡ ರಸ್ತೆಯಲ್ಲಿ ಸಾಗುತ್ತಿದ್ದುದುಕಂಡುಬಂದಿದೆ. ಅವರನ್ನುಹಿಂಬಾಲಿಸಿದಾಗ ಪಂಪ್ ಹೌಸ್ ಬಳಿ ಇರುವ ಪಾಳು ಬಿದ್ದ ಸರಕಾರಿ ವಸತಿ ಗೃಹ ಕಟ್ಟಡದ ಬಳಿ ಸ್ಕೂಟರ್‌ನಿಲ್ಲಿಸಿ ಓಡಿ ಹೋಗಲು ಯತ್ನಿಸಿದ್ದಾರೆ. ಅವರನ್ನು ಹಿಡಿದು ವಿಚಾರಣೆಗೆ ಒಳಪಡಿಸಿದಾಗ ರಿಪಾಝಿಲ್ ವಿಚಾರ ಬಾಯಿಬಿಟ್ಟಿದ್ದಾನೆ. ತನ್ನ ಸ್ನೇಹಿತ ಅಲ್ವಾಝ್ ಬೆಳ್ತಂಗಡಿ ನೀಡಿರುವ ಬೆಂಗಳೂರಿನ ನೈಜೀರಿಯನ್ ಪ್ರಜೆಯನ್ನು ವಾಟ್ಸ್ ಆ್ಯಪ್ ಮೂಲಕ ಸಂಪರ್ಕಿಸಿ ಆತನಿಂದ ಎಂಡಿಎಂಎ ಪಡೆದು ಹೆಚ್ಚಿನ ಹಣಕ್ಕೆ ಗ್ರಾಹಕರಿಗೆ ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿದ್ದಾನೆ.

ಆರೋಪಿಗಳ ಸ್ಕೂಟರ್‌ಪರಿಶೀಲಿಸಿದಾಗ ಡಿಕ್ಕಿಯಲ್ಲಿ 1,40,000 ರು. ಮೌಲ್ಯದ 14.48 ಗ್ರಾಂ. ಎಂಡಿಎಂಎ ಪತ್ತೆಯಾಗಿದೆ. ಜತೆಗೆ ಆರೋಪಿಗಳ ವಶದಲ್ಲಿದ್ದ 30 ಸಾವಿರ ರು.ಮೌಲ್ಯದ 4 ಮೊಬೈಲ್ ಫೋನ್, ಮಾದಕ ವಸ್ತು ತುಂಬಿಸಲು ತಂದಿದ್ದ ಸಣ್ಣ 13 ಜಿಪ್ ಲಾಕ್ ಪ್ಲಾಸ್ಟಿಕ್ ಖಾಲಿ ಕವರ್, 600 ರು.ನಗದು, 80,000 ರು. ಮೌಲ್ಯದ ಸ್ಕೂಟರ್‌ವಶಕ್ಕೆ ಪಡೆಯಲಾಗಿದೆ.

ಆರೋಪಿಗಳ ವಿರುದ್ಧ ಎನ್ ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

■ ಗೋರಿಗುಡ್ಡೆ ಪರಿಸರದಲ್ಲಿ ಮಾದಕ ವಸ್ತು ಸೇವನೆ ಮಾಡಿದ್ದ ಆರೋಪದಡಿ ಯುವಕನನ್ನು ಪಾಂಡೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಗೋರಿಗುಡ್ಡೆ ನಿವಾಸಿ ಸುನೀಲ್ (33) ಬಂಧಿತ ಆರೋಪಿ. ಮಾದಕ ವಸ್ತು ಸೇವನೆಯ ನಶೆಯಲ್ಲಿದ್ದ ಆತನನ್ನು ವಿಚಾರಣೆಗೆ ಒಳ ಪಡಿಸಿದಾಗ, ಆತನ ಮಾತುಗಳು ತೊದಲುತ್ತಿದ್ದು, ಬಾಯಿಯಿಂದ ಅಮಲು ಪದಾರ್ಥ ಸೇವನೆ ಮಾಡಿದ ವಾಸನೆ ಬಂದಿದೆ. ಬಳಿಕ ಆತ ಮಾದಕ ವಸ್ತು ಸೇವನೆ ಮಾಡಿರುವ ಬಗ್ಗೆ ಒಪ್ಪಿಕೊಂಡಿದ್ದಾನೆ. ವೈದ್ಯಕೀಯ ಪರೀಕ್ಷೆಗೆ ಒಳ ಪಡಿಸಿದಾಗ ದೃಢಪಟ್ಟಿದೆ. ಆರೋಪಿ ವಿರುದ್ಧ ಪ್ರಕರಣ ದಾಖಲಾಗಿದೆ

ಉಳ್ಳಾಲ: ನಜಾತ್ ಮುಹಮ್ಮದ್ ಹಾಜಿ ನಿಧನ

ಉಳ್ಳಾಲ: ಮುಕ್ಕಚೇರಿ ನಿವಾಸಿ ನಜಾತ ಮುಹಮ್ಮದ್ ಹಾಜಿ ಅವರು ಅಲ್ಪಕಾಲದ ಅಸೌಖ್ಯದಿಂದ ಶುಕ್ರವಾರ ನಗರದ ಆಸ್ಪತ್ರೆಯಲ್ಲಿ ನಿಧನರಾದರು. ಪ್ರಮುಖ ವ್ಯಾಪಾರಸ್ಥರು ಮತ್ತು ಧಾರ್ಮಿಕ ಸಂಸ್ಥೆಗಳ ಮುಂಚೂಣಿ ನಾಯಕರೂ ಆಗಿದ್ದ ಅವರು ಇಬ್ಬರು ಪುತ್ರರು, ಐದು ಮಂದಿ ಪುತ್ರಿಯರನ್ನು ಅಗಲಿದ್ದಾರೆ.

ಕನ್ನಡಪ್ರಭ ಸಂಪಾದಕೀಯ

ಪ.ಬಂಗಾಳದ ಹೊಸ ಸರ್ಕಾರ ಹಿಂಸಾಚಾರಕ್ಕೆ ಕೊನೆ ಹಾಡಲಿ


ಒಂದೂವರೆ ದಶಕದಿಂದ ಪಶ್ಚಿಮ ಬಂಗಾಳವನ್ನು ಆಳುತ್ತಿದ್ದ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಇತ್ತೀಚಿನ ಚುನಾವಣೆಯಲ್ಲಿ ಸೋಲಾಗಿದೆ. ಭಾರತೀಯ ಜನತಾ ಪಕ್ಷ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿ ಅಧಿಕಾರಕ್ಕೆ ಬಂದಿದೆ. ಪರಿವರ್ತನೆಯ ಘೋಷಣೆಯೊಂದಿಗೆ ಅಧಿಕಾರಕ್ಕೆ ಬರುವಲ್ಲಿ ಯಶಸ್ವಿಯಾದ ಬಿಜೆಪಿ ಸರ್ಕಾರದ ಮುಂದೆ ಸವಾಲುಗಳ ಸರಣಿಯೇ ಇದೆ. ಮೇ 4ರಂದು ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ರಾಜ್ಯದ ಹಲವು ಭಾಗಗಳಲ್ಲಿ ಹಿಂಸಾಚಾರ ಆರಂಭವಾಗಿದೆ. ರಾಜಕೀಯ, ಆರ್ಥಿಕ ಮತ್ತು ಹಿಂದಿನ ಆಡಳಿತದ ಅವಧಿಯ ದ್ವೇಷದ ಪ್ರತೀಕಾರದ ಕಾರಣಕ್ಕೆ ನಡೆದ ಈ ಹಿಂಸೆಯ ಘಟನೆಗಳು ರಾಜ್ಯದ ಪ್ರಸಕ್ತ ಪರಿಸ್ಥಿತಿಗೆ ಹಿಡಿದ ಕೈಗನ್ನಡಿ. ಇದರ ನಿರ್ವಹಣೆ ಹೊಸ ಸರ್ಕಾರ ಪಾಲಿನ ಮೊದಲ ಅಗ್ನಿಪರೀಕ್ಷೆಯಾಗಿದೆ.

ಫಲಿತಾಂಶ ಪ್ರಕಟ ಬಳಿಕ ರಾಜ್ಯದಲ್ಲಿ 200ಕ್ಕೂ ಹೆಚ್ಚು ಹಿಂಸಾಚಾರದ ಪ್ರಕರಣಗಳು ಘಟಿಸಿದ್ದು, 5 ಜನರು ಸಾವನ್ನಪ್ಪಿದ್ದಾರೆ. 400ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ. 2021ರಲ್ಲಿ ಚುನಾವಣೆ ನಡೆದ ಹಿಂಸಾಚಾರದ ಪ್ರಮಾಣಕ್ಕೆ ಹೋಲಿಸಿದರೆ ಈ ಬಾರಿ ಪ್ರಮಾಣ ಭಾರೀ ಇಳಿಕೆಯಾಗಿದೆ. ಇದಕ್ಕೆ ಚುನಾವಣಾ ಆಯೋಗ ಇಡೀ ಚುನಾವಣಾ ಪ್ರಕ್ರಿಯೆ ವೇಳೆ ನಿಯೋಜಿಸಿದ್ದ ಹೆಚ್ಚಿನ ಭದ್ರತೆ ಕಾರಣವಾಗಿತ್ತು. ಆದರೂ ಸರ್ಕಾರವೊಂದು ಬದಲಾದ ವೇಳೆ ರಾಜಕೀಯ ಪಕ್ಷಗಳ ಕಾರ್ಯಕರ್ತರು ಪರಸ್ಪರ ಮೇಲೆ ದಾಳಿ ನಡೆಸುವುದು, ಕಟ್ಟಡಗಳಿಗೆ ಬೆಂಕಿ ಹಚ್ಚುವಂಥ ಘಟನೆಯಲ್ಲಿ ತೊಡಗುವುದು ಉತ್ತಮ ಬೆಳವಣಿಗೆ ಅಲ್ಲ. ಇವುಗಳನ್ನು ತಡೆಯುವುದು ಆಯಾ ರಾಜಕೀಯ ಪಕ್ಷಗಳು ಮತ್ತು ಅವುಗಳ ನಾಯಕರ ಹೊಣೆ ಕೂಡಾ ಹೌದು.

> **ಫಲಿತಾಂಶ ಪ್ರಕಟ ಬೆನ್ನಲ್ಲೇ ಹಿಂಸೆಗೆ ಐವರು ಬಲಿ, 200ಕ್ಕೂ ಹೆಚ್ಚು ಪ್ರಕರಣ, 400 ಜನರ ಬಂಧನ ರಾಜ್ಯದಲ್ಲಿನ ಪ್ರಸಕ್ತ ಪರಿಸ್ಥಿತಿಗೆ ಹಿಡಿದ ಕೈಗನ್ನಡಿ**

ಸರ್ಕಾರವೊಂದು ಸುದೀರ್ಘ ಕಾಲ ಅಧಿಕಾರದಲ್ಲಿದ್ದ ವೇಳೆ ಪಕ್ಷದ ನಾಯಕರು, ಕಾರ್ಯಕರ್ತರು ತಮ್ಮ ಕಾರ್ಯಕ್ಷೇತ್ರವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ತಮ್ಮ ಕಪಿಮುಷ್ಠಿಯಲ್ಲಿ ಹಿಡಿದಿಟ್ಟುಕೊಳ್ಳುವ ಯತ್ನ ಮಾಡುತ್ತಾರೆ. ಇದು ಸಹಜವಾಗಿಯೇ ವಿರೋಧಪಕ್ಷದಲ್ಲಿನ ನಾಯಕರ, ಕಾರ್ಯಕರ್ತರ ಹಕ್ಕುಗಳ ದಮನಕ್ಕೆ ಕಾರಣವಾಗುತ್ತದೆ. ಇದೀಗ ಬಂಗಾಳದಲ್ಲಿ ಆಗಿರುವುದು ಅದೇ. 15 ವರ್ಷದ ಟಿಎಂಸಿ ಆಡಳಿತದ ವೇಳೆ ಪಕ್ಷದ ಸ್ಥಳೀಯ ನಾಯಕರು, ಕಾರ್ಯಕರ್ತರು ತಮ್ಮದೇ ಟೋಲ್‌ಬೂತ್ ಸ್ಥಾಪಿಸುವ, ಹಫ್ತಾ ವಸೂಲಿ ಮೂಲಕ ಹಣ ಸಂಗ್ರಹಿಸುತ್ತಿದ್ದರು ಎಂಬ ಗಂಭೀರ ಆರೋಪ ಇತ್ತು. ಜೊತೆಗೆ ಲಕ್ಷಾಂತರ ಹೆಕ್ಟೇರ್ ಮೀನುಗಾರಿಕ ಕೆರೆಗಳ ಮೇಲೆ ಹಿಡಿತದ ಮೂಲಕ ಏಕಸ್ವಾಮ್ಯ ಸಾಧಿಸಿದ್ದರು. ಹೀಗಾಗಿ ಇದೀಗ ವಿಧಾನಸೌಧದಲ್ಲಿ ಸರ್ಕಾರ ಬದಲಾಗುತ್ತಲೇ ಸಮಾಜದಲ್ಲೂ ಬದಲಾವಣೆ ಕೂಗು, ಹಿಂಸಾಚಾರಕ್ಕೆ ಮೂಲವಾಗಿದೆ. ಹೀಗಾಗಿ ಇಂಥ ಹಿಂಸೆ ನಿಯಂತ್ರಣ ಇದೀಗ ಹೊಸ ಆಡಳಿತ ವ್ಯವಸ್ಥೆಯ ಮೊದಲ ಆದ್ಯತೆಯಾಗಬೇಕು. ಆಗ ಮಾತ್ರವೇ ಚುನಾವಣೆ ವೇಳೆ ಘೋಷಿಸಿದ ಪರಿವರ್ತನೆಯ ನಿಜ ಅರ್ಥ ವಾಸ್ತವರೂಪದಲ್ಲಿ ಜಾರಿಯಾಗುತ್ತದೆ.

ಗೂಫ ಮುಂದಿನ ಪ್ರದರ್ಶನ?




ನಿತ್ಯಫಲ

- **ಮೇಷ**: ಅವಿವಾಹಿತರಿಗೆ ವಿವಾಹ ಯೋಗ. ನಿಮ್ಮ ಬಹುವರ್ಷದ ಕನಸು ನನಸಾಗುವ ದಿನ.
- **ವೃಷಭ**: ಕಚೇರಿಯಲ್ಲಿ ಶುಭ ಸುದ್ದಿ ನಿಮ್ಮ ಕಿವಿಗೆ ಬೀಳಲಿದೆ. ಮನೆಯಲ್ಲಿ ಸಂಭ್ರಮದ ವಾತಾವರಣ.
- **ಮಿಥುನ**: ಅತಿ ಅವಸರದಿಂದ ತೆಗೆದುಕೊಂಡ ನಿರ್ಧಾರದಿಂದ ಅಪಾಯ ಕಟ್ಟಿಟ್ಟ ಬುತ್ತಿ.
- **ಕಟಕ**: ದೂರದ ಬಂಧುಗಳ ಆಗಮನ ಜಟಿಲ ಸಮಸ್ಯೆಯೊಂದು ನಿವಾರಣೆಯಾಗುವ ಸೂಚನೆ.
- **ಸಿಂಹ**: ಅತ್ಯಂತ ಕಷ್ಟಕರವಾದ ಕೆಲಸವನ್ನು ಸುಲಭವಾಗಿ ಮಾಡಿ ಮುಗಿಸುವಿರಿ.
- **ಕನ್ಯಾ**: ನೀವು ಮಾಡಬೇಕು ಎಂದುಕೊಂಡ ಕೆಲಸಕ್ಕೆ ಹಲವೆಡೆಯಿಂದ ಅಡ್ಡಿ.
- **ತುಲಾ**: ಯಾರದ್ದೋ ಮಾತು ಕೇಳಿ ನಿಮ್ಮ ಒಳ್ಳೆಯ ನಿರ್ಧಾರವನ್ನು ಬದಲಿಸದಿರಿ. ಶುಭದಿನ
- **ವೃಶ್ಚಿಕ**: ನೀವು ಕೈಗೊಂಡ ನಿರ್ಧಾರದಿಂದ ಹಲವರಿಗೆ ಬೇಸರ ಉಂಟಾಗಬಹುದು ಎಚ್ಚರ.
- **ಧನುಸ್ಸು**: ಸರ್ಕಾರಿ ಉದ್ಯೋಗದಲ್ಲಿ ಇರುವವರಿಗೆ ಶುಭಸುದ್ದಿ ಕೇಳುವ ದಿನ ಇಂದು.
- **ಮಕರ**: ಸರಿಯಾದ ಸಮಯಕ್ಕೆ ಸ್ನೇಹಿತರೊಬ್ಬರು ಬಂದು ನಿಮ್ಮ ಸಮಸ್ಯೆ ಬಗೆಹರಿಸಲಿದ್ದಾರೆ.
- **ಕುಂಭ**: ಮಾಡಿದ ತಪ್ಪನ್ನೇ ಮತ್ತೆ ಮತ್ತೆ ಮಾಡಿ ಅಪಹಾಸ್ಯಕ್ಕೆ ಈಡಾಗಬೇಡಿ. ಎಚ್ಚರವಿರಲಿ.
- **ಮೀನ**: ಸಮಾಧಾನದಿಂದ ಕಾರ್ಯ ನಿರ್ವಹಿಸಿ ದೂರದ ಗುರಿಯನ್ನು ಸುಲಭವಾಗಿ ಮುಟ್ಟುವಿರಿ.

ಪಂಚಾಂಗ

ಸಂವತ್ಸರ: ಪರಾಭವ, ಉತ್ತರಾಯಣ, ಋತು: ವಸಂತ, ಮಾಸ: ವೈಶಾಖ
ಪಕ್ಷ: ಕೃಷ್ಣ, ತಿಥಿ:ಸಪ್ತಮಿ, ನಕ್ಷತ್ರ: ಶ್ರವಣ, ರಾಹುಕಾಲ 09:00-10:30
ಯಮಗಂಡಕಾಲ 01:30-03:00 **ಗುಳಿಕಕಾಲ** 06:00-07:30

ಪದಯಾತ್ರೆ 2552 • ಜಯಕೃಷ್ಣ



2551 ರ ಉತ್ತರ

ಎಡದಿಂದ ಬಲಕ್ಕೆ
2. ಕುಲಸಚಿವ, 5. ಗಣೇಶ, 6. ಯೋಜಕ, 7. ತೆನೆ, 9. ಪತಿ, 10. ಕೂಳು, 11. ಮದ, 15. ಕಾರ್ಗಾಲ, 16. ಗಿರಾಕಿ, 17. ಗುಲಾಮಗಿರಿ

ಮೇಲಿನಿಂದ ಕೆಳಕ್ಕೆ
1. ಮಂಗಳ, 2. ಕುಶಲತೆ, 3. ವಯೋಮಿತಿ, 4. ಕಂಕಣ, 8. ನೆರಳು, 9. ಪರಮ, 10. ಕೂರಲಗು, 12. ದಸ್ತಗಿರಿ, 13. ಸ್ವೀಕಾರ, 14. ಕುಕಿಲು.


ಎಡದಿಂದ ಬಲಕ್ಕೆ
1. ಕುಲವಲ್ಲ, ಸಮೂಹ (3)
3. ಚೆನ್ನಾಗಿ ತಿಳಿದವನು ಈ ಪಂಡಿತ (3)
5. ಒಂದು ವಿಶಿಷ್ಟ ಉದ್ದೇಶದ ಭೇಟಿ (4)
7. ಮಂಗಳ ಗ್ರಹದ ಇನ್ನೊಂದು ಹೆಸರು (4)
9. ಮಿತಿ ಇಲ್ಲದೆ ಹೊಗಳುವವನು (3)
10. ಆಲೋಚನೆಯೂ ಹೌದು ಗುರಿಯೂ ಹೌದು (3)
12. ಸಮುದ್ರದ ತೀರವನ್ನು ಹೀಗೆನ್ನುವರು (4)
14. ಕಲೆಯನ್ನು ತಿಳಿದವಳು (4)
16. ಕೊಲೆ ಮಾಡಿದವನು (3)
17. ಇದು ಕಮ್ಮಾರನ ಒಲೆ (3)

ಮೇಲಿನಿಂದ ಕೆಳಕ್ಕೆ
2. ಕೊಳದಲ್ಲಿ ಕಂಡ ಬಿಳಿಯ ನೈದಿಲೆ (3)
4. ವಿನೋದವಾಗಿ ಕಾಲ ಕಳೆಯುವುದು (3)
5. ಸಂಖ್ಯೆಯನ್ನು ಹೇಳುವ ಪದ (5)
6. ಆಕಾಶ- ಪರ್ಯಾಯ ಪದ (2)
7. ತೋಳುಗಳುಳ್ಳ ಉಡುಪು (2)
8. ಕರ್ತವ್ಯವನ್ನು ಮಾಡದಿರುವುದು (5)
10. ಮರವನ್ನು ಕೆತ್ತುವ ಸಾಧನ (2)
11. ಯುಗವನ್ನು ಹೀಗೂ ಹೇಳುವರು (2)
13. ರಾಧೆ ಎಬ್ಬಿಸಿದ ರಂಪ (3)
15. ವಶಪಡಿಸಿಕೊಳ್ಳಲು ಬಳಸಿದ ಪ್ರಭಾವ (3)

ಕನ್ನಡಪ್ರಭ KANNADAPRABHA
ಪ್ರಧಾನ ಸಂಪಾದಕ: ರವಿ ಹೆಗಡೆ EDITOR IN CHIEF: RAVI HEGDE
ನಮ್ಮ ವಿಳಾಸ: ಸಂಪಾದಕರು, ಕನ್ನಡಪ್ರಭ, ನಂ.36, ಕ್ರೆಸೆಂಟ್ ರಸ್ತೆ, ಮಲ್ಲಿಗೆ ಆಸ್ಪತ್ರೆ ಎದುರು, ಶಿವಾನಂದ ವೃತ್ತ, ಬೆಂಗಳೂರು-560 001
PHONE: 080-68416300 FAX:080-68416354
email: editor@kannadaprabha.in epaper.kannadaprabha.in
facebook: SuvarnaNews twitter: @suvarnanewstv

ನಾಡು ಕಂಡ ಅಪ್ರತಿಮ ಹೋರಾಟಗಾರ, ಧಾರ್ಮಿಕ ಶ್ರದ್ಧೆ ಹೊಂದಿರುವ ನಾಯಕ, ಅನನ್ಯ ಸೇವಕ ಯಡಿಯೂರಪ್ಪ

ಗ್ರಾಮಗಳಿಗೆ ನೀರು ಕೊಟ್ಟ ಭಗೀರಥ ಬಿಎಸ್‌ವೈ



ಡಾ| ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ

> ಯಡಿಯೂರಪ್ಪ ಅವರು ಮತ್ತು ನಮ್ಮ ಸಂಬಂಧ ನಿನ್ನೆ ಮೊನ್ನೆಯದಲ್ಲ. ನಮ್ಮೊಂದಿಗೆ ಆತ್ಮೀಯ ಒಡನಾಟ ಹೊಂದಿರುವ ಯಡಿಯೂರಪ್ಪ ಅವರು ವಿರೋಧ ಪಕ್ಷದಲ್ಲಿರಲಿ, ಆಡಳಿತ ಪಕ್ಷದಲ್ಲಿರಲಿ ನಮ್ಮ ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸೇವಾ ಕಾರ್ಯಗಳಲ್ಲಿ ಅನನ್ಯವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.


ಸುಮಾರು ಹನ್ನೆರಡು ವರ್ಷಗಳ ಹಿಂದಿನ ಘಟನೆ. ಆಗ ದೆಹಲಿಯಲ್ಲಿ ಯಾವುದೋ ಒಂದು ಕಾರ್ಯಕ್ರಮವಿತ್ತು. ಅದಕ್ಕಾಗಿ ಬೆಂಗಳೂರು ವಿಮಾನ ನಿಲ್ದಾಣಕ್ಕೆ ನಮ್ಮ ಪ್ರಯಾಣ ಸಾಗಿತ್ತು. ಮಾರ್ಗಮಧ್ಯೆ ಇದ್ದಕ್ಕಿದ್ದಂತೆ ನಮ್ಮ ಮೊಬೈಲ್ ರಿಂಗಣಿಸಿತು. ಉತ್ತರಿಸಲು ಕೈಗೆತ್ತಿಕೊಂಡಾಗ ಕಾಣಿಸಿದ್ದು ಕರೆ ಮಾಡಿದವರು ರಾಜ್ಯದ ಆಗಿನ ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು. ತೀರಾ ಅನಿರೀಕ್ಷಿತವಾದ ಕರೆ. ಮುಖ್ಯಮಂತ್ರಿಗಳಾಗಿ ಅವರು ಪ್ರಮಾಣ ವಚನ ಸ್ವೀಕರಿಸುವ ಮುನ್ನ ತಪ್ಪದೆ ನಮಗೆ ದೂರವಾಣಿ ಕರೆ ಮಾಡಿ ಆಶೀರ್ವಾದ ಬೇಡುತ್ತಾ ಬಂದಿರುವುದು ಅವರು ರೂಢಿಸಿಕೊಂಡು ಬಂದ ಧಾರ್ಮಿಕ ಶ್ರದ್ಧೆ. ಆದರೆ ಅಂದಿನ ಕರೆಯ ಉದ್ದೇಶ ಬೇರೆಯೇ ಆಗಿತ್ತು.

ಉಭಯ ಕುಶಲೋಪರಿಯ ನಂತರ ಅವರು 'ಬುದ್ದಿ, ನಾಳೆ ನಾನು ರಾಜ್ಯದ ಬಜೆಟ್ ಮಂಡಿಸಲಿದ್ದೇನೆ. ತಮ್ಮ ಆಶೀರ್ವಾದ ಬೇಕು. ಮಠಕ್ಕಾಗಿ ಏನಾದರೂ ಮಾಡಬೇಕೆಂದಿದ್ದೇನೆ. ಏನು ಮಾಡಲಿ?' ಎಂದು ಕೇಳಿದರು. ಅವರ ಧಾರ್ಮಿಕ ಶ್ರದ್ಧೆ ನಿಷ್ಕಳಂಕವಾಗಿದ್ದರೂ, ಅವರು ನಾಡಿನ ಮುಖ್ಯಮಂತ್ರಿಗಳಾಗಿ ಯಾವುದೇ ತಾರತಮ್ಯ ಮಾಡದೆ ಎಲ್ಲ ಜನಾಂಗದವರ ಧಾರ್ಮಿಕ ಸಂಸ್ಥೆಗಳಿಗೆ ಸಹಾಯವನ್ನು ಮಾಡುತ್ತಾ ಬಂದಿದ್ದಾರೆ. 'ನಮ್ಮ ಮಠಕ್ಕೆ ಏನು ಮಾಡಲಿ' ಎಂದು ಕೇಳಿದ ಪ್ರಶ್ನೆ ನಮಗೆ ಸರಿ ಕಾಣಲಿಲ್ಲ. 'ಮಠಕ್ಕೆ ಕಾಣಿಕೆ ಕೊಡಲು ಮಠದ ಶಿಷ್ಯರಿದ್ದಾರೆ, ನೀವು ಸ್ವಜಾತಿಯ ಮಠಕ್ಕೆ ಸಹಾಯ ಮಾಡಿದರೆ ಕೆಟ್ಟ ಹೆಸರು ತೆಗೆದುಕೊಳ್ಳುತ್ತೀರಿ' ಎಂದು ಕಟುವಾಗಿ ಪ್ರತಿಕ್ರಿಯಿಸಿದಾಗ ಅವರು ನಿರುತ್ತರರಾದರು. 'ಹಾಗಾದರೆ ನಾನೇನು ಮಾಡಲಿ?' ಎಂದು ವಿನಮ್ರತೆಯಿಂದ ಮರು ಸವಾಲು ಹಾಕಿ ನಮ್ಮನ್ನು 'ಭಕ್ತಿಕಂಪಿತ'ರನ್ನಾಗಿ ಮಾಡಿದರು.



ಗ್ರಾಮೀಣರಿಗೆ ನೀರು ಕೊಟ್ಟ ನಾಯಕ

ಆಗ ನಮ್ಮ ಕಣ್ಮುಂದೆ ಸುಳಿದಾಡಿದ್ದು ಬೇಸಿಗೆಯ ಕಾಲದಲ್ಲಿ ಬೆಳಗಿನ ಹೊತ್ತು ವಾಯುವಿಹಾರದಿಂದ ಹಿಂದಿರುಗುವಾಗ ಸಾಲುಸಾಲಾಗಿ ನಿಂತು ಬೀದಿ ನಲ್ಲಿಯಲ್ಲಿ ನೀರು ಹಿಡಿಯಲು ಕೈಯಲ್ಲಿ ಬಿಂದಿಗೆಗಳನ್ನು ಹಿಡಿದು ನಿಂತ ಮಹಿಳೆಯರ ದೃಶ್ಯ! ತಕ್ಷಣವೇ ನಮ್ಮ ಉತ್ತರವನ್ನೇ ನಿರೀಕ್ಷಿಸುತ್ತಿದ್ದ ಮುಖ್ಯಮಂತ್ರಿಗಳಿಗೆ 'ಸಿರಿಗೆರೆ ಮತ್ತು ಸುತ್ತಮುತ್ತಲಿನ 50 - 60 ಹಳ್ಳಿಗಳ ಜನರಿಗೆ ಕುಡಿಯುವ ನೀರಿನ ತೊಂದರೆ ಇದೆ. ಸಮೀಪದ ಚನ್ನಗಿರಿ ತಾಲೂಕಿನ ಸೂಳೆಕೆರೆಯಿಂದ ಕುಡಿಯುವ ನೀರು ಪೂರೈಕೆ ಆಗುವಂತೆ ಒಂದು ಯೋಜನೆಯನ್ನು ಮಂಜೂರು ಮಾಡಿಕೊಟ್ಟರೆ ತುಂಬಾ ಪುಣ್ಯಕಾರ್ಯ ಮಾಡಿದಂತಾಗುತ್ತದೆ' ಎಂದಾಗ ಯಡಿಯೂರಪ್ಪ ಅವರು ತಡಮಾಡದೆ 'ಹಾಗೆಯೇ ಆಗಲಿ, ತಮ್ಮ ಅಪೇಕ್ಷೆಯಂತೆ ಮಾಡುತ್ತೇನೆ' ಎಂದು ಭರವಸೆ ಕೊಟ್ಟರು.



ಮರುದಿನವೇ ಬಜೆಟ್‌ನಲ್ಲಿ ಘೋಷಣೆ: ಸಾಮಾನ್ಯವಾಗಿ ರಾಜಕೀಯ ಧುರೀಣರು ಕೊಡುವ ಪೊಳ್ಳು ಭರವಸೆ ಅದಾಗಿರಲಿಲ್ಲ. ಮಾರನೆಯ ದಿನವೇ ವಿಧಾನಸಭೆಯಲ್ಲಿ ಅವರು ಮಂಡಿಸಿದ ಬಜೆಟ್‌ನಲ್ಲಿ ಮೇಲ್ಕಂಡ ಕುಡಿಯುವ ನೀರಿನ ಯೋಜನೆಗೆ ಅವರು ₹25 ಕೋಟಿ ಸೇರ್ಪಡೆ ಮಾಡಿದ್ದು ಈ ಭಾಗದ ಹಳ್ಳಿಯ ಜನರನ್ನು ನಿಬ್ಬೆರಗುಗೊಳಿಸಿತು. ಕ್ರಮೇಣ ಸಿರಿಗೆರೆ ಮತ್ತು ಸುತ್ತಮುತ್ತಲಿನ ಅನೇಕ ಹಳ್ಳಿಗಳು ಹೊಸದಾಗಿ ಸೇರ್ಪಡೆಯಾಗಿ ಯೋಜನೆಯ ಗಾತ್ರ ₹80 ಕೋಟಿಗಳಿಗೆ ಹಿಗ್ಗಿತು. ಆರಂಭದಲ್ಲಿ ಕೊಳವೆ ಬಾವಿಗಳಿಂದ ನೀರು ಪೂರೈಕೆ ಆಗುತ್ತಿದ್ದಾಗ ಅಷ್ಟಾಗಿ ಈ ಯೋಜನೆಯ ಬಗ್ಗೆ ತಲೆ ಕೆಡಿಸಿಕೊಳ್ಳದೆ ಇದ್ದ ಹಳ್ಳಿಗರು ಈಗ ಅಂತರ್ಜಲ ಬತ್ತಿರುವುದರಿಂದ ಈ ಯೋಜನೆಯು ಕಾರ್ಯರೂಪಕ್ಕೆ ಬರದೇ ಹೋಗಿದ್ದರೆ ತಮ್ಮ ಗತಿ ಏನಾಗುತ್ತಿತ್ತು ಎಂದು ಉದ್ಗರಿಸುತ್ತಿದ್ದಾರೆ!

ಯಡಿಯೂರಪ್ಪ ಅವರು ಮತ್ತು ನಮ್ಮ ಸಂಬಂಧ ನಿನ್ನೆ ಮೊನ್ನೆಯದಲ್ಲ. ನಮ್ಮ ಮಠದ ವಾರ್ಷಿಕ ಸಮಾರಂಭವಾದ 'ಸರ್ವಜನಾಂಗದ ಶಾಂತಿಯ ತೋಟ'ವೆಂದೇ ಜನಮಾನಸದಲ್ಲಿ ನೆಲೆಗೊಂಡಿರುವ 'ತರಳಬಾಳು ಹುಣ್ಣಿಮೆ ಮಹೋತ್ಸವ'ವು 37 ವರ್ಷಗಳ ಹಿಂದೆ (1985) ಶಿಕಾರಿಪುರದಲ್ಲಿ ನಡೆದಾಗ ಅವರು ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ ಆಗಿದ್ದರು. ಅಂದಿನಿಂದಲೂ ನಮ್ಮೊಂದಿಗೆ ಆತ್ಮೀಯ ಒಡನಾಟ ಹೊಂದಿರುವ ಯಡಿಯೂರಪ್ಪ ಅವರು ವಿರೋಧ ಪಕ್ಷದಲ್ಲಿರಲಿ, ಆಡಳಿತ ಪಕ್ಷದಲ್ಲಿರಲಿ, ಮಂತ್ರಿಗಳಾಗಿರಲಿ, ಮಾಜಿ ಮಂತ್ರಿಗಳಾಗಿರಲಿ ನಮ್ಮ ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸೇವಾ ಕಾರ್ಯಗಳಲ್ಲಿ ಅನನ್ಯವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

ಸದಾ ಜನಕಲ್ಯಾಣದ ಕನಸು

ಯಡಿಯೂರಪ್ಪನವರು ಕನ್ನಡ ನಾಡು ಕಂಡ ಅಪ್ರತಿಮ ರೈತಪರ ಹೋರಾಟಗಾರರು. ಅಪಾರ ಜನಪರ ಕಾಳಜಿ ಉಳ್ಳವರು. ಜನರ ಮಧ್ಯೆ ಬೆಳೆದು ಬಂದ ಅವರು ಕರೋನಾ ಬಿಕ್ಕಟ್ಟಿನಲ್ಲಿ ಬೆಂಗಳೂರಿನ ಗೃಹಕಚೇರಿಯಲ್ಲಿ ಅಣೆಕಟ್ಟೆಯಲ್ಲಿ ಹಿಡಿದಿಟ್ಟ ಅಪಾರ ಶಕ್ತಿಯುಳ್ಳ ಜಲರಾಶಿಯಂತೆ ಬಂಧಿಯಾಗಿದ್ದರೂ ನಾಡಿನ ಜನರ ಕಲ್ಯಾಣದ ಕನಸನ್ನೇ ಸದಾ ಕಾಣುತ್ತಿದ್ದರು. ಅವರು ರಾಜ್ಯದ ಅನೇಕ ತಾಲೂಕುಗಳಲ್ಲಿ ಕೆರೆಗಳಿಗೆ ನೀರು ತುಂಬಿಸುವ ನಮ್ಮ ಯೋಜನೆಗಳಿಗೆ ಹಿಂದುಮುಂದು ನೋಡದೆ ಸರ್ಕಾರದ ಒಪ್ಪಿಗೆಯನ್ನು ನೀಡಿ ಉದಾರವಾಗಿ ಅನುದಾನ ನೀಡಿ ಸಹಕರಿಸಿರುವುದನ್ನು ನಾವೆಂದೂ ಮರೆಯಲಾರೆವು.

ಚನ್ನಗಿರಿಯ ಉಬ್ರಾಣಿ-ಅಮೃತಾಪುರ, ಹರಿಹರದ ರಾಜನಹಳ್ಳಿ, ಹೊನ್ನಾಳಿಯ ಸಾಸ್ವೆಹಳ್ಳಿ, ಬ್ಯಾಡಗಿ ತಾಲೂಕಿನ ಅಣೂರು ಮತ್ತು ಬುಡಪನಹಳ್ಳಿ, ಜಗಳೂರು ಮತ್ತು ಭರಮಸಾಗರ ಇತ್ಯಾದಿ ಯಾವುದೇ ಏತ ನೀರಾವರಿ ಯೋಜನೆ ಇರಲಿ, ಸರ್ಕಾರವಿದ್ದಾಗ ಕೋಟ್ಯಂತರ ರು.ಗಳ ಹಣ ಬಿಡುಗಡೆ ಮಾಡಿದ ಶ್ರೇಯಸ್ಸು ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ.

ಕೊನೆಗೂ ನಮ್ಮ ಆಶಯ ಸಾಕಾರ

ಈ ಹಿಂದೆ ಇಂತಹ ಯೋಜನೆಗಳಿಗೆ ಧಾರಾಳವಾಗಿ ಹಣ ಮಂಜೂರು ಮಾಡುತ್ತಿದ್ದ ಅವರು ಭರಮಸಾಗರ ಮತ್ತು ಜಗಳೂರು ಏತ ನೀರಾವರಿಗೆ ಒಂದೇ ಕಂತಿನಲ್ಲಿ ಅನುದಾನ ನೀಡಲು ರಾಜ್ಯದ ಆರ್ಥಿಕ ದುರ್ಭರತೆಯ ಕಾರಣದಿಂದ ಹಿಂದೇಟು ಹಾಕಿದರು. ₹1,220 ಕೋಟಿಗಳ ಜಗಳೂರು ಮತ್ತು ಭರಮಸಾಗರ ಬೃಹತ್ ಏತನೀರಾವರಿ ಯೋಜನೆಗಳನ್ನು ₹225 ಕೋಟಿಗಳಿಗೆ ಸೀಮಿತಗೊಳಿಸಿ ಆದೇಶ ಹೊರಡಿಸಿದ್ದು ನಮಗೆ ಅಸಂತುಷ್ಟಿಯನ್ನುಂಟು ಮಾಡಿತು. ನಂತರ ನಮ್ಮ ಒತ್ತಾಸೆಗೆ ಮಣಿದು ಒಂದೇ ವಾರದಲ್ಲಿ ಮೇಲ್ಕಂಡ ಸರಕಾರದ ಆದೇಶವನ್ನು ಹಿಂಪಡೆದು ಪೂರಾ ಹಣವನ್ನು ಒಂದೇ ಕಂತಿನಲ್ಲಿ ಮಂಜೂರು ಮಾಡಿ ಮರು ಆದೇಶ ಹೊರಡಿಸಿದರು. ಈ ಎರಡೂ ಯೋಜನೆಗಳ ಕಾಮಗಾರಿ ಕರೋನಾ ಬಿಕ್ಕಟ್ಟಿನ ನಡುವೆಯೂ ಭರದಿಂದ ಸಾಗಿ ಸುಮಾರು 100 ಕೆರೆಗಳಿಗೆ ನೀರು ತುಂಬಿಸಲು ಸಾಧ್ಯವಾಯಿತು.

ಸುಮಾರು 100 ಕೆರೆಗಳಿಗೆ ಧುಮ್ಮಿಕ್ಕಿ ಹರಿಯುತ್ತಿರುವ ತುಂಗಭದ್ರೆಯ ಜಲರಾಶಿಯು ಈ ಭಾಗದ ಜನರ ಆರ್ಥಿಕ ಚೈತನ್ಯವನ್ನು ಅಭಿವೃದ್ಧಿಗೊಳಿಸಿ ಅವರ ಭಾವಕೋಶದಲ್ಲಿ ಹೊಸ ಕೃಷಿ ಚಟುವಟಿಕೆಯ ಭಾಷ್ಯ ಬರೆದಿದೆ.

ಶತಮಾನಗಳಿಂದ ಬರಗಾಲದ ಬೇಗೆಯಿಂದ ತತ್ತರಿಸಿದ ಈ ಭಾಗದ ಗ್ರಾಮೀಣ ಜನರು 'ಇಳಿದು ಬಾ ತಾಯೆ, ಇಳಿದು ಬಾ...' ಎಂಬ ಕವಿವಾಣಿಯನ್ನು ಈಗ ಮನೆ ಮನಗಳಲ್ಲಿ ಜಪಿಸುತ್ತಿದ್ದಾರೆ.

ಸೈಕಲ್‌ನಲ್ಲಿ ಸುತ್ತಿ ಪಕ್ಷ ಕಟ್ಟಿದ ಬಿಎಸ್‌ವೈ | ದೇವದಾಸಿಯರು, ನೇಕಾರರು, ಮನೆ ಕಳಕೊಂಡವರಿಗೆ ನೆರವು ಅವಿಸ್ಮರಣೀಯ

ಜನಾನುರಾಗಿ ಯಡಿಯೂರಪ್ಪ ಬದ್ಧತೆಯ ನಾಯಕ



ಗೋವಿಂದ ಎಂ.ಕಾರಜೋಳ
ಚಿತ್ರದುರ್ಗ ಸಂಸದರು, ಮಾಜಿ ಉಪ ಮುಖ್ಯಮಂತ್ರಿ

> ಮಾಜಿ ದೇವದಾಸಿಯರ ಸಂಕಷ್ಟಕ್ಕೆ ಮಿಡಿದ ಯಡಿಯೂರಪ್ಪ ಅವರು ವೇದಿಕೆಯಲ್ಲೇ ಮಾಸಾಶನ ಘೋಷಣೆ ಮಾಡಿದರು. ಬೆಂಗಳೂರಿಗೆ ಹೋದ ತಕ್ಷಣವೇ ಸುಮಾರು 37 ಸಾವಿರ ಹೆಣ್ಣುಮಕ್ಕಳಿಗೆ ಒಂದೇ ದಿನ ಮಾಸಾಶನ ವಿತರಣೆ ಮಾಡಿದರು.


ಬಿ.ಎಸ್.ಯಡಿಯೂರಪ್ಪ ಅವರಿಗೆ ಅವರೇ ಸಾಟಿ, ಜನಪರವಾದ ಅದರಲ್ಲೂ ರೈತ ಪರ ಸದಾ ಮಿಡಿಯುವ ಹೃದಯದ ಶ್ರೀಮಂತ ನಾಯಕ. ಗಟ್ಟಿಧ್ವನಿ, ಮನಸ್ಸು ಮಾತ್ರ ಮೃದು. ಅವರ ಸಂಘಟನಾತ್ಮಕ ಜಾಣ್ಮೆ ಹಾಗೂ ಬದ್ಧತೆಯನ್ನು ಅವಲೋಕಿಸುವುದಾದರೆ ಸೈಕಲ್ ಮೇಲೆ ರಾಜ್ಯವನ್ನೆಲ್ಲ ಸುತ್ತಾಡಿ ಪಕ್ಷ ಕಟ್ಟಿ ದಕ್ಷಿಣ ಭಾರತದಲ್ಲೇ ಬಿಜೆಪಿಯ ಅಧಿಕಾರದ ಹೆಬ್ಬಾಗಿಲು ತೆರೆಯುವಂತೆ ಮಾಡಿದ್ದು ದೊಡ್ಡ ಸಾಹಸವೇ ಸರಿ.

'ಈ ನಿಮ್ಮ ಯಡಿಯೂರಪ್ಪ' ಎಂದೇ ಜನರನ್ನು ಉದ್ದೇಶಿಸಿ ಮಾತನಾಡುವ ಹಮ್ಮು ಬಿಮ್ಮು ಇಲ್ಲದ ರಾಜಕಾರಣಿ ಹಾಗೂ ಅಂತಃಕರಣಿ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು 50 ವರ್ಷ ರಾಜ್ಯವನ್ನು ಸುತ್ತಿದ್ದಾರೆ. ರೈತರ ಪರವಾಗಿ ಹೋರಾಡಿ, ದೀನದಲಿತರಿಗೆ ನ್ಯಾಯ ಒದಗಿಸಿ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದವರು. ಅವರ ಜೀವನ ಮತ್ತು ಸಮಾಜಸೇವೆ ತೆರೆದ ಪುಸ್ತಕವಾಗಿದೆ.

ಆಡಳಿತ ಪಕ್ಷ, ಪ್ರತಿಪಕ್ಷ ಎನ್ನದೇ ಎಲ್ಲ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನ ನೀಡಿ ರಾಜ್ಯದ ಅಭಿವೃದ್ಧಿಗೆ ಸಾಥ್ ನೀಡಿದ ಏಕೈಕ ಮುಖ್ಯಮಂತಿಯಾದ ಬಿ.ಎಸ್.ಯಡಿಯೂರಪ್ಪ ಅವರ ಸಂಪುಟದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದು ನನ್ನ ಸುದೈವ. ಯಡಿಯೂರಪ್ಪ ಜನಪರ ಕಾಳಜಿ, ಆಡಳಿತ ವೈಖರಿ ಮಾದರಿ ಎನ್ನುವುದನ್ನು ನಾನು ಕಂಡಿದ್ದೇನೆ. ಅವರ ಸಾಮಾಜಿಕ ಸೇವೆ, ಅಭಿವೃದ್ಧಿಗೆ ಇಟ್ಟ ದಿಟ್ಟಹೆಜ್ಜೆ, ಸಂಕಷ್ಟದಲ್ಲಿ ಇರುವವರ ನೆರವಿಗೆ ತಕ್ಷಣದ ಮಿಡಿದ ಯಡಿಯೂರಪ್ಪ ಅವರ ಬಗ್ಗೆ ಹೇಳಬೇಕಾದದ್ದು ಸಾಕಷ್ಟಿದೆ. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿ ಕೈಗೊಂಡ ಜನಪರ ನಿರ್ಧಾರಗಳ ಪೈಕಿ ಕೆಲವನ್ನಾದರೂ ರಾಜ್ಯದ ಜನತೆಗೆ ತಿಳಿಸಿದ್ದರೆ ಹೇಗೆ?

ಬಿಎಸ್‌ವೈ ಮಾನವೀಯತೆಗೆ ಸಾಕ್ಷಿ

2008-09ರಲ್ಲಿ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಅವರನ್ನು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಇಂಗಳಗಿ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದೆ. ಎಚ್‌ಐವಿ ಪೀಡಿತರನ್ನು ಸಮಾಜ ತಿರಸ್ಕರಿಸದೆ ಒಪ್ಪಿಕೊಳ್ಳಬೇಕೆಂಬ ಸಂದೇಶ ಸಾರುವ ಉದ್ದೇಶದಿಂದ ಸೋಂಕಿತರ ಮನೆಗೆ ಯಡಿಯೂರಪ್ಪ ಅವರನ್ನು ಭೇಟಿ ಮಾಡಿಸಲಾಯಿತು. ನಂತರ ಬಹಿರಂಗ ಸಮಾವೇಶ ಆಯೋಜಿಸಲಾಗಿತ್ತು. ಎರಡೂವರೆ ಸಾವಿರ ಮಾಜಿ ದೇವದಾಸಿ ಮಹಿಳೆಯರನ್ನು ಸೇರಿಸಲಾಗಿತ್ತು. ಅವರಿಗೆ ಕ್ಯಾಪ್ ಹಾಕಿ ಕೂರಿಸಲಾಗಿತ್ತು. ಯಡಿಯೂರಪ್ಪ ಅವರು ವೇದಿಕೆ ಬಂದವರೇ ತಕ್ಷಣ ಗಾಬರಿಯಾಗಿ 'ಇಷ್ಟೊಂದು ಹೆಣ್ಣುಮಕ್ಕಳು ಬಂದಿದ್ದಾರಲ್ಲ, ಅವರ ತಲೆಗೆ ಕ್ಯಾಪ್ ಹಾಕಿ ಏಕೆ ಕೂರಿಸಲಾಗಿದೆ?' ಎಂದು ನನ್ನನ್ನು ಕೇಳಿದರು. 'ಅವರೆಲ್ಲ ಮಾಜಿ ದೇವದಾಸಿಯರು, ಬಡವರಿದ್ದು, ಸಹಾಯ ಕೇಳಲು ಬಂದಿದ್ದಾರೆ. ಅವರಿಗೆ ವಾಸಿಸಲು ಒಂದು ರೂಮ್ ಕೂಡ ಇಲ್ಲದ ಕೆಟ್ಟ ಪರಿಸ್ಥಿತಿಯಲ್ಲಿದ್ದಾರೆ' ಎಂದು ವಿವರಿಸಿದೆ. 'ಹಾಗಾದರೆ ಅವರಿಗೆಲ್ಲ ಒಂದೊಂದು ಹಸು ಕೊಡೋಣವೇ' ಎಂದರು. 'ಹಸು ಕೊಟ್ಟರೆ ಸಾಕಲು ಆಗದು, ಕಡುಬಡವರು, ಅನೇಕರು ಗುಡಿಸಲಿನಲ್ಲಿದ್ದಾರೆ' ಎಂದು ಯಡಿಯೂರಪ್ಪ ಅವರ ಗಮನಕ್ಕೆ ತಂದೆ. 'ಹಾಗಾದರೆ ಏನು ಮಾಡಬೇಕಪ್ಪಾ?' ಎಂದು ನನ್ನನ್ನು ಕೇಳಿದರು. 'ಮಾಸಾಶನ ಕೊಟ್ಟರೆ ಅವರ ಮುಪ್ಪಿನಾವಸ್ಥೆ ತನಕ ಬದುಕಿಗೆ ನೆರವಾಗುತ್ತದೆ' ಎಂದು ವಿವರಿಸಿದೆ.



ಮಾಜಿ ದೇವದಾಸಿಯರ ಸಂಕಷ್ಟಕ್ಕೆ ಮಿಡಿದ ಯಡಿಯೂರಪ್ಪ ಅವರು ವೇದಿಕೆಯಲ್ಲೇ ಮಾಸಾಶನ ಘೋಷಣೆ ಮಾಡಿದರು. ಬೆಂಗಳೂರಿಗೆ ಹೋದ ತಕ್ಷಣವೇ ಸುಮಾರು 37 ಸಾವಿರ ಹೆಣ್ಣುಮಕ್ಕಳಿಗೆ ಒಂದೇ ದಿನ ಮಾಸಾಶನ ವಿತರಣೆ ಮಾಡಿದರು. ಇದು ಯಡಿಯೂರಪ್ಪ ಅವರ ಮಾನವೀಯತೆಗೆ ಸಾಕ್ಷಿ.

ನೇಕಾರರ ಸಂಕಷ್ಟಕ್ಕೂ ಮಿಡಿದ ಹೃದಯ

ಯಡಿಯೂರಪ್ಪ ಅವರು ಹಾಗೂ ನಾನು ಚರ್ಚಿಸುತ್ತಿದ್ದಾಗ, 'ನೇಕಾರರು ಬಹಳ ಬಡವರಿದ್ದು, ಸಂಕಷ್ಟದಲ್ಲಿದ್ದಾರೆ ಸರ್' ಎಂದು ಅವರ ಗಮನಕ್ಕೆ ತಂದೆ. 'ಉತ್ತರ ಕರ್ನಾಟಕದಲ್ಲಿ ಬಹುತೇಕ ಮಂದಿ ಹ್ಯಾಂಡ್‌ಲೂಮ್ ನೇಕಾರರಿದ್ದಾರೆ. ಹ್ಯಾಂಡ್‌ಲೂಮ್ ನಡೆಸೋದು ಅವರಿಗೆ ಕಷ್ಟ' ಎಂದು ವಿವರಿಸಿದೆ.

ಹ್ಯಾಂಡ್‌ಲೂಮ್ ನೇಕಾರರ ಸಂಕಷ್ಟಕ್ಕೆ ನೆರವಾಗಲು ಏನು ಮಾಡಬೇಕೆಂದು ನನ್ನನ್ನು ಕೇಳಿದರು. ಜವಳಿ ಖಾತೆ ನನ್ನಲ್ಲಿಯೇ ಇತ್ತು. 'ಏನಿಲ್ಲ, ಅವರಿಗೆಲ್ಲ ವಿದ್ಯುತ್ ಮಗ್ಗಕ್ಕೆ ಪರಿವರ್ತನೆ ಮಾಡಿಸೋಣ, ಒಬ್ಬರಿಗೆ ಎರಡೆರಡು ಪವರ್‌ಲೂಮ್ ಕೊಡಿಸೋಣ, ಅದರಲ್ಲಿ ಒಂದು ಉಚಿತ, ಇನ್ನೊಂದನ್ನು ಸಾಲದ ರೂಪದಲ್ಲಿ ಕೊಡಿಸೋಣ' ಎಂದು ವಿವರಿಸಿದೆ. 'ಇಷ್ಟಾದರೆ ಸಾಲದು ಪವರ್ ಲೂಮ್‌ಗೆ ವಾಣಿಜ್ಯ ಉದ್ದೇಶ ವಿದ್ಯುತ್ ದರ ಆದರೆ ನೇಕಾರರಿಗೆ ಬಿಲ್ ಕಟ್ಟೋದು ಆಗಲ್ಲ ಸರ್' ಎಂದರೆ, 'ಆಗಲೂ ಮತ್ತೇನು ಮಾಡೋಣ' ಎಂದು ಯಡಿಯೂರಪ್ಪ ಕೇಳಿದರು. 'ವಿದ್ಯುತ್ ಸಬ್ಸಿಡಿ ಕೊಟ್ಟರೆ ಅನುಕೂಲವಾಗುತ್ತದೆ' ಎಂದು ಅವರ ಗಮನಕ್ಕೆ ತಂದರೆ 'ಆಯ್ತು ಸಬ್ಸಿಡಿ ಕೊಟ್ಟೇಬಿಡು' ಎಂದು ನನಗೆ ಆದೇಶಿಸಿದ್ದರು. ಇಂಥ ಮಾನವೀಯತೆಯ ಮನುಷ್ಯನ್ನು ನಾನು ನೋಡಿದ್ದು ವಿರಳ.

ನೆರೆ ಸಂತ್ರಸ್ತರಿಗೆ ಸೂರು ಒದಗಿಸಿದ ನಾಯಕ

2019ರಲ್ಲಿ ಯಡಿಯೂರಪ್ಪ ಮತ್ತೆ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ವರುಣಾರ್ಭಟ ಉಂಟಾಗಿ, ಉತ್ತರ ಕರ್ನಾಟಕದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಯಿತು. ಆಕಾಶವೇ ಕೆಳಗೆ ಬಿದ್ದಂತೆ ಮಳೆಯ ಆರ್ಭಟ ಇತ್ತು. ಆ ವೇಳೆ ಸಿಎಂ ಯಡಿಯೂರಪ್ಪ, ನಾನು ಸೇರಿದಂತೆ ಅನೇಕರು ತಕ್ಷಣ ಬೆಳಗಾವಿಗೆ ತೆರಳಿದವು. ಆಗ ಯಡಿಯೂರಪ್ಪ ಅವರೊಬ್ಬರೇ ಮುಖ್ಯಮಂತ್ರಿ ಇದ್ದರು, ಮಂತ್ರಿಮಂಡಲ ರಚನೆಯಾಗಿರಲಿಲ್ಲ. ನಾನೂ ಮಂತ್ರಿ ಇರಲಿಲ್ಲ. ಸಭೆ ನಡೆಸುವಾಗ ಮನೆಗಳ ಬಿದ್ದ ಅಂಕಿಅಂಶಗಳನ್ನು ಅಧಿಕಾರಿಗಳು ವಿವರಿಸಲಾರಂಭಿಸಿದರು.

'ಮನೆ ಕಳೆದುಕೊಂಡವರಿಗೆ ಏನು ಮಾಡಬಹುದು' ಎಂದು ಯಡಿಯೂರಪ್ಪ ಕೇಳಿದರು, ಕೇಂದ್ರ ಸರಕಾರದ ಮಾರ್ಗಸೂಚಿ ಪ್ರಕಾರ ₹95,100 ಪರಿಹಾರ ಕೊಡಲು ಅವಕಾಶವಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. '₹95 ಸಾವಿರಗಳಲ್ಲಿ ಮನೆ ಆಗುತ್ತದೆಯೇ?' ಎಂದು ಯಡಿಯೂರಪ್ಪನವರು ಪಕ್ಕದಲ್ಲಿದ್ದ ನನ್ನನ್ನು ಕೇಳಿದರು. 'ಅಷ್ಟು ಪರಿಹಾರದ ಹಣದಲ್ಲಿ ಮನೆ ಆಗೋದು ಕಷ್ಟ ಸರ್' ಎಂದು ಅವರ ಗಮನ ಸೆಳೆದೆ. 'ಏನು ಮಾಡೋಣ' ಎಂದು ನನ್ನನ್ನು ಕೇಳಿದರು. 'ಪರಿಹಾರ ಸ್ವಲ್ಪ ಹೆಚ್ಚು ಕೊಡೋಣ ಸರ್' ಎಂದೆ, ತಕ್ಷಣ ₹5 ಲಕ್ಷ ಪರಿಹಾರವನ್ನು ಸಭೆಯಲ್ಲೇ ಯಡಿಯೂರಪ್ಪ ಘೋಷಣೆ ಮಾಡಿದರು. ಅದೊಂದು ಐತಿಹಾಸಿಕ ಘೋಷಣೆಯೇ ಸರಿ. ಮುಂದೆ ನಾನೇ ಬೆಳಗಾವಿ ಉಸ್ತುವಾರಿ ಮಂತ್ರಿಯಾದೆ, ಅದೇ ಜಿಲ್ಲೆಗೆ ₹1200 ಕೋಟಿ ಪರಿಹಾರ ಕೊಡಲಾಯಿತು. ಯಡಿಯೂರಪ್ಪ ಸಾಮಾಜಿಕ ಬದ್ಧತೆ, ಜನಪರ ಕಾಳಜಿಗೆ ಅತ್ಯುತ್ತಮ ಉದಾಹರಣೆಯಾಗಿದೆ.

ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆದ ಮೇಲೆಯೇ ರಾಜ್ಯದಲ್ಲಿ ಅಭಿವೃದ್ಧಿಗೆ ವೇಗ ಸಿಕ್ಕಿದ್ದು, ಯೋಜನೆಗಳಿಗೆ ಕೋಟಿ ಕೋಟಿ ಅನುದಾನ ಕೊಟ್ಟಿದ್ದೇ ಅವರ ಅಧಿಕಾರಾವಧಿಯಲ್ಲಿ.

ಶಿಕಾರಿಪುರದಲ್ಲಿ ತಮ್ಮ ರಾಜಕೀಯ ಜೀವನ ಆರಂಭಿಸಿದ ಬಿಎಸ್‌ವೈ ಅವರು ಪ್ರಾರಂಭದಲ್ಲಿ ಆರ್‌ಎಸ್‌ಎಸ್‌ನ ತಾಲೂಕು ಕಾರ್ಯವಾಹರಾಗಿ, ನಂತರ ಪುರಸಭೆ ಅಧ್ಯಕ್ಷ, ಶಾಸಕ, ಪ್ರತಿಪಕ್ಷದ ನಾಯಕ, ಸಂಸದರಾಗಿ ದುಡಿದಿದ್ದಾರೆ.


ಬಿಜೆಪಿ ಜಿಲ್ಲಾಧ್ಯಕ್ಷರಾಗಿ, ರಾಜ್ಯಾಧ್ಯಕ್ಷರಾಗಿ, ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಹೋರಾಟ ಹಾಗೂ ಪಾದಯಾತ್ರೆಗಳು ಅವರ 50 ವರ್ಷಗಳ ರಾಜಕೀಯ ಜೀವನದ ಭಾಗವಾಗಿವೆ. ವಿಧಾನಸೌಧದಲ್ಲಿ ರೈತರ ಪರವಾಗಿ ಮಾತನಾಡಲು ಎದ್ದು ನಿಂತರೆ ಸಾಕು ವಿಧಾನಸೌಧವೇ ನಡುಗುತಿತ್ತು ಎಂದು ಇಂದಿಗೂ ಪತ್ರಿಪಕ್ಷದವರೇ ಮಾತನಾಡುತ್ತಾರೆ. ಅಂಥ ವ್ಯಕ್ತಿತ್ವ ಯಡಿಯೂರಪ್ಪ ಅವರದು. ಅವರ ಹೋರಾಟ ಜೀವನ, ಕಾಯಕ ನಿಷ್ಠೆ, ನಾಯಕತ್ವ ರಾಜ್ಯದ ಜನರ ಮನಸ್ಸಿನಿಂದ ಎಂದೂ ಅಳಿಸಲಾಗದ ಪುಟಗಳಾಗಿವೆ.

5 ಕೋಟಿ ಗಿಡ ನೆಡಲಿದೆ ಕಾನೂನು ಸೇವಾ ಪ್ರಾಧಿಕಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ (ಕೆಎಸ್‌ಎಲ್‌ಎಸ್‌ಎ) ಪರಿಸರ ಸಂರಕ್ಷಣೆ ಉದ್ದೇಶದಿಂದ 'ಧರೆ ಫೌಂಡೇಷನ್' ಜತೆ ಒಡಂಬಡಿಕೆ ಮಾಡಿಕೊಂಡಿದ್ದು, ಮುಂದಿನ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಐದು ಕೋಟಿ ಗಿಡಗಳನ್ನು ನೆಡಲು ಅಭಿಯಾನ ಕೈಗೆತ್ತಿಕೊಂಡಿದೆ ಎಂದು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರ್ ಶೆಟ್ಟಿ ತಿಳಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರದ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಬೆಂಗಳೂರು ನಗರದಲ್ಲಿ ಎರಡು ಕೋಟಿ ಗಿಡ ನೆಡಲಾಗುವುದು. ಉಳಿದ ಮೂರು ಕೋಟಿ ಸಸಿಗಳನ್ನು ರಾಜ್ಯದ ಇತರ ಕಡೆ ನೆಡಲಾಗುವುದು. ರಾಜ್ಯವ್ಯಾಪಿ ನಡೆಯಲಿರುವ ಈ ಅಭಿಯಾನಕ್ಕೆ ಸದ್ಯದಲ್ಲೇ ಚಾಲನೆ ನೀಡಲಾಗುವುದು ಎಂದರು.



ರಾಜ್ಯದಲ್ಲಿ ಬಿಸಿಲಿನ ಬೇಗೆ ಹೆಚ್ಚಾಗಿದೆ. ಇದಕ್ಕೆ ಮುಖ್ಯ ಕಾರಣ ಅರಣ್ಯ ನಾಶ. ನಿಯಮದ ಪ್ರಕಾರ ಅಭಿವೃದ್ಧಿ ಯೋಜನೆಗೆ ಕಡಿಯುವ ಮರಗಳಿಗೆ ಪರ್ಯಾಯವಾಗಿ ಸಸಿಗಳನ್ನು ನಡೆಬೇಕಾಗಿದೆ. ಆದರೆ, ಆ ಕಾನೂನು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಜಾರಿಯಾಗುತ್ತಿದೆ ಎಂಬುದು ಪ್ರಶ್ನಾರ್ಹ. ಮುಂದಿನ ಪೀಳಿಗೆಗೆ ಉತ್ತಮ ಪರಿಸರ ನೀಡಲು ಹಾಗೂ ಹಾಲಿ ಇರುವ ಪರಿಸರ ಸಂರಕ್ಷಣೆ ಮಾಡಲು ಅಭಿಯಾನ ಕೈಗೊಂಡಿದೆ ಎಂದು ಹೇಳಿದರು.

ಧರೆ ಫೌಂಡೇಷನ್‌ನ ನಿರ್ದೇಶಕ ಡಿ.ಎಂ. ಪೂರ್ಣೇಶ್ ಹಾಗೂ ವೃಷಾಂಕ್ ಭಟ್ ಉಪಸ್ಥಿತರಿದ್ದರು.

ಕೋಡಿಮಠ ಶ್ರೀಗಳಿಗೆ ಬೆಳ್ಳಿ ಕಿರೀಟ ಅರ್ಪಿಸಿದ ಶಾಸಕ ಉಮೇಶ್ ಮೇಟಿ

• **ಕನ್ನಡಪ್ರಭ ವಾರ್ತೆ** ಅರಸೀಕೆರೆ

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ ನಂತರ ನೂತನ ಶಾಸಕ ಉಮೇಶ್ ಮೇಟಿ ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಹಾರನಹಳ್ಳಿ ಕೋಡಿಮಠಕ್ಕೆ ಭೇಟಿ ನೀಡಿ ಪೀಠಾಧ್ಯಕ್ಷ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಅವರಿಗೆ ಬೆಳ್ಳಿ ಕಿರೀಟ ಅರ್ಪಿಸಿ ಆಶೀರ್ವಾದ ಪಡೆದರು.

ಗುರುವಾರ ರಾತ್ರಿ ಮಠಕ್ಕೆ ಆಗಮಿಸಿದ ಉಮೇಶ್ ಮೇಟಿ ಮಠದಲ್ಲಿನ ಗದ್ದುಗೆಗಳಿಗೆ ಪೂಜೆ ಸಲ್ಲಿಸಿದರು. ಬಳಿಕ ಸ್ವಾಮೀಜಿಗೆ ರಜತ ಕಿರೀಟ ಧಾರಣೆ ಮಾಡಿ ಭಕ್ತಿಭಾವ ಸಮರ್ಪಿಸಿದರು. ಉಮೇಶ್ ಮೇಟಿ ಹಾಗೂ ಶ್ರೀಗಳ ನಡುವೆ 1 ಗಂಟೆಗೂ ಹೆಚ್ಚು ಕಾಲ ಗೋಪ್ಯ ಸಮಾಲೋಚನೆ ನಡೆದಿರುವುದು ವಿಶೇಷಗಮನಸೆಳೆಯಿತು. ರಾಜಕೀಯವಾಗಿ ತಮ್ಮ ಮುಂದಿನ ನಡೆ, ಕ್ಷೇತ್ರದ ಅಭಿವೃದ್ಧಿ ಹಾಗೂ ಭವಿಷ್ಯದ ವಿಚಾರಗಳ ಕುರಿತು ಶ್ರೀಗಳ ಮಾರ್ಗದರ್ಶನ ಪಡೆದಿದ್ದಾರೆ ಎಂಬ ಮಾಹಿತಿ ಮಠದ ಮೂಲಗಳಿಂದ ತಿಳಿದುಬಂದಿದೆ.

Editor: RAVI HEGDE, Printed and Published by B.V. MALLIKARJUNAIAH on behalf of Kannada Prabha Publications Ltd., No. 4-6-548/3, Pramod Towers, 1st floor, Karangalapady, Mangalore-575 003, Printed at Manipal Media Network Ltd., Udayavani Building, Press Corner, Manipal-576 104. Registered No. KA/BGGPO/2559/10-12

ಸುದ್ದಿ ಸಿಂಚನ

ಏರಿಂಡಿಯಾ ವೆಚ್ಚ ಕಡಿತ: ವೇತನ ಹೆಚ್ಚಳ ಮುಂದಕ್ಕೆ

ನವದೆಹಲಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಉಂಟಾದ ಆರ್ಥಿಕ ನಷ್ಟ ಸರಿದೂಗಿಸಲು ಏರಿಂಡಿಯಾ ವಿಮಾನ ಯಾನ ಸಂಸ್ಥೆಯು ವೆಚ್ಚ ಕಡಿತಕ್ಕೆ ಮುಂದಾಗಿದೆ. ಇದರ ಮುಂದುವರೆದ ಭಾಗವಾಗಿ ಸಿಬ್ಬಂದಿಗಳ ವೇತನ ಹೆಚ್ಚಳ ಸೇರಿ ಕೆಲ ಸೌಲಭ್ಯಗಳಿಗೆ ಕತ್ತರಿ ಹಾಕಿದೆ. ಕಂಪನಿಯು ಯುದ್ಧದಿಂದ ನಷ್ಟ ಅನುಭವಿಸಿದ್ದರೂ ಉದ್ಯೋಗಿಗಳನ್ನು ವಜಾ ಮಾಡುವ ಯೋಚನೆಯಲ್ಲಿಲ್ಲ .ಬದಲಾಗಿ ಅವರಿಗೆ ನೀಡಿರುವ ಕೆಲ ಸೌಲಭ್ಯಗಳನ್ನು ಕಡಿತಗೊಸಲಿದೆ. ಸಿಬ್ಬಂದಿಗೆ ನೀಡಲಾಗುವ ವಾರ್ಷಿಕ ವೇತನ ಹೆಚ್ಚಳ ಹಾಗೂ ಬಡ್ತಿಯನ್ನು ಕನಿಷ್ಠ 3 ತಿಂಗಳು ಮುಂದೂಡಲಿದೆ. ಇದಲ್ಲದೆ, ಸಿಬ್ಬಂದಿಯು ಕರ್ತವ್ಯದ ಲ್ಲಿದ್ದಾಗ ಮಿತವ್ಯಯ ಮಾಡಬೇಕು ಎಂದು ಸೂಚಿಸಲಾ ಗಿದೆ. ಏರಿಂಡಿಯಾ ಸಿಇಒ ಕ್ಯಾಂಪ್‌ಬೆಲ್ ವಿಲ್ಸನ್ ಕಂಪನಿ ಆಡಳಿತ ಮಂಡಳಿ, ವಿವಿಧ ಅಧಿಕಾರಿಗ ಳೊಂದಿಗಿನ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ.

ಪತಿಯ ವಿರುದ್ಧ ನಟಿ ಸೆಲಿನಾ ಕಿರುಕುಳ ಆರೋಪ: ದೂರು

ನವದೆಹಲಿ: ನಟಿ. ಮಾಜಿ ಮಿಸ್ ಇಂಡಿಯಾ ಸೆಲಿನಾ ಜೇಟ್ಲಿ ಅವರು ಆಸ್ಟ್ರಿಯಾ ಮೂಲದ ತಮ್ಮ ಪತಿ ಪೀಟರ್



ಹಾಗ್‌ರ ವಿರುದ್ಧ ಕ್ರೌರ್ಯ, ದೈಹಿಕ ಹಾನಿ, ಬೆದರಿಕೆ ಮತ್ತು ನಿರಂತರ ಕಿರುಕುಳದ ದೂರು ದಾಖಲಿಸಿದ್ದು, ಮುಂಬೈ ಪೊಲೀಸರು ಭಾರತೀಯ ನ್ಯಾಯಸಂಹಿತೆಯ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅತ್ತ ತನಿಖೆಗೆ ಹಾಗ್ ಸಹಕರಿಸುತ್ತಿಲ್ಲವಾದ ಕಾರಣ ಪೊಲೀಸರು ಲುಕ್‌ಔಟ್ ಸರ್ಕ್ಯುಲರ್ ಹೊರಡಿಸಿದ್ದಾರೆ. ಕಳೆದ ವರ್ಷ ನವೆಂಬರ್‌ನಲ್ಲಿ ನಟಿ, ಕೌಟುಂಬಿಕ ಹಿಂಸೆ ಕಾಯ್ದೆ ಯ ಅಡಿಯೂ ಪತಿಯ ವಿರುದ್ಧ ದೂರು ನೀಡಿ ದ್ದರು. ಜತೆಗೆ, ಆಸ್ಟ್ರಿಯಾದಲ್ಲಿ ನೆಲೆಸಿರುವ ಪತಿ, ತಮಗೆ ಮಕ್ಕಳನ್ನು ನೋಡಲು ಬಿಡುತ್ತಿಲ್ಲ ಎಂದೂ ಇವರು ಆರೋಪಿಸಿದ್ದರು. ಸದ್ಯ ವಿಚ್ಛೇದನ ಪ್ರಕ್ರಿಯೆ ನಡೆದಿದೆ.

ಭಾರತದ ಸೇನಾಧಿಕಾರಿ ಇಂಗ್ಲಿಷಲ್ಲಿ ಮಾತಾಡಿದ್ದು ಯಾಕೆ?: ಪಾಕ್ ಪ್ರಶ್ನೆ

ಇಸ್ಲಾಮಾಬಾದ್: ಆಪರೇಷನ್ ಸಿಂದೂರಕ್ಕೆ ವರ್ಷ ತುಂಬಿದ ಹಿನ್ನೆಲೆಯಲ್ಲಿ ಭಾರತೀಯ ಸೇನಾಧಿಕಾರಿಗಳು ಗುರುವಾರ ಜೈಪುರದಲ್ಲಿ ನಡೆಸಿದ ಮಾಧ್ಯಮ ಸಂವಾದದ ಬಗ್ಗೆ ಪಾಕಿಸ್ತಾನದ ಸೇನಾ ವಕ್ತಾರ ಲೆ.ಜ. ಅಹ್ಮದ್ ಷರೀಫ್ ಚೌಧರಿ ಕೇಳಿರುವ ಪ್ರಶ್ನೆಯೊಂದು ಭಾರೀ ವೈರಲ್ ಆಗುತ್ತಿದೆ. 'ಅವರು ಇಂಗ್ಲಿಷ್‌ನಲ್ಲಿ ಯಾಕೆ ಮಾತಾಡಿ ದರು?' ಎಂದು ಜ। ಷರೀಫ್ ಕೇಳಿದ್ದಾರೆ. 'ನಿಮಗೆ ಇಂಗ್ಲಿಷ್‌ನಲ್ಲಿ ಮಾತಾಡುವಂತೆ ಯಾರು ಹೇಳಿದರು? ನೀವು ಹೇಳಬೇಕಿರುವುದನ್ನು ಇಡೀ ವಿಶ್ವಕ್ಕೆ ತಲುಪಿಸಬೇಕು ಎಂಬ ಉದ್ದೇಶದಿಂದ ಹೀಗೆ ಮಾಡಿದ್ದೇ?' ಎಂದು ಷರೀಫ್ ಪ್ರಶ್ನಿಸಿದ್ದಾರೆ. ಇದೀಗ ಸಾಮಾಜಿಕ ಮಾಧ್ಯಮ ದಲ್ಲಿ ಟ್ರೋಲ್ ಆಗುತ್ತಿದೆ. ಪಹಲ್ಗಾಂ ದಾಳಿಯ ಬಳಿಕ ದೇಶ ಉದ್ದೇಶಿಸಿ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಆಂಗ್ಲ ಭಾಷೆಯಲ್ಲಿ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ್ದರು. ಈ ಮೂಲಕ, ಭಾರತವು ತನ್ನ ಮೇಲಿನ ದಾಳಿಗೆ ಪಾಕ್ ಬೆಲೆ ತೆರಬೇಕಾಗುವುದು ಎಂದು ಇಡೀ ವಿಶ್ವಕ್ಕೆ ಹೇಳಿದ್ದರು.

'ವಂದೇ'ಗೆ ರಾಷ್ಟ್ರಗೀತೆ ರೀತಿ ರಕ್ಷಣೆ ಸಲ್ಲದು: ಓವೈಸಿ ಕಿಡಿ

ಹೈದರಾಬಾದ್: ವಂದೇ ಮಾತರಂಗೆ ರಾಷ್ಟ್ರಗೀತೆ 'ಜನ ಗಣ ಮಣ' ರೀತಿ ಶಾಸನಬದ್ಧ ರಕ್ಷಣೆ ನೀಡುವ ಕೇಂದ್ರ ಸಂಪುಟ ತೀರ್ಮಾನವನ್ನು ಎಐಎಂಐಎಂ ಪಕ್ಷದ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಖಂಡಿಸಿದ್ದಾರೆ. ಈ ಕುರಿತು ಗುರುವಾರ ಟ್ವೀಟ್ ಮಾಡಿರುವ ಅವರು, ವಂದೇ ಮಾತರಂ ದೇವತೆಯ ಸ್ತುತಿಯಾಗಿರುವುದರಿಂದ ರಾಷ್ಟ್ರಗೀತೆಯಂತೆ ಈ ಹಾಡನ್ನು ಪರಿಗಣಿಸಬಾರದು. ದೇಶ ಯಾವ ಹೆಸರಿಂದಲೂ ನಡೆಯುವುದಿಲ್ಲ. ಅಲ್ಲದೆ ರಾಷ್ಟ್ರ ಯಾವುದೇ ಒಂದು ದೇವರಿಗೆ ಸೇರಿಲ್ಲ ಎಂದಿದ್ದಾರೆ.

ನಿದಾಗೆ ಒವೈಸಿ ಪಕ್ಷದ ನಾಯಕನೊಬ್ಬ ಆಶ್ರಯ ನೀಡಿದ್ದ: ಪೊಲೀಸ್

ಮುಂಬೈ: ಟಿಸಿಎಸ್‌ನ ನಾಸಿಕ್ ಘಟಕದಲ್ಲಿ ನಡೆದಿದೆ ಎಂದು ಆರೋಪಿಸಲಾಗಿದ್ದ ಕಾರ್ಪೊರೆಟ್ ಜಿಹಾದ್‌ಗೆ ಬೆಂಬಲ ನೀಡಿ, ಬಳಿಕ ತಲೆಮರೆಸಿಕೊಂಡಿದ್ದ ಕಂಪನಿಯ ಮಾನವ ಸಂಪನ್ಮೂಲ ಅಧಿಕಾರಿ ನಿದಾ ಖಾನ್‌ರನ್ನು ಗುರುವಾರ ರಾತ್ರಿ ಬಂಧಿಸಲಾಗಿದೆ. ಇದರ ಬೆನ್ನಲ್ಲೇ ಆಕೆ ಹಾಗೂ ಪರಿವಾರಕ್ಕೆ ಎಐಎಂಐಎಂ ಪಕ್ಷದ ಕಾರ್ಪೊರೇಟರ್ ಒಬ್ಬರು ಆಶ್ರಯ ನೀಡಿದ್ದರು ಎಂದು ಛತ್ರಪತಿ ಸಂಭಾಜಿ ನಗರ ಪೊಲೀಸರು ತಿಳಿಸಿದ್ದಾರೆ. ನಿದಾಳನ್ನು ಮೇ 11ರ ತನಕ ಕೋರ್ಟು ಪೊಲೀಸ್ ವಶಕ್ಕೆ ಒಪ್ಪಿಸಿದೆ.

ಎಂಐಎಂ ಪಾತ್ರ ತನಿಖೆ ಆಗಲಿ: ಎಐಎಂಐಎಂ ಹಾಗೂ ಅದರ ಮಾಜಿ ಸಂಸದ ಇಮ್ತಿಯಾಜ್ ಜಲೀಲ್ ಪಾತ್ರದ ಬಗ್ಗೆ ತನಿಖೆ ನಡೆಯಬೇಕು ಎಂದು ಮಹಾರಾಷ್ಟ್ರ ಸಚಿವ ಹಾಗೂ ಶಿವಸೇನೆ ನಾಯಕ ಶಿರಸಾಟ್ ಆಗ್ರಹಿಸಿದ್ದಾರೆ.

ಬಂಗಾಳಕ್ಕೆ ಸುವೇಂದು ಪ್ರಪ್ರಥಮ ಬಿಜೆಪಿ ಸಿಎಂ

ಇಂದು ಬೆಳಗ್ಗೆ 11ಕ್ಕೆ ಅಧಿಕಾರಿಗೆ ಅಧಿಕಾರ | ಮೋದಿ, ಶಾ ಭಾಗಿ | ಅಗ್ನಿಮಿತ್ರಾ ಸೇರಿ ಇಬ್ಬರಿಗೆ ಡಿಸಿಎಂ ಪಟ್ಟ ಸಾಧ್ಯತೆ

• **ಪಿಟಿಐ** ಕೋಲ್ಕತಾ

ಪಶ್ಚಿಮ ಬಂಗಾಳದಲ್ಲಿ ಮೊದಲ ಬಾರಿ ಬಿಜೆಪಿ ಅಧಿಕಾರಕ್ಕೇರುವ ಐತಿಹಾಸಿಕ ಮುಹೂರ್ತಕ್ಕೆ ಕ್ಷಣಗಣನೆ ಆರಂಭವಾಗಿದೆ. ಬಿಜೆಪಿ ಶಾಸಕಾಂಗ ಪಕ್ಷದ ನಾಯಕನಾಗಿ ಸುವೇಂದು ಅಧಿಕಾರಿ ಅವರನ್ನು ಶುಕ್ರವಾರ ಆಯ್ಕೆ ಮಾಡಲಾಗಿದೆ. ಅವರು ಶನಿವಾರ ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಇದನ್ನು 'ದೀದಿ ಆಳ್ವಿಕೆಯ ಬಳಿಕ ಇನ್ನು ದಾದಾ ಸಾಮ್ರಾಜ್ಯ' ಎಂದು ಬಣ್ಣಿಸಲಾಗುತ್ತಿದೆ.


ಅಧಿಕಾರಿ ಅವರು ಶನಿವಾರ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಪ್ರಮಾಣವಚನ ಸ್ವೀಕರಿಸಲಿದ್ದು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿಯ ಹಿರಿಯ ನಾಯಕರು, ಘಟಾನುಘಟಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

ಬಂಗಾಳಕ್ಕೆ ಸಿಎಂ ಆಯ್ಕೆಯ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದ ಅಮಿತ್ ಶಾ ಅವರ ಉಪಸ್ಥಿತಿಯಲ್ಲಿ ಶುಕ್ರವಾರ ಸಂಜೆ, ನೂತನ ಶಾಸಕರು ಮತ್ತು ಪಕ್ಷದ ಹಿರಿಯ ನಾಯಕರನ್ನು ಒಳಗೊಂಡ ಶಾಸಕಾಂಗ ಪಕ್ಷದ ಸಭೆ ನಡೆಯಿತು. ಬಳಿಕ ಅಧಿಕಾರಿಯವರ ಆಯ್ಕೆಯನ್ನು ಅಮಿತ್ ಶಾ ಘೋಷಿಸಿದರು.

'ಶಾಸಕಾಂಗ ಸಭೆಯಲ್ಲಿ ಸಲ್ಲಿಸಲಾಗಿದ್ದ 8 ಪ್ರಸ್ತಾವನೆಗಳಲ್ಲೂ ಒಂದೇ ಹೆಸರಿತ್ತು (ಸುವೇಂದು ಅಧಿಕಾರಿ). 2ನೇ ಅವಕಾಶ ಕೊಟ್ಟರೂ ಯಾರೂ ಅದನ್ನು ಬದಲಿಸಲು ಬಯಸಲಿಲ್ಲ. ಹಾಗಾಗಿ ಸುವೇಂದು ಅವರನ್ನೇ ಅಂತಿಮವಾಗಿ ಬಂಗಾಳದ ಸಿಎಂ ಆಗಿದೆ ಆಯ್ಕೆ ಮಾಡಲಾಗಿದೆ' ಎಂದು ಶಾ ಹೇಳಿದರು.

ಅಧಿಕಾರಿ ಆರ್‌ಎಸ್‌ಎಸ್ ಹಿನ್ನೆಲೆ ಇಲ್ಲದಿದ್ದರೂ (ಮೂಲತಃ ಟಿಎಂಸಿಯವರು- ನಂತರ ಬಿಜೆಪಿಗೆ ಬಂದಿದ್ದರು) ಆಯ್ಕೆ ಆಗಿರುವುದು ವಿಶೇಷ. ಅಧಿಕಾರಿ ಅವರ ಜತೆ ಸಿಎಂ ಹುದ್ದೆ ಆಕಾಂಕ್ಷಿಗಳ ಪಟ್ಟಿಯಲ್ಲಿ ದಿಲೀಪ್ ಘೋಷ್, ಅಗ್ನಿಮಿತ್ರಾ ಪೌಲ್, ರೂಪಾ ಗಂಗೂಲಿ ಇದ್ದರು. ಅವರನ್ನೆಲ್ಲ ಹಿಂದಿಕ್ಕಿ ಸುವೇಂದು ಆಯ್ಕೆಯಾಗಿದ್ದಾರೆ.

ಈ ನಡುವೆ, ಅಗ್ನಿಮಿತ್ರಾ ಹಾಗೂ ಶಾಸಕ ಶಂಕರ್ ಘೋಷ್ ಅವರಿಗೆ ಡಿಸಿಎಂ ಹುದ್ದೆ ಒಲಿಯುವ ಸಾಧ್ಯತೆ ಇದೆ ಎಂದು ಗೊತ್ತಾಗಿದೆ.



ಅಕ್ರಮಕ್ಕೆ ಬ್ರೇಕ್

ಪಶ್ಚಿಮ ಬಂಗಾಳದಲ್ಲಿ ಇನ್ನು ಒಳನುಸುಳುವಿಕೆ ಮತ್ತು ಜಾನುವಾರು ಕಳ್ಳಸಾಗಣೆ ಅಸಾಧ್ಯ. ರಾಜ್ಯದ ಈ ಗೆಲುವು ನಮ್ಮ ಸಂಘಟನೆಯ ವಿಸ್ತರಣೆ ಅಥವಾ ಸಿದ್ಧಾಂತದ ದೃಢೀಕರಣವಷ್ಟೇ ಅಲ್ಲ, ಬದಲಾಗಿ ರಾಷ್ಟ್ರೀಯ ಭದ್ರತೆ ಯಲ್ಲಿರುವ ದೊಡ್ಡ ರಂಧ್ರವನ್ನು ಸರಿಪಡಿಸುವುದಾಗಿದೆ.

• **ಅಮಿತ್ ಶಾ** ಕೇಂದ್ರ ಗೃಹ ಸಚಿವ

ದೀದಿಗೆ ಸಡ್ಡು ಹೊಡೆದ ಮಾಜಿ ಶಿಷ್ಯ ಇದೀಗ ಉತ್ತರಾಧಿಕಾರಿ!

ಕೋಲ್ಕತಾ: ಸುವೇಂದು ಅಧಿಕಾರಿ. ಅಂದು 34 ವರ್ಷಗಳ ಎಡಪಂಥೀಯರ ಆಡಳಿತಕ್ಕೆ ಕೊನೆಯ ಮೊಳೆ ಹೊಡೆದು ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಪಕ್ಷವನ್ನು ಮೊದಲ ಬಾರಿ ಅಧಿಕಾರದ ಗದ್ದುಗೆಯಲ್ಲಿ ಕೂರಿಸಿದ 2011ರ ನಂದಿಗ್ರಾಮ ಹೋರಾಟದ ಪ್ರಮುಖ ರೂವಾರಿ. ಇದೀಗ ಒಂದೂವರೆ ದಶಕದ ದೀದಿ ನೇತೃತ್ವದ ಟಿಎಂಸಿ ಆಡಳಿತವನ್ನು ಕೆಡವಿ ಬಿಜೆಪಿಯನ್ನು ಮೊದಲ ಬಾರಿಗೆ ಅಧಿಕಾರದ ಪಡಸಾಲೆಗೆ ತಂದು ಕೂರಿಸಿದ ಹಿಂದುತ್ವ ರಾಜಕೀಯದ ರಾಯಭಾರಿ!

- ಒಂದು ಕಾಲದಲ್ಲಿ ಟಿಎಂಸಿಯ ನೀಲಿ ಕಣ್ಣಿನ ಹುಡುಗ
- ಬಳಿಕ ಬಿಜೆಪಿ ಸೇರಿ ಮಮತಾ, ಟಿಎಂಸಿಯನ್ನೇ ಮಣಿಸಿದ ನಾಯಕ

ಹೌದು.. ಒಂದು ಕಾಲದಲ್ಲಿ ಟಿಎಂಸಿ ಪಕ್ಷದ ನೀಲಿ ಕಣ್ಣಿನ ಹುಡುಗನಾಗಿದ್ದ ಸುವೇಂದು ಅ ಮಮತಾ ಬ್ಯಾನರ್ಜಿಯ ಆಪ್ತವಲಯದಲ್ಲಿ ಗುರುತಿಸಿಕೊಂಡಿ ದ್ದವರು. ಬಳಿಕ ಮಮತಾ ವಿರುದ್ಧವೇ ತೊಡೆತಟ್ಟಿ ಗೆದ್ದವರು.

ಕಳೆದ ಚುನಾವಣೆಯಲ್ಲಿ ನಂದಿಗ್ರಾಮ ಕ್ಷೇತ್ರದಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಗೆದ್ದು ಬೀಗಿದ್ದ ಸುವೇಂದು ಅಧಿಕಾರಿ, ಈ ಬಾರಿ ಮಮತಾ ಬ್ಯಾನರ್ಜಿ ಅವರನ್ನು ಅವರ ತವರು ಕ್ಷೇತ್ರ ಭವಾನಿಪುರ ವಿಧಾನಸಭಾ ಕ್ಷೇತ್ರದಲ್ಲೇ ಮಣಿಸಿ ಬಂಗಾಳದ ಮೊದಲ ಬಿಜೆಪಿ ಮುಖ್ಯಮಂತ್ರಿ ಆಗಿ ಹೊಸ ಇತಿಹಾಸ ಬರೆಯಲು ಸಜ್ಜಾಗಿದ್ದಾರೆ.


ಸುವೇಂದು ಬ್ರಹ್ಮಚಾರಿ: ಮಮತಾ ರೀತಿಯಲ್ಲೇ ಬ್ರಹ್ಮ ಚಾರಿಯಾಗಿರುವ ಸುವೇ ಂದು ಅಧಿಕಾರಿಯವರ ರಾಜ ಕೀಯ ಜೀವನ ಆರಂಭವಾಗಿದ್ದು ಕಾಂಗ್ರೆಸ್ ಮೂಲಕ. 1995ರಲ್ಲಿ ಮುನ್ಸಿಪಾಲಿಟಿ ಚುನಾವಣೆ ಮೂಲಕ ರಾಜಕೀಯಕ್ಕೆ ಕಾಲಿಟ್ಟ ಅವರು ಬಳಿಕ ತೃಣಮೂಲ ಕಾಂಗ್ರೆಸ್ ಸೇರಿಕೊಂಡು ರಾಜ್ಯ ರಾಜಕೀಯ ಪ್ರವೇಶಿಸಿದರು.

2009ರಲ್ಲಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದ ಅವರು 2011ರಲ್ಲಿ ಎಡಪಂಥೀಯ ಸರ್ಕಾರ ವಿರುದ್ಧ ನಡೆದ ನಂದಿಗ್ರಾಮ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಬಳಿಕ ಅವರು ಮಮತಾ ಉತ್ತರಾಧಿಕಾರಿಯೆಂದೇ ಗುರುತಿಸಲ್ಪಟ್ಟಿದ್ದರು.

ದೀದಿ ವಿರುದ್ಧ ಬಂಡಾಯ: ಮಮತಾ ಬ್ಯಾನರ್ಜಿ ಯಾವತ್ತು ತಮ್ಮ ಸಂಬಂಧಿ ಅಭಿಷೇಕ್ ಬ್ಯಾನರ್ಜಿಯನ್ನು ಪಕ್ಷಕ್ಕೆ ಕರೆತಂದರೋ ಆ ಬಳಿಕ ಸುವೇಂದು ಟಿಎಂಸಿಯಿಂದ ದೂರಸರಿಯಲಾರಂಭಿಸಿದರು. ಬಳಿಕ ಬಿಜೆಪಿ ಸೇರಿ 2021ರಲ್ಲಿ ನಂದಿಗ್ರಾಮದಲ್ಲಿ ಮಮತ ವಿರುದ್ಧವೇ ಸ್ಪರ್ಧಿಸಿ ಗೆದ್ದರು. ಈ ಬಾರಿ ಭವಾನಿಪುರದಲ್ಲಿ ದೀದಿಯನ್ನು ಮಣಿಸಿದರು.

ಕೊಟ್ಟ ಎಲ್ಲಾ ಭರವಸೆ ಈಡೇರಿಸುತ್ತೇವೆ: ಸುವೇಂದು ಅಧಿಕಾರಿ


ಕೋಲ್ಕತಾ: 'ಚುನಾವಣೆ ವೇಳೆ ಪಕ್ಷವು ಕೊಟ್ಟಿದ್ದ ಎಲ್ಲಾ ಭರವಸೆಗಳನ್ನು ಖಂಡಿತ



ಈಡೇರಿಸುತ್ತೇವೆ' ಎಂದು ಪ.ಬಂಗಾಳದ ನಿಯೋಜಿತ ಸಿಎಂ ಸುವೇಂದು ಅಧಿಕಾರಿ ಭರವಸೆ ನೀಡಿದ್ದಾರೆ. ಸಿಎಂ ಹುದ್ದೆಗೆ ತಮ್ಮ ಆಯ್ಕೆಯ ಬಳಿಕ ಶಾಸಕರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದಂತೆ ರಾಜ್ಯದಲ್ಲೀಗ ಭಯವು ಹೋಗಿ ಭರವಸೆ ಬಂದಿದೆ. ಬಂಗಾಳದ ಜನ ನಮಗೆ ಐತಿಹಾಸಿಕ ಜನಾದೇಶ ನೀಡಿದ್ದಾರೆ' ಎಂದು ಹರ್ಷ ವ್ಯಕ್ತಪಡಿಸಿದರು. ಜತೆಗೆ, 'ನಮ್ಮ ಪ್ರಣಾಳಿಕೆಯಲ್ಲಿದ್ದ ಎಲ್ಲಾ ಭರವಸೆಗಳನ್ನು ಪೂರ್ಣಗೊಳಿಸುತ್ತೇವೆ. ಬಂಗಾಳ ಜನರ ಆಕಾಂಕ್ಷೆಗಳನ್ನು ಈಡೇರಿಸಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಟ್ಟಿಗೆ ಕೆಲಸ ಮಾಡುವುದು ಅತ್ಯಗತ್ಯ' ಎನ್ನುವ ಮೂಲಕ ಡಬಲ್ ಎಂಜಿನ್ ಸರ್ಕಾರ ಉತ್ತಮ ಆಡಳಿತ ಕೊಡಲಿದೆ ಎಂಬ ವಾಗ್ದಾನವನ್ನೂ ಅಧಿಕಾರಿ ಮಾಡಿದರು. ಈ ನಡುವೆ, ನಾಯಕರು ಅಧಿಕಾರಿ ಅವರನ್ನು ಅಭಿನಂದಿಸಿದರು.

ಕೇರಳ ಸಿಎಂ ಆಗಿ ವೇಣು ಖಚಿತ?

ಶಾಸಕರ ಅನಿಸಿಕೆ ಸಲ್ಲಿಕೆ | ಮುಂದಿನ ವಾರ ಪ್ರಮಾಣ ವಚನ ಸಾಧ್ಯತೆ



ತಿರುವನಂತಪುರದಲ್ಲಿ ಶುಕ್ರವಾರ ಕೆ.ಸಿ. ವೇಣುಗೋಪಾಲ್ ಅವರು ಸಿಎಂ ಆಗಲಿ ಎಂಬ ಪೋಸ್ಟರ್ ರಾರಾಜಿಸಿತು.

ತಿರುವನಂತಪುರಂ: ಕೇರಳದಲ್ಲಿ ಭಾರೀ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರದ ಮುಖ್ಯಮಂತ್ರಿ ಹುದ್ದೆ ರೇಸ್‌ನಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೆಸರು ಮುಂಚೂಣಿಯಲ್ಲಿ ಕೇಳಿಬರುತ್ತಿದೆ. ಬಹುತೇಕ ವೇಣು ಅವರು ಮುಂದಿನ ವಾರ (ಬಹುಶಃ ಮೇ 13ಕ್ಕೆ) ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿಎಂ ಆಯ್ಕೆಗೆ ಸಂಬಂಧಿಸಿ ವೀಕ್ಷಕರಾದ ಅಜಯ್ ಮಾಕನ್ ಮತ್ತು ಮುಕುಲ್ ವಾಸ್ನಿಕ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವರದಿ ಸಲ್ಲಿಸಿದ್ದಾರೆ. ನೂತನ ಶಾಸಕರು, ಮಿತ್ರ ಪಕ್ಷಗಳು ಹಾಗೂ ಸಾರ್ವಜನಿಕರ ಅಭಿಪ್ರಾಯದ ಆಧಾರದ ಮೇಲೆ ವರಿಷ್ಠರು ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಹೇಳಲಾಗಿದೆ.ವೇಣು ಅವರಲ್ಲದೆ ವಿ.ಡಿ.ಸತೀಶನ್, ರಮೇಶ್ ಚೆನ್ನಿತ್ತಲ ಅವರ ಹೆಸರೂ ರೇಸ್‌ನಲ್ಲಿದೆ. ಆದರೆ, ಇವರಲ್ಲಿ ವೇಣು ಬಗ್ಗೆ ಹೆಚ್ಚಿನ ಶಾಸಕರ ಒಲವು ಇದೆ ಎನ್ನಲಾಗಿದೆ.

13ಕ್ಕೆ ಪುದುಚೇರಿ ಸಿಎಂ ಆಗಿ ರಂಗಸ್ವಾಮಿ ಶಪಥ

ಪುದುಚೇರಿ: ಪುದುಚೇರಿ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ದಿಗ್ವಿಜಯ ಬೆನ್ನಲ್ಲೇ ಕೂಟದ ಪ್ರಮುಖ ಪಕ್ಷವಾದ ಎಐಎನ್‌ಆರ್‌ಸಿ ಪಕ್ಷದ ನಾಯಕ ಎನ್. ರಂಗಸ್ವಾಮಿ ಅವರು ಶಾಸಕಾಂಗ ಪಕ್ಷದ ನಾಯಕನಾಗಿ ಪುನಾರಾಯ್ಕೆ ಆಗಿದ್ದಾರೆ. ಇದೇ 13ರಂದು ರಂಗಸ್ವಾಮಿ 5ನೇ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ.

ಎಡಿಎಂಕೆ ಸರ್ಕಾರಕ್ಕಾಗಿ ಗೌರ್ನರ್‌ಗೆ ಮೊರೆ

ಎಡಿಎಂಕೆ-ಡಿಎಂಕೆ ಮೈತ್ರಿ ವದಂತಿ ನಡುವೆ ರಾಜ್ಯಪಾಲಗೆ ಎಎಂಎಂಕೆ ಪತ್ರ

ಚೆನ್ನೈ: ಮುಂದಿನ ಸರ್ಕಾರ ರಚಿಸಲು ಎಐಎಡಿಎಂಕೆಯ ಎಡಪ್ಪಾಡಿ ಪಳನಿಸ್ವಾಮಿ ಅವರನ್ನು ಆಹ್ವಾನಿಸುವಂತೆ, ಮಿತ್ರಪಕ್ಷವಾದ ಎಎಂಎಂಕೆಯ ಟಿಟಿವಿ ದಿನಕರನ್ ತಮಿಳುನಾಡು ರಾಜ್ಯಪಾಲರನ್ನು ಕೋರಿದ್ದಾರೆ. ಎಐಎಡಿಎಂಕೆ 47 ಶಾಸಕರನ್ನು ಹೊಂದಿದೆ. ಡಿಎಂಕೆ ಜತೆ ಮೈತ್ರಿಗೆ ಮಾತುಕತೆ ನಡೆಸುತ್ತಿದೆ ಎಂದೂ ಹೇಳಲಾಗಿದೆ. ಆದರೆ ಬಿಜೆಪಿ ಸಂಗ ತೊರೆದರೆ ಮಾತ್ರ ಮೈತ್ರಿಗೆ ರೆಡಿ ಎಂದು ಡಿಎಂಕೆ ಹೇಳುತ್ತಿದೆ. ಇದು ಮೈತ್ರಿಗೆ ಕಗ್ಗಂಟಾಗಿದೆ. ಇದರ ನಡುವೆ ಎಐಎಡಿಎಂಕೆಯ ಒಂದು ಬಣ ಟಿವಿಕೆ ಜತೆ ಮೈತ್ರಿಗೆ ಉತ್ಸುಕವಾವಾಗಿದೆ ಎಂದು ಗುರುವಾರ ಹೇಳಲಾಗಿತ್ತು. ಆದರೆ ಶುಕ್ರವಾರ ಅವರೆಲ್ಲ ಮೌನವಾಗಿದ್ದಾರೆ.



ಚೆನ್ನೈನಲ್ಲಿ ಕಾಂಗ್ರೆಸ್ ಪ್ರತಿಭಟನೆ

ಡಿಎಂಕೆ-ಕಾಂಗ್ರೆಸ್ ನಡುವೆ ಘರ್ಷಣೆ

ಮೈಕಾಡುತುರೈ (ತ.ನಾಡು): ಶುಕ್ರವಾರ ಇಲ್ಲಿ ಡಿಎಂಕೆ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಹಿಂಸಾತ್ಮಕ ಘರ್ಷಣೆ ಭುಗಿಲೆದ್ದಿದ್ದು, ಪಕ್ಷದ ಧ್ವಜಗಳನ್ನು ಹರಿದು ಬೀದಿಗಳಲ್ಲಿ ಎಸೆಯಲಾಯಿತು. ಕೊನೆಗೆ ಪೊಲೀಸರು ಮಧ್ಯಪ್ರವೇಶಿಸಬೇಕಾಯಿತು.

ತಮಿಳುನಾಡಿನಲ್ಲಿ ಸರ್ಕಾರ ರಚನೆಯಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟವನ್ನು ಕಾಂಗ್ರೆಸ್ ತೊರೆದು ಟಿವಿಕೆಗೆ ಬೆಂಬಲ ನೀಡಿದ ಕಾರಣ ಘರ್ಷಣೆ ಭುಗಿಲೆದ್ದಿದೆ.

ರಾಜ್ಯಪಾಲರ ಹುದ್ದೆ ರದ್ದು ಮಾಡಿ: ಕನಿಮೋಳಿ ಆಗ್ರಹ

ಚೆನ್ನೈ: ರಾಜ್ಯಪಾಲರ ಹುದ್ದೆ ಅಗತ್ಯವಿಲ್ಲ ಎಂಬ ಡಿಎಂಕೆಯ ಹಿಂದಿನ ಬೇಡಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಡಿಎಂಕೆ ಸಂಸದೆ ಕನಿಮೋಳಿ ಹೇಳಿದ್ದಾರೆ. ತಮಿಳುನಾಡಿನಲ್ಲಿ ರಾಜ್ಯಪಾಲರು ಸರ್ಕಾರ ರಚನೆಗೆ ಟಿವಿಕೆ ನಾಯಕ ವಿಜಯ್ ಅವರಿಗೆ ಆಹ್ವಾನ ನೀಡುವುದನ್ನು ವಿಳಂಬ ಮಾಡಿದ್ದಕ್ಕೆ ಸುದ್ದಿಗಾರರ ಎದುರು ಪ್ರತಿಕ್ರಿಯೆ ನೀಡಿದ ಕನಿ, 'ರಾಜ್ಯದ ರಾಜಕೀಯ ಹಿತಾಸಕ್ತಿ ಮತ್ತು ರಾಜ್ಯಪಾಲರ ಕಚೇರಿ ನಡುವೆ ಮೊದಲಿನಿಂದಲೂ ತಿಕ್ಕಾಟ ನಡೆದುಕೊಂಡೇ ಬಂದಿದೆ. ರಾಜ್ಯಪಾಲರ ಹುದ್ದೆ ಅಗತ್ಯವಿಲ್ಲ ಎಂಬ ಡಿಎಂಕೆಯ ಹಿಂದಿನ ಬೇಡಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದರು.


ಕಾಂಗ್ರೆಸ್- ಟಿವಿಕೆ ಮೈತ್ರಿ ಹೆಚ್ಚು ದಿನ ಬಾಳಲ್ಲ: ಮಣಿ

ನವದೆಹಲಿ: ತಮಿಳುನಾಡಿನಲ್ಲಿ ವಿಜಯ್ ಟಿವಿಕೆ ಜತೆಗೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿರುವುದಕ್ಕೆ ಸ್ವಪಕ್ಷದ ವಿರುದ್ಧವೇ ಕಾಂಗ್ರೆಸ್ ಹಿರಿಯ ನಾಯಕ ಮಣಿಶಂಕರ್ ಅಯ್ಯರ್ ಕಿಡಿಕಾರಿದ್ದಾರೆ. 'ಕಾಂಗ್ರೆಸ್ ಮತ್ತು ಟಿವಿಕೆ ಮೈತ್ರಿ ಅಪಾಯಕಾರಿ. ಇದು ಅನುಕೂಲಸಿಂಧು ರಾಜಕಾರಣ' ಎಂದಿದ್ದಾರೆ. ಪಿಟಿಐ ಜತೆ ಮಾತನಾಡಿದ ಅಯ್ಯರ್, 'ವಿಜಯ್ ಟಿವಿಕೆ ಬಹುಮತ ಖಚಿಪಡಿಸಿ ಕೊಳ್ಳದೇ ರಾಜಕೀಯ ಮೂರ್ಖತನ ಮಾಡಿದೆ. ಅವರ ಜತೆ ಕಾಂಗ್ರೆಸ್ ಸೇರುವ ಮೂಲಕ ಅನೈತಿಕ ರಾಜಕಾರಣ ನಡೆಸಿದೆ. ಅದೊಂದು ಅತಂತ್ರ ಅಸೆಂಬ್ಲಿ. ನಾವು ಅದರ ಗಾಳಿಯಲ್ಲಿ ನೇತಾಡುತ್ತಿದ್ದೇವೆ' ಎಂದರು.

ಅಸ್ಸಾಂ, ಪ.ಬಂಗಾಳದಲ್ಲೂ ಬಿಜೆಪಿ ಮತಗಳವು: ರಾಗಾ

'ಮೋದಿ ಜನರ ಕೋಪ ಎದುರಿಸಬೇಕಾದೀತು'

ಗುರುಗ್ರಾಮ: 'ಬಿಜೆಪಿ ಮತಕಳ್ಳತನಕ್ಕಾಗಿ ಒಂದು ವ್ಯವಸ್ಥೆಯನ್ನೇ ರೂಪಿಸಿದೆ. ಈ ಹಿಂದೆ ಹರ್ಯಾಣ ಚುನಾವಣೆಯಲ್ಲಿ ಮತಚೋರಿ ನಡೆಸಿದ್ದ ಬಿಜೆಪಿ ಈಗ ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿಯೂ ಅದನ್ನೇ ಮಾಡಿದೆ' ಎಂದು ಲೋಕಸಭಾ ವಿಪಕ್ಷ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.



ಹರ್ಯಾಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಈ ಹಿಂದೆ ಹರ್ಯಾಣ,ಮಧ್ಯಪ್ರದೇಶ,ಮಹಾರಾಷ್ಟ್ರ ಚುನಾವಣೆಗಳಲ್ಲಿ ಮತಚೋರಿ ನಡೆಸಿತ್ತು. ಈಗ ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಅದೇ ರೀತಿ ಮಾಡಿದೆ. ಅವರು ಚುನಾವಣೆಗಳನ್ನು ಕದಿಯುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ, ಲಕ್ಷಾಂತರ ಹೆಸರುಗಳನ್ನು ಅಳಿಸಿ ಹಾಕುತ್ತಾರೆ. ಲಕ್ಷಾಂತರ ಹೆಸರುಗಳನ್ನು ಸೇರಿಸುತ್ತಾರೆ. ಚುನಾವಣಾ ಆಯೋಗ, ಆಡಳಿತ ಸಂಸ್ಥೆಗಳು ಅವರ ನಿಯಂತ್ರಣದಲ್ಲಿದೆ. ಅವರ ಆಡಳಿತವನ್ನು ಯಾರು ನಿಲ್ಲಿಸಲು ಸಾಧ್ಯವಿಲ್ಲ ಎಂದು ಅವರು ಭಾವಿಸಿದ್ದಾರೆ' ಎಂದು ಹರಿಹಾಯ್ದರು.

'ಮೋದಿ ಮೇಲೆ ಜನರಿಗೆ ಸಾಕಷ್ಟು ಕೋಪವಿದೆ. ಅವರು ಶೀಘ್ರ ಕೋಪವನ್ನು ಎದುರಿಸಬೇಕಾಗುತ್ತದೆ' ಎಂದರು.

ಶಾಲೆಗಾಗಿ 800 ವರ್ಷದ ಶಿವ ದೇವಾಲಯ ಧ್ವಂಸ

ಜನತೆ ಕಿಡಿ | ಮರುನಿರ್ಮಾಣ: ಡೀಸಿ ಭರವಸೆ

ವಾರಂಗಲ್: ಸರ್ಕಾರಿ ಶಾಲೆಯ ನಿರ್ಮಾಣಕ್ಕಾಗಿ ಕಾಕತಿಯ ಕಾಲದ 800 ವರ್ಷ ಪುರಾತನ ಶಿವನ ದೇಗುಲವೊಂದನ್ನು ಇಲ್ಲಿನ ಖಾನಾಪುರ ಮಂಡಲದ ಅಶೋಕ ನಗರದಲ್ಲಿ ಧ್ವಂಸಗೊಳಿಸಲಾಗಿದೆ. ಇದಕ್ಕೆ ಸ್ಥಳೀಯರಿಂದ ಭಾರೀ ಆಕ್ರೋಶ ವ್ಯಕ್ತವಾಗಿದ್ದು, ದೂರು ದಾಖಲಾಗಿದೆ.




ಈ ಬಗ್ಗೆ ವಕೀಲ ರಾಮರಾವ್ ಇಮ್ಮನೇನಿ ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರದಲ್ಲಿ ದೂರು ದಾಖಲಿಸಿದ್ದಾರೆ. ಪುರಾತತ್ವ ಮತ್ತುದತ್ತಿಇಲಾಖೆಗಳಿಂದಅನುಮೋದನೆ ಪಡೆಯದೆಈ ಯೋಜನೆಗೆಅನುಮತಿಸಿದ ಅಧಿಕಾರಿಗಳ ವಿರುದ್ಧ ತೆಲಂಗಾಣ ಪರಂಪರೆ ಕಾಯ್ದೆ ಅಡಿ ಕಾನೂನು ಕ್ರಮ ಜರುಗಿಸಬೇಕು ಎಂದು ಕೋರಿದ್ದಾರೆ.

ಜಿಲ್ಲಾಧಿಕಾರಿ ಸ್ಪಷ್ಟನೆ: ದೇಗುಲ ಧ್ವಂಸಕ್ಕೆ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ವಾರಂಗಲ್ ಜಿಲ್ಲಾಧಿಕಾರಿ ಡಾ. ಸತ್ಯ ಶಾರದಾ ಮತ್ತು ನರಸಂಪೇಟೆ ಶಾಸಕ ದೊಂತಿ ಮಾಧವ ರೆಡ್ಡಿ ಪರಿಶೀಲನೆ ನಡೆಸಿದರು. ಬಳಿಕ, 'ಪೊದೆ ತೆರವುಗೊಳಿಸುವಾಗ ಹಳೆಯ ಶಿಥಿಲ ರಚನೆ ಕಂಡುಬಂದಿದ್ದವು ಹಾಗೂ ಅವುಗಳು ಸಂರಕ್ಷಿತ ಸ್ಮಾರಕವೆಂದು ದಾಖಲಾಗಿರಲಿಲ್ಲ. ಅದೇ ಸ್ಥಳದಲ್ಲಿ ದೇವಸ್ಥಾನ ವನ್ನು ಮರುನಿರ್ಮಾಣ ಮಾಡುತ್ತೇವೆ' ಎಂದು ಹೇಳಿದ್ದಾರೆ.

ದಿಲ್ಲಿಯಲ್ಲಿ ಉಗ್ರರ ದಾಳಿ: ಪಾಕ್ ಸಂಚು ಬಹಿರಂಗ

ದೇವಾಲಯ, ಢಾಬಾ, ಸೇನಾ ನೆಲೆಗಳೇ ಗುರಿ

ನವದೆಹಲಿ: ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ದೆಹಲಿಯ ಜನನಿಬಿಡ ಪ್ರದೇಶಗಳಾದ ದೇವಸ್ಥಾನ, ಢಾಬಾ ಮತ್ತು ಸೇನಾ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಲು ಸಂಚು ರೂಪಿಸಿತ್ತು ಎಂದು ಶಂಕಿತ ಉಗ್ರರ ಬಂಧನದೊಂದಿಗೆ ಬೆಳಕಿಗೆ ಬಂದಿದೆ.



ಕಳೆದ 48 ತಾಸುಗಳಲ್ಲಿ ದಿಲ್ಲಿ ಪೊಲೀಸರು ದೆಹಲಿ ಹಾಗೂ ನೆರೆರಾಜ್ಯಗಳಲ್ಲಿ ನಡೆಸಿದ ಕಾರ್ಯಾಚರಣೆ ವೇಳೆ 482 ಜನರು ಬಂಧಿತರಾಗಿದ್ದರು. ಈ ಪೈಕಿ 9 ಮಂದಿಯ ವಿಚಾರಣೆ ವೇಳೆ ಭಾರೀ ದಾಳಿ ಯೋಜನೆಯ ಸಂಚು ಬೆಳಕಿಗೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ದೆಹಲಿಯ ಐತಿಹಾಸಿಕ ದೇವಾಲಯ, ದಿನವೂ ಸಾವಿರಾರು ಜನ ಭೇಟಿ ನೀಡುವ ದಿಲ್ಲಿ-ಸೋನಿಪತ್ ಹೆದ್ದಾರಿಯಲ್ಲಿರುವ ಢಾಬಾ, ಹರ್ಯಾಣದಲ್ಲಿರುವ ಹಿಸಾರ್ ಸೇನಾ ಶಿಬಿರ, ಉತ್ತರಪ್ರದೇಶದ ಕೆಲ ಪೊಲೀಸ್ ಠಾಣೆಗಳು ಪಾಕಿಸ್ತಾನದ ಶಹಜಾದ್ ಭಟ್ಟಿ ಸಂಘಟನೆಯ ಗುರಿಯಾಗಿದ್ದವು ಎಂದು ಅವು ಹೇಳಿವೆ.


ಒಬ್ಬ ಆರೋಪಿ ದೆಹಲಿಯ ಐತಿಹಾಸಿಕ ದೇವಾಲಯದ ಸರ್ವೇ ನಡೆಸಿ, ಆ ದೇವಾಲಯದ ಛಾಯಾಚಿತ್ರಗಳನ್ನು ಪಾಕಿಸ್ತಾನ ಮೂಲದ ನಿರ್ವಾಹಕರೊಂದಿಗೆ ಹಂಚಿಕೊಂಡಿದ್ದ ಎಂದು ಗೊತ್ತಾಗಿದೆ.

ಟೆನ್ಷನ್ ಅವರ ಆರೋಗ್ಯದ ಬಗ್ಗೆ ಮಾಹಿತಿ ಇಲ್ಲ | ಭಾರತದಲ್ಲಿ ಹಂಟು ಆತಂಕ ಸದ್ಯಕ್ಕಿಲ್ಲ: ಸರ್ಕಾರ

ಹಂಟು ವೈರಸ್ ನೌಕೇಲಿ 2 ಭಾರತೀಯರು

ಲಂಡನ್: ಹಂಟು ವೈರಸ್ ಕಾಣಿಸಿಕೊಂಡಿದ್ದ ಅರ್ಜೆಂಟೀನಾದಿಂದ ಸ್ಪೇನ್‌ನತ್ತ ಹೊರಟಿರುವ ಹಡಗಿನಲ್ಲಿ ಇಬ್ಬರು ಭಾರತೀಯರು ಕೂಡ ಇದ್ದಾರೆ ಎಂದು ತಿಳಿದುಬಂದಿದ್ದು, ಅವರ ಆರೋಗ್ಯದ ಬಗ್ಗೆ ಆತಂಕ ಸೃಷ್ಟಿಯಾಗಿದೆ.

150 ಜನರನ್ನು ಹೊತ್ತು ಹೊರಟಿದ್ದ ಹಡಗಿನಿಂದ ಮಾರ್ಗಮಧ್ಯದಲ್ಲಿ ಹಲವರು ಇಳಿದಿದ್ದರು. ಆ ಬಳಿಕ ಉಳಿದಿದ್ದವರಲ್ಲಿ 8 ಶಂಕಿತರ ಪೈಕಿ ಐವರಲ್ಲಿ ಹಂಟು ಸೋಂಕು ದೃಢ ಪಟ್ಟಿತ್ತು. ಅತ್ತ ಇನ್ನೂ ಮೂವರು ಇದೇ ವೈರಸ್‌ನಿಂದಾಗಿ ಪ್ರಾಣವನ್ನೂ ಕಳೆದುಕೊಂಡಿದ್ದರು. ಈಗ ಅವರೆಲ್ಲರ ಜತೆ ಇದ್ದ ಭಾರತೀಯ ಸಿಬ್ಬಂದಿ ಸುರಕ್ಷಿತರಾಗಿದ್ದಾರೆಯೇ ಎಂಬುದು ಸ್ಪಷ್ಟವಿಲ್ಲ.



ಮೇ 10ರಂದು ನೌಕೆ ಸ್ಪೇನ್ ತಲುಪಿದ ಬಳಿಕ ಅವರ ಆರೋಗ್ಯಸ್ಥಿತಿಯ ಬಗ್ಗೆ ಖಚಿತ ಮಾಹಿತಿ ದೊರೆಯುವ ಸಂಭವವಿದೆ ಎಂದು ಹೇಳಲಾಗಿದೆ.

ಭಾರತಕ್ಕೆ ಸದ್ಯಕ್ಕಿಲ್ಲ ಅಪಾಯ: ಇತ್ತ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್)ಯ ರಾಷ್ಟ್ರೀಯ ನರವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ. ನವೀನ್ ಕುಮಾರ್ ಅವರು, ಹಂಟು ವೈರಸ್ ಬಗ್ಗೆ ಭಾರತೀಯರು ಸದ್ಯಕ್ಕೆ ಭಯಪಡುವ ಅಗತ್ಯವಿಲ್ಲ ಎಂದು ಹೇಳಿದ್ದಾರೆ.

ಇಲಿಯಂತಹ ದಂಶಕಗಳ ತ್ಯಾಜ್ಯಗಳೊಂದಿಗೆ ಸಂಪರ್ಕಕ್ಕೆ ಬಂದವರಲ್ಲಷ್ಟೇ ಕಾಣಿಸಿಕೊಳ್ಳುವ ಈ ಸೋಂಕು ಕೊರೋನಾ ರೀತಿ ಜನರಿಂದ ಜನರಿಗೆ ಹರಡುವುದಿಲ್ಲವಾದ ಕಾರಣ ಆತಂಕದ ಅಗತ್ಯವಿಲ್ಲ ಎಂದು ಅವರು ಅಭಯ ನೀಡಿದ್ದಾರೆ.

ಆದರೆ ಇದ್ಯಾವುದೇ ಹೊಸ ಪಿಡುಗಿನ ಆರಂಭ ಅಲ್ಲ. ಕೊರೋನಾದಷ್ಟು ತೀವ್ರ ಅಲ್ಲ ಎಂದು ಡಬ್ಲ್ಯುಎಚ್‌ಒ ಕೂಡ ಹೇಳಿದೆ.


ಏನಿದು ವೈರಸ್? ಹೇಗೆ ಹರಡುತ್ತದೆ?

ಹಂಟು ವೈರಸ್ ಸಾಮಾನ್ಯವಾಗಿ ಇಲಿ, ಹೆಗ್ಗಣ ಮತ್ತು ಇತರ ದಂಶಕಗಳಲ್ಲಿ ಕಂಡುಬರುತ್ತದೆ. ಮನುಷ್ಯರಿಗೆ ಈ ಸೋಂಕು ತಗುಲಿದರೆ ಜ್ವರ, ತಲೆನೋವು, ಮೈಕೈ ನೋವು, ಜೀರ್ಣಕೋಶದ ಸಮಸ್ಯೆ, ನಂತರ ತೀವ್ರ ಉಸಿರಾಟದ ಸಮಸ್ಯೆ ಉಂಟುಮಾಡುತ್ತದೆ. ಅಲ್ಲದೆ, ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಈಗಿನ ಹಡಗಿನಲ್ಲಿ ಕಂಡುಬಂದಿರುವುದು ಆ್ಯಂಡಿಸ್ ತಳಿ ಎಂದು ಡಬ್ಲ್ಯುಎಚ್‌ಒ ದೃಢಪಡಿಸಿದೆ. ಇದು ದಕ್ಷಿಣ ಅಮೆರಿಕ ಪ್ರದೇಶದಲ್ಲಿ ಕಂಡುಬರುತ್ತದೆ.

ಏರಿಕೆ ಬಿಸಿ ಯುದ್ಧದ ಕಾರಣ ಕಚ್ಚಾತೈಲ ಬೆಲೆ ಗಗನಕ್ಕೆ | ಹೀಗಾಗಿ ಮೇ 15ರೊಳಗೆ ದರ ಹೆಚ್ಚಳ ಸಂಭವ

ಶೀಘ್ರ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ?

ನವದೆಹಲಿ: ಮಧ್ಯಪ್ರಾಚ್ಯ ಯುದ್ಧವು ಉತ್ತುಂಗದಲ್ಲಿದ್ದಾಗ ಏರದಿದ್ದ ಪೆಟ್ರೋಲ್, ಡೀಸೆಲ್ ಬೆಲೆಯು ಮೇ 15ರ ಒಳಗೆ ಹೆಚ್ಚಳವಾಗಲಿದೆ ಎಂದು ವರದಿಯಾಗಿದೆ.



ಜಾಗತಿಕ ಇಂಧನ ಬೆಲೆ ಏರಿಕೆಯಿಂದಾಗಿ ತೈಲ ಕಂಪನಿಗಳು ಪ್ರತಿ ತಿಂಗಳು 30,000 ಕೋಟಿ ರು.ನಷ್ಟು ನಷ್ಟ ಎದುರಿಸುತ್ತಿರುವ ಕಾರಣ ಈ ಹೆಜ್ಜೆ ಇಡಲಾ ಗುವುದು ಎಂದು ಮೂಲಗಳು ತಿಳಿಸಿವೆ. ಆದರೆ ಎಷ್ಟು ಏರಿಕೆಯಾಗಲಿದೆ ಎಂಬ ಬಗ್ಗೆ ನಿಖರ ಮಾಹಿತಿಯಿಲ್ಲ.

ಬ್ಯಾರಲ್‌ಗೆ 70 ಡಾಲರ್ ಇದ್ದ ತೈಲ ಬೆಲೆಯು ಯುದ್ಧದಿಂದಾಗಿ 126 ಡಾಲರ್ ಆಗಿರುವ ಹೊರತಾಗಿಯೂ ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿ ಬದಲಾವಣೆ ಮಾಡದೆ, ನಷ್ಟವನ್ನು ಕೈಯ್ಯಿಂದ ಭರಿಸುವಂತೆ ತೈಲ ಕಂಪನಿಗಳಿಗೆ ಸೂಚಿಸಲಾಗಿತ್ತು.

ತೈಲ ಕಂಪನಿಗಳಿಗೆ ₹30,000 ಕೋಟಿ ನಷ್ಟ

ನವದೆಹಲಿ: ಮಧ್ಯಪ್ರಾಚ್ಯ ಸಂಘರ್ಷದ ಹಿನ್ನೆಲೆಯಲ್ಲಿ ದೇಶದ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಮಾರ್ಚ್ ಮಧ್ಯಾವಧಿಯಿಂದ 30 ಸಾವಿರ ಕೋಟಿ ರು.ನಷ್ಟು ಭಾರೀ ನಷ್ಟ ಸಂಭವಿಸಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ತೈಲ ದರ ಏರಿಕೆಯಾಗಿದ್ದರೂ ಸರ್ಕಾರಿ ಸ್ವಾಮ್ಯದ ಕಂಪನಿಗಳು ಇಂಧನ ಮತ್ತು ಎಲ್‌ಪಿಜಿ ದರವನ್ನು ಮಾರುಕಟ್ಟೆಗಿಂತ ಕಡಿಮೆ ದರಕ್ಕೆ ಮಾರಾಟ ಮಾಡುತ್ತಿರುವ ಹಿನ್ನೆಲೆಯಲ್ಲಿ ಈ ನಷ್ಟ ಸಂಭವಿಸಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿ. (ಬಿಪಿಸಿಎಲ್) ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ (ಎಚ್‌ಪಿಸಿಎಲ್) ಸಂಸ್ಥೆಗಳು ಸಂಘರ್ಷದ ನಡುವೆಯೂ ತೈಲ, ಗ್ಯಾಸ್ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ನೋಡಿಕೊಂಡಿವೆ. ಉತ್ಪಾದನಾ ವೆಚ್ಚ ಶೇ.50ರಷ್ಟು ಹೆಚ್ಚಳವಾಗಿದ್ದರೂ ಕಂಪನಿಗಳು ಗ್ಯಾಸ್ ಮತ್ತು ಡೀಸೆಲ್, ಪೆಟ್ರೋಲ್ ದರ ಏರಿಸಿಲ್ಲ. ಪ್ರತಿ ಲೀಟರ್ ಪೆಟ್ರೋಲ್‌ಗೆ 24 ರು. ಮತ್ತು ಪ್ರತಿ ಲೀಟರ್‌ಡೀಸೆಲ್‌ಗೆ ತಲಾ 30 ರು.ನಷ್ಟು ನಷ್ಟ ಮಾಡಿಕೊಂಡು ಮಾರಾಟ ಮಾಡಿವೆ. ಇದರಿಂದಾಗಿ ತೈಲ ಕಂಪನಿಗಳಿಗೆ ಭಾರೀ ನಷ್ಟ ಉಂಟಾಗಿದೆ. ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ದರದ ಮೇಲಿನ ಅಬಕಾರಿ ಸುಂಕವನ್ನು 10 ರು. ನಷ್ಟು ಕಡಿತ ಮಾಡದಿದ್ದರೆ ಈ ನಷ್ಟ 62,500 ಕೋಟಿ ರು. ತಲುಪುತ್ತಿತ್ತು ಎಂದು ಹೇಳಲಾಗಿದೆ.



ಐಪಿಎಲ್-2026 ಅಂಕಪಟ್ಟಿ

ತಂಡಗಳು	ಪಂದ್ಯ	ಗೆಲುವು	ಸೋಲು	ರದ್ದು	ನೆಟ್ ರನ್‌ರೇಟ್	ಅಂಕ
ಹೈದ್ರಾಬಾದ್	11	07	04	00	+0.737	14
ಪಂಜಾಬ್	10	06	03	01	+0.571	13
ಆರ್‌ಸಿಬಿ	10	06	04	00	+1.234	12
ರಾಜಸ್ಥಾನ	10	06	04	00	+0.510	12
ಗುಜರಾತ್	10	06	04	00	-0.147	12
ಚೆನ್ನೈ	10	05	05	00	+0.151	10
ಕೋಲ್ಕತಾ	10	04	05	01	-0.169	09
ಡೆಲ್ಲಿ	11	04	07	00	-1.154	08
ಮುಂಬೈ	10	03	07	00	-0.649	06
ಲಖನೌ	10	03	07	00	-0.934	06

ಸುದ್ದಿ ಸಿಂಚನ

ರನ್ ಮಳೆಯಲ್ಲಿ ಜಾರಿಬಿದ್ದ ಚಾಂಪಿಯನ್ ಆರ್‌ಸಿಬಿ

ಲಖನೌ: ಮಳೆಬಾಧಿತ ಗುರುವಾರದ ಪಂದ್ಯದಲ್ಲಿ ಲಖನೌ ವಿರುದ್ಧ ಆರ್‌ಸಿಬಿ 9 ರನ್ ಅಂತರದಲ್ಲಿ ಪರಾಭವಗೊಂಡಿದೆ. ಇದರೊಂದಿಗೆ ಲಖನೌ ತಂಡದ (10ರಲ್ಲಿ 3 ಜಯ) ಪ್ಲೇ-ಆಫ್ ಕನಸು ಜೀವಂತವಾಗಿ ಉಳಿದಿದ್ದು, ಆರ್‌ಸಿಬಿ ಸತತ 2ನೇ ಸೋಲು ಕಂಡಿದೆ. ತಂಡ 10 ಪಂದ್ಯಗಳಲ್ಲಿ 12 ಅಂಕದೊಂದಿಗೆ ಪಟ್ಟಿಯಲ್ಲಿ 3ನೇ ಸ್ಥಾನದಲ್ಲೇ ಬಾಕಿಯಾಗಿದೆ. ಲಖನೌ ಇನ್ನಿಂಗ್ಸ್ ವೇಳೆ 3 ಬಾರಿ ಮಳೆ ಅಡ್ಡಿಪಡಿಸಿತು. ಹೀಗಾಗಿ ಪಂದ್ಯವನ್ನು ತಲಾ 19 ಓವರ್‌ಗೆ ಇಳಿಸಲಾಯಿತು. ಲಖನೌ 3 ವಿಕೆಟ್ ನಷ್ಟದಲ್ಲಿ 209 ರನ್ ಕಲೆ ಹಾಕಿತು. ಮಿಚೆಲ್ ಮಾರ್ಷ್ 56 ಎಸೆತಕ್ಕೆ 111 ರನ್ ಸಿಡಿಸಿದರೆ, ನಿಕೋಲಸ್ ಪೂರನ್ 38, ರಿಷಭ್ ಪಂತ್ 10 ಎಸೆತಕ್ಕೆ ಔಟಾಗದೆ 32 ರನ್ ಬಾರಿಸಿದರು. ಡಕ್ವರ್ತ್ ಲೂಯಿಸ್ ನಿಯಮದ ಪ್ರಕಾರ ಆರ್‌ಸಿಬಿಗೆ 213 ರನ್ ಗುರಿ ಲಭಿಸಿತು. ಬೆಥೆಲ್(4), ಕೊಹ್ಲಿ(0) ವಿಕೆಟ್ ಬೇಗನೇ ಕಳೆದುಕೊಂಡರೂ ನಾಯಕ ರಜತ್(31 ಎಸೆತಕ್ಕೆ 61), ದೇವದತ್ ಪಡಿಕ್ಕಲ್(34) ತಂಡಕ್ಕೆ ಆಸರೆಯಾದರು. 11ನೇ ಓವರ್‌ನಲ್ಲಿ ಇವರಿಬ್ಬರೂ ಔಟಾದರು. ಬಳಿಕ ಟಿಮ್ ಡೇವಿಡ್ 17 ಎಸೆತಕ್ಕೆ 40 ರನ್ ಗಳಿಸಿ ನಿರ್ಗಮಿಸಿದರು. ಕೃನಾಲ್(16 ಎಸೆತಕ್ಕೆ ಔಟಾಗದೆ 28), ಶೆಫರ್ಡ್(15 ಎಸೆತಕ್ಕೆ ಔಟಾಗದೆ 23) ತಂಡವನ್ನು ಗೆಲ್ಲಿಸಲು ವಿಫಲರಾದರು. 12 ಎಸೆತಕ್ಕೆ 33, ಕೊನೆ ಓವರ್‌ಗೆ 20 ರನ್ ಬೇಕಿದ್ದಾಗ ಆರ್‌ಸಿಬಿ ಸೋತಿತು.



ಸ್ಕೋರ್: ಲಖನೌ 19 ಓವರಲ್ಲಿ 209/3 (ಮಾರ್ಷ್ 111, ಪೂರನ್ 38, ಕೃನಾಲ್ 1-31), ಆರ್‌ಸಿಬಿ 19 ಓವರಲ್ಲಿ 203/6 (ರಜತ್ 61, ಡೇವಿಡ್ 40, ಪ್ರಿನ್ಸ್ 3-33) **ಪಂದ್ಯಶ್ರೇಷ್ಠ: ಮಿಚೆಲ್ ಮಾರ್ಷ್**

ಐಪಿಎಲ್ ವೇಳೆ ಹನಿಟ್ರ್ಯಾಪ್ ಬಗ್ಗೆ ಆಟಗಾರರಿಗೆ ಬಿಸಿಸಿಐ ಎಚ್ಚರಿಕೆ!

ಹೋಟೆಲ್, ಬಸ್, ಡಗೌಟ್‌ಗೆ ಅನಧಿಕೃತ ವ್ಯಕ್ತಿಗಳ ಪ್ರವೇಶ ನಿರ್ಬಂಧ

10 ಫ್ರಾಂಚೈಸಿಗೆ ಮಾರ್ಗಸೂಚಿ ನೀಡಿದ ಐಪಿಎಲ್ ಆಡಳಿತ ಮಂಡಳಿ

ನವದೆಹಲಿ: ಐಪಿಎಲ್ ವೇಳೆ ಸಂಭಾವ್ಯ ಹನಿಟ್ರ್ಯಾಪ್, ಭದ್ರತಾ ಅಪಾಯ ಹಾಗೂ ಕಾನೂನು ಸಂಕಷ್ಟದ ಬಗ್ಗೆ ಆಟಗಾರರಿಗೆ ಬಿಸಿಸಿಐ ಎಚ್ಚರಿಕೆ ನೀಡಿದೆ. ಈ ಕುರಿತು ಎಲ್ಲಾ 10 ಫ್ರಾಂಚೈಸಿಗಳಿಗೆ ಮಾರ್ಗಸೂಚಿಯನ್ನು ನೀಡಲಾಗಿದ್ದು, ಅನಧಿಕೃತ ವ್ಯಕ್ತಿಗಳ ಪ್ರವೇಶ ಕುರಿತು ಎಚ್ಚರಿಕೆ ಪಾಲಿಸುವಂತೆ ಸ್ಪಷ್ಟ ನಿರ್ದೇಶನ ನೀಡಿದೆ.

ಪಂದ್ಯಗಳ ವೇಳೆ ಡಗೌಟ್, ಹೋಟೆಲ್ ರೂಮ್, ತಂಡದ ಬಸ್ ಸೇರಿ ಹಲವೆಡೆ ಆಟಗಾರರ ಜೊತೆ ಕೆಲ ಅನಧಿಕೃತ ವ್ಯಕ್ತಿಗಳು ಕಾಣಿಸಿಕೊಂಡಿದ್ದನ್ನು ಬಿಸಿಸಿಐ ಗಂಭೀರವಾಗಿ ತೆಗೆದುಕೊಂಡಿದೆ. ಈ ಕುರಿತು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಅವರು ತಂಡಗಳಿಗೆ ಪತ್ರ ಬರೆದಿದ್ದಾರೆ. 'ಈ ಬಾರಿ ಐಪಿಎಲ್ ವೇಳೆ ಆಟಗಾರರು, ಸಹಾಯಕ ಸಿಬ್ಬಂದಿ ಹಾಗೂ ತಂಡದ ಅಧಿಕೃತರಿಂದ ನಿಯಮ ಉಲ್ಲಂಘನೆ, ಸ್ವೀಕಾರಾರ್ಹವಲ್ಲದ ಘಟನೆಗಳು ನಮ್ಮ ಗಮನಕ್ಕೆ ಬಂದಿದೆ. ಇದನ್ನು ಹಾಗೇ ಬಿಟ್ಟರೆ ಐಪಿಎಲ್ ಹಾಗೂ ಬಿಸಿಸಿಐ ಖ್ಯಾತಿಗೆ ದಕ್ಕೆ ಉಂಟುಮಾಡಬಹುದು. ಭವಿಷ್ಯದಲ್ಲಿ ಗಂಭೀರ ಸ್ವರೂಪದ ಕಾನೂನು ಸಮಸ್ಯೆ ಹಾಗೂ ಭದ್ರತಾ ಅಪಾಯ ತಂದೊಡ್ಡಬಹುದು' ಎಂದು ಎಚ್ಚರಿಸಿದ್ದಾರೆ.



ಯಾವುದಕ್ಕೆ ನಿರ್ಬಂಧ?

1. ಹೋಟೆಲ್ ರೂಮ್‌ಗೆ ಅನಧಿಕೃತ ವ್ಯಕ್ತಿಗಳ ಪ್ರವೇಶ
2. ಪಂದ್ಯದ ವೇಳೆ ಆಟಗಾರರ ಜೊತೆ ಮಾಲಿಕರ ಭೇಟಿ
3. ಪಂದ್ಯ ನಡೆಯುವ ಸ್ಥಳದಲ್ಲಿ ವೇಪಿಂಗ್
4. ಅನುಮತಿ ಇಲ್ಲದೆ ಹೋಟೆಲ್‌ನಿಂದ ಹೊರಬರುವುದು.

'ಕೆಲ ಆಟಗಾರರು ಹಾಗೂ ಸಹಾಯಕ ಸಿಬ್ಬಂದಿಯು ತಂಡದ ಮ್ಯಾನೇಜರ್‌ಗೆ ತಿಳಿಸದೆ ಅಥವಾ ಅನುಮೋದನೆ ಪಡೆಯದೆ ಅನಧಿಕೃತ ವ್ಯಕ್ತಿಗಳನ್ನು ತಮ್ಮ ಹೋಟೆಲ್ ಕೋಣೆಗೆ ಕರೆಸಿಕೊಂಡಿರುವುದು ಗಮನಕ್ಕೆ ಬಂದಿದೆ. ಇಂತಹ ನಡವಳಿಕೆಗಳನ್ನು ಕೂಡಲೇ ನಿಲ್ಲಿಸಬೇಕು. ಮ್ಯಾನೇಜರ್‌ರಿಂದ ಅನುಮತಿ ಇಲ್ಲದೆ ಅನಧಿಕೃತ ವ್ಯಕ್ತಿಗಳು, ಅತಿಥಿಗಳನ್ನು ತಮ್ಮ ಹೋಟೆಲ್ ಕೋಣೆಗಳಿಗೆ ಆಹ್ವಾನಿಸಬಾರದು. ಉನ್ನತ ಮಟ್ಟದ ಕ್ರೀಡಾ ವಾತಾವರಣದಲ್ಲಿ ಹನಿಟ್ರ್ಯಾಪ್ ಅಪಾಯಗಳ ಬಗ್ಗೆ ಬಿಸಿಸಿಐ ಎಲ್ಲಾ ಫ್ರಾಂಚೈಸಿಗಳ ಗಮನ ಸೆಳೆಯುತ್ತದೆ. ಇಂತಹ ಘಟನೆಗಳು ಗಂಭೀರ ಕಾನೂನು ಉಲ್ಲಂಘನೆಗೆ ಕಾರಣವಾಗುತ್ತದೆ. ಹೀಗಾಗಿ ಫ್ರಾಂಚೈಸಿಗಳು ಎಲ್ಲಾ ಸಮಯದಲ್ಲೂ ಜಾಗರೂಕರಾಗಿರಬೇಕು' ಎಂದು ಸೈಕಿಯಾ ಅವರು ಸೂಚನೆ ನೀಡಿದ್ದಾರೆ.

ಮಾಲೀಕರಿಗೂ ನಿರ್ಬಂಧ: ಇನ್ನು, ಪಂದ್ಯದ ವೇಳೆ ಡಗೌಟ್, ರೂಮ್ ಅಥವಾ ಮೈದಾನದ ಬಳಿಕ ಆಟಗಾರರ ಜೊತೆ ತಂಡಗಳ ಮಾಲಿಕರ ಸಂಭಾಷನೆ, ಆಲಿಂಘನ ಕೂಡಾ ನಿಷೇಧಿಸಲಾಗಿದೆ. ' ಐಪಿಎಲ್ ಫ್ರಾಂಚೈಸಿಗಳ ಮಾಲೀಕರು ಪಂದ್ಯದ ಸಂದರ್ಭಗಳಲ್ಲಿ ಆಟಗಾರರೊಂದಿಗೆ ಸಂವಹನ ನಡೆಸಲು, ಸಮೀಪಿಸಲು, ತಬ್ಬಿಕೊಳ್ಳಲು ಪ್ರಯತ್ನಿಸುವ ನಿದರ್ಶನ ಗಮನಿಸಲಾಗಿದೆ. ಅಂತಹ ನಡವಳಿಕೆಯು ಸದುದ್ದೇಶದಿಂದ ಕೂಡಿದ್ದರೂ, ಅದು ಬಿಸಿಸಿಐ ಶಿಷ್ಟಾಚಾರದ ಉಲ್ಲಂಘನೆಯಾಗಿರುತ್ತದೆ' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಬಿಹಾರ-ಜಾರ್ಖಂಡ್ ವಲಯದ ಗರಿಷ್ಠ ತೆರಿಗೆ ಪಾವತಿದಾರ ಧೋನಿ!

ನವದೆಹಲಿ: ತಾರಾ ಕ್ರಿಕೆಟಿಗ ಎಂ.ಎಸ್. ಧೋನಿ 2025-26ನೇ ಸಾಲಿನ ಆರ್ಥಿಕ ವರ್ಷದಲ್ಲಿ ಬಿಹಾರ ಮತ್ತು ಜಾರ್ಖಂಡ್‌ನಲ್ಲಿ ಅತಿ ಹೆಚ್ಚು ತೆರಿಗೆ ಪಾವತಿಸಿದವರ ಪಟ್ಟಿಯಲ್ಲಿ ಅಗ್ರಸ್ಥಾನಿಯಾಗಿ ಹೊರಹೊಮ್ಮಿದ್ದಾರೆ.



ಗುರುವಾರವ ಆದಾಯ ತೆರಿಗೆ ಇಲಾಖೆ ಪ್ರಧಾನ ಆಯುಕ್ತ (ಬಿಹಾರ- ಜಾರ್ಖಂಡ್) ಡಾ. ಡಿ.ಸುಧಾಕರ್ ರಾವ್ ಅವರು ಈ ರಾಜ್ಯಗಳಲ್ಲಿ ಕಳೆದ ವರ್ಷ 20000 ಕೋಟಿ ರು. ಆದಾಯ ತೆರಿಗೆ ಸಂಗ್ರಹಿಸಲಾಗಿದೆ ಎಂದು ಅಂಕಿ ಅಂಶ ನೀಡಿದ್ದರು. ವೈಯಕ್ತಿಕ ತೆರಿಗೆ ಪಾವತಿದಾರರ ಪಟ್ಟಿಯಲ್ಲಿ ಧೋನಿ ಮೊದಲ ಸ್ಥಾನದಲ್ಲಿದ್ದಾರೆ ಎಂದಿದ್ದಾರೆ. ವರದಿಗಳ ಪ್ರಕಾರ, ಧೋನಿ ಬರೋಬ್ಬರಿ 40 ಕೋಟಿ ರು. ತೆರಿಗೆ ಪಾವತಿಸಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಮಹಿಳಾ ಅಂ-17 ಏಷ್ಯನ್ ಕಪ್ ಫುಟ್ಬಾಲ್: ಭಾರತ ಕ್ವಾರ್ಟರ್‌ಗೆ

2005ರ ಬಳಿಕ ಮೊದಲ ಗೋಲು, ಮೊದಲ ಜಯ!

ಸೂಝೊ(ಚೀನಾ): ಎಎಫ್‌ಸಿ ಅಂಡರ್-17 ಮಹಿಳಾ ಏಷ್ಯನ್ ಕಪ್‌ನಲ್ಲಿ ಮೊದಲ ಬಾರಿ ಭಾರತ ಕ್ವಾರ್ಟರ್ ಫೈನಲ್ ಪ್ರವೇಶಿಸಿ ಹೊಸ ಇತಿಹಾಸ ಬರೆದಿದೆ. ಶುಕ್ರವಾರ ಭಾರತ ತಂಡ ಲೆಬನಾನ್ ವಿರುದ್ಧ 'ಬಿ' ಗುಂಪಿನ ಪಂದ್ಯದಲ್ಲಿ ಲೆಬನಾನ್ ವಿರುದ್ಧ 4-0 ಅಂತರದಲ್ಲಿ ಜಯಗಳಿಸಿತು. ಇದರೊಂದಿಗೆ 3 ಅಂಕ ಪಡೆದ ಭಾರತ, 3ನೇ ಸ್ಥಾನಿಯಾಗಿ ನಾಕೌಟ್ ತಲುಪಿತು. ಇದು 2005ರ ಬಳಿಕ ಭಾರತವು ಟೂರ್ನಿಯಲ್ಲಿ ಗಳಿಸಿದ ಮೊದಲ ಗೋಲು ಮತ್ತು ಮೊದಲ ಗೆಲುವು. ಅಲ್ಲದೆ, ಟೂರ್ನಿಯಲ್ಲಿ ಮೊದಲ ಬಾರಿ ನಾಕೌಟ್ ಪ್ರವೇಶಿಸಿದ ಸಾಧನೆಯನ್ನೂ ಮಾಡಿತು. ಭಾರತ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರೆ ಅಂಡರ್-17 ವಿಶ್ವಕಪ್‌ಗೆ ಅರ್ಹತೆ ಗಿಟ್ಟಿಸಿಕೊಳ್ಳಲಿದೆ.

ಆ್ಯಲೆನ್ ಶತಕಕ್ಕೆ ನಡುಗಿದ ಡೆಲ್ಲಿ

ಕೆಕೆಆರ್‌ಗೆ ಸತತ ನಾಲ್ಕು ಜಯ | ಡೆಲ್ಲಿಗೆ 7ನೇ ಸೋಲಿನ ಶಾಕ್


ಡೆಲ್ಲಿ 142/4 | ಆ್ಯಲೆನ್ 100*, 14.2 ಓವರಲ್ಲಿ ಗೆದ್ದ ಕೆಕೆಆರ್

ನವದೆಹಲಿ: ಆರಂಭಿಕ 6 ಪಂದ್ಯಗಳಲ್ಲಿ ಗೆಲುವಿನಿಂದ ವಂಚಿತವಾಗಿದ್ದ ಕೋಲ್ಕತಾ, ಈಗ ಸತತ 4ನೇ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ 7ನೇ ಸ್ಥಾನಕ್ಕೇರಿದೆ. ಶುಕ್ರವಾರ ಡೆಲ್ಲಿ ವಿರುದ್ಧ 8 ವಿಕೆಟ್ ಭರ್ಜರಿ ಗೆಲುವು ಸಾಧಿಸಿದ್ದು, 10 ಪಂದ್ಯಗಳಲ್ಲಿ 9 ಅಂಕ ಸಂಪಾದಿಸಿದೆ. 11ರಲ್ಲಿ 7ನೇ ಸೋಲು ಕಂಡಿರುವ ಡೆಲ್ಲಿ 8 ಅಂಕ ಹೊಂದಿದ್ದು, ಉಳಿದ 3ರಲ್ಲಿ ಗೆದ್ದರೂ ಪ್ಲೇ-ಆಫ್‌ಗೇರುವುದು ಕಷ್ಟ.

ಮೊದಲು ಬ್ಯಾಟ್ ಮಾಡಿದ ಡೆಲ್ಲಿ 8 ವಿಕೆಟ್ ನಷ್ಟದಲ್ಲಿ 142 ರನ್ ಗಳಿಸಿತು. ಪಥುಮ್ ನಿಸ್ಸಾಂಕ(50) ಹಾಗೂ ಅಶುತೋಷ್ ಶರ್ಮಾ(39) ಹೊರತುಪಡಿಸಿ ಇತರ ಬ್ಯಾಟರ್ಸ್ ವಿಫಲರಾದರು. ಕೆ.ಎಲ್.ರಾಹುಲ್ 23 ರನ್ ಕೊಡುಗೆ ನೀಡಿದರು.

ಸ್ಪರ್ಧಾತ್ಮಕ ಗುರಿ ಬೆನ್ನತ್ತಿದ ಕೋಲ್ಕತಾ 14.2 ಓವರ್‌ಗಳಲ್ಲಿ ಕೇವಲ 2 ವಿಕೆಟ್ ನಷ್ಟದಲ್ಲೇ ಗೆಲುವಿನ ದಡ ಸೇರಿತು. ಅಜಿಂಕ್ಯ ರಹಾನೆ(13), ರಘುವಂಶಿ(1) ಬೇಗನೇ ಔಟಾದರೂ, 3ನೇ ವಿಕೆಟ್‌ಗೆ ಜೊತೆಯಾದ ಫಿನ್ ಆ್ಯಲೆನ್-ಕ್ಯಾಮರೂನ್ ಗ್ರೀನ್ ತಂಡವನ್ನು ಗೆಲ್ಲಿಸಿದರು. ಆ್ಯಲೆನ್ 47 ಎಸೆತಕ್ಕೆ ಔಟಾಗದೆ 100 ರನ್ ಸಿಡಿಸಿದರೆ, ಗ್ರೀನ್ 33 ರನ್ ಕೊಡುಗೆ ನೀಡಿದರು.

ಸ್ಕೋರ್: ಡೆಲ್ಲಿ 20 ಓವರಲ್ಲಿ 142/8 (ನಿಸ್ಸಾಂಕ 50, ಅಶುತೋಷ್ 39, ರಾಹುಲ್ 23, ಕಾರ್ತಿಕ್ 2-25), ಕೆಕೆಆರ್ 14.2 ಓವರಲ್ಲಿ 147/2 (ಆ್ಯಲೆನ್ ಔಟಾಗದೆ 100, ಗ್ರೀನ್ ಔಟಾಗದೆ 33, ಅಕ್ಷರ್ 1-27) **ಪಂದ್ಯಶ್ರೇಷ್ಠ: ಫಿನ್ ಆ್ಯಲೆನ್**



ಐಪಿಎಲ್‌ನಲ್ಲಿ ಚೊಚ್ಚಲ ಶತಕ ಸಿಡಿಸಿದ ಆ್ಯಲೆನ್

ತವರಿನಲ್ಲೇ 5 ಸೋಲು!

ಡೆಲ್ಲಿ ತನ್ನ ತವರು ಕ್ರೀಡಾಂಗಣದಲ್ಲೇ ಸತತ 5ನೇ ಸೋಲು ಅನುಭವಿಸಿದೆ. ಇಲ್ಲಿ ಈ ವರ್ಷ ತನ್ನ ಆರಂಭಿಕ ಪಂದ್ಯದಲ್ಲಿ ಮುಂಬೈ ವಿರುದ್ಧ ಡೆಲ್ಲಿ ಗೆದ್ದಿತ್ತು. ಬಳಿಕ ಗುಜರಾತ್, ಪಂಜಾಬ್, ಆರ್‌ಸಿಬಿ, ಚೆನ್ನೈ, ಕೆಕೆಆರ್ ವಿರುದ್ಧ ಸೋತಿದೆ.

ಗುಜರಾತ್ ಚಾಲೆಂಜ್ ಗೆಲ್ಲುತ್ತಾ ರಾಜಸ್ಥಾನ?

ಜೈಪುರ: ಈ ಬಾರಿ ಐಪಿಎಲ್‌ನ ಪ್ಲೇ-ಆಫ್ ರೇಸ್ ರೋಚಕತೆ ದಿನಗಳೆದಂತೆ ಹೆಚ್ಚಾಗುತ್ತಿದ್ದು, ರೇಸ್‌ನಲ್ಲಿ ಮುಂಚೂಣಿಯಲ್ಲಿ 2 ತಂಡಗಳಾದ ರಾಜಸ್ಥಾನ ರಾಯಲ್ಸ್ ಹಾಗೂ ಗುಜರಾತ್ ಟೈಟಾನ್ಸ್ ಶನಿವಾರ ಪರಸ್ಪರ ಸೆಣಸಾಡಲಿವೆ. ಪ್ಲೇ-ಆಫ್ ಸ್ಥಾನ ಭದ್ರಪಡಿಸಲು 2 ತಂಡಗಳು ಹೋರಾಟ ನಡೆಸಲಿವೆ. ಉಭಯ ತಂಡಗಳು ತಲಾ 10 ಪಂದ್ಯಗಳನ್ನಾಡಿದ್ದು, ತಲಾ 12 ಅಂಕ ಹೊಂದಿವೆ. ನೆಟ್ ರನ್ ರೇಟ್ ಆಧಾರದಲ್ಲಿ ರಾಜಸ್ಥಾನ 4ನೇ ಸ್ಥಾನದಲ್ಲಿದ್ದರೆ, ಗುಜರಾತ್ 5ನೇ ಸ್ಥಾನದಲ್ಲಿದೆ. ರಾಯಲ್ಸ್ ಆರಂಭದಲ್ಲಿ ಉತ್ತಮ ಪ್ರದರ್ಶನ ನೀಡಿದ್ದರೂ ಈಗ ಅಸ್ಥಿರ ಆಟವಾಡುತ್ತಿದೆ. ಕಳೆದ 6 ಪಂದ್ಯಗಳ ಪೈಕಿ 4ರಲ್ಲಿ ಸೋತಿದೆ. ಅತ್ತ, ಗುಜರಾತ್ ಕೊನೆ 3 ಪಂದ್ಯದಲ್ಲೂ ಗೆದ್ದಿದ್ದು, ಮತ್ತೊಂದು ಗೆಲುವಿನ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ಸಂಜೆ 7.30ಕ್ಕೆ

ತುಮಕೂರು ಓಪನ್: ವೈದೇಹಿ, ಝೀಲ್ ಸೆಮಿಗೆ

ಡಬಲ್ಸ್‌ನಲ್ಲಿ ವೈದೇಹಿ-ಪೋಲೆಂಡ್‌ನ ಜುಜಾನ್ನ ಜೋಡಿ ಫೈನಲ್‌ಗೆ ಪ್ರವೇಶ

ತುಮಕೂರು: ತುಮಕೂರು ಓಪನ್ ಮಹಿಳಾ ಟೆನಿಸ್ ಟೂರ್ನಿಯಲ್ಲಿ ಭಾರತದ ವೈದೇಹಿ ಚೌಧರಿ ಮತ್ತು ಝೀಲ್ ದೇಸಾಯಿ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಶುಕ್ರವಾರ 3ನೇ ಶ್ರೇಯಾಂಕಿತ ವೈದೇಹಿ 6ನೇ ಶ್ರೇಯಾಂಕಿತೆ, ರಷ್ಯಾದ ಎಕಟೆರಿನಾ ಯಾಶಿನಾ ವಿರುದ್ಧ 6-4, 6-7(5), 7-5 ಸೆಟ್‌ಗಳಿಂದ ಜಯಗಳಿಸಿದರು. 4ನೇ ಶ್ರೇಯಾಂಕದ ಆಟಗಾರ್ತಿ ಝೀಲ್ ಅವರು ರಷ್ಯಾದ ಅರಿನಾ ಅರಿಫುಲ್ಲಿನಾ ವಿರುದ್ಧ 4-6, 6-3, 7-5 ಅಂತರದಲ್ಲಿ ಗೆದ್ದು ಸೆಮೀಸ್ ತಲುಪಿದರು. ಡಬಲ್ಸ್‌ನಲ್ಲಿ ವೈದೇಹಿ-ಪೋಲೆಂಡ್‌ನ ಜುಜಾನ್ನ ಜೋಡಿ ಭಾರತದ ಆಕಾಂಕ್ಷ ದಿಲೀಪ್-ಜಪಾನ್‌ನ ಮಿಚಿಕಾ ಒಜೆಕಿ ವಿರುದ್ಧ 6-1, 6-2ರಲ್ಲಿ ಗೆದ್ದು ಫೈನಲ್ ಪ್ರವೇಶಿಸಿತು.



ಸೆಮಿಫೈನಲ್ ಪ್ರವೇಶಿಸಿದ ಝೀಲ್ ದೇಸಾಯಿ

16ರಂದು ಕೆಯುಡಬ್ಲ್ಯುಜೆ ದತ್ತಿನಿಧಿ ಪ್ರಶಸ್ತಿ ಪ್ರದಾನ, ಕನ್ನಡ ಸಂಸ್ಕೃತಿ ಉತ್ಸವ

ಶಾಫಿ ಬಂಡಸಾಲ ದುಬೈ ಅವರ 'ಮನದಾಳದಿಂದ' ಪುಸ್ತಕ ಲೋಕಾರ್ಪಣೆ | ಸಾಧಕರಿಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೆಂಗಳೂರು ಸಂಯುಕ್ತ ಆಶ್ರಯದಲ್ಲಿ ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ದತ್ತಿನಿಧಿ ಪ್ರಶಸ್ತಿ ಪ್ರದಾನ ಹಾಗೂ ಕನ್ನಡ ಸಂಸ್ಕೃತಿ ಉತ್ಸವ 16ರಂದು ಬೆಳಗ್ಗೆ 9 ರಿಂದ ಸುಬ್ಬಯ್ಯಕಟ್ಟೆ ಕುಡಾಲ್ ಮೇರ್ಕಳದ ಕುಡಾಲು ಅನುದಾನಿತ ಕಿ.ಪ್ರಾ.ಶಾಲೆ ವಠಾರದಲ್ಲಿ ನಡೆಯಲಿದೆ ಎಂದು ಕಾಸರಗೋಡಿನ ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಸಂಸ್ಥಾಪಕ ಎಸ್.ಪ್ರದೀಪ್ ಕುಮಾರ್ ಕಲ್ಕೂರ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಸಣ್ಣ ನಿರಾವರಿ ಸಚಿವ ಎನ್.ಎಸ್. ಭೋಸರಾಜು ಕಾರ್ಯಕ್ರಮ ಉದ್ಘಾಟಿಸುವರು. ನಿಯೋಜಿತ ಮಂಜೇಶ್ವರ ಶಾಸಕ ಎ.ಕೆ.ಎಂ.ಆಶ್ರಫ್ ಅಧ್ಯಕ್ಷತೆ ವಹಿಸುವರು. ಕರ್ನಾಟಕ ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ದತ್ತಿನಿಧಿ ಪ್ರಶಸ್ತಿ ಪ್ರದಾನ ಮಾಡುವರು. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಗಡಿನಾಡ ಸಾಧಕರನ್ನು ಸನ್ಮಾನಿಸುವರು. ಕರ್ನಾಟಕ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಪತ್ರಕರ್ತರ ಗುರುತುಚೀಟಿ ವಿತರಿಸುವರು. ಶಾಫಿ ಬಂಡಸಾಲ ದುಬೈ ಅವರ 'ಮನದಾಳದಿಂದ' ಪುಸ್ತಕವನ್ನು ಕರ್ನಾಟಕ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ. ಎಂ.ಶಹೀದ್ ಲೋಕಾರ್ಪಣೆಗೊಳಿಸುವರು ಎಂದರು.

ಕಾಸರಗೋಡು ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಸಾಬು ಅಬ್ರಹಾಂ, ಸದಸ್ಯ ಸೋಮಶೇಖರ್ ಜೆಎಸ್., ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೆಂಗಳೂರು ಅಧ್ಯಕ್ಷ ಶಿವಾನಂದ ತಗಡೂರು, ಕ.ಸಾ.ಪ ಕೇರಳ ಘಟಕ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ದ.ಕ.ಜಿಲ್ಲಾ ಸಮಿತಿ, ಮಂಗಳೂರು ಅಧ್ಯಕ್ಷ ಪುಷ್ಪರಾಜ್ ಬಿ.ಎನ್.. ಕೆ.ಯು.ಡಬ್ಲ್ಯೂ.ಜೆ. ಕರ್ನಾಟಕ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ. ಕೇರಳ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ರಾಧಾಕೃಷ್ಣ ಕೆ ಉಳಿಯತಡ್ಕ, ಗಡಿನಾಡ ಉತ್ಸವ ಸಮಿತಿ ಮಸ್ಕತ್ ಪ್ರಧಾನ ಸಂಚಾಲಕ ಶಿವಾನಂದ ಕೋಟ್ಯಾನ್, ಮಂಗಳೂರು ದ.ಕ. ಜಿಲ್ಲಾ ವಾರ್ತಾಧಿಕಾರಿ ಖಾದರ್‌ಶಾ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಸದಸ್ಯರುಗಳಾದ ಭಗತರಾಜ್ ನಿಜಾಮಕರ್, ಜಾಣಗೆರೆ ವೆಂಕಟರಾಮಯ್ಯ, ಡಾ.ಎಂ.ಎಸ್. ಮದಬಾವಿ, ಅಶೋಕ ಚಂದರಗಿ, ಡಾ. ಸಂಜೀವ ಕುಮಾರ್ ಅತಿವಾಳೆ, ಶಿವರೆಡ್ಡಿ ಖ್ಯಾಡೆದ್, ಕೆ.ಯು.ಡಬ್ಲ್ಯೂ.ಜೆ. ಕಾಸರಗೋಡು ಅಧ್ಯಕ್ಷ ಎ.ಆರ್.ಸುಬ್ಬಯ್ಯಕಟ್ಟೆ, ಕಜಾಪ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಪ್ರವೀಣ್ ಕುಮಾರ್ ಕೊಡಿಯಾಲ್ ಬೈಲ್, ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ, ಕಾಸರಗೋಡು ಅಧ್ಯಕ್ಷ ಎನ್.ಚನಿಯಪ್ಪ ನಾಯ್ಕ, ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು, ಪ್ರಧಾನ ಕಾರ್ಯದರ್ಶಿ ಗಂಗಾಧರ ತೆಕ್ಕೆಮೂಲೆ, ಸೌಮ್ಯ ಗೌಡ ಬೆಂಗಳೂರು, ಹರಿದಾಸ ಜಯಾನಂದ ಕುಮಾರ ಹೊಸದುರ್ಗ ಆಗಮಿಸುವರು ಎಂದರು.

ಶೋಭಾಯಾತ್ರೆ, ಸಾಂಸ್ಕೃತಿಕ ಕಾರ್ಯಕ್ರಮ: ಪೈವಳಿಕೆ ಗ್ರಾ.ಪಂ. ಅಧ್ಯಕ್ಷೆ ಬದರುನ್ನೀಸ ಸಲೀಂ ಮತ್ತು ಹಿರಿಯ ಸಮಾಜ ಸೇವಕ ಭಂಡಾರಗುತ್ತು ಸೀತಾರಾಮ ಶೆಟ್ಟಿ ಬೆಳಗ್ಗೆ 9ಕ್ಕೆ ಶೋಭಾಯಾತ್ರೆಗೆ ಚಾಲನೆ ನೀಡುವರು. 9.30ರಿಂದ ಗೋನಾ ಸ್ವಾಮಿ, ಡಾ.ಕೆ.ಎನ್. ನಾಗೇಶ್ ಬೆಂಗಳೂರು ಮತ್ತು ಬಳಗದ ಸುಗಮ ಸಂಗೀತ, 10ರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಸ್ವಾಗತ ಸಮಿತಿ ಅಧ್ಯಕ್ಷ ಸೋಮಶೇಖರ ಜೆ. ಎಸ್., ಪ್ರಧಾನ ಸಂಚಾಲಕ ಅಶೋಕ ಭಂಡಾರಿ ಕುಡಾಲ್, ಸಂಚಾಲಕ ರಾಘವ ಚೇರಾಲ್, ಯುಡಬ್ಲ್ಯೂ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ರಾಧಾಕೃಷ್ಣ ಉಳಿಯತ್ತಡ್ಕ, ಜಿಲ್ಲಾಧ್ಯಕ್ಷ ಎ.ಆರ್.ಸುಬ್ಬಯ್ಯ ಕಟ್ಟೆ, ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷ ರವಿ ನಾಯ್ಕಾಪು, ಕಜಾಪ ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ಪ್ರವೀಣ್ ಕುಮಾರ್ ಕೊಡಿಯಾಲಬೈಲ್ ಇದ್ದರು.



ಪ್ರದೀಪ್ ಕುಮಾರ್ ಕಲ್ಕೂರ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವುದು

■ ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ದತ್ತಿನಿಧಿ ಪ್ರಶಸ್ತಿ ಪ್ರದಾನ ಹಾಗೂ ಕನ್ನಡ ಸಂಸ್ಕೃತಿ ಉತ್ಸವ 16ರಂದು ಬೆಳಗ್ಗೆ 9 ರಿಂದ ಸುಬ್ಬಯ್ಯಕಟ್ಟೆ ಕುಡಾಲ್ ಮೇರ್ಕಳದ ಕುಡಾಲು ಅನುದಾನಿತ ಕಿ.ಪ್ರಾ.ಶಾಲೆ ವಠಾರದಲ್ಲಿ ನಡೆಯಲಿದೆ: ಕಾಸರಗೋಡಿನ ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಸಂಸ್ಥಾಪಕ ಎಸ್.ಪ್ರದೀಪ್ ಕುಮಾರ್ ಕಲ್ಕೂರ

> ಗೇರು ಹಣ್ಣಿನ ಮೌಲ್ಯವರ್ಧನೆ ಮೂಲಕ ದೇಶದಲ್ಲಿ 80 ವರ್ಷದ ಬಳಿಕ ಗೇರು ಹಣ್ಣು ಕ್ರಾಂತಿ ಮಾಡುತ್ತಿದೆ. ನಮ್ಮ ಹಿರಿಯರು ಈ ಕೆಲಸವನ್ನು ಮಾಡಬೇಕಾಗಿತ್ತು. ಬ್ರಿಜಿಲ್‌ನಲ್ಲಿ ಒಟ್ಟು ಗೇರು ಹಣ್ಣಿನಲ್ಲಿ ಶೇ.75ರಲ್ಲಿ ಆದಾಯ ಪಡೆಯುತ್ತಿದ್ದಾರೆ.
>
> • **ಶ್ರೀಪಡ್ರೆ**, ಗೇರು ಹಣ್ಣು ಮೌಲ್ಯವರ್ಧನೆಯ ರೂವಾರಿ.

ಕನ್ನಡಪ್ರಭ
ಶನಿವಾರ 9.05.2026
ಮಂಗಳೂರು

ಸುದ್ದಿ ಸಿಂಚನ

ದ.ಕ. ಜಿಲ್ಲಾಧಿಕಾರಿ ಕಚೇರಿಗೆ ಆಂಧ್ರಪ್ರದೇಶ ರಾಜ್ಯಪಾಲರ ಭೇಟಿ



ಮಂಗಳೂರು: ಆಂಧ್ರ ಪ್ರದೇಶದ ರಾಜ್ಯಪಾಲ ನ್ಯಾ. ಅಬ್ದುಲ್ ನಝೀರ್‌ಶುಕ್ರವಾರ ಮಂಗಳೂರಿನ ಪಡೀಲ್‌ನ ದ.ಕ. ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿದರು. ಜಿಲ್ಲಾಧಿಕಾರಿ ಎಚ್.ವಿ. ದರ್ಶನ್ ಅವರು ಆಂಧ್ರ ಪ್ರದೇಶದ ರಾಜ್ಯಪಾಲರನ್ನು ಸ್ವಾಗತಿಸಿದರು. ಜಿಲ್ಲಾಧಿಕಾರಿ ಕಚೇರಿಯ ವಿವಿಧ ವಿಭಾಗಗಳಿಗೆ ಭೇಟಿ ನೀಡಿದ ಅವರು ಹೊಸ ಕಚೇರಿಯ ನಿರ್ಮಾಣ ಹಾಗೂ ಶೈಲಿಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ರಾಜು ಕೆ. ಇದ್ದರು.

ಗೇರು ಹಣ್ಣಿನ ಮೌಲ್ಯವರ್ಧನೆ ಕೃಷಿಕರಿಗೆ ಹೆಚ್ಚಿನ ಆದಾಯ: ಶ್ರೀಪಡ್ರೆ

ಕದ್ರಿ ಪಾರ್ಕ್‌ನಲ್ಲಿ ಮೂರು ದಿನಗಳ ಗೇರು–ಮಾವು ಮೇಳಕ್ಕೆ ಚಾಲನೆ | ಗೇರು ಹಣ್ಣಿನ ಜ್ಯೂಸ್‌ಗೆ ಭರ್ಜರಿ ಬೇಡಿಕೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಗೇರು ಹಣ್ಣಿನ ಮೌಲ್ಯವರ್ಧನೆಯಿಂದ ಗೇರು ಬೀಜದ ಜೊತೆಗೆ ಗೇರು ಹಣ್ಣಿನಿಂದಲೂ ಆದಾಯ ಗಳಿಕೆ ಸಾಧ್ಯವಾಗುತ್ತಿದೆ. ಗೇರು ಹಣ್ಣಿನ ಜ್ಯೂಸ್‌ಗೆ ಉತ್ತಮ ವೇದಿಕೆ ಸಿಕ್ಕಲ್ಲಿ ಗೇರು ಬೀಜದ ಐದು ಪಟ್ಟು ಹೆಚ್ಚು ಆದಾಯ ಗೇರು ಹಣ್ಣಿನಿಂದ ಪಡೆಯಬಹುದಾಗಿದ್ದು, ಇದು ಗೇರು ಬೆಳೆಗಾರ ಕೃಷಿಕರ ಆದಾಯ ಹೆಚ್ಚಿಸಲಿದೆ ಎಂದು ಅಡಿಕೆ ಪತ್ರಿಕೆ ಸಂಪಾದಕ, ಗೇರು ಹಣ್ಣು ಮೌಲ್ಯವರ್ಧನೆಯ ರೂವಾರಿ ಶ್ರೀಪಡ್ರೆ ಹೇಳಿದರು.

ಅವರು ಶುಕ್ರವಾರ ಮಂಗಳೂರಿನ ಕದ್ರಿ ಪಾಕ್‌ರ್ನಲ್ಲಿ ರೈತ ಕುಡ್ಲ ಪ್ರತಿಷ್ಠಾನ ನೇತೃತ್ವದಲ್ಲಿ ಸಿರಿ ತೋಟಗಾರಿಕೆ ಸಂಘ ಮಂಗಳೂರು, ಸಾವಯವ ಕೃಷಿಕ ಗ್ರಾಹಕ ಬಳಗ ಮಂಗಳೂರು ಸಹಯೋಗದೊಂದಿಗೆ ಮೂರು ದಿನಗಳ ಕಾಲ ನಡೆಯುವ ಗೇರು, ಮಾವು, ಹಲಸು ಮೇಳ ಉದ್ಘಾಟಿಸಿ ಮಾತನಾಡಿದರು.

ಗೇರು ಹಣ್ಣಿನ ಮೌಲ್ಯವರ್ಧನೆ ಮೂಲಕ ದೇಶದಲ್ಲಿ 80 ವರ್ಷದ ಬಳಿಕ ಗೇರು ಹಣ್ಣು ಕ್ರಾಂತಿ ಮಾಡುತ್ತಿದೆ. ನಮ್ಮ ಹಿರಿಯರು ಈ ಕೆಲಸವನ್ನು ಮಾಡಬೇಕಾಗಿತ್ತು. ಬ್ರಿಜಿಲ್‌ನಲ್ಲಿ ಒಟ್ಟು ಗೇರು ಹಣ್ಣಿನಲ್ಲಿ ಶೇ.75ರಲ್ಲಿ ಆದಾಯ ಪಡೆಯುತ್ತಿದ್ದಾರೆ. ರೈತ ಕುಡ್ಲ ಪ್ರತಿಷ್ಠಾನ ಅರ್ಥಮಾಡಿಕೊಂಡು ಗೇರು ಹಣ್ಣಿನ ಮೌಲ್ಯವರ್ಧನೆಯ ಕಾರ್ಯಕ್ರಮ ಮಾಡಲಾಗುತ್ತಿದೆ. ಗೇರು ಅಭಿವೃದ್ಧಿ ಸಂಸ್ಥೆಗಳು ಉತ್ಪನ್ನಗಳನ್ನು ಮಾಡಿದರು ಅದನ್ನು ಪ್ರಚಾರ ಪಡಿಸುವಲ್ಲಿ ವಿಫಲವಾಗಿದೆ. ಗೇರು ಹಣ್ಣಿನ ಮೌಲ್ಯವರ್ಧನೆ ಬಗ್ಗೆ ವೇದಿಕೆ ಇರಲಿಲ್ಲ. ಇದೀಗ ಗೇರುಹಣ್ಣಿನ ಜ್ಯೂಸ್, ಮೌಲ್ಯವರ್ಧಿತ ಉತ್ಪನ್ನಗಳ ಬಗ್ಗೆ ಕಾರ್ಯಗಾರ ಆಯೋಜಿಸಿ ಪ್ರೇರಣೆ ನೀಡುತ್ತಿರುವುದರಿಂದ ಇಂದು ಗೇರು ಹಣ್ಣಿನ ಜ್ಯೂಸ್ ಕ್ರಾಂತಿ ಮಾಡುವ ಹಂತಕ್ಕೆ ಬಂದಿದೆ. ಮುಂದಿನ ದಿನಗಳಲ್ಲಿ ಗೇರು ಹಣ್ಣಿನ ಜ್ಯೂಸ್ ಸ್ಥಳೀಯ ಮಾರುಕಟ್ಟೆಯಿಂದ ಹಿಡಿದು ರಾಷ್ಟ್ರ ರಾಜಧಾನಿಯ ಮಾರುಕಟ್ಟೆಗೂ ಲಗ್ಗೆ ಇಡಲಿದೆ. ಗೇರು ಹಣ್ಣಿನಲ್ಲಿ ಔಷಧೀಯ ಗುಣಗಳೂ ಇದೆ ಎಂದರು.

ರೈತ ಕುಡ್ಲ ಪ್ರತಿಷ್ಠಾನ ಅಧ್ಯಕ್ಷ ಭರತ್‌ರಾಜ್ ಸೊರಕೆ ಅಧ್ಯಕ್ಷತೆ ವಹಿಸಿದ್ದರು. ಸಿರಿತೋಟಗಾರಿಕೆ ಸಂಘದ ಕೋಶಾಧಿಕಾರಿ ಹರಿಶ್ಚಂದ್ರ ಅಡ್ಕ, ಮಂಗಳೂರು ಸಾವಯವ ಕೃಷಿಕ ಗ್ರಾಹಕ ಬಳಗದ ಕಾರ್ಯದರ್ಶಿ ರತ್ನಾಕರ ಕುಳಾಯಿ, ಕದ್ರಿ ಉದ್ಯಾನವನ ಅಭಿವೃದ್ಧಿ ಸಮಿತಿ ಕಾರ್ಯಕಾರಿ ಸದಸ್ಯರಾದ ಜಗನ್ನಾಥ ಗಾಂಭೀರ್, ಜಿ.ಕೆ.ಭಟ್, ರಾಮ ಮೊಗರೋಡಿ, ಕದ್ರಿ ಪಾರ್ಕ್‌ನ ರೂಪೇಶ್ ಮತ್ತಿತರರು ಇದ್ದರು.



ಗೇರು, ಮಾವು, ಹಲಸು ಮೇಳ ಕಾರ್ಯಕ್ರಮದ ಉದ್ಘಾಟನಾ ಹಾಗೂ ಸ್ಟಾಲ್‌ನ ಪೋಟೋಗಳು

- ಗೇರು, ಮಾವು, ಹಲಸು ಮೇಳಕ್ಕೆ ಶುಕ್ರವಾರ ಬೆಳಗ್ಗೆಯಿಂದಲೇ ಗ್ರಾಹಕರು ಆಗಮಿಸಿ ಪ್ರದರ್ಶನಗಳನ್ನು ವೀಕ್ಷಿಸಿದರು. ಮೇಳದಲ್ಲಿ ವಿವಿಧ ಸ್ಟಾಲ್‌ಗಳನ್ನು ಹಾಕಲಾಗಿದ್ದು, ಅದರಲ್ಲಿ ಗೇರು, ಗೇರು ಹಣ್ಣಿನ ಉತ್ಪನ್ನಗಳು, ಬಗೆ ಬಗೆಯ ಮಾವು, ಮಾವಿನ ಉತ್ಪನ್ನಗಳು, ಹಲಸು, ಹಲಸಿನ ಉತ್ಪನ್ನಗಳು ಸೇರಿದಂತೆ ವಿವಿಧ ಪ್ರದರ್ಶನಗಳನ್ನು ಮಾಡಲಾಗಿತ್ತು.
- ಪುತ್ತೂರು ಗೇರು ಸಂಶೋಧನಾಲಯದ ಸ್ಟಾಲ್‌ನಲ್ಲಿ ಗೇರು ಗಿಡ, ಗೇರಿನ ಉತ್ಪನ್ನಗಳು, ಗೇರು ಹಣ್ಣಿನ ಉತ್ಪನ್ನಗಳ ಪ್ರದರ್ಶನ ಮಾಡಲಾಗಿತ್ತು. ಸ್ಟಾಲ್‌ಗಳಲ್ಲಿ ಗೇರು ಹಣ್ಣಿನ ಜ್ಯೂಸ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಗ್ರಾಹಕರ ಆಕರ್ಷಣೆಯ ಕೇಂದ್ರವಾಗಿತ್ತು.

ಕದ್ರಿ ಗೇರುಮೇಳದಲ್ಲಿ ಗಮನಸೆಳೆಯಿತು 2.5 ಲಕ್ಷ ರು.ಗಳ ಮಾವಿನ ಹಣ್ಣು

- ಮೇಳದಲ್ಲಿ ವಿಶೇಷವಾಗಿ ಗಮನ ಸೆಳೆದದ್ದು, ಜಪಾನ್‌ನ ಮಿಯಾಜಾಕಿ ಎಂಬ ಕೆ.ಜಿಗೆ 2.5 ಲಕ್ಷ ರು. ಬೆಲೆಯಿರುವ ಮಾವಿನ ಹಣ್ಣು. ಈ ಹಣ್ಣನ್ನು ಮೇಳದಲ್ಲಿ ಒಂದು ಪೀಸ್‌ಗೆ (ಸಣ್ಣ ಭಾಗ) 2 ಸಾವಿರ ರು.ನಂತೆ ಮಾರಾಟ ಮಾಡಲಾಗಿದೆ. ಹೊನ್ನಾವರ ಮೂಲದ ವ್ಯಾಪಾರಿಯೊಬ್ಬರು ಈ ಮಾವು ಮಾರಾಟ ಮಾಡುತ್ತಿದ್ದು, ಗ್ರಾಹಕರು ಇದರ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುತ್ತಿರುವುದು ಕಂಡುಬಂತು.





ಗೇರುಮೇಳದಲ್ಲಿ ಕಂಡ ಗೇರು ಹಣ್ಣುಗಳು (1) ನೇರಳೆ ಹಣ್ಣು ಖರೀದಿ ಭರಾಟೆ (2).

ಖಂಡಿಗೆ ಕಂಡೇವುದ ಆಯನ 15 ರಂದು

• **ಕನ್ನಡಪ್ರಭವಾರ್ತೆ** ಮೂಲ್ಕಿ

ಮುಕ್ಕ ಸಮೀಪದ ಚೇಳ್ಯೆರು ಖಂಡಿಗೆ ಧರ್ಮರಸು ಶ್ರೀ ಉಳ್ಳಾಯ ದೈವಸ್ಥಾನದಲ್ಲಿ ಕಂಡೇವುದ ಆಯನವು 15, 16ರಂದು 15 ರ ಬೆಳಿಗ್ಗೆ 7ಕ್ಕೆ ಖಂಡಿಗೆ ನಂದಿನಿ ನದಿಯಲ್ಲಿ ಮೀನು ಹಿಡಿಯುವಿಕೆ, 11ಕ್ಕೆ ಸಂಕ್ರಮಣ ಪೂಜೆ, ಮಧ್ಯಾಹ್ನ ಅನ್ನಸಂತರ್ಪಣೆ, ರಾತ್ರಿ ಮಹಾ ಅನ್ನಸಂತರ್ಪಣೆ, ಸಂಜೆ 5.30ಕ್ಕೆ ಯಕ್ಷಮಣಿ ಕಲಾ ತಂಡ ಚೇಳ್ಯೆರು ಅವರಿಂದ ಪಾಂಚ ಜನ್ಯ ಯಕ್ಷಗಾನ ಬಯಲಾಟ, ರಾತ್ರಿ 9 ಕ್ಕೆ ಬ್ರಹ್ಮಸ್ಥಾನದಲ್ಲಿ ಬ್ರಹ್ಮರಿಗೆ ತಂಬಿಲ, ಕುಮಾರ ಸಿರಿಗಳ ದರ್ಶನ, ಧರ್ಮರಸು ಶ್ರೀ ಉಳ್ಳಾಯ ಹಾಗೂ ಪರಿವಾರ ದೈವಗಳ ಭಂಡಾರ ಮೂಲಸ್ಥಾನಕ್ಕೆ ಹೋಗುವುದು, ಸಿಡಿಮದ್ದು ಪ್ರದರ್ಶನ, ಧ್ವಜಾರೋಹಣ,16 ರ ಬೆಳಿಗ್ಗೆ 5 ಕ್ಕೆ ಧರ್ಮರಸು ಶ್ರೀ ಉಳ್ಳಾಯ. ಇಷ್ಟದೇವತೆ, ಬಬ್ಬರ್ಯ ಹಾಗೂ ಪರಿವಾರ ದೈವಗಳ ನೇಮೋತ್ಸವ ನಂತರ ನಂದಿಗೋಣ, ಕುಮಾರ ಸಿರಿಗಳ ಭೇಟಿ,7ಕ್ಕೆ ನಾಗದೇವರಿಗೆ ಭಕ್ತಾದಿಗಳಿಂದ ತಂಬಿಲ ಸೇವೆ, ಸಂಜೆ 4.30ಕ್ಕೆ ಬಾಕಿಮಾರು ಗದ್ದೆಯಲ್ಲಿ ಚೆಂಡು, 6ಕ್ಕೆ ಜಾರಂದಾಯ, ಬಂಟ, ಕೊಡಮಣಿತ್ತಾಯ ದೈವಗಳಿಗೆ ಜೋಡಿ ನೇಮೋತ್ಸವ ನಡೆಯಲಿದೆ. ಬಾಕಿಲ್ ದಾಂತಿ ಕೋಡ್ದಬ್ಬು ದೈವಸ್ಥಾನದ ಕೋಡ್ದಬ್ಬು ಮತ್ತು ಧೂಮಾವತಿ ದೈವದ ಭೇಟಿ, 7.30ಕ್ಕೆ ಶ್ರೀ ಉಳ್ಳಾಯ ಹಾಗೂ ಪರಿವಾರ ದೈವಗಳಿಗೆ ಸಾಮೂಹಿಕ ಹೂವಿನ ಪೂಜೆ, ಮಧ್ಯಾಹ್ನ ಸಾರ್ವಜನಿಕ ಅನ್ನಸಂತರ್ಪಣೆ, ರಾತ್ರಿ 8 ಕ್ಕೆ ಪರ್ಮದ ಕಲಾವಿದೆರ್ ಚೇಳ್ಯಾರು ಅವರಿಂದ ಎನ್ನಿಲೆಕ್ಕ ಇಜ್ಜಿರ್ ತುಳು ನಾಟಕ ಪ್ರದರ್ಶನ, 8ಕ್ಕೆ ಧ್ವಜಾವರೋಹಣ, ಖಂಡಿಗೆ ಬೀಡಿಗೆ ಭಂಡಾರ ನಿರ್ಗಮನವಾಗಲಿದೆಯೆಂದು ಎಂದು ಚೇಳ್ಯೆರು ಖಂಡಿಗೆ ಧರ್ಮರಸು ಶ್ರೀ ಉಳ್ಳಾಯ ದೈವಸ್ಥಾನ ಪ್ರಕಟಣೆ ತಿಳಿಸಿದೆ.

ಭಾರತದ ಟಾಪ್ 10 ಸ್ಟಾರ್‌ಗಳ ಪಟ್ಟಿಯಲ್ಲಿ ಯಶ್ ರಿಷಬ್





• **ಕನ್ನಡಪ್ರಭ** ಸಿನಿವಾರ್ತೆ

ಭಾರತದ ಖ್ಯಾತ ಸಿನಿಮಾ ಮ್ಯಾಗಜೀನ್ ಆಗಿರುವ ಹಾಲಿವುಡ್ ರಿಪೋರ್ಟರ್ ಇಂಡಿಯಾ ಇದೀಗ ಭಾರತದ ಟಾಪ್ 10 ಸ್ಟಾರ್‌ಗಳ ಪಟ್ಟಿಯನ್ನು ಪ್ರಕಟಿಸಿದ್ದು, ಆ ಪಟ್ಟಿಯಲ್ಲಿ ಕನ್ನಡದ ಯಶ್ ಮತ್ತು ರಿಷಬ್ ಶೆಟ್ಟಿ ಸ್ಥಾನ ಪಡೆದುಕೊಂಡಿದ್ದಾರೆ.

ಬಾಕ್ಸ್ ಆಫೀಸ್‌ನಲ್ಲಿ ಅತಿ ಹೆಚ್ಚು ಗಳಿಕೆ ಮಾಡುವ ಸ್ಟಾರ್‌ಗಳು ಎಂಬ ಆಧಾರದಲ್ಲಿ ಈ ಪಟ್ಟಿ ಸಿದ್ಧಪಡಿಸಿರುವುದಾಗಿ ಪತ್ರಿಕೆ ಹೇಳಿಕೊಂಡಿದೆ. ಈ ಪಟ್ಟಿಯಲ್ಲಿ ಅಲ್ಲು ಅರ್ಜುನ್, ರಾಮ್ ಚರಣ್‌ತೇಜಾ, ಪ್ರಭಾಸ್, ಜೂ. ಎನ್‌ಟಿಆರ್, ರಣಬೀರ್ ಕಪೂರ್, ರಣವೀರ್ ಸಿಂಗ್, ದೀಪಿಕಾ ಪಡುಕೋಣೆ, ಶ್ರದ್ಧಾ ಕಪೂರ್ ಸ್ಥಾನಪಡೆದುಕೊಂಡಿದ್ದಾರೆ. ಈ ಪಟ್ಟಿಯಲ್ಲಿ ಬಹುತೇಕ ದಕ್ಷಿಣ ಭಾರತದ ಸ್ಟಾರ್‌ಗಳೇ ಇರುವುದು ವಿಶೇಷ.

ಬರಲಿದೆ ಧುರಂಧರ್ 3 ಸುಳಿವು ಕೊಟ್ಟ ಸಹ ನಿರ್ಮಾಪಕಿ





"ವರ್ಷಾಂತ್ಯದಲ್ಲಿ ಸರ್ಪ್ರೈಸ್ ಕೊಡ್ತೀವಿ: ಜ್ಯೋತಿ ದೇಶಪಾಂಡೆ

• **ಕನ್ನಡಪ್ರಭ** ಸಿನಿವಾರ್ತೆ

ಭರ್ಜರಿ ರೂ.3000 ಕೋಟಿ ಕಲೆಕ್ಷನ್ ಮಾಡಿರುವ ಧುರಂಧರ್ 1 ಹಾಗೂ ಧುರಂಧರ್ 2 ಸಿನಿಮಾದ ಮುಂದಿನ ಭಾಗದ ಬಗ್ಗೆ ಇದೀಗ ಸಹ ನಿರ್ಮಾಪಕಿ ಜ್ಯೋತಿ ದೇಶಪಾಂಡೆ ಸುಳಿವು ಕೊಟ್ಟಿದ್ದಾರೆ.

ಸಂದರ್ಶನವೊಂದರಲ್ಲಿ ಅವರು, 'ಈ ವರ್ಷಾಂತ್ಯದ ಹೊತ್ತಿಗೆ ಸರ್ಪ್ರೈಸ್ ಕೊಡ್ತೀವಿ, ಇನ್ನೂ ಕೆಲಸ ಶುರು ಆಗಿಲ್ಲ. ಸದ್ಯಕ್ಕೆ ತಯಾರಿ ನಡೆಯುತ್ತಿದೆ' ಎಂದಿದ್ದಾರೆ. 'ಧುರಂಧರ್' ಸಿನಿಮಾದ ಮೂರನೇ ಭಾಗ ಬರುವ ಸುದ್ದಿಗೆ ಈ ಮಾತು ಪುಷ್ಠಿ ನೀಡಿದೆ. ಆದರೆ ಈ ಹಿಂದೆ ನಿರ್ದೇಶಕ ಆದಿತ್ಯ ಧರ್ ಸೇರಿದಂತೆ ಚಿತ್ರತಂಡದವರು ಮೂರನೇ ಭಾಗ ಬರುವುದಿಲ್ಲ ಎಂದು ಹೇಳಿದ್ದರು. ಆದರೆ ಇದೀಗ ಅಭಿಮಾನಿಗಳು 'ಧುರಂಧರ್ 3'ಗೆ ಪಟ್ಟು ಹಿಡಿದಿರುವ ಕಾರಣ ಅವರು ಮನಸ್ಸು ಬದಲಿಸಿರುವ ಸಾಧ್ಯತೆ ಇದೆ ಎನ್ನಲಾಗಿದೆ.

ಇನ್ನೊಂದೆಡೆ 'ಧುರಂಧರ್ 1 ಹಾಗೂ 2' ಸಿನಿಮಾ ಮೇಕಿಂಗ್ ಅನ್ನು ಇಟ್ಟುಕೊಂಡು ನಿರ್ದೇಶಕ ಆದಿತ್ಯ ಧರ್ ಡಾಕ್ಯುಮೆಂಟರಿ ಮಾಡಲು ಯೋಜಿಸಿದ್ದು, ಅದನ್ನು ಥೇಟರಿಗೆ ರಿಲೀಸ್ ಮಾಡುವ ಬಗ್ಗೆಯೂ ಮಾತು ಕೇಳಿಬಂದಿದೆ.

ಶೂಟಿಂಗ್ ಮೊದಲು ರಂಜನಿ ಪರ್ಸನಲ್ ವಿಚಾರ ಕೇಳಿದ್ದರು "ಮೇಘನಾ ಗಾಂವ್ಕರ್



• **ಕನ್ನಡಪ್ರಭ** ಸಿನಿವಾರ್ತೆ

ರಂಜನಿ ರಾಘವನ್ ನಿರ್ದೇಶನದ 'ಡಿ ಡಿ ಢಿಕ್ಕಿ' ಸಿನಿಮಾದಲ್ಲಿ ಮೇಘನಾ ಗಾಂವ್ಕರ್ ಅಭಿನಯಿಸಿದ್ದಾರೆ. ಚಿತ್ರದಲ್ಲಿ ಅವರು ಪ್ರಗತಿ ಕೌಂಡಿನ್ಯ ಎಂಬ ಲಾಯರ್‌ಪಾತ್ರದಲ್ಲಿ ನಟಿಸಿದ್ದಾರೆ. ಮೇಘನಾ ಜನ್ಮದಿನದಂದು ಅವರ ಪಾತ್ರದ ಘೋಷಣೆಯಾಗಿದೆ.

ಈ ಪಾತ್ರದ ಕುರಿತು ನಿರ್ದೇಶಕಿ ರಂಜನಿ ರಾಘವನ್, 'ಚಿತ್ರದ ಪ್ರಮುಖ ಪಾತ್ರವಿದು. ಸ್ತ್ರೀವಾದಿ ಧೋರಣೆಯ ಆಧುನಿಕ ಮನೋಭಾವದ ಲಾಯರ್ ಪಾತ್ರದಲ್ಲಿ ಮೇಘನಾ ಕಾಣಿಸಿಕೊಂಡಿದ್ದಾರೆ. ಗಂಡ ಹೆಂಡತಿ ಇಬ್ಬರಿಗೂ ಉತ್ತಮ ದುಡಿಮೆ ಸಂಬಳ ಇದ್ದರೂ ತಮಗೆ ಮಕ್ಕಳು ಬೇಡ, ದೇಶದಲ್ಲಿ ಈಗಾಗಲೇ ಜನಸಂಖ್ಯೆ ಏರುತ್ತಿದೆ, ನಾವ್ಯಾಕೆ ಅದನ್ನು ಇನ್ನಷ್ಟು ಹೆಚ್ಚಿಸಬೇಕು ಎಂಬ ಜೆನ್ ಜೀಗಳ ಮನೋಭಾವವನ್ನು ಪ್ರಗತಿ ಪಾತ್ರ ಪ್ರತಿನಿಧಿಸುತ್ತದೆ. ಇದಕ್ಕೆ ಒಂದೊಳ್ಳೆ ರೂಪಾಂತರವೂ ಇದೆ. ಅದಕ್ಕೆ ಮೇಘನಾ ಸೊಗಸಾಗಿ ಜೀವತುಂಬಿದ್ದಾರೆ' ಎಂದಿದ್ದಾರೆ.

ಈ ಬಗ್ಗೆ ಮೇಘನಾ, 'ಈ ಪಾತ್ರವನ್ನು ನಾನು ಒಪ್ಪಿಕೊಂಡ ಮೇಲೆ ಶೂಟಿಂಗ್‌ಗೂ ಮೊದಲು ರಂಜನಿ ಅವರು ನನ್ನ ಹತ್ರ ತುಂಬ ಪರ್ಸನಲ್ ವಿಚಾರಗಳನ್ನು ಕೇಳಿದ್ರು. ಮನೆಯಲ್ಲಿದ್ದಾಗ ನಾನು ಹೇಗಿರ್ತೀನಿ, ನನ್ನ ಯೋಚನೆ ಹೇಗಿರುತ್ತದೆ, ಸಿಟ್ಟು ಬಂದಾಗ ಹೇಗೆ ವರ್ತಿಸುತ್ತೇನೆ, ಖುಷಿಯಲ್ಲಿ ಇದ್ದಾಗ ಹೇಗಿರ್ತೀನಿ ಇತ್ಯಾದಿ. ಶುರುವಲ್ಲಿ ಇವರು ಯಾಕೆ ಇದನ್ನೆಲ್ಲ ಕೇಳ್ತಿದ್ದಾರೆ ಅನಿಸಿತು. ಆಮೇಲೆ ಅವರು ನನ್ನ ಪಾತ್ರಕ್ಕಾಗಿ ಈ ಮಾಹಿತಿ ಕಲೆ ಹಾಕುತ್ತಿದ್ದಾರೆ ಅನ್ನೋದು ತಿಳಿಯಿತು. ಈ ಸಿನಿಮಾ ಒಂದೊಳ್ಳೆ ಅನುಭವ ನೀಡಿದೆ' ಎಂದರು.

ನೆನಪಿರಲಿ ಪ್ರೇಮ್, ಗೋಲ್ಡನ್ ಸ್ಟಾರ್ ಗಣೇಶ್ ಪುತ್ರ ವಿಹಾನ್ ನಟಿಸಿದ್ದಾರೆ. ಜಡೇಶ್ ಕೆ ಹಂಪಿ ನಿರ್ಮಾಪಕರು.





ಗಡ್ಡ ವಿಜಿಯ ಸೆಕೆಂಡ್ ಹ್ಯಾಂಡ್ ಕನಸುಗಳು

ಹೀರೋ ಆದ್ರು ಯೋಗರಾಜ್ ಭಟ್

• **ಕನ್ನಡಪ್ರಭ** ಸಿನಿವಾರ್ತೆ



ನಿರ್ದೇಶಕ ಯೋಗರಾಜ್ ಭಟ್ ಹೀರೋ ಆಗಿ ನಟಿಸುತ್ತಿದ್ದಾರೆ. 'ದ್ಯಾವ್ರೇ' ಖ್ಯಾತಿಯ ಗಡ್ಡ ವಿಜಿ ನಿರ್ದೇಶದ ಹೊಸ ಸಿನಿಮಾ 'ಸೆಕೆಂಡ್‌ಹ್ಯಾಂಡ್ ಕನಸುಗಳು' ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ.

ಈ ಹಿಂದೆ 'ದ್ಯಾವ್ರೇ' ಚಿತ್ರದಲ್ಲಿಯೂ ಯೋಗರಾಜ್ ಭಟ್ ಮುಖ್ಯ ಪಾತ್ರ ಮಾಡಿದ್ದರು. ಯೋಗರಾಜ್ ಭಟ್ ಈ ಚಿತ್ರದಲ್ಲಿ ನಟನೆ ಜೊತೆಗೆ ಚಿತ್ರಕಥೆಯನ್ನು ಬರೆಯುತ್ತಿದ್ದಾರೆ.

ಹತ್ತು ವರ್ಷಗಳ ನಂತರ ಮರಳಿ ಬಂದಿರುವ ಗಡ್ಡ ವಿಜಿ, 'ಸೆಕೆಂಡ್‌ಹ್ಯಾಂಡ್ ಕನಸುಗಳು' ಚಿತ್ರದ ಮೂಲಕ 40ರ ವಯಸ್ಸಿನ ವ್ಯಕ್ತಿಯ ಬದುಕಿನ ಸುತ್ತಾ ಸಾಗುವ ಕತೆ ಇದಾಗಿದೆ. ಯೌವ್ವನವನ್ನು ದಾಟಿದ ನಂತರ ಬರುವ ಕನಸುಗಳೇ ಜೀವನದ ಎರಡನೇ ಅವಕಾಶ. ಇಂಥ ಕನಸುಗಳ ಕತೆಯನ್ನು ಈ ಚಿತ್ರದ ಮೂಲಕ ಹೇಳುತ್ತಿದ್ದೇವೆ' ಎಂದು ಹೇಳಿದ್ದಾರೆ.

ಇತರೆ

ಸುದ್ದಿ ಸಿಂಚನ

ಪಾಕ್‌ಗೆ ನೆರವು: ಮೊದಲ ಬಾರಿ ಚೀನಾ ಒಪ್ಪಿಗೆ

↙ ಮುಖ ಪುಟದಿಂದ

ಅಲ್ಲದೆ, 'ಅಲ್ಲಿನ (ಪಾಕ್‌ನಲ್ಲಿನ) ಬೆಳಗ್ಗಿನ ತಾಪ 50 ಡಿಗ್ರಿ ಸೆಲ್ಸಿಯಸ್‌ಗೆ ಸಮೀಪಿಸುತ್ತಿತ್ತು. ದೈಹಿಕವಾಗಿ ಮತ್ತು ಮಾನಸಿಕವಾಗಿ ಆಯಾಸವಾಗುತ್ತಿತ್ತು' ಎಂದಿದ್ದಾರೆ. ಈ ಹೇಳಿಕೆಗಳ ಮೂಲಕ ಯುದ್ಧದ ವೇಳೆ ಪಾಕಿಸ್ತಾನದ ಮಿಲಿಟರಿ ಕಾರ್ಯಾಚರಣೆಗಳನ್ನು ಬೆಂಬಲಿಸಲು ತನ್ನ ಸಿಬ್ಬಂದಿ ನೇರವಾಗಿ ಭಾಗಿ ಆಗಿದ್ದಾರೆ ಎಂಬುದನ್ನು ಚೀನಾ ಒಪ್ಪಿಕೊಂಡಂತಾಗಿದೆ. ಪಾಕಿಸ್ತಾನದ ವಾಯುಪಡೆಯು ಚೀನಾ ನಿರ್ಮಿತ ಜೆ-10ಸಿಇ ಜೆಟ ಚಲಾಯಿ ಸುತ್ತದೆ. ಇದರ ನಿರ್ವಹಣೆಗೆ ಚೀನಾ ತಾಂತ್ರಿಕ ಬೆಂಬಲ ಬೇಕಾಗುತ್ತದೆ.

ಕೈ ದೂರ ಇರೋ ಸೀಟು ಕೊಡಿ: ಸ್ಪೀಕರ್‌ಗೆ ಡಿಎಂಕೆ

↙ ಮುಖ ಪುಟದಿಂದ

ಈಗ ಇದನ್ನು ಪರಿಗಣಿಸಿ. ಮಂಗಳವಾರ ಮಧ್ಯಾಹ್ನ ನೀವು ಎಂ.ಕೆ. ಸ್ಟಾಲಿನ್‌ಗೆ ಕರೆ ಮಾಡಿ, 'ನಾನು ನಿಮ್ಮೊಂದಿಗಿದ್ದೇನೆ' ಎಂದು ಹೇಳಿದ್ದಿರಿ. ಮರುದಿನ ಬೆಳಿಗ್ಗೆ, ನೀವು ಮೈತ್ರಿಕೂಟದಿಂದ ಪಕ್ಷಾಂತರಗೊಂಡು ನಿಮ್ಮ ವಿರುದ್ಧ ಸಡ್ಡು ಹೊಡೆದಿದ್ದ ಪಕ್ಷಕ್ಕೆ ಹಾರಿದ್ದೀರಿ. ಇದು ಅವಕಾಶವಾದಿ ಮತ್ತು ರಾಜಕೀಯವಾಗಿ ಅನೈತಿಕ' ಎಂದರು.

ಬೇರೆ ಆಸನ ವ್ಯವಸ್ಥೆಗೆ ಬೇಡಿಕೆ: ಈ ನಡುವೆ, ಲೋಕಸಭೆ ಸ್ಪೀಕರ್‌ಗೆ ಪತ್ರ ಬರೆದಿರುವ ಸಂಸದೆ ಕನಿಮೋಳಿ, 'ಡಿಎಂಕೆಗೆ ಸಂಸದರ ಆಸನ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿ. ಕಾಂಗ್ರೆಸ್ ಜತೆಗಿನ ನಮ್ಮ ಮೈತ್ರಿ ಮುರಿದುಬಿದ್ದಿರುವ ವೇಳೆ ಸದನದಲ್ಲಿ ಅವರೊಂದಿಗೆ ಕೂರುವುದು ಸರಿಯಾಗದು' ಎಂದಿದ್ದಾರೆ. ಈತನಕ ಲೋಕಸಭೆಯಲ್ಲಿ ಕಾಂಗ್ರೆಸ್ ಜತೆಗೇ ಡಿಎಂಕೆ ಸಂಸದರು ಕೂರುತ್ತಿದ್ದರು.

ತ.ನಾಡಲ್ಲಿ 118 ಕಗ್ಗಂಟು

↙ ಮುಖ ಪುಟದಿಂದ

ಈ ನಡುವೆ ಶುಕ್ರವಾರ ಸಿಪಿಐ ಮತ್ತು ಸಿಪಿಎಂನ ತಲಾ ಇಬ್ಬರು ಶಾಸಕರು (ಒಟ್ಟು 4 ಶಾಸಕರು) ಅಧಿಕೃತವಾಗಿ ವಿಜಯ್‌ಗೆ ಬೆಂಬಲ ಘೋಷಿಸಿದರು. ಇದರೊಂದಿಗೆ ಅವರ ಬಲ 116ಕ್ಕೇರಿತು. ಆದರೆ, ಇಬ್ಬರು ಶಾಸಕರ ಬೆಂಬಲ ಹೊಂದಿರುವ ವಿಸಿಕೆ ನಾಯಕ ತೋಲ್ ತಿರುಮಾವಲನ್, ಅಧಿಕೃತ ಬೆಂಬಲ ಪತ್ರವನ್ನು ರಾಜ್ಯಪಾಲರಿಗೆ ನೀಡಲಿಲ್ಲ. ತಮ್ಮ ಪಕ್ಷಕ್ಕೆ ಡಿಸಿಎಂ ಹುದ್ದೆ ಬೇಕು. ಈ ಹುದ್ದೆ ಸಿಕ್ಕರೆ ಶನಿವಾರ ಬೆಂಬಲ ಪ್ರಕಟಿಸುವೆ ಎಂದು ವಿಜಯ್‌ಗೆ ತಿಳಿಸಿದ್ದಾರೆ ಎನ್ನಲಾಗಿದೆ. ಹೀಗಾಗಿ ವಿಜಯ್‌ಗೆ ಇಬ್ಬರು ವಿಸಿಕೆ ಶಾಸಕರ ಅಧಿಕೃತ ಬೆಂಬಲ ಪತ್ರ ಲಭಿಸಿಲ್ಲ. ರಾಜ್ಯಪಾಲರು ಇದನ್ನೇ ಮುಂದಿಟ್ಟುಕೊಂಡು ವಿಜಯ್ ಗೆ ಆಹ್ವಾನ ನಿರಾಕರಿಸಿದರು ಎಂದು ಗೊತ್ತಾಗಿದೆ.

ಮುಸ್ಲಿಂ ಲೀಗ್ ಉಲ್ಟಾಪಲ್ಟಾ: ಈ ನಡುವೆ, ವಿಜಯ್ ಅವರು ರಾಜ್ಯಪಾಲರನ್ನು ಭೇಟಿಯಾದ ನಂತರ, 2 ಸ್ಥಾನ ಹೊಂದಿರುವ ಮುಸ್ಲಿಂ ಲೀಗ್ ಕೂಡ ಸರ್ಕಾರ ರಚನೆಗೆ ಬೆಂಬಲವಿದೆ ಎಂದು ಘೋಷಿಸಿತ್ತು. ಆದರೆ ಎಲ್ಲೂ ಟಿವಿಕೆ ಹೆಸರು ಬರೆಯದೇ ಹೊಸ ಸರ್ಕಾರ ಎಂಬ ಪದಗಳನ್ನಷ್ಟೇ ಬಳಸಿತ್ತು. ಈ ಬಗ್ಗೆ ನಂತರ ಹೇಳಿಕೆ ನೀಡಿದ ಪಕ್ಷ, 'ನಮ್ಮ ಬೆಂಬಲ ಟಿವಿಕೆಗೆ ಇಲ್ಲ' ಎಂದು ಸ್ಪಷ್ಟಪಡಿಸಿದೆ.

ರಾಜ್ಯದಲ್ಲೂ ಮತಪಟ್ಟಿ ಪರಿಷ್ಕರಣೆ ಅಲರ್ಟ್

↙ ಮುಖ ಪುಟದಿಂದ

ಎಸ್‌ಐಆರ್ ಜಾರಿಗೆ ಈಗಾಗಲೇ ಮ್ಯಾಪಿಂಗ್ ಶುರುವಾಗಿದ್ದು, ಇದರಲ್ಲಿ ಸಾಕಷ್ಟು ಲೋಪದೋಷಗಳಿವೆ. ಆದರೂ ಈ ಬಗ್ಗೆ ಸರ್ಕಾರ ಇನ್ನೂ ವಿರೋಧ ವ್ಯಕ್ತಪಡಿಸಿಲ್ಲ. ಪಶ್ಚಿಮ ಬಂಗಾಳ ಸೇರಿ ಎಸ್‌ಐಆರ್ ನಡೆದಿರುವ 10 ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶದಲ್ಲಿ 7 ಕೋಟಿ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಹೀಗಾಗಿ ರಾಜ್ಯದಲ್ಲಿ ಎಸ್‌ಐಆರ್‌ಗೆ ತೀವ್ರ ವಿರೋಧ ವ್ಯಕ್ತಪಡಿಸಿ ಸಂಪುಟದಲ್ಲಿ ನಿರ್ಣಯ ಕೈಗೊಳ್ಳುವಂತೆ ಮುಖ್ಯಮಂತ್ರಿ ಅವರನ್ನು ವಿವಿಧ ಸಂಘಟನೆಗಳ ಪ್ರತಿನಿಧಿಗಳು ಒತ್ತಾಯಿಸಿದರು. ಕೇಂದ್ರ ಚುನಾವಣಾ ಆಯೋಗ ನಡೆಸುತ್ತಿರುವ ಎಸ್‌ಐಆರ್ ಬಗ್ಗೆ ಎಲ್ಲಾ ರಾಜ್ಯಗಳಲ್ಲೂ ತೀವ್ರ ಆಕ್ಷೇಪ ವ್ಯಕ್ತವಾ ಗಿದೆ. ಪಶ್ಚಿಮ ಬಂಗಾಳದಲ್ಲಿ 90 ಲಕ್ಷ ಮತದಾರರನ್ನು ಪಟ್ಟಿಯಿಂದ ಕಿತ್ತು ಹಾಕಿದ್ದು, 27 ಲಕ್ಷ ಮತದಾರರ ಪರಿಶೀಲನಾ ಅರ್ಜಿ ಬಾಕಿ ಇರುವಾಗಲೇ ಚುನಾವಣೆ ಮುಗಿದು ಹೋಗಿದೆ. ಅಷ್ಟೂ ಮಂದಿ ಮತದಾನದ ಹಕ್ಕು ಕಳೆದುಕೊಂಡಿದ್ದಾರೆ.

ಇದು ಚುನಾವಣಾ ಕಣದಿಂದ ಮತದಾರರನ್ನು ಹೊರನೂಕುವ, ಪ್ರಜಾಸತ್ತಾತ್ಮಕ ವಿರೋಧಿ, ಅವೈಜ್ಞಾನಿಕ ಪ್ರಕ್ರಿಯೆ. ಹೀಗಾಗಿ ರಾಜ್ಯದಲ್ಲಿ ವ್ಯವಸ್ಥಿತವಾಗಿ ಎಸ್‌ಐಆರ್ ಜಾರಿಗೆ ಹಾಗೂ ಎಸ್‌ಐಆರ್ ಬಳಿಕವೂ ಮತದಾರರ ಹಕ್ಕು ರಕ್ಷಿಸಿಕೊಳ್ಳಲು ಏನು ಮಾಡಬೇಕು ಎಂಬ ಬಗ್ಗೆ ಚರ್ಚಿಸಲಾಯಿತು.

ಸಭೆಯಲ್ಲಿ ವ್ಯಕ್ತವಾದ ಸಲಹೆಗಳೇನು?: ಚುನಾವಣಾ ಆಯೋಗವು 2025ರ ಜೂನ್‌ನಿಂದ ಎಸ್‌ಐಆರ್‌ಅನ್ನು ಪರಿಚಯಿಸಿತು. ಬಳಿಕ ಅದನ್ನು ಅನುಷ್ಠಾನಗೊಳಿಸಿದ ರೀತಿಯಿಂದಾಗಿ ಎಸ್‌ಐಆರ್ ವಿಶ್ವಾಸಾರ್ಹತೆ ಕಳೆದು ಕೊಂಡಿದೆ. ಸಂವಿಧಾನದ 324ನೇ ವಿಧಿ ಪ್ರಕಾರ ತನ್ನ ಕರ್ತವ್ಯ ನಿಭಾಯಿಸಲು ಆಯೋಗ ಸಂಪೂರ್ಣ ವಿಫಲವಾ ಗಿದೆ. ಜನರ ಸಾಂವಿಧಾನಿಕ ಹಾಗೂ ಪ್ರಜಾಸತ್ತಾತ್ಮಕ ಹಕ್ಕು ರಕ್ಷಿಸಲು ಸುಪ್ರೀಂ ಕೋರ್ಟ್ ಸಹ ವಿಫಲವಾಗಿದೆ. ಹೀಗಾಗಿ ರಾಜ್ಯದಲ್ಲಿ ಎಸ್‌ಐಆರ್ ಜಾರಿ ವೇಳೆ ತುಂಬಾ ಎಚ್ಚರಿಕೆ ವಹಿಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಈ ಹಂತದಲ್ಲಿ ಎಸ್‌ಐಆರ್ ಜಾರಿಗೆ ಬರುವುದಾದರೂ 3 ತಿಂಗಳ ಬದಲಿಗೆ ಆರು ತಿಂಗಳಿಗೆ ವಿಸ್ತರಿಸಬೇಕು. ತರಾತುರಿಯಲ್ಲಿ ಜಾರಿಗೆ ಬರಬಾರದು. ಎಲ್ಲಾ ಗ್ರಾಪಂ, ವಾರ್ಡ್‌ಗಳಲ್ಲಿ ಮತದಾರರ ನೆರವಿನ ಕೇಂದ್ರ ಸ್ಥಾಪಿಸಬೇಕು. ಸೂಕ್ತ ದಾಖಲೆ ಇಲ್ಲದ ಜನರಿಗೆ ದಾಖಲೆ ನೀಡಲು ಸರ್ಕಾರ ನೆರವಾಗಬೇಕು.

ಡಿಲೀಟ್ ಆದ ಮತದಾರರು ಮನವಿ ಸಲ್ಲಿಸಲು ಸೂಕ್ತ ಸಮಯಾವಕಾಶ ನೀಡಬೇಕು. ಕರ್ನಾಟಕ ಸ್ವಾವಲಂಬಿಯಾದ ಮತದಾರರ ಪಟ್ಟಿ ಸಿದ್ಧಪಡಿಸಿಕೊಳ್ಳಬೇಕು. ಮತದಾರರ ಪಟ್ಟಿ ಪರಿಷ್ಕರಿಸುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಇದನ್ನು ಸಮರ್ಥ ರೀತಿಯಲ್ಲಿ ಕಾರ್ಯರೂಪಕ್ಕೆ ತರ ಬೇಕು. ಸೋಷಿಯಲ್ ಆಡಿಟಿಂಗ್ ಪದ್ಧತಿ ಬಳಸಿ ರಾಜ್ಯದ ಮತದಾರರ ಪಟ್ಟಿ ಪರಿಷ್ಕರಿಸಬೇಕು. ಈ ನಾಲ್ಕು ಅಂಶಗಳನ್ನೂ ಗಮನದಲ್ಲಿಟ್ಟು ರಾಜ್ಯ ಸರ್ಕಾರ ಕ್ರಿಯಾಯೋಜನೆ ರೂಪಿಸಬೇಕು ಎಂದು ಸಭೆಯಲ್ಲಿ ಭಾಗವಹಿಸಿದ್ದವರು ಸಲಹೆ ನೀಡಿದರು.

ಮತ್ತೊಂದು ಸುತ್ತಿನ ಸಭೆ ಭರವಸೆ: ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಎಲ್ಲ ಶಾಸಕರು ಹಾಗೂ ಪರಾಜಿತ ಅಭ್ಯರ್ಥಿಗಳೊಂದಿಗೆ ಶೀಘ್ರದಲ್ಲೇ ವಿಸ್ತೃತ ಸಭೆ ಕರೆಯುತ್ತೇವೆ. ಎಲ್ಲರ ಜೊತೆಯೂ ಸಮಾಲೋಚನೆ ನಡೆಸಿ, ನಂತರ ನಿಮ್ಮೊಟ್ಟಿಗೆ ಮತ್ತೊಮ್ಮೆ ಮಾತನಾಡುತ್ತೇನೆ ಎಂದು ಭರವಸೆ ನೀಡಿರುವುದಾಗಿ ಮೂಲಗಳು ತಿಳಿಸಿವೆ. ಸಭೆಯಲ್ಲಿ ರಾಜಕೀಯ ವಿಶ್ಲೇಷಕ ಹಾಗೂ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಪತಿ ಪರಕಾಲ ಪ್ರಭಾಕರ್, ಕರ್ನಾಟಕ ಮುಸ್ಲಿಂ ಮುತ್ತಹಿದ ಮಹಾಜ್‌ನ ಮೊಹಮ್ಮದ್ ಯೂಸುಫ್ ಕನ್ನಿ, ಮಾಜಿ ಸಚಿವರೂ ಆದ ಲೇಖಕಿ ಬಿ.ಟಿ. ಲಲಿತಾ ನಾಯ್ಕ್, ಮತದಾನ ಹಕ್ಕು ಚಳವಳಿಯ ಥಾಮಸ್ ಫ್ರಾಂಕೋ, ನನ್ನ ಮತ ನನ್ನ ಹಕ್ಕು ಹೋರಾಟ ವೇದಿಕೆಯ ವಿನಯ್ ಶ್ರೀನಿವಾಸ್, ರಾಜ್ಯ ರೈತ ಸಂಘದ ಮುಖಂಡರಾದ ಬಡಗಲಪುರ ನಾಗೇಂದ್ರ, ಕರ್ನಾಟಕ ಕೋಮುಸೌಹಾರ್ದ ವೇದಿಕೆ ಸೇರಿದಂತೆ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಹಾಜರಿದ್ದರು.

ಹೋರ್ಮುಜ್‌ನಲ್ಲಿ ಇರಾನ್, ಅಮೆರಿಕ ಪರಸ್ಪರ ಗುಂಡೇಟು

↙ ಮುಖ ಪುಟದಿಂದ

ಪರಸ್ಪರರ ಆರೋಪ ಏನು?: 'ಅಮೆರಿಕವು ಕದನ ವಿರಾಮ ಉಲ್ಲಂಘಿಸಿ ಅಪ್ರಚೋದಿತ ದಾಳಿ ನಡೆಸಿದೆ. ಯುಎಇಯ ಫುಜೈರಾ ಬಂದರಿನ ಸಮೀಪದಲ್ಲಿರುವ ತನ್ನ ತೈಲ ಟ್ಯಾಂಕರ್ ಮೇಲೆ ಹಾಗೂ ಬಂದಾರ್ ಖಾಮಿರ್, ಖಾಸಿಂ ದ್ವೀಪದ ನಾಗರಿಕ ಪ್ರದೇಶದ ಮೇಲೆ ಅಮೆರಿಕ ಸೇನೆ ದಾಳಿ ಮಾಡಿದೆ' ಎಂದು ಇರಾನ್ ಆರೋಪಿಸಿದೆ.



ಇದಕ್ಕೆ ಅಮೆರಿಕ ಸೇನೆ ತಿರುಗೇಟು ನೀಡಿದ್ದು, 'ಮೊದಲು ದಾಳಿ ಮಾಡಿದ್ದೇ ಇರಾನ್. ಹೋರ್ಮುಜ್ ಜಲಸಂಧಿಯಲ್ಲಿದ್ದ ನಮ್ಮ ಮೂರು ಯುದ್ಧನೌಕೆಗಳ ಮೇಲೆ ಇರಾನ್ ಕ್ಷಿಪಣಿ, ಡ್ರೋನ್ ಮತ್ತು ಬೋಟ್‌ಗಳನ್ನು ಬಳಸಿ ಹೋರ್ಮುಜ್ ಜಲಸಂಧಿಯಲ್ಲಿ ದಾಳಿ ಮಾಡಿದೆ. ಸ್ವರಕ್ಷಣೆಯ ಭಾಗವಾಗಿ ನಾವು ಪ್ರತಿದಾಳಿ ನಡೆಸಿದ್ದೇವೆ' ಹೇಳಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ಇದನ್ನೇ ಹೇಳಿದ್ದು, ಇರಾನ್ ದಾಳಿ ಮಾಡಿದರೂ ನಮ್ಮ ನೌಕೆಗಳನ್ನು ಸುರಕ್ಷಿತವಾಗಿ ದಾಟಿಸಿದ್ದೇವೆ ಎಂದಿದ್ದಾರೆ.

ಇನ್ನು ಶುಕ್ರವಾರ ಸಂಜೆ ತನ್ನ ದಿಗ್ಬಂಧನವನ್ನು ಮುರಿಯಲು ಪ್ರಯತ್ನಿಸುತ್ತಿದ್ದ ಇರಾನ್ ಧ್ವಜ ಹೊತ್ತ ಎರಡು ತೈಲ ಟ್ಯಾಂಕರ್‌ಗಳ ಮೇಲೆ ಗುಂಡು ಹಾರಿಸಿ ನಿಷ್ಕ್ರಿಯ ಗೊಳಿಸಿರುವುದಾಗಿ ಅಮೆರಿಕ ಸೇನೆ ಹೇಳಿದೆ.

ದುಬೈ ಮೇಲೂ ದಾಳಿ: ಈ ನಡುವೆ, ಶುಕ್ರವಾರ ಬೆಳಗ್ಗೆ ಯುಎಇ ಮೇಲೆ ಇರಾನ್ ಅಪ್ರಚೋದಿತ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದೆ. ನಮ್ಮ ಕ್ಷಿಪಣಿ ರಕ್ಷಣಾ ವ್ಯವಸ್ಥೆಯು ಯಶಸ್ವಿಯಾಗಿ ಅವುಗಳನ್ನು ಹೊಡೆದುರುಳಿಸಿವೆ ಎಂದು ಯುಎಇ ರಕ್ಷಣಾ ಸಚಿವಾಲಯ ತಿಳಿಸಿದೆ.

ಇದೇ ವೇಳೆ, ಕ್ಷಿಪಣಿ, ಡ್ರೋನ್‌ಗಳ ಅವಶೇಷಗಳತ್ತ ಯಾರೂ ಹೋಗಬಾರದು. ಅವುಗಳನ್ನು ಮುಟ್ಟುವ ಪ್ರಯತ್ನ ಮಾಡಬಾರದು ಎಂದು ರಕ್ಷಣಾ ಸಚಿವಾಲಯ ನಾಗರಿಕರಿಗೆ ಮನವಿ ಮಾಡಿದೆ.

ಬಿಎಸ್‌ವೈ ಅಭಿಮಾನೋತ್ಸಾಹ!

↙ ಮುಖ ಪುಟದಿಂದ

ಪಶ್ಚಿಮ ಬಂಗಾಳದಲ್ಲಿ ನೂತನ ಬಿಜೆಪಿ ಸರ್ಕಾರದ ಪ್ರಮಾಣ ವಚನ ಕಾರ್ಯಕ್ರಮ ಮುಗಿಸಿಕೊಂಡು ಅಮಿತ್ ಶಾ ಸಂಜೆ 4 ಗಂಟೆಗೆ ಚಿತ್ರದುರ್ಗಕ್ಕೆ ಆಗಮಿಸಲಿದ್ದಾರೆ.

ಬೃಹತ್ ವೇದಿಕೆ ಸಿದ್ಧ: ಅಭಿಮಾನೋತ್ಸವ ಕಾರ್ಯಕ್ರಮಕ್ಕೆ 112 ಅಡಿ ಉದ್ದ ಹಾಗೂ 40 ಅಡಿ ಅಗಲ, 10 ಅಡಿ ಎತ್ತರದ ಬೃಹತ್ ವೇದಿಕೆ ನಿರ್ಮಿಸಲಾಗಿದೆ. 150ಕ್ಕೂ ಹೆಚ್ಚು ಕಾರ್ಮಿಕರ ಶ್ರಮದಿಂದ ಸುಂದರ ಹಾಗೂ ವಿಶಾಲವಾದ ವೇದಿಕೆ ತಯಾರಾಗಿದೆ. ಸುಮಾರು 30ಕ್ಕೂ ಹೆಚ್ಚು ಎಲ್‌ಇಡಿ ವಾಲ್‌ಗಳನ್ನು ಅಳವಡಿಸಿದ್ದು, ಲಕ್ಷಕ್ಕೂ ಹೆಚ್ಚು ಆಸನದ ವ್ಯವಸ್ಥೆ ಮಾಡಿ ಸಾರ್ವಜನಿಕರಿಗೆ ಕಾರ್ಯಕ್ರಮ ವೀಕ್ಷಣೆಗೆ ಅನುವು ಮಾಡಿ ಕೊಡಲಾಗಿದೆ. ನಾಡಿನ ವಿವಿಧ ಮಠಗಳ ಸ್ವಾಮೀಜಿಗಳಿಗೆ, ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರಿಗೆ ಹಾಗೂ ಸಾರ್ವಜನಿಕರಿಗೆ ಪ್ರತ್ಯೇಕ ಸಭಾಂಗಣ ವ್ಯವಸ್ಥೆ ಮಾಡಲಾಗಿದೆ.10 ಲಕ್ಷ ನಿರೀಕ್ಷೆ:

ಬೃಹತ್ ವೇದಿಕೆಯಲ್ಲಿ ಅತಿಥಿಗಳಿಗೆ ಮೊದಲ ಸಾಲಿನಲ್ಲಿ 25 ಮತ್ತು ಅವುಗಳ ಹಿಂಭಾಗ 25 ಆಸನಗಳನ್ನು ಹಾಕಲಾಗಿದೆ. ಸುಮಾರು ಹತ್ತು ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಬೆಂಗಳೂರು, ಚಿತ್ರದುರ್ಗ, ಮೈಸೂರು ಕಡೆಯ 5 ತಂಡಗಳು ಅಣಿಗೊಳಿಸಿರುವ ಹಲವು ಕೌಂಟರ್‌ಗಳಲ್ಲಿ ಕಾರ್ಯಕ್ರಮಕ್ಕೆ ಬರುವ ಸಾರ್ವಜನಿಕರಿಗೆ ಅಡುಗೆ ತಯಾರಿ ಮಾಡಲಾಗುತ್ತಿದೆ. ಒಂದೊಂದು ಕೌಂಟರ್‌ನಲ್ಲಿ ಅಡುಗೆ ಭಟ್ಟರು ಜೊತೆಗೆ ಸಹಾಯಕರು ಸೇರಿ ಸುಮಾರು 250ಕ್ಕೂ ಅಧಿಕ ಮಂದಿ ಅಡುಗೆ ತಯಾರಿಕೆಯಲ್ಲಿ ನಿರತರಾಗಿದ್ದಾರೆ.

ಐದು ಕೌಂಟರ್‌ಸೇರಿ ಸಾವಿರಾರು ಜನರು ಅಡುಗೆ ತಯಾರಿಕೆಗೆ ಕೆಲಸ ಮಾಡುತ್ತಿದ್ದಾರೆ. ಯಲಹಂಕ ಶಾಸಕ ವಿಶ್ವನಾಥ್, ಊಟದ ಉಸ್ತುವಾರಿ ವಹಿಸಿದ್ದಾರೆ. ಕಾರ್ಯಕ್ರಮಕ್ಕೆ ಬರುವ ಕಾರ್ಯಕರ್ತರಿಗೆ, ಅಭಿಮಾನಿಗಳಿಗೆ ಮೊಸರನ್ನ, ಪಲಾವ್ ಹಾಗೂ ಮೈಸೂರು ಪಾಕ್ ನೀಡಲು ತಯಾರಿ ನಡೆದಿದೆ. ಚಿತ್ರದುರ್ಗದ ಸುತ್ತಮುತ್ತಲಿನ ಹಳ್ಳಿಗಳ ನೂರಾರು ಯುವಕರನ್ನು ಕೆಲಸಕ್ಕೆ ಪಡೆದು ಅಡುಗೆ, ಶಾಮಿಯಾನ, ಕುರ್ಚಿಗಳನ್ನು ಹಾಕಲಾಗುತ್ತಿದೆ.

ಬಂದೋಬಸ್ತ್: ಕಾರ್ಯಕ್ರಮದ ಬಂದೋಬಸ್ತ್‌ಗಾಗಿ 2500ಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಲಾಗಿದೆ. ವೇದಿಕೆಯ ಬಳಿಯ ಮುಖ್ಯ ರಸ್ತೆಯಲ್ಲಿ ಯಡಿಯೂರಪ್ಪ ಅವರ ಸ್ವಾಗತಕ್ಕೆ ಅದ್ಧೂರಿ ತಯಾರಿ ನಡೆಸಲಾಗಿದೆ.

ಹೆಲಿಕಾಪ್ಟರ್ ಫ್ಯಾನ್: ಬಿರು ಬೇಸಗೆ ಧಗೆಯಿಂದ ಜನರ ಸುಮಾರು 30ಕ್ಕೂ ಹೆಚ್ಚು ಹೆಲಿಕಾಪ್ಟರ್‌ಫ್ಯಾನ್‌ಗಳನ್ನು ಅಳವಡಿಸಲಾಗಿದೆ.

ಚಿತ್ರದುರ್ಗಕ್ಕೆ ಕೇಸರಿಮಯ: ಕೋಟೆನಾಡು ಚಿತ್ರದುರ್ಗ ಅಭಿಮಾನೋತ್ಸವದ ಪ್ರಯುಕ್ತ ಸಿಂಗಾರಗೊಂಡು ಮಧುವಣಗಿತ್ತಿಯಂತೆ ಕಂಗೊಳಿಸುತ್ತಿದೆ. ಕಾರ್ಯಕರ್ತರು ಅಭಿಮಾನಿಗಳಲ್ಲಿ ಉತ್ಸಾಹ ಇಮ್ಮಡಿಯಾಗಿದೆ. ಇಡೀ ಚಿತ್ರದುರ್ಗ ಕೇಸರಿ ಬಣ್ಣದಲ್ಲಿ ಮಿಂದೆದ್ದಿದೆ.

ಚಳ್ಳಕೆರೆ ಗೇಟ್‌ನಿಂದ ನಗರಕ್ಕೆ ಪ್ರವೇಶಿಸುವ ಮಾರ್ಗದೆಲ್ಲೆಡೆ ಬಿ.ಎಸ್.ಯಡಿಯೂರಪ್ಪ ಅವರ ಭಾವಚಿತ್ರ ಇರುವ ಪೋಸ್ಟರ್, ಬ್ಯಾನರ್‌ಗಳು ಗಮನಸೆಳೆಯುತ್ತಿವೆ. ಲೈಟಿಂಗ್ ವ್ಯವಸ್ಥೆ ಸೇರಿದಂತೆ ವೇದಿಕೆ ತಯಾರಿಗೆ ಸಾವಿರಾರು ಕಾರ್ಮಿಕರು ಹಗಲು ರಾತ್ರಿ ಎನ್ನದೇ ಕೆಲಸ ಮಾಡುತ್ತಿದ್ದಾರೆ.

ಅಧಿಕೃತವಾಗಿ ಇದು ಪಕ್ಷದ ಕಾರ್ಯಕ್ರಮ ಆಗದಿದ್ದರೂ ಇಡೀ ಭಾರತೀಯ ಜನತಾ ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ಒಂದೊಂದು ಜವಾಬ್ದಾರಿಯನ್ನು ತೆಗೆದುಕೊಂಡು ಕಾರ್ಯಕ್ರಮ ಯಶಸ್ವಿಗೆ ಶ್ರಮಿಸುತ್ತಿರುವುದು ಎದ್ದು ಕಾಣಿಸುತ್ತಿದೆ.

ಕೇಂದ್ರದ ಗೃಹ ಸಚಿವ ಅಮಿತ್ ಶಾ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರ ಬಿಗಿಭದ್ರತೆ ಮತ್ತಷ್ಟು ಗಟ್ಟಿಯಾಗುತ್ತಿದೆ. ಶುಕ್ರವಾರ ಎಸ್‌ಪಿಜಿ ತಂಡ ವೇದಿಕೆ ಸೇರಿದಂತೆ ಇಡೀ ಕಾರ್ಯಕ್ರಮದ ಒಟ್ಟಾರೆ ಚಿತ್ರಣದ ಮಾಹಿತಿ ಕಲೆಹಾಕಿತು.

ಯಡಿಯೂರಪ್ಪಗೆ ಅದ್ಧೂರಿ ಸ್ವಾಗತ

↙ ಮುಖ ಪುಟದಿಂದ

ದಾರಿಯುದ್ದಕ್ಕೂ ನೂರಾರು ಮಹಿಳೆಯರು ಪೂರ್ಣಕುಂಭ ಹೊತ್ತು ಸಾಗಿದರೆ ಮತ್ತೊಂದಿಷ್ಟು ಮಂದಿ ಕೈಲಿ ಒನಕೆ ಹಿಡಿದು ಹೆಜ್ಜೆ ಹಾಕಿದರು. ಈ ಮೂಲಕ ಬಿಎಸ್‌ವೈ ಪುರಪ್ರವೇಶಕ್ಕೆ ಸಂಭ್ರಮದ ಕಳೆ ತಂದರು. ಇದರೊಂದಿಗೆ ತನ್ನ ಐದು ದಶಕಗಳ ರಾಜಕೀಯ ಬದುಕಿನಲ್ಲಿ ಬಡವರ, ರೈತರ, ಮಹಿಳೆಯರ ಪರ ಹೋರಾಡಿದ ಕುರುಹುಗಳು ಸಾಂಕೇತಿಕವಾಗಿ ಪುರಪ್ರವೇಶದ ಸಂದರ್ಭದಲ್ಲಿ ಅನಾವರಣಗೊಂಡವು.

ಬುಡಕಟ್ಟು ಸಾಂಸ್ಕೃತಿಕ ಪರಂಪರೆ ಸಾರುವ ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲ-ಮ್ಯಾಸಬೇಡ ಸಮುದಾಯಗಳ ಸಾಂಸ್ಕೃತಿಕ ಆಚರಣೆಯನ್ನು ಮೇಳೈಸುವ ಕೋಲಾಟ ಸೇರಿದಂತೆ ಹಲವು ಕಲಾ ತಂಡಗಳ ಜತೆಗೆ ಕಂಸಾಳೆ, ಉರಿಮೆ, ತಮಟೆ, ಗೊರವರ ಕುಣಿತ, ನಂದಿಕೋಲು, ವೀರಗಾಸೆ, ವಿವಿಧ ಜಾನಪದ ನೃತ್ಯಗಳು ಸೇರಿದಂತೆ ಸುಮಾರು ಇಪ್ಪತ್ತಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು. ತಂಪನೆಯ ಸಮಯದಲ್ಲಿ ನಗುಮೊಗದೊಂದಿಗೆ ಮದುಮಗನಂತೆ ಕಂಗೊಳಿಸುತ್ತಿದ್ದ ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ, ತೆರೆದ ವಾಹನದಲ್ಲಿ ಎಲ್ಲರತ್ತ ಕೈಬೀಸಿ ನಗುಮುಖದಲ್ಲಿ ಸಾಗುತ್ತಿದ್ದರು.



ಪ್ರವಾಸಿ ಮಂದಿರದ ಬಳಿ ಅಭಿಮಾನಿಗಳು ಬೃಹದಾಕಾರದ ಸೇಬು ಹಾರ ಹಾಕಿದರೆ, ಅಂಬೇಡ್ಕರ್‌ಪ್ರತಿಮೆ ಬಳಿ ಮಾದಿಗ ಸಮುದಾಯದ ಮುಖಂಡರು ತಮ್ಮ ಸಾಂಸ್ಕೃತಿಕಪರಿಕರವಾದಹಲಗೆಯನ್ನೇ ಪೋಣಿಸಿಹಾರಮಾಡಿಯಡಿಯೂರಪ್ಪ ಅವರಿಗೆ ಹಾಕಿದ್ದು ವಿಶೇಷವಾಗಿ ಕಂಡಿತು.

ಮಾಜಿ ಮುಖ್ಯಮಂತ್ರಿ ಸದಾನಂದಗೌಡ, ಸಂಸದ ಗೋವಿಂದ ಕಾರಜೋಳ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಚಿವರಾದ ಶ್ರೀರಾಮುಲು, ರೇಣುಕಾಚಾರ್ಯ, ಕೇಂದ್ರದ ಮಾಜಿ ಸಚಿವ ಜಿ.ಎಂ.ಸಿದ್ದೇಶ್ವರ, ಸಿ.ಟಿ.ರವಿ, ಶಾಸಕ ಎಂ.ಚಂದ್ರಪ್ಪ, ಮಾಜಿ ಶಾಸಕರಾದ ಜಿ.ಎಚ್.ತಿಪ್ಪಾರೆಡ್ಡಿ, ಎಸ್.ಕೆ. ಬಸವರಾಜನ್ ಸೇರಿ ಹಲವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಆರು ಗಂಟೆಗೆ ಆರಂಭವಾದ ಮೆರವಣಿಗೆ ಮದಕರಿನಾಯಕ ಪ್ರತಿಮೆ ಬಳಿ ಬಂದಾಗ ವೇಳೆ ಎಂಟು ಗಂಟೆಯಾಗಿತ್ತು. ಸರಿ ಸುಮಾರು ಎರಡು ತಾಸು ಮೆರವಣಿಗೆ ನಡೆಯಿತು. ನಂತರ ಯಡಿಯೂರಪ್ಪ ಅವರು ವೀರಶೈವ ಬ್ಯಾಂಕ್ ಅಧ್ಯಕ್ಷ ಪಟೇಲ್ ಶಿವಕುಮಾರ್‌ಅವರ ಮನೆಯಲ್ಲಿ ವಾಸ್ತವ್ಯ ಹೂಡಿದರು.

ನಾನು, ಅನಂತಕುಮಾರ ರಾಜ್ಯ ಸುತ್ತಿದ್ದಕ್ಕೆ ಅಧಿಕಾರ

ಅಭಿಮಾನೋತ್ಸವಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಜನ ಸೇರುವ ನಿರೀಕ್ಷೆಯಿದೆ. ಬಹಳ ಪ್ರೀತಿ, ವಿಶ್ವಾಸದಿಂದ ಎಲ್ಲರೂ ಸೇರಿ, ಕಾರ್ಯಕ್ರಮ ಮಾಡುತ್ತಿದ್ದಾರೆ. ಸೈಕಲ್‌ನಲ್ಲಿ ನಾನು, ಅನಂತಕುಮಾರ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೆವು. ಇದೆಲ್ಲದರ ಕಾರಣದಿಂದ ಬಿಜೆಪಿ ಅಧಿಕಾರಕ್ಕೆ ಬಂದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. 2028ರ ಚುನಾವಣೆಗೆ ಅಭಿನಂದನೋತ್ಸವ ರಣಕಹಳೆಯಾಗುತ್ತದೆಯಾ ಎಂಬುದನ್ನು ಕಾದು ನೋಡೋಣ.

• **ಬಿ.ಎಸ್.ಯಡಿಯೂರಪ್ಪ** ಮಾಜಿ ಮುಖ್ಯಮಂತ್ರಿ



ಬಿಡಿಎ - ಪ್ರಮುಖ ಬಡಾವಣೆಗಳ ಪ್ರೀಮಿಯಂ ಸೈಟ್‌ಗಳ ಇ-ಹರಾಜು



ಶ್ರೀ ಎನ್.ಎ. ಹ್ಯಾರಿಸ್
ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ ಮತ್ತು ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬಿಡ್ ಮಾಡಿ
ಪ್ರತಿ ಚ.ಮೀ.ಗೆ ರೂ. 500/- ಗಳ ಗುಣಕಗಳಲ್ಲಿ ಬಿಡ್ ದರದ ಕನಿಷ್ಠ ಏರಿಕೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಾಸಯೋಗ್ಯ ವಸತಿ ಹಾಗೂ ವಾಣಿಜ್ಯ ಮೂಲೆ / ಮಧ್ಯಂತರ ನಿವೇಶನಗಳ ಇ-ಹರಾಜು ಪ್ರಕಟಿಸಿದೆ. ಈ ನಿವೇಶನಗಳ ಹರಾಜು ಹಾಗೂ ಮಾರಾಟವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲೆ ನಿವೇಶನಗಳು, ಮಧ್ಯಂತರ ನಿವೇಶನಗಳು ಮತ್ತು ಇತರೆ ಹರಾಜು ಮಾಡಬಹುದಾದ ನಿವೇಶನಗಳ ವಿಲೇವಾರಿ ನಿಯಮಾವಳಿ 1984ರ ಅನುಸಾರ ನಡೆಸಲಾಗುವುದು. ನಿವೇಶನಗಳನ್ನು "ಎಲ್ಲಿ ಹೇಗಿವೆಯೋ ಹಾಗಿರುವ ಸ್ಥಿತಿಯಲ್ಲಿ" ಹರಾಜು ಮಾಡಲಾಗುವುದು.

ಇ-ಹರಾಜನ್ನು ಆರಂಭಿಸುವ ದಿನಾಂಕ: 11.05.2026.

ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 22.05.2026, ಸಂಜೆ 5.00 ಗಂಟೆಗೆ

ಇ-ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 1ರಿಂದ 36): 25.05.2026ರ ಬೆಳಿಗ್ಗೆ 11.00 ಗಂಟೆಯಿಂದ
ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 26.05.2026ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಕ್ರ. ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ-ಪಶ್ಚಿಮ	ಅಳತೆ (ಮೀ.ಗಳಲ್ಲಿ) ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ. ಗಳಲ್ಲಿ
ಅಂಜನಾಪುರ ಟೌನ್‌ಶಿಪ್, 1ನೇ ಬ್ಲಾಕ್, ಅಂಜನಾಪುರ				
1	470	12	18	216
2	512	9	6	54
3	545	12	9	108
4	551/A	9	6	54
5	553	12	9	108
6	563	9	6	54
7	564	9	6	54
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 64000/-, ಸಂಪರ್ಕಿಸಿ: 8310525317				
ಅಂಜನಾಪುರ ಟೌನ್‌ಶಿಪ್, 6ನೇ ಬ್ಲಾಕ್, ಅಂಜನಾಪುರ				
8	404	(7.00+9.00)/2	12	96
9	471	12	(5.50+7.00)/2	75
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 71000/-, ಸಂಪರ್ಕಿಸಿ: 8310525317				
ಅರ್ಕಾವತಿ ಲೇಔಟ್, 2ನೇ ಬ್ಲಾಕ್, ಸಂಪಿಗೇಹಳ್ಳಿ				
10	1808	10.5	18	189
11	1789	(13.00+12.40)/2	12	152.4
12	2142A	9	(32.30+7.40)/2	377.15
13	2178A	24	0.50x30.10	361.2
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 8494933686				
ಅರ್ಕಾವತಿ ಲೇಔಟ್, 2ನೇ ಬ್ಲಾಕ್, ವೆಂಕಟೇಶಪುರ				
14	1729A	(12.70+16.15)/2	(12.00+14.00)/2	187.46
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75000/-, ಸಂಪರ್ಕಿಸಿ: 8217795990				
ಅರ್ಕಾವತಿ ಲೇಔಟ್, 20ನೇ ಬ್ಲಾಕ್, ಹೆಣ್ಣೂರು				
15	315	(3.70+3.20)/2	18	62.1
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 73500/-, ಸಂಪರ್ಕಿಸಿ: 8722433608				
ಅರ್ಕಾವತಿ ಲೇಔಟ್, 7ನೇ ಬ್ಲಾಕ್, ಜಕ್ಕೂರು				
16	2136	24	(7.8+6.1)/2	166.8
17	41	(5.50+2.00)/2	18	67.5
18	3132E	23.4	3.4	79.56
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 73500/-, ಸಂಪರ್ಕಿಸಿ: 8217795990				
ಅರ್ಕಾವತಿ ಲೇಔಟ್, 19ನೇ ಬ್ಲಾಕ್, ಚಳ್ಳಕೆರೆ				
19	669	(13.0+12.0)/2	(12.20+12.00)/2	151.25
20	641	(8.50+10.60)/2	(11.50+12.00)/2	112.21
21	735	0.5x15.00	12	90
22	53	9	(6.20+10.20)/2	73.8
23	853	9	6	54
24	852	9	6	54
25	1323	(7.40+9.50)/2	9.2	77.74
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87250/-, ಸಂಪರ್ಕಿಸಿ: 8217795990				
ಬನಶಂಕರಿ 6ನೇ ಹಂತ, 5ನೇ ಬ್ಲಾಕ್, ಹೆಮ್ಮಿಗೇಪುರ				
26	1175	9	(6.00+7.40)/2	60.3
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 72000/-, ಸಂಪರ್ಕಿಸಿ: 9880946840				
ಬನಶಂಕರಿ 6ನೇ ಹಂತ, 10ನೇ ಬ್ಲಾಕ್, ಹೆಮ್ಮಿಗೇಪುರ				
27	831	18	(12.00+13.50)/2	229
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 62300/-, ಸಂಪರ್ಕಿಸಿ: 9880946840				
ಬನಶಂಕರಿ 6ನೇ ಹಂತ, 11ನೇ ಬ್ಲಾಕ್, ಗಣಕಲ್ಲು				
28	61/F	(13.00+5.50)/2	9	83.25
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 9591964603				
ಮುಂದುವರೆದ ಅಂಜನಾಪುರ ಲೇಔಟ್, 10ನೇ ಬ್ಲಾಕ್, ಗೊಲ್ಲಹಳ್ಳಿ				
29	1379/D	9	6	54
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 8310525317				
30	1379/E	9	6	54
31	1380/A	9	6	54
32	1349	9	6	54
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 71000/-, ಸಂಪರ್ಕಿಸಿ: 8310525317				
ಮುಂದುವರೆದ ಅಂಜನಾಪುರ ಲೇಔಟ್, 10ನೇ ಬ್ಲಾಕ್, ಕೆಂಭತ್ತಹಳ್ಳಿ				
33	1371	9	6	54
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,00,000/-, ಸಂಪರ್ಕಿಸಿ: 8310525317				
ಮುಂದುವರೆದ ಬನಶಂಕರಿ ಲೇಔಟ್ 6ನೇ ಸ್ಟೇಜ್, 4ನೇ 'ಟಿ' ಬ್ಲಾಕ್, ತಲಘಟ್ಟಪುರ				
34	1970	12	22	264
35	490/L	18	12	216
36	373	12	18	216
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69300/-, ಸಂಪರ್ಕಿಸಿ: 9591964603				

ಇ-ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 37ರಿಂದ 75): 26.05.2026ರ ಬೆಳಿಗ್ಗೆ 11.00 ಗಂಟೆಯಿಂದ
ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 27.05.2026ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಕ್ರ. ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ-ಪಶ್ಚಿಮ	ಅಳತೆ (ಮೀ.ಗಳಲ್ಲಿ) ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ. ಗಳಲ್ಲಿ
ಮುಂದುವರೆದ ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 7ನೇ ಬ್ಲಾಕ್, ಗಿಡದಕೋನೇನಹಳ್ಳಿ				
37	1452	(10.90+4.50)/2	(9.50+9.00)/2	70.84
38	1165	12	(8.10+8.40)/2	99
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 6362956998				
ಜೆ.ಪಿ. ನಗರ 9ನೇ ಫೇಸ್, 3ನೇ ಬ್ಲಾಕ್, ಆಲಹಳ್ಳಿ				
39	384	12.19	18.28	222.83
40	403	12.19	18.28	222.83
41	404	12.19	18.28	222.83
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,00,000/-, ಸಂಪರ್ಕಿಸಿ: 9591964603				
ಕುಮಾರಸ್ವಾಮಿ ಲೇಔಟ್, 2ನೇ ಹಂತ, ಗೋವಿನಾಯಕನಹಳ್ಳಿ				
42	213	7.4	6.2	45.88
43	261	7.5	5	37.5
44	253	7.5	5	37.5
45	252	6	7.5	45
46	2383	18	(12.00+0.50)/2	112.5
47	3822	(6.00+7.00)/2	(12.00+0.50)/2	40.62
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,27,500/-, ಸಂಪರ್ಕಿಸಿ: 9591964603				
ಆರ್‌ಎಂವಿ, ಗೆದ್ದಲಹಳ್ಳಿ				
48	63	(24.50+7.30)/2	18.7	297.33
49	48/A	12	5	60
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,90,000/-, ಸಂಪರ್ಕಿಸಿ: 8722433608				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 6ನೇ ಬ್ಲಾಕ್, ಉಲ್ಲಾಳು				
50	756	24	15	360
51	1448	24	6.9	165.6
52	2609	(13.1+18.80)/2	18	187.1
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7975861995				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 4ನೇ ಬ್ಲಾಕ್, ಉಲ್ಲಾಳು				
53	43	(12.10+17.80)/2	18	169.1
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7975861995				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 5ನೇ ಬ್ಲಾಕ್, ಉಲ್ಲಾಳು				
54	1772	10	13	130
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7975861995				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 3ನೇ ಬ್ಲಾಕ್, ಸೊನ್ನೇನಹಳ್ಳಿ				
55	2596	11.1	12	133.2
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 6362956998				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 1ನೇ ಬ್ಲಾಕ್, ಕೆಂಗೇರಿ				
56	36	12	(18.00+14.10)/2	192.6
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 9620459111				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 1ನೇ ಬ್ಲಾಕ್, ರಾಮಸಂದ್ರ				
57	2094	(11.30+10.90)/2	18	199.8
58	1446	18	11.1	199.8
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7349388238				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 2ನೇ ಬ್ಲಾಕ್, ರಾಮಸಂದ್ರ				
59	167	12	18	216
60	664	18.8	18	338.4
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7349388238				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 4ನೇ ಬ್ಲಾಕ್, ರಾಮಸಂದ್ರ				
61	1484	18	10.6	190.8
62	1465	24	16.5	396
63	2915	12	11.6	139.2
64	1474	18	8.2	147.6
65	2937	18	20.1	361.8
66	1398	12.0	6.5	78
67	1793/1	15.5	24	372
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7349388238				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 6ನೇ ಬ್ಲಾಕ್, ಮಂಗನಹಳ್ಳಿ				
68	2227	10.4	18	187.2
69	2221	10.1	18	181.85
70	2060	18	11.2	201.6
71	2059	12	11.8	141.6
72	1914	12	4.8	57.6
73	2564	12	(13.00+11.00)/2	144
74	2730/A	18	12.4	223.2
75	2731/A	12	(6.80+4.50)/2	67.8
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7975861995				

ಇ-ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳು ಈ ಕೆಳಕಂಡಂತೆ ಇರುತ್ತವೆ.

1) ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.
2) ವಿಳಾಸದ ಸಾಬೀತಿಗಾಗಿ ಕೆಳಕಂಡ ಯಾವುದಾದರು ಒಂದು ದಾಖಲೆಯನ್ನು ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು]. ಅ) ಮತದಾರರ ಗುರುತಿನ ಚೀಟಿ, ಆ) ವಾಹನ ಚಾಲನೆಯ ಪರವಾನಗಿ, ಇ) ಪಾಸ್ ಪೋರ್ಟ್, ಈ) ವಿಶಿಷ್ಟ ಗುರುತಿನ ಸಂಖ್ಯೆ (ಆಧಾರ್).
3) ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ /ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].
4) ಸಹಿ ಮತ್ತು ಭಾವಚಿತ್ರದ ಗುರುತನ್ನು ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು. ಇದಕ್ಕೆ ನಿಗದಿಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ/ ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].
5) ಹರಾಜು ಖರೀದಿದಾರರು ಸರಿಯಾದ ಇ-ಮೇಲ್ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಸ್ಥಿರ ದೂರವಾಣಿಯನ್ನು (ಲ್ಯಾಂಡ್ ಲೈನ್) ಇ-ಹರಾಜಿನಲ್ಲಿ ಭಾಗವಹಿಸುವಾಗ ನಮೂದಿಸಬೇಕು. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರು ನೋಂದಾಯಿಸಿರುವ ಬಿಡ್‌ದಾರರು ಅಂತಿಮವಾಗಿರುತ್ತಾರೆ ಮತ್ತು ನಿವೇಶನವನ್ನು ಬೇರೆ ಯಾವುದೇ ಹೆಸರಿಗೆ ವರ್ಗಾಯಿಸುವುದಿಲ್ಲ.
6) **ಅಪ್ರಾಪ್ತ ವಯಸ್ಕರು / ಗಣಕಯಂತ್ರದ ಜ್ಞಾನ (Computer Knowledge) ಇಲ್ಲದೇ ಇರುವವರು ತಮ್ಮ ಪಾಲಕರ / ಹತ್ತಿರದ ಸ್ನೇಹಿತರ ಮೂಲಕ ಇ-ಹರಾಜಿನಲ್ಲಿ ಭಾಗವಹಿಸಬಹುದು. ಇ-ಹರಾಜಿನಲ್ಲಿ ಭಾಗವಹಿಸುವಾಗ ಯಾರು ನಿವೇಶನವನ್ನು ಖರೀದಿಸುತ್ತಾರೆಯೋ ಅವರ ಹೆಸರನ್ನು ಮಾತ್ರ ನಮೂದಿಸಿ, ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು / ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು.**
7) ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸುವ ಮುನ್ನ ತನ್ನ ಪಾಲುದಾರಿಕೆ ಸಂಸ್ಥೆಯ ನೋಂದಾವಣೆಯನ್ನು ಭಾರತ ದೇಶದಲ್ಲಿ ಮಾಡಿಕೊಂಡಿರಬೇಕು.
8) ಪ್ರತಿ ನಿವೇಶನಕ್ಕೆ ಇಎಂಡಿ ಮೊತ್ತವನ್ನು ರೂ. 4.00 ಲಕ್ಷ (ನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಎಂದು ನಿಗದಿಪಡಿಸಲಾಗಿದೆ ಮತ್ತು ಈ ಮೊತ್ತವನ್ನು ಇ-ಹರಾಜು ಶುಲ್ಕದೊಂದಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಉಲ್ಲೇಖಿಸಿದಂತೆ ಪಾವತಿಸಬೇಕು. ಇ-ಹರಾಜು ಪೋರ್ಟಲ್ ಬದಲಿಗೆ ಬಿಡಿಎ ಖಾತೆಗೆ ಪಾವತಿಸಿದರೆ ಮರುಪಾವತಿ ಸಮಯದಲ್ಲಿ ಇಎಂಡಿಯ ಮೇಲಿನ 5% ಸೇವಾ ಶುಲ್ಕವನ್ನು ಕಡಿತಗೊಳಿಸಲಾಗುತ್ತದೆ.
9) ಹರಾಜು ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಬೆಂಗಳೂರಿನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತವೆ.
10) ಇ-ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ ಐದು ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ.
11) ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಹಿಂಪಡೆಯುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
12) ಯಾವುದೇ ಕಾರಣ ನೀಡದೇ ಯಶಸ್ವಿ ಬಿಡ್ಡುದಾರರ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
13) **ಬ್ಯಾಂಕ್‌ನ ಹೆಸರು :- ಕೆನರಾ ಬ್ಯಾಂಕ್, ಬಿಡಿಎ ಸಂಕೀರ್ಣ ಶಾಖೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು-560020. ಉಳಿತಾಯ ಖಾತೆಯ ಹೆಸರು:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು. ಉಳಿತಾಯ ಖಾತೆ ಸಂಖ್ಯೆ:- 2828101053014 ಐ.ಎಫ್.ಎಸ್.ಸಿ ಕೋಡ್:- CNRB0002828. ಪಾವತಿಯ ವಿಧಾನ:- ಆರ್.ಟಿ.ಜಿ.ಎಸ್ / ಎನ್.ಇ.ಎಫ್.ಟಿ**
14) ಯಶಸ್ವಿ ಬಿಡ್‌ದಾರರಿಗೆ (ಅತಿ ಹೆಚ್ಚು ಬಿಡ್‌ದಾರರು) ಇ-ಹರಾಜಿನ ಮುಕ್ತಾಯ ಸಮಯದಿಂದ 72 ಗಂಟೆಗಳ ಒಳಗೆ (ಬ್ಯಾಂಕ್ ರಜಾದಿನಗಳನ್ನು ಹೊರತುಪಡಿಸಿ) ಒಟ್ಟು ಬೆಲೆಯ 25% ಮೊತ್ತವನ್ನು ರೂ.4.00 ಲಕ್ಷಗಳ ಇಎಂಡಿ ಮೊತ್ತವನ್ನು ಕಳೆದು ಉಳಿದ ಮೊತ್ತವನ್ನು ಕೆಳಗೆ ತಿಳಿಸಲಾದ ಬಿಡಿಎ ಬ್ಯಾಂಕ್ ಖಾತೆಗೆ ಜಮಾ ಮಾಡಲು ಸಲಹೆ ಪತ್ರಗಳನ್ನು ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ; ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿದ್ದಕ್ಕೆ ಪಡೆದ ಚಲನ್ ಅನ್ನು ಲೆಕ್ಕಾಧಿಕಾರಿ ಹಣಕಾಸು ಇಲಾಖೆ ('ಡಿ' ಬ್ಲಾಕ್, 2ನೇ ಮಹಡಿ, ಕೊಠಡಿ ಸಂಖ್ಯೆ 308) ಇವರಿಗೆ ಸಲ್ಲಿಸಬೇಕು. ನಿಗದಿತ ಸಮಯದ ಒಳಗೆ 25% ಹಣವನ್ನು ಸಂದಾಯ ಮಾಡಲು ವಿಫಲವಾದ ಪಕ್ಷದಲ್ಲಿ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಯಶಸ್ವಿ ಬಿಡ್ಡುದರಾರು ಶೇ.25 ರಷ್ಟು ಬಿಡ್ ಹಣವನ್ನು ಪಾವತಿಸಿದ ಬಳಿಕ ಉಳಿದ ಹಣ ಶೇ.75 ಹಣವನ್ನು ಬಿ.ಡಿ.ಎ.ಯಿಂದ ಪತ್ರ ತಲುಪಿದ 45 ದಿನಗಳೊಳಗಾಗಿ ಪಾವತಿಸತಕ್ಕದು.
15) ಯಶಸ್ವಿಯಾಗದ ಬಿಡ್ಡುದಾರರ ಇಎಂಡಿ ಮೊತ್ತ ರೂ. 4 ಲಕ್ಷಗಳನ್ನು ಆದಷ್ಟು ಶೀಘ್ರವಾಗಿ ಅವರ ಖಾತೆಗೆ ಜಮಾ ಮಾಡಲಾಗುವುದು (ಬಡ್ಡಿ ರಹಿತ).
16) ಹರಾಜು ಖರೀದಿದಾರರು ಜಂಟಿಯಾಗಿ ನಿವೇಶನಗಳನ್ನು ನೋಂದಾಯಿಸಲು ಬಯಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಹರಾಜು ಖರೀದಿದಾರರೊಂದಿಗೆ ರಕ್ತಸಂಬಂಧಿಗಳು ಅಂದರೆ ಸಂಗಾತಿ, ಪುತ್ರರು ಅಥವಾ ಅವಿವಾಹಿತ ಹೆಣ್ಣುಮಕ್ಕಳು ಮಾತ್ರ ಜಂಟಿ ನೋಂದಣಿಗೆ ಅರ್ಹರಾಗಿರುತ್ತಾರೆ. ಅರ್ಜಿಯಲ್ಲಿ ಅಂತಹ ವ್ಯಕ್ತಿಯ ಸಂಬಂಧವನ್ನು ಸ್ಪಷ್ಟವಾಗಿ ನಮೂದಿಸಬೇಕು ಮತ್ತು ಯಾವುದೇ ಸರ್ಕಾರಿ ಗುರುತಿನ ಚೀಟಿಯನ್ನು ಲಗತ್ತಿಸತಕ್ಕದ್ದು. ನಂತರ ಅಂತಹ ವಿನಂತಿಯನ್ನು ತಿರಸ್ಕರಿಸಲಾಗುತ್ತದೆ.
17) ಬಿಡ್ಡಿಂಗ್ ಸಮಯದಲ್ಲಿ, ಒಂದೇ ನಿವೇಶನಕ್ಕೆ ಅಡ್ಡಹೆಸರುಗಳ ಯಾವುದೇ ನಕಲು ಇದ್ದಲ್ಲಿ, ಅಂತಹ ಬಿಡ್ ಅನ್ನು ಯಾವುದೇ ಕಾರಣಗಳನ್ನು ನೀಡದೆ ತಿರಸ್ಕರಿಸಲಾಗುತ್ತದೆ.
18) **ಯಶಸ್ವಿ ಬಿಡ್ಡುದಾರರು / ಅತಿ ಹೆಚ್ಚಿನ ಬಿಡ್ಡುದಾರರು ಇ-ಹರಾಜು ಮುಕ್ತಾಯಗೊಂಡ ಅವಧಿಯ ನಿಗದಿತ 72 ಘಂಟೆಯೊಳಗೆ ನಿವೇಶನದ ಒಟ್ಟು ಮೌಲ್ಯದ ಪೈಕಿ ಶೇ.25 ರಷ್ಟು ಮೌಲ್ಯವನ್ನು ಪ್ರಾಧಿಕಾರದ ಖಾತೆಗೆ ಪಾವತಿ ಮಾಡದೇ ಇದ್ದಲ್ಲಿ ಅಥವಾ ನಿಗದಿತ ಅವಧಿಯ ನಂತರ ಅಂದರೆ ತಡವಾಗಿ ಪಾವತಿಸಿದ್ದಲ್ಲಿ, ಇ.ಎಂ.ಡಿ. ಮೊತ್ತವಾದ ರೂ.4.00 ಲಕ್ಷಗಳನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**
19) ಆದಾಯ ತೆರಿಗೆ ಕಾಯ್ದೆ 1961 ರ ಕಲಂ 194 ಐಎ ಪ್ರಕಾರ ಹರಾಜು ನಿವೇಶನದ ಒಟ್ಟು ಮೌಲ್ಯವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ, ಹರಾಜು ಖರೀದಿದಾರರು ನಿವೇಶನದ ಒಟ್ಟು ಮೌಲ್ಯದಲ್ಲಿ ಶೇ.1 ರಷ್ಟು ಮೌಲ್ಯವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆಗೆ ಪಾವತಿಸತಕ್ಕದ್ದು.
20) ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ/ಹೆಚ್ಚು) ಮೊದಲು ಇ-ಹರಾಜು ಅಧಿಸೂಚನೆ / ಹರಾಜು ನಿವೇಶನದ ಸ್ಥಿರೀಕರಣ ಪತ್ರದನ್ವಯ ನಿವೇಶನದ ಪೂರ್ಣ ಮೌಲ್ಯವನ್ನು (TDS ಹೊರತುಪಡಿಸಿ) ನಿಗದಿತ ಅವಧಿಯೊಳಗೆ ಪಾವತಿಸಬೇಕು. ನಿಗದಿತ ಅವಧಿಯೊಳಗೆ ಪಾವತಿಸದೇ ಇದ್ದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ರನ್ವಯ ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ / ಹೆಚ್ಚು):- ನಿವೇಶನದ ಮೌಲ್ಯವನ್ನು ಹೆಚ್ಚಾಗಿ ಪಾವತಿಸಿದ್ದರೆ, ಕಡಿಮೆಯಾದ ವಿಸ್ತೀರ್ಣಕ್ಕೆ ನಿವೇಶನದ ಮೌಲ್ಯವನ್ನು ಬಡ್ಡಿರಹಿತವಾಗಿ ಮರುಪಾವತಿಸಲು ಕ್ರಮ ಕೈಗೊಳ್ಳಲಾಗುವುದು. ಹೆಚ್ಚುವರಿಯಾದ ವಿಸ್ತೀರ್ಣಕ್ಕೆ ಪ್ರಾಧಿಕಾರದಿಂದ ಹರಾಜು ಖರೀದಿದಾರರಿಗೆ ಬರೆಯುವ ಪತ್ರದಂತೆ ನಿವೇಶನದ ಮೌಲ್ಯವನ್ನು ಪಾವತಿಸಬೇಕು.
21) ಬಿಡ್ಡುದಾರರು/ಹರಾಜು ಖರೀದಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ನ್ನು ಪಾಲಿಸಬೇಕಾಗುತ್ತದೆ (ಇ-ಹರಾಜಿನ ದಾಖಲೆಯ ಭಾಗವಾಗಿ ಈ ದಾಖಲೆಯನ್ನು ಲಗತ್ತಿಸಲಾಗಿದೆ).
22) ಇ-ಹರಾಜಿನಲ್ಲಿ ಭಾಗವಹಿಸುವ ವಿಧಾನಗಳನ್ನು ತಿಳಿಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿಯನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಹರಾಜಿನ ವಿಧಾನ ತಿಳಿಸುವ ಸಮಯದಲ್ಲಿ ಬಿಡಿಎ, ಬಿಡ್ಡುದಾರರ ಪರವಾಗಿ ಬಿಡ್ ಮಾಡುವುದಿಲ್ಲ.
23) ಇ-ಹರಾಜಿನಲ್ಲಿ ಭಾಗವಹಿಸುವಾಗ ಬಿಡ್ ಮೊತ್ತವು ಮೂಲ ದರಕ್ಕಿಂತ 10% ಹೆಚ್ಚಾಗಿರಬೇಕು. ಅಂದರೆ 108 m^2 ನಿವೇಶನದ ವಿಸ್ತೀರ್ಣದ ಮೂಲ ದರ ರೂ.45,000/m^2 ಆಗಿರುತ್ತದೆ. ಬಿಡ್‌ದಾರರು ರೂ..45,000x1.1=ರೂ.49,500/m^2 ಕ್ಕಿಂತ ಹೆಚ್ಚು ಕೋಟ್ ಮಾಡಬೇಕು (ರೂ.49,500 ಕೋಟ್ ಮಾಡಿದರೆ ಅದನ್ನು ತಿರಸ್ಕರಿಸಲಾಗುವುದು). ಆದಾಗ್ಯೂ, ಯಾವುದೇ ಕಾರಣ ನೀಡದೇ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
24) ಪ್ರತಿ ನಿವೇಶನಕ್ಕೆ ಕನಿಷ್ಠ 2 ಬಿಡ್‌ದಾರರುಗಳು ಇರಬೇಕು. ಏಕ ಬಿಡ್‌ದಾರನನ್ನು ತಿರಸ್ಕರಿಸಲಾಗುವುದು.
25) ವೆಬ್‌ಸೈಟ್ ವಿಳಾಸ: **www.bdakarnataka.in**
26) ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ವೆಬ್‌ಸೈಟ್: **www.bdakarnataka.in** ಇಲ್ಲಿಗೆ ಲಾಗ್‌ಆನ್ ಆಗಿ ಹೊಸ ಇ-ಹರಾಜು ಬಿಡ್ಡಿಂಗ್ ಬಳಕೆದಾರ ಕೈಪಿಡಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್:080-46010000 ಮತ್ತು 080-68948777 ಸಂಪರ್ಕಿಸುವುದು.
27) ಹರಾಜು ಮಾಡಿದ ನಿವೇಶನಗಳನ್ನು ಯಶಸ್ವಿ ಬಿಡ್‌ದಾರರಿಗೆ ಅವುಗಳು ಇರುವ ಸ್ಥಿತಿಯಲ್ಲಿಯೇ ಹಂಚಿಕೆ ಮಾಡಲಾಗುವುದು. ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಇತ್ಯಾದಿಗಳನ್ನು ಬಿಡ್ ಮಾಡುವ ಮುನ್ನ ಭೌತಿಕವಾಗಿ ಪರಿಶೀಲಿಸತಕ್ಕದ್ದು. ಇ-ಹರಾಜಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ/ಪರ್ಯಾಯ ನಿವೇಶನ ನೀಡಲಾಗುವುದಿಲ್ಲ.
28) ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ಮೇಲೆ ನಿರ್ದಿಷ್ಟಪಡಿಸಿರುವ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧರಾಗಿರಬೇಕು.
29) ಇ-ಹರಾಜಿನ ಬಗ್ಗೆ, ಬಿಡ್‌ದಾರರು ಪ್ರಾಧಿಕಾರವನ್ನು ನೇರವಾಗಿ ಸಂಪರ್ಕಿಸಬೇಕು. ಯಾವುದೇ ಮಧ್ಯವರ್ತಿಗಳನ್ನು ಸಂಪರ್ಕಿಸಬಾರದು.
30) ನಿವೇಶನಗಳ ಜಿಯೊ ಟ್ಯಾಗ್ ಕೇವಲ ಪರಾಮರ್ಶನೆಗೆ ಮಾತ್ರ. ಅದರಲ್ಲಿ ಯಾವುದೇ ವ್ಯತ್ಯಾಸಗಳಿದ್ದರೂ ಆ ಬಗ್ಗೆ ಯಾವುದೇ ಹಕ್ಕನ್ನು ಮಾನ್ಯ ಮಾಡುವುದಿಲ್ಲ.

ಬಿಡ್‌ದಾರರು ಬಿಡ್ ಮಾಡುವ ಮೊದಲು ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಬೇಕು ಮತ್ತು ಅದರ ಪ್ರಕಾರ ಭಾಗವಹಿಸಬೇಕು.

ಇ-ಹರಾಜಿನ ಇತರೆ ಮಾಹಿತಿ ಮತ್ತು ನಿಯಮ ನಿಬಂಧನೆಗಳಿಗೆ www.bdakarnataka.in ಲಾಗಾನ್ ಆಗಿ
ಬಿಡಿಎ ನಿವೇಶನ ವಿವರಗಳಿಗೆ ಸಂಬಂಧಿಸಿದಂತೆ 080-23368435 / 23368036 ಹಾಗೂ ಕೆಪಿಪಿಪಿನ ತಾಂತ್ರಿಕ ವಿಚಾರಣೆಗೆ ಸಂಬಂಧಿಸಿದಂತೆ 080-46010000 / 68948777 ಸಂಪರ್ಕಿಸಿ
ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಒಂದುವೇಳೆ ಮೇಲ್ಕಂಡ ಅಧಿಕಾರಿಗಳಿಂದ ಯಾವುದೇ ಸಹಕಾರ ಸಿಗದಿದ್ದಲ್ಲಿ
ಬಿಡಿಎ ಆಯುಕ್ತರ ಸಹಾಯವಾಣಿ ಸಂಖ್ಯೆ: **9663369000** (ವಾಟ್ಸ್ಆ್ಯಪ್‌ನಲ್ಲಿ ಮಾತ್ರ)ಯನ್ನು ಸಂಪರ್ಕಿಸಿ.

ನಂ. ಬೆಂಅಪ್ರಾ/ಅಸ/ಇ-ಹರಾಜು/ಟಿ-03/2026-27, ದಿನಾಂಕ: 02.05.2026

ಸಹಿ/- ಅಭಿಯಂತರ ಸದಸ್ಯರು

ದೃಢ ನಾಯಕತ್ವ ಪ್ರತ್ಯಕ್ಷ ಸಾಕ್ಷಿ ಬಿಎಸ್‌ವೈ: ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ



ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಅವಧಿ ರಾಜ್ಯದ ಇತಿಹಾಸದಲ್ಲಿ ಸಂಕಷ್ಟಗಳ ನಡುವೆ ದೃಢ ನಾಯಕತ್ವದ ಪ್ರತ್ಯಕ್ಷ ಸಾಕ್ಷಿಯಾಗಿದೆ. ಮೈತ್ರಿ ಸರ್ಕಾರದ ಪತನದ ನಂತರ ಅಧಿಕಾರ ಸ್ವೀಕರಿಸಿದ ಕ್ಷಣದಿಂದಲೇ ಅವರು ಅನೇಕ ರಾಜಕೀಯ ಮತ್ತು ಆಡಳಿತಾತ್ಮಕ ಸವಾಲುಗಳನ್ನು ಎದುರಿಸಿದರು. ಕುಮಾರಸ್ವಾಮಿ ಅವರ ಸರ್ಕಾರ ಕುಸಿದ ನಂತರ ಉಂಟಾದ ರಾಜಕೀಯ ಅಸ್ಥಿರ ಪರಿಸ್ಥಿತಿಯನ್ನು ಸಮತೋಲನದಲ್ಲಿಟ್ಟುಕೊಂಡು ಆಡಳಿತ ನಡೆಸುವುದು ಸುಲಭದ ಕೆಲಸವಾಗಿರಲಿಲ್ಲ. ಕೋವಿಡ್ ಮಹಾಮಾರಿಯು ರಾಜ್ಯದ ಸವಾಲಾಗಿ ನಿಂತಿತು. ಆರೋಗ್ಯ ವ್ಯವಸ್ಥೆಯ ಮೇಲೆ ಒತ್ತಡ ಹೆಚ್ಚಾದ ಸಂದರ್ಭದಲ್ಲಿ, ಆಸ್ಪತ್ರೆಗಳ ಸಾಮರ್ಥ್ಯವನ್ನು ವೃದ್ಧಿಸುವುದು, ಪರೀಕ್ಷೆ ಮತ್ತು ಲಸಿಕೆ ವ್ಯವಸ್ಥೆಯನ್ನು ಬಲಪಡಿಸುವುದು, ಜನರ ಜೀವ ಉಳಿಸುವ ದಿಕ್ಕಿನಲ್ಲಿ ತ್ವರಿತ ನಿರ್ಧಾರಗಳನ್ನು ಕೈಗೊಳ್ಳುವುದು ಇದೆಲ್ಲವೂ ನಾಯಕತ್ವವನ್ನು ಪ್ರಸ್ತುತಪಡಿಸಿದೆ. ಸಂಕಷ್ಟದ ಸಂದರ್ಭದಲ್ಲಿ ಸರ್ಕಾರದ ಸ್ಪಂದನೆ ಜನರಿಗೆ ಭರವಸೆ ನೀಡಿತು. ಬೆಂಗಳೂರಿನಲ್ಲಿ ರಸ್ತೆ, ಮೆಟ್ರೋ ಮತ್ತು ಐಟಿ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಲಾಯಿತು. ಹೂಡಿಕೆಗಳನ್ನು ಆಕರ್ಷಿಸಲು ಸೂಕ್ತ ನೀತಿಗಳನ್ನು ಜಾರಿಗೆ ತಂದು ಉದ್ಯಮ ವಲಯಕ್ಕೆ ಹೊಸ ಚೈತನ್ಯವನ್ನು ಬಿ.ಎಸ್.ಯಡಿಯೂರಪ್ಪ ಅವರು ನೀಡಿದರು. 2021ರಲ್ಲಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದರೂ, ಅವರ ಈ ಅವಧಿ ಸಂಕಷ್ಟದ ನಡುವೆಯೂ ದೃಢ ನಾಯಕತ್ವ ಮತ್ತು ಜನಪರ ಆಡಳಿತದ ಮಾದರಿಯಾಗಿ ಉಳಿಯುತ್ತದೆ.

• **ಹರೀಶ್ ಪೂಂಜ,** ಶಾಸಕರು, ಬಿಎಸ್‌ವೈ ಅಭಿಮಾನೋತ್ಸವ ಸಮಿತಿ ರಾಜ್ಯ ಸಂಚಾಲಕರು.



ಮೇರು ನಾಯಕನ ಗೌರವಾರ್ಥ ಅವರ ರಾಜಕೀಯ ಬದುಕಿನ ಸುದೀರ್ಘ 50 ವರ್ಷಗಳ ಸೇವೆಗಾಗಿ 2026 ರ ಮೇ 9 ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿ.ಎಸ್.ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ನೆವೆ ಮಾಡಿದ ಬಿ.ಎಸ್ .ಯಡಿಯೂರಪ್ಪನವರಿಗೆ ಗೌರವ ಸಲ್ಲಿಸೋಣ.

• **ವೇದವ್ಯಾಸ ಕಾಮತ್,** ಶಾಸಕರು ಹಾಗೂ ಸಂಚಾಲಕರು, ಬಿಎಸ್‌ವೈ ಅಭಿಮಾನೋತ್ಸವ ಸಮಿತಿ, ದ.ಕ. ಜಿಲ್ಲೆ



ಉತ್ತಮ ಆಡಳಿತ ನೀಡಿದ ಬಿಎಸ್‌ವೈ ಎಲ್ಲರೂ ಒಪ್ಪುವ ರಾಜಕಾರಣಿ. ರೈತರಿಗೆ, ಮಹಿಳೆಯರಿಗೆ ಸಾಕಷ್ಟು ಕೊಡುಗೆ ನೀಡಿದ ಅವರು, ಮೀನುಗಾರರನ್ನೂ ಮರೆತಿಲ್ಲ. ಕರಾವಳಿ ಮಟ್ಟಿಗೆ ಬಿಎಸ್‌ವೈ ಸಾಕಷ್ಟು ಯೋಜನೆ ನೀಡಿದ್ದಾರೆ. ಅವರ ಹಾದಿಯಲ್ಲಿ ಮುನ್ನಡೆದರೆ ಅದು ಪಕ್ಷಕ್ಕೂ ಲಾಭ, ಕಾರ್ಯಕರ್ತರಿಗೂ ಶೋಭೆ.

• **ಡಾ.ಭರತ್ ಶೆಟ್ಟಿ,** ಶಾಸಕರು, ಮಂಗಳೂರು ಉತ್ತರ.

ಕರಾವಳಿ ಜನರ ಮನ ಗೆದ್ದ ಜನನಾಯಕ ಬಿಎಸ್‌ವೈ

ನಮೋ ಶಕ್ತಿಯ ಮೂಲಾಧಾರ ಕರ್ನಾಟಕದಲ್ಲಿ ಯಡಿಯೂರಪ್ಪ: ಸಂಸದ ಕ್ಯಾ.ಬ್ರಿಜೇಶ್ ಚೌಟ


ಶ್ರೀಯುತ ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ(ಬಿಎಸ್‌ವೈ)ನವರ ಐದು ದಶಕದ ಸಾರ್ವಜನಿಕ ಬದುಕು ಕರ್ನಾಟಕದ ರಾಜಕೀಯದಲ್ಲಿ ಬಹುದೊಡ್ಡ ಹೆಜ್ಜೆ ಗುರುತು. ನಗರಪಾಲಿಕೆ ಸದಸ್ಯರಾಗಿ ತಳಮಟ್ಟದಿಂದ ರಾಜಕೀಯಕ್ಕೆ ಪ್ರವೇಶ ಪಡೆದ ಯಡಿಯೂರಪ್ಪನವರು ಬಿಜೆಪಿ ಪಕ್ಷವನ್ನು ಕರ್ನಾಟಕದಲ್ಲಿ ಕಟ್ಟಿ ಬೆಳೆಸಿದ ರೀತಿ ಅದ್ಭುತವಾದುದು.

ಬಿಎಸ್‌ವೈ ಹುಟ್ಟು ಹೋರಾಟಗಾರ. ಅವರು ಕೇವಲ ವೇದಿಕೆ ಮೇಲೆ ಭಾಷಣ ಮಾಡುವ ನಾಯಕರಾಗಿ ಉಳಿಯುವುದಿಲ್ಲ, ಬದಲಾಗಿ ಪ್ರತಿ ಕಾರ್ಯಕರ್ತನ ಮನದ ಆಳಕ್ಕಿಳಿಯುವ ಆಪ್ತ ಬಂಧುವಾಗುತ್ತಾರೆ. ರಾಜಕೀಯದ ಈ ಸುದೀರ್ಘ ಹಾದಿಯಲ್ಲಿ ಎಷ್ಟೋ ನಾಯಕರು ಬರುತ್ತಾರೆ, ಹೋಗುತ್ತಾರೆ. ಆದರೆ ಕೆಲವರು ಮಾತ್ರ ಕಾಲದ ಮಿತಿಯನ್ನು ಮೀರಿ ಜನಮಾನಸದಲ್ಲಿ ಶಾಶ್ವತ 'ಜನನಾಯಕ'ರಾಗಿ ಉಳಿಯುತ್ತಾರೆ. ಆ ಸಾಲಿನಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪನವರ ಹೆಸರು ಅಚ್ಚಳಿಯದ ಸುವರ್ಣಾಕ್ಷರ.

ನನಗೆ ಯಡಿಯೂರಪ್ಪನವರು ಕೇವಲ ಒಬ್ಬ ಮಾಜಿ ಮುಖ್ಯಮಂತ್ರಿಯಾಗಿ ಅಥವಾ ರಾಜಕೀಯ ಮುತ್ಸದ್ದಿಯಾಗಿ ಮಾತ್ರ ಕಾಣುವುದಿಲ್ಲ. ಅದಕ್ಕಿಂತ ಹೆಚ್ಚಾಗಿ, ಸೋಲು-ಗೆಲುವಿನ ಕ್ಷಣಗಳಲ್ಲಿ ಕಾರ್ಯಕರ್ತನ ಬೆನ್ನು ಸವರುವ, ಭರವಸೆಯ ಚೈತನ್ಯ ತುಂಬುವ ಒಬ್ಬ ಹಿರಿಯ ಮಾರ್ಗದರ್ಶಿಯಾಗಿ ಕಾಣುತ್ತಾರೆ.

ನಾನೊಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಸೇರಿದಾಗಿನಿಂದ ಯಡಿಯೂರಪ್ಪನವರ ಸ್ಫೂರ್ತಿಯ ಮಾತು, ಮಾರ್ಗದರ್ಶನ ಎಂದಿಗೂ ಮರೆಯುವಂತಿಲ್ಲ. ಸಂಸದ ಸ್ಥಾನಕ್ಕೆ ನನಗೆ ಟಿಕೆಟ್ ದೊರೆತ ಸಮಯದಿಂದ ಹಿಡಿದು, ನಾಮಿನೇಷನ್ ಸಲ್ಲಿಸುವಾಗ, ಮತದಾನದ ದಿನ, ಫಲಿತಾಂಶದವರೆಗೂ ನಾಲ್ಕಾರು ಬಾರಿ ಖುದ್ದು ಕರೆ ಮಾಡಿ ಹುರಿದುಂಬಿಸಿದ್ದರು. ಈ ಗುಣವೇ ಅವರನ್ನು ಭಿನ್ನವಾಗಿಸುವುದು. ಅಭಿವೃದ್ಧಿಯ ಹಸಿವಿದ್ದವರಿಗೆ ಆಪ್ತರಂತೆ ಕಾಣುವ, ಎಪ್ಪತ್ತೆಂಟು-ಎಂಭತ್ತರ ಹರೆಯದಲ್ಲೂ ಸಾಮಾನ್ಯ ಕಾರ್ಯಕರ್ತನನ್ನು ನೆನಪಿಟ್ಟುಕೊಂಡು ಹುರಿದುಂಬಿಸುವ ಗುಣವೇ ಅವರನ್ನು 'ಕರ್ನಾಟಕದ ಭೀಷ್ಮ'ನನ್ನಾಗಿ ಮಾಡಿದೆ.

ಕರಾವಳಿಯ ಮಣ್ಣಿನ ಜೊತೆಗಿನ ಅನುಬಂಧ: 80ರ ದಶಕದಲ್ಲೇ ಸೈಕಲ್ ಏರಿ, ಹಳ್ಳಿ-ಹಳ್ಳಿ ಸುತ್ತಿ ಪಕ್ಷ ಕಟ್ಟಿದ ಕಾಲದಿಂದ ಹಿಡಿದು, ವಿಧಾನಸಭೆಯೊಳಗೆ ರೈತರಿಗಾಗಿ ಧ್ವನಿ ಎತ್ತಿದವರೆಗೂ ಅವರದ್ದು ಒಂದೇ ಸಿದ್ಧಾಂತ ಅದುವೇ 'ಜನಸೇವೆ. ಯಡಿಯೂರಪ್ಪನವರಿಗೂ ಕರಾವಳಿಗೂ ಒಂದು ಅವಿನಾಭಾವ ಅಗಾಧ ಸ್ನೇಹ-ಸಂಬಂಧವಿದೆ. ಕರಾವಳಿ ಜನರ ಶ್ರಮಜೀವಿ ಸ್ವಭಾವ ಮತ್ತು ಯಡಿಯೂರಪ್ಪನವರ ಹೋರಾಟದ ಬದುಕು ಒಂದಕ್ಕೊಂದು ಪೂರಕ.




■ ನಗರಪಾಲಿಕೆ ಸದಸ್ಯನಿಂದ ರಾಜ್ಯದ ಮುಖ್ಯಮಂತ್ರಿ ಸ್ಥಾನದವರೆಗೆ ಯಡಿಯೂರಪ್ಪನವರು ಕ್ರಮಿಸಿದ ಹಾದಿ ಕರ್ನಾಟಕ ರಾಜಕಾರಣದ ಮೈಲುಗಲ್ಲು. 1989ರಲ್ಲಿ ಕೇವಲ ಶೇ.7ರಷ್ಟಿದ್ದ ಬಿಜೆಪಿಯ ಮತ ಹಂಚಿಕೆಯನ್ನು 2018ರ ವೇಳೆಗೆ ಶೇ. 37ಕ್ಕೆ ಬೆಳೆಸಿದ ಶ್ರೇಯಸ್ಸು ಬಿಎಸ್ ವೈ ಅವರ ಸಂಘಟನಾ ಶಕ್ತಿಗೆ ಸಲ್ಲುವ ಬಹುದೊಡ್ಡ ಮನ್ನಣೆ.

ಕರ್ನಾಟಕದಲ್ಲಿ ಕಮಲ ಅರಳಲು ಯಡಿಯೂರಪ್ಪನವರು ಪ್ರಮುಖ ಜನನಾಯಕರಾಗಿದ್ದರೆ, ಅದಕ್ಕೆ ಬೇಕಾದ ವೈಚಾರಿಕ ಮತ್ತು ಚುನಾವಣಾ ಭದ್ರಕೋಟೆಯೊಂದಿಗೆ ಕಾರ್ಯಕರ್ತರ ಸೈನ್ಯ ಹಾಗೂ ಭದ್ರ ಭೂಮಿಕೆ ಒದಗಿಸಿದ್ದು ಕರಾವಳಿ ಕರ್ನಾಟಕ.

ಹೋರಾಟದ ಕಿಚ್ಚು, ಕಾರ್ಯಕರ್ತರ ಪರ ನಿಲುವು: ಕರಾವಳಿ ಮಣ್ಣು ಹಿಂದೂ ಕಾರ್ಯಕರ್ತರ ಹತ್ಯೆಯಂತಹ ಕರಾಳ ದಿನಗಳನ್ನು ಕಂಡಾಗ, ಅಂದು ರಾಜ್ಯಾಧ್ಯಕ್ಷರಾಗಿದ್ದ ಬಿ.ಎಸ್. ಯಡಿಯೂರಪ್ಪನವರು ಕೇವಲ ನಾಯಕರಾಗಿ ಈ ಅನ್ಯಾಯದ ವಿರುದ್ಧ ಸಿಡಿದೆದ್ದಿರಲಿಲ್ಲ, ಬದಲಾಗಿ ಕಾರ್ಯಕರ್ತರ ಧ್ವನಿಯಾಗಿ ಬೀದಿಗಿಳಿದಿದ್ದರು. ಪ್ರಶಾಂತ್ ಪೂಜಾರಿ, ದೀಪಕ್ ರಾವ್, ಶರತ್ ಮಡಿವಾಳ ಅವರಂತಹ ಯುವ ಕಾರ್ಯಕರ್ತರ ಬಲಿದಾನವಾದಾಗ, ಆ ಕುಟುಂಬಗಳ ಜೊತೆ ನಿಂತಿದ್ದರು. ಹತ್ಯೆಗೀಡಾದ ಕಾರ್ಯಕರ್ತರ ಮನೆಗೆ ಭೇಟಿ ನೀಡಿ, ಅವರ ಕುಟುಂಬಕ್ಕೆ ಆರ್ಥಿಕ ಮತ್ತು ನೈತಿಕ ಬೆಂಬಲ ನೀಡುತ್ತ ಅನ್ಯಾಯದ ವಿರುದ್ಧ ಅವರು ತೋರುತ್ತಿದ್ದ ಆ ಆಕ್ರೋಶವೇ ಯುವ ಸಮೂಹಕ್ಕೆ ದೊಡ್ಡ ಪ್ರೇರಣೆ.

ಅವರು ಉಪಮುಖ್ಯಮಂತ್ರಿ ಮತ್ತು ಮುಖ್ಯಮಂತ್ರಿಯಾಗಿದ್ದ ಅವರ ಆಡಳಿತಾವಧಿಯು ಕರಾವಳಿಯ ಪಾಲಿಗೆ ಅಭಿವೃದ್ಧಿಯ ಸುವರ್ಣ ಯುಗ. ಮೀನುಗಾರರ ದೋಣಿಗಳಿಗೆ ಸಬ್ಸಿಡಿ ದರದ ಇಂಧನ ವಿತರಣೆ, ತುಂಬೆ ವೆಂಟೆಡ್ ಡ್ಯಾಂ ನಿರ್ಮಾಣ, ಮಂಗಳೂರಿಗೆ ಹೊಸ ಪೊಲೀಸ್ ಕಮಿಷನರೇಟ್, ಬಂದರು ಅಭಿವೃದ್ಧಿಗೆ ಆದ್ಯತೆ , ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ರಚನೆ, ಮಂಗಳೂರು ನಗರದ ರಸ್ತೆಗಳ ಕಾಂಕ್ರಿಟೀಕರಣಕ್ಕೆ ಅವರು ನೀಡಿದ ಒತ್ತು ಈ ಭಾಗದ ಚಿತ್ರಣವನ್ನೇ ಬದಲಿಸಿತ್ತು. ಕರಾವಳಿ ಹೆಮ್ಮೆ 'ಕಂಬಳ'ಕ್ಕೆ ಕಾನೂನು ತೊಡಕು ಎದುರಾದಾಗ ಗಟ್ಟಿಯಾಗಿ ನಿಂತು ತುಳುನಾಡಿನ ಸಾಂಸ್ಕೃತಿಕ ಅಸ್ಮಿತೆಯನ್ನು ಕಾಪಾಡಿದವರು ಬಿಎಸ್‌ವೈ. ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ವಿಶೇಷ ಪ್ಯಾಕೇಜ್‌ಗಳನ್ನು ಘೋಷಿಸಿ ಇಲ್ಲಿನ ಪ್ರವಾಸೋದ್ಯಮ, ಆರ್ಥಿಕತೆಗೆ ವೇಗ ನೀಡಿದ್ದರು.

ಅಟಲ್ ಬಿಹಾರಿ ವಾಜಪೇಯಿ ಅವರ ಮೌಲ್ಯಗಳನ್ನು ಉಸಿರಾಗಿಸಿಕೊಂಡ ಯಡಿಯೂರಪ್ಪನವರು, ಅಧಿಕಾರಕ್ಕಿಂತ ಜನರೊಂದಿಗಿನ ಸಂಬಂಧವೇ ದೊಡ್ಡದು ಎಂದು ನಂಬಿದವರು. ಸೋಲುಗಳಿದ್ದಾಗ ಕುಗ್ಗದೆ, ಗೆಲುವಿದ್ದಾಗ ಬೀಗದೆ ಸ್ಥಿತಪ್ರಜ್ಞರಾಗಿ ನಿಂತ ನಾಯಕ ಇವರು. ಅವರು ನಿಜಕ್ಕೂ "The Leader Who Saw Tomorrow'& ನಾಳೆಗಳನ್ನು ಕಂಡ ಮುನ್ನೋಟದ ನಾಯಕ.



■ ಕರ್ನಾಟಕದ ಜನಮಾನಸದಲ್ಲಿ ಸದಾ ಕಾಲ ಗೌರವಯುತ ಹಾಗೂ ಪ್ರೀತಿಯ ರಾಜಕಾರಣಿಯಾಗಿ ಸ್ಥಾನಪಡೆದಿರುವ ಬಿಎಸ್ ಯಡಿಯೂರಪ್ಪನವರಿಗೆ ಆಯೋಜಿಸಿರುವ ಅಭಿನಂದನೋತ್ಸವ ನಿಜಕ್ಕೂ ಅರ್ಥಪೂರ್ಣ–ಔಚಿತ್ಯಪೂರ್ಣ. ರಾಜಕೀಯದಲ್ಲಿ ಸುವರ್ಣಾಕ್ಷರಗಳ ಹೆಜ್ಜೆ ಗುರುತಿನೊಂದಿಗೆ 80ರ ವಯಸ್ಸಿಗೆ ಪಾದಾರ್ಪಣೆ ಮಾಡುತ್ತಿರುವ ಬಿಎಸ್‌ವೈಗೆ ದೇವರು ಆಯುರಾರೋಗ್ಯ ನೀಡುವ ಜತೆಗೆ ಪಕ್ಷ ಸಂಘಟನೆಗೆ ಮತ್ತಷ್ಟು ಚೈತನ್ಯ–ಹುಮ್ಮಸ್ಸು ತುಂಬುವಂತಾಗಲಿ.

■ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಸದಾ ಕಾಲ ಬಿ.ಎಸ್. ಯಡಿಯೂರಪ್ಪ ಅವರನ್ನು ಕರ್ನಾಟಕದ ಶಕ್ತಿ ಎಂದು ಬಣ್ಣಿಸುತ್ತಾ ಬಂದಿದ್ದಾರೆ. ಸಂಸದೀಯ ಮಂಡಳಿಯಲ್ಲಿ ಬಿಎಸ್‌ವೈ ಅವರಿಗೆ ಸ್ಥಾನ ನೀಡುವ ಮೂಲಕ, ಇಂದಿಗೂ ದಕ್ಷಿಣ ಭಾರತದ ರಾಜಕಾರಣದಲ್ಲಿ ಅವರ ಮಾರ್ಗದರ್ಶನ ಮೋದಿಯವರಿಗೆ ಮುಖ್ಯ ಎಂಬುದನ್ನು ಸಾಬೀತುಪಡಿಸಿದರು. ಒಟ್ಟಾರೆಯಾಗಿ ಹೇಳುವುದಾದರೆ, ನರೇಂದ್ರ ಮೋದಿ ಅವರು ಬಿಜೆಪಿಯ ರಾಷ್ಟ್ರೀಯ ಶಕ್ತಿಯಾದರೆ, ಯಡಿಯೂರಪ್ಪ ಅವರು ಕರ್ನಾಟಕದಲ್ಲಿ ಆ ಶಕ್ತಿಯ ಮೂಲಾಧಾರ. ಕರ್ನಾಟಕದಲ್ಲಿ ಬಿಜೆಪಿಯನ್ನು ಕೇವಲ ಒಂದು ಪಕ್ಷವಾಗಿ ಅಲ್ಲದೆ, ಒಂದು ಬಲಿಷ್ಠ ಸಂಘಟನೆಯಾಗಿ ಉಳಿಯುವಂತೆ ಮಾಡುವಲ್ಲಿ ಮೋದಿಯವರ ನಾಯಕತ್ವ ಹಾಗೂ ಬಿಎಸ್‌ವೈ ತಳಮಟ್ಟದ ಸಂಘಟನಾ ಶಕ್ತಿಯ ಪಾತ್ರ ಹಿರಿದು.

ಅಪರೂಪದ ರಾಜಕಾರಣಿ ಬಿಎಸ್‌ವೈ: ಕಿಶೋರ್ ಕುಮಾರ್ ಪುತ್ತೂರು



ಹುಟ್ಟು ಹೋರಾಟಗಾರ ಯಡಿಯೂರಪ್ಪ ಅವರು ಎರಡು ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ನಾಡಿನ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಓರ್ವ ತಳಸ್ಪರ್ಶಿ ಮತ್ತು ಸರ್ವಸ್ಪರ್ಶಿ ಮುಖ್ಯಮಂತ್ರಿ ಎನಿಸಿಕೊಂಡಿದ್ದಾರೆ. ಸಮಾಜದ ಎಲ್ಲ ಜಾತಿ, ಪಂಗಡಗಳ ಅಭ್ಯುದಯಕ್ಕೆ ಶ್ರಮಿಸಿದ ಅಪರೂಪದ ರಾಜಕಾರಣಿ ಯಡಿಯೂರಪ್ಪ. ಸಿಎಂ ಆಗಿ ಬಜೆಟ್‌ನಲ್ಲಿ ಕೃಷಿ ಹಾಗೂ ಮಹಿಳೆಯರ ಏಳಿಗೆಗೆ ಹತ್ತುಹಲವು ಯೋಜನೆ ಹಾಕಿಕೊಂಡಿದ್ದರು. ರಾಜಕೀಯವಾಗಿಯೂ ಕರ್ನಾಟಕದಲ್ಲಿ ಬಿಜೆಪಿ ಭದ್ರ ನೆಲೆ ಕಂಡುಕೊಳ್ಳುವಂತಾಗಿದ್ದು ಬಿಎಸ್‌ವೈ ಅಧಿಕಾರದ ಅವಧಿಯಲ್ಲಿ ಎಂಬುದು ಗಮನಾರ್ಹ.


• **ಕಿಶೋರ್ ಕುಮಾರ್ ಪುತ್ತೂರು,** ವಿಧಾನ ಪರಿಷತ್ ಸದಸ್ಯರು

ಬಿ.ಎಸ್.ವೈ. ಬಿಜೆಪಿ ಕಟ್ಟಿ ಬೆಳೆಸಿದ ಧೀಮಂತ: ಜಯಂತ್ ಕೋಟ್ಯಾನ್



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಬಿಜೆಪಿಯಲ್ಲಿ ಜೀರೋದಿಂದ ಪಕ್ಷ ಕಟ್ಟಿ ಮೇಲೆ ಬಂದವರು. ಮುಖ್ಯಮಂತ್ರಿಯಾಗಿ ಸಂಧ್ಯಾ ಸುರಕ್ಷಾ ಯೋಜನೆ ಜಾರಿಗೊಳಿಸಿ 60 ವರ್ಷ ಮೇಲ್ಪಟ್ಟವರಿಗೆ ಆಸರೆಯಾಗಿ ನಿಂತರು. ಇದೊಂದು ಅಪರೂಪದ ಯೋಜನೆ. ಹೆಣ್ಮಕ್ಕಳ ಮೇಲಿನ ಮುತುವರ್ಜಿಯಿಂದ ಭಾಗ್ಯ ಲಕ್ಷ್ಮೀ ಯೋಜನೆ ಜಾರಿಗೆ ತಂದರು. ರಾಜ್ಯದ ರೈತ ನಾಯಕನಾಗಿ ಹೊರಹೊಮ್ಮಿದ ಬಿಎಸ್‌ವೈ, ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ಕೂಡಲೇ ಬೆಳ್ತಂಗಡಿ ಪ್ರಾಕೃತಿಕ ವಿಕೋಪ ವೀಕ್ಷಣೆಗೆ ಆಗಮಿಸಿದ್ದರು. ಮನೆ ಕಳೆದುಕೊಂಡವರಿಗೆ ಸ್ಥಳದಲ್ಲೇ ಪರಿಹಾರ ಮೊತ್ತವನ್ನು 5 ಲಕ್ಷ ರು.ಗೆ ಏರಿಕೆ ಮಾಡಿ ಸಂತ್ರಸ್ತರಿಗೆ ನೆರವಾಗಿದ್ದಾರೆ. ಪರಿಹಾರ ಮೊತ್ತ ಏರಿಕೆ ಮಾಡಿರುವುದು ರಾಜ್ಯದಲ್ಲೇ ಇದು ಮೊದಲು. ಉತ್ತಮ ಆಡಳಿತ ವ್ಯವಸ್ಥೆ, ಪಕ್ಷಕ್ಕೆ ಆಧಾರಸ್ತಂಭವಾಗಿರುವ ಬಿಎಸ್‌ವೈ, ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದ ಧೀಮಂತ ವ್ಯಕ್ತಿತ್ವ. ಅವರ ರಾಜಕೀಯ ಜೀವನದ 50ರ ಸಂಭ್ರಮ ಆಚರಣೆ ನಿಜಕ್ಕೂ ಎಲ್ಲರಿಗೆ ಹೆಮ್ಮೆ.

• **ಜಯಂತ್ ಕೋಟ್ಯಾನ್,** ಬಿಜೆಪಿ ಸಹ ಪ್ರಭಾರಿ, ಮಂಗಳೂರು ವಿಭಾಗ



ಯಡಿಯೂರಪ್ಪ ರಾಜ್ಯದಲ್ಲಿ ಬಿಜೆಪಿಯನ್ನು ಗ್ರಾಮ ಗ್ರಾಮಕ್ಕೆ, ಜನಸಾಮಾನ್ಯರ ಮನಸ್ಸಿಗೆ ತಲುಪಿಸಿದ ಅಗ್ರಗಣ್ಯ ನಾಯಕ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು, ಸಾರ್ಥಕ 50 ವರ್ಷದಲ್ಲಿ ಜನಸಾಮಾನ್ಯರ ರೈತರ ಹೋರಾಟಗಳ ಮೂಲಕ ಬಿಜೆಪಿ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವಂತೆ ಮಾಡಿದ ಧೀಮಂತ ನಾಯಕ. ಮುಖ್ಯಮಂತ್ರಿಗಳಾಗಿ ಸಮಾಜದ ಎಲ್ಲಾ ವರ್ಗದ ಜನರಿಗೆ ಹಲವಾರು ಯೋಜನೆಗಳ ರೂಪಿಸಿ ಜಾರಿಗೊಳಿಸಿದ ರೈತ ನಾಯಕರು. ದಕ್ಷಿಣ ಕನ್ನಡ ಜಿಲ್ಲೆಯ ಜನರ ಮೇಲೆ ಅಪಾರ ಪ್ರೀತಿ ಅಭಿಮಾನ ಇರಿಸಿದ ಜನ ನಾಯಕರು. ನಾಡಿನ ದೇಗುಲಗಳ ಅಭಿವೃದ್ಧಿಗೆ ಕೋಟ್ಯಾಂತರ ರೂ.ಅನುದಾನ ಒದಗಿಸಿದ ಶ್ರೇಷ್ಠ ರಾಜಕಾರಣಿ.

• **ಕೆ. ಪ್ರತಾಪಸಿಂಹ ನಾಯಕ್,** ಸದಸ್ಯರು ವಿಧಾನಪರಿಷತ್

ಜನಪ್ರಿಯ ಸಿಎಂ ಬಿಎಸ್‌ವೈ: ಕವಿತಾ ಸನಿಲ್



ಬಿ.ಎಸ್.ಯಡಿಯೂರಪ್ಪ ಅವರು ಜನಪ್ರಿಯ ಮುಖ್ಯಮಂತ್ರಿಗಳಾಗಿದ್ದರು ಎಂಬುದರಲ್ಲಿ ಎರಡು ಮಾತಿಲ್ಲ. ಹಿಂದುಳಿದ ವರ್ಗಗಳಿಗೆ ಬಿಎಸ್ ವೈ ಅಧಿಕಾರಾವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಹೆಣ್ಮಕ್ಕಳಿಗೆ ಭಾಗ್ಯಲಕ್ಷ್ಮೀ ಯೋಜನೆ ಜಾರಿಗೊಳಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕೃಷಿಕರಿಗೆ, ದೀನದುರ್ಬಲರ ಏಳಿಗೆಗೆ ಶ್ರಮಿಸಿದ ಇವರಂತಹ ಸಿಎಂ ಬೇರೆ ಇಲ್ಲ.

• **ಕವಿತಾ ಸನಿಲ್,** ಉಪಾಧ್ಯಕ್ಷರು, ದ.ಕ. ಬಿಜೆಪಿ

ರೈತ ಬರ ಬಜೆಟ್ ಮಂಡಿಸಿದ ಬಿಎಸ್‌ವೈ: ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ



ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮೀ ಯೋಜನೆ, ಆರೋಗ್ಯದ ಬಗ್ಗೆ ಕಾಳಜಿ ಇಟ್ಟುಕೊಂಡು 108 ಯೋಜನೆ. ವೃದ್ಧರು, ವಿಧವೆಯರ ಪಿಂಚಣಿ ಮೊತ್ತ ಹೆಚ್ಚಳ ಮಾಡಿದ್ದರು, ಮಹಿಳೆಯರ ಸ್ವಾವಲಂಬಿ ಜೀವನಕ್ಕಾಗಿ ಸಾಲ ಯೋಜನೆ, ರೈತರಿಗಾಗಿ ವಿಶೇಷ ರೈತ ಬಜೆಟ್ ಮಂಡಿಸಿದ ಕೀರ್ತಿ ಅವರದ್ದು.

• **ಭಾಗೀರಥಿ ಮುರುಳ್ಯ, ಶಾಸಕರು,** ಸುಳ್ಯ

ಪುತೂರು ಕ್ಷೇತ್ರಕ್ಕೆ ರಾಜಾಹುಲಿ ಯಡಿಯೂರಪ್ಪ ಕೊಡುಗೆ ಭರಪೂರ

ಯಡಿಯೂರಪ್ಪಅವರುಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಪುತ್ತೂರಿಗೆ ಹಲವು ವಿಶೇಷ ಕೊಡುಗೆಗಳನ್ನು ನೀಡಿದ್ದಾರೆ. ಬೆಳೆಯುತ್ತಿರುವ ಪುತ್ತೂರಿಗೆ ಸುಸಜ್ಜಿತ ಬಸ್ಸು ನಿಲ್ದಾಣಕ್ಕೆ ಅನುದಾನ ಮೀಸಲಿರಿಸಿ ಶಂಕುಸ್ಥಾಪನೆ ನಡೆಸಿರುವುದರಲ್ಲಿ ಯಡಿಯೂರಪ್ಪ ಅವರ ಪಾತ್ರ ಮಹತ್ವದ್ದಾಗಿದೆ.

ಎಲ್ಲಾ ಇಲಾಖೆಗಳು ಒಂದೇ ಸೂರಿನಡಿಯಲ್ಲಿ ದೊರೆಯುವಂತಾಗಿರುವ ಪುತ್ತೂರು ತಾಲೂಕು ಆಡಳಿತ ಸೌಧವು ಯಡಿಯೂರಪ್ಪ ಅವರ ಮುಖ್ಯಮಂತ್ರಿ ಅವಧಿಯಲ್ಲಿ ನಿರ್ಮಾಣಗೊಂಡಿದೆ. ಅದೇ ರೀತಿಯಾಗಿ ನಗರದ ಹೊರ ವಲಯದ ಕೆಮ್ಮಿಂಜೆ ಗ್ರಾಮದ ಮೊಟ್ಟೆತ್ತಡ್ಕದಲ್ಲಿ ಸರ್ವ ವ್ಯವಸ್ಥೆಗಳನ್ನು ಒಳಗೊಂಡ ಅಗ್ನಿಶಾಮಕ ದಳದ ಸ್ಟೇಷನ್ ಕಟ್ಟಡವು ಯಡಿಯೂರಪ್ಪ ಅವರ ಅವಧಿಯಲ್ಲಿ ಯೇ ನಿರ್ಮಾಣಗೊಂಡಿತ್ತು.

ನಗರದ ಕುಡಿಯುವ ನೀರಿನ ವ್ಯವಸ್ಥೆಗಾಗಿ 115 ಕೋಟಿ ರು. ವೆಚ್ಚದ ಜಲಸಿರಿ ಯೋಜನೆಯನ್ನು ಯಡಿಯೂರಪ್ಪ ಅವರ ಅವಧಿಯಲ್ಲಿ ಆರಂಭಿಸಲಾಗಿತ್ತು. ಪುತ್ತೂರು ನಗರದ ಎಲ್ಲ ಪ್ರದೇಶಗಳಿಗೆ 24 ಗಂಟೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ಜಲಸಿರಿ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಯಡಿಯೂರಪ್ಪ ಸಿಎಂ ಆಗಿದ್ದ ಅವಧಿಯಲ್ಲಿ ಪುತ್ತೂರಿಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮಂಜೂರಾಗಿತ್ತು.

ಗ್ರಾಮೀಣಪ್ರದೇಶಗಳಲ್ಲಿಕುಡಿಯುವ ನೀರು ವ್ಯವಸ್ಥಿತವಾಗಿ ಪೂರೈಸುವ ನಿಟ್ಟಿನಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆಯನ್ನು ಪಂಚಾಯಿತಿ ಮಟ್ಟದಲ್ಲಿ ಅನುಷ್ಠಾನಗೊಳಿಸುವ ಹೆಗ್ಗಳಿಕೆಯ ಮುಖ್ಯಮಂತ್ರಿ ಯಡಿಯೂರಪ್ಪ ಅವರದ್ದಾಗಿದೆ. ಅಲ್ಲದೆ ಪುತ್ತೂರಿನ ಅಲುಂಬುಡ ಕೆರೆ ಸೇರಿದಂತೆ ತಾಲೂಕಿನಹಲವುಕೆರೆಗಳಅಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿ ವಿಶೇಷ ಅನುದಾನವನ್ನು ಯಡಿಯೂರಪ್ಪ ಅವರು ಒದಗಿಸಿಕೊಟ್ಟಿದ್ದಾರೆ. ಅಲ್ಲದೆ ಪುತ್ತೂರಿನ ಹೆದ್ದಾರಿ ರಸ್ತೆ ಅಗಲೀಕರಣ, ಪುತ್ತೂರು ಪುರಸಭೆಗೆ 5 ಕೋಟಿ ರುಗಳ ವಿಶೇಷ ಅನುದಾನ, ಮುಖ್ಯಮಂತ್ರಿಗಳ ಗ್ರಾಮೀಣ ಸಡಕ್ ಯೋಜನೆಯಡಿ ಪುತ್ತೂರಿನ ಹಲವು ರಸ್ತೆಗಳ ಅಭಿವೃದ್ಧಿ ಕೆಲಸ ಕಾರ್ಯಗಳು ನಡೆದಿದೆ.

ಬಿಜೆಪಿಯ ಶಕ್ತಿ, ಮೇರು ವ್ಯಕ್ತಿತ್ವ ಬಿಎಸ್‌ವೈ: ಶಾಸಕ ಕಾಮತ್

ಪ್ರತಿ ಕಾರ್ಯಕರ್ತರಿಗೂ ಸ್ಫೂರ್ತಿ ಯಡಿಯೂರಪ್ಪ | ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಕೊಡುಗೆ ಅನನ್ಯ



ಮಾಜಿ ಸಿಎಂ ಯಡಿಯೂರಪ್ಪ ಜೊತೆ ಶಾಸಕ ವೇದವ್ಯಾಸ್ ಕಾಮತ್ ಮತ್ತಿತರರು

ಕರ್ನಾಟಕದಲ್ಲಿ ಸುಮಾರು ಐದು ದಶಕಗಳಿಂದ ಭಾರತೀಯ ಜನತಾ ಪಾರ್ಟಿಯನ್ನು ತಳಮಟ್ಟದಿಂದ ಕಟ್ಟಿ ಬೆಳೆಸುವಲ್ಲಿ ಶ್ರೀ ಬಿ.ಎಸ್ ಯಡಿಯೂರಪ್ಪನವರ ಹೆಸರು ಅಗ್ರಪಂಕ್ತಿಯಲ್ಲಿ ನಿಲ್ಲುತ್ತದೆ. ಅವರು ರಾಜ್ಯ ಕಂಡ ಅತ್ಯಂತ ಜನಪ್ರಿಯ ಮುಖ್ಯಮಂತ್ರಿ ಮಾತ್ರವಲ್ಲದೆ, ಜನಪರ ಕಾಳಜಿಯುಳ್ಳ ಮುಖ್ಯಮಂತ್ರಿ ಎನಿಸಿಕೊಂಡವರು. ಅವರ ಜನಪರ ಹೋರಾಟಗಳು ಹಾಗೂ ಪಕ್ಷ ಸಂಘಟನೆಯ ಶಕ್ತಿಯೇ ರಾಜ್ಯದ ಮೂಲೆ ಮೂಲೆಯಲ್ಲಿ ಬಿಜೆಪಿಗೆ ಬಹುದೊಡ್ಡ ನೆಲೆ ಒದಗಿಸಿತು ಎಂದರೆ ಅತಿಶಯೋಕ್ತಿ ಅಲ್ಲ. 2008ರಲ್ಲಿ ಮೊಟ್ಟಮೊದಲ ಬಾರಿಗೆ ಕರ್ನಾಟಕ ಮಾತ್ರವಲ್ಲದೆ, ಇಡೀ ದಕ್ಷಿಣ ಭಾರತದಲ್ಲಿ ಬಿಜೆಪಿಯಿಂದ ಮುಖ್ಯಮಂತ್ರಿ ಗಾದಿಗೇರಿದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆ ಪಡೆಯುವುದರೊಂದಿಗೆ ಬಿಜೆಪಿಯ ಪಾಲಿಗೆ ಕರ್ನಾಟಕದ ಮೂಲಕ ದಕ್ಷಿಣ ಭಾರತದ ಹೆಬ್ಬಾಗಿಲು ತೆರೆಯಿತು. ಶಾಸಕರಾಗಿ, ಸಚಿವರಾಗಿ, ವಿರೋಧ ಪಕ್ಷದ ನಾಯಕರಾಗಿ, ಉಪಮುಖ್ಯಮಂತ್ರಿಯಾಗಿ, ಹಾಗೂ ಮುಖ್ಯಮಂತ್ರಿಯಾಗಿ ರಾಜಕೀಯದ ಎಲ್ಲಾ ಆಯಾಮಗಳಲ್ಲೂ ಅತ್ಯಂತ ಅನುಭವಿಯಾದ ಬಿಎಸ್‌ವೈಯವರ ಅವಧಿಯಲ್ಲಿ ನಾಡು ಕಂಡ ಅಭೂತಪೂರ್ವ ಅಭಿವೃದ್ಧಿ ಯೋಜನೆಯಿಂದ ಇಡೀ ದೇಶವೇ ಕರ್ನಾಟಕದತ್ತ ನೋಡುವಂತಾಗಿತ್ತು.

ಎಲ್ಲ ಸಮುದಾಯದ ಬೆಳವಣಿಗೆಯ ಶಕ್ತಿ ಯಡಿಯೂರಪ್ಪ: ಸಮಾಜದ ಎಲ್ಲ ಸಮುದಾಯದ ಬೆಳವಣಿಗೆ, ಕೈಗಾರಿಕೆ, ಕೃಷಿ, ತೋಟಗಾರಿಕೆ, ಮೀನುಗಾರಿಕೆ ಹೀಗೆ ಪ್ರತಿಯೊಂದು ಅಭಿವೃದ್ಧಿ ಯೋಜನೆ ಕೈಗೆತ್ತಿಕೊಂಡು, ರಾಜ್ಯದ ಜನಸೇವೆ ಮಾಡಿದವರು ಬಿಎಸ್‌ವೈಯವರು. ಒಬ್ಬ ಸಾಮಾನ್ಯ ಗುಮಾಸ್ತನಾಗಿ ವೃತ್ತಿ ಬದುಕು ಆರಂಭಿಸಿದ ಅವರು ಆನಂತರ ರಾಜ್ಯದ ಜನಪ್ರಿಯ ಮುಖ್ಯಮಂತ್ರಿಯಾಗಿ ಬೆಳೆದದ್ದು ಭಾರತೀಯ ಜನತಾ ಪಾರ್ಟಿಯ ಪ್ರತಿಯೊಬ್ಬ ಕಾರ್ಯಕರ್ತರಿಗೂ ಹೆಮ್ಮೆ ಹಾಗೂ ಸ್ಫೂರ್ತಿ. ರಾಜಕೀಯ ಇಚ್ಛಾಶಕ್ತಿ, ಪಕ್ಷ ಸಂಘಟನೆ ಹಾಗೂ ಹೋರಾಟಗಳ ಫಲವಾಗಿ ಇಡೀ ದಕ್ಷಿಣ ಭಾರತದಲ್ಲಿ ಕರ್ನಾಟಕವನ್ನು ಬಿಜೆಪಿಯ ಹೆಬ್ಬಾಲು ಎಂಬಂತೆ ಕಟ್ಟಿ ಬೆಳೆಸುವಲ್ಲಿ ಅವರದ್ದು ಮಹತ್ತರ ಪಾತ್ರ. 80 ರ ದಶಕದಲ್ಲಿ ಕೇವಲ ಇಬ್ಬರು ಶಾಸಕರನ್ನು ಹೊಂದಿದ್ದ ಬಿಜೆಪಿ 2008 ರಲ್ಲಿ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಅಧಿಕಾರಕ್ಕೇರಿತ್ತು ಎಂದರೆ ಅದರ ಹಿಂದಿದ್ದ ಬಹುದೊಡ್ಡ ಶಕ್ತಿ ನಿಸ್ಸಂಶಯವಾಗಿ ಯಡಿಯೂರಪ್ಪನವರು. ಅವರು ಮುಖ್ಯಮಂತ್ರಿಯಾಗಿದ್ದ ದಿನಗಳಲ್ಲಿ ಇಡೀ ರಾಜ್ಯದ ಅಭಿವೃದ್ಧಿಯ ಜೊತೆಗೆ ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅನನ್ಯ. ಅವರ ಅವಧಿಯಲ್ಲೇ ಕ್ಷೇತ್ರವು ಹಿಂದೆಂದೂ ಕಂಡಿರದಂತಹ ಅಭಿವೃದ್ಧಿಗೆ ಸಾಕ್ಷಿಯಾಯಿತು ಎಂದರೆ ಅತಿಶಯೋಕ್ತಿ ಅಲ್ಲ.

ಕರಾವಳಿ ಜಿಲ್ಲೆಗಳ ಪಾಲಿಗೆ ಸುವರ್ಣ ಯುಗ: ಯಡಿಯೂರಪ್ಪರವರ ಆಡಳಿತ ಅವಧಿಯು ಪ್ರತೀ ಬಾರಿ ಕರಾವಳಿಗೆ ಸುವರ್ಣ ಯುಗದಂತೆ ಇತ್ತು. ಅವರು ಯಾವುದೇ ಪ್ರದೇಶ, ಜಾತಿ, ಲಿಂಗಗಳನ್ನು ಕಡೆಗಣಿಸದೇ, ಸಮಗ್ರ ಅಭಿವೃದ್ಧಿಗೆ ಒತ್ತು ನೀಡಿದವರು. ಬಿಜೆಪಿಗೆ ಯಾವಾಗಲೂ ಬೆಂಬಲವಾಗಿರುವ ಹಾಗೂ ಹೆಚ್ಚಿನ ಸದಸ್ಯರನ್ನು ಗೆಲ್ಲಿಸಿಕೊಡುವ ಕರಾವಳಿಗೆ ಅವರ ಅವಧಿಯಲ್ಲಿ ಸಾಕಷ್ಟು ಅನುದಾನಗಳು ಹರಿದು ಬಂದಿವೆ. ಮುಖ್ಯವಾಗಿ ಬಜೆಟ್‌ನಲ್ಲಿ, ಹಾಗೂ ತುರ್ತು ಸಂದರ್ಭಗಳಲ್ಲಿ ಕರಾವಳಿ ಭಾಗಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಸಾರ್ವಜನಿಕ ರಸ್ತೆ, ನೀರು, ಒಳಚರಂಡಿ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಈ ಪ್ರದೇಶಗಳನ್ನು ಕೈಗಾರಿಕೆ, ಪ್ರವಾಸೋದ್ಯಮ, ಬಂದರು ಇತ್ಯಾದಿ ಕ್ಷೇತ್ರಗಳಲ್ಲಿ ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವಲ್ಲಿ ಬಿ.ಎಸ್. ಯಡಿಯೂರಪ್ಪ ಅವರ ಕೊಡುಗೆ ಅನನ್ಯ.

ಮಂಗಳೂರು ದಕ್ಷಿಣಕ್ಕೆ ಹರಿದು ಬಂದ ಅನುದಾನ:

ಸಣ್ಣ ನೀರಾವರಿ ಇಲಾಖೆಯಿಂದ ತೋಡುಗಳ ದುರಸ್ತಿಗೆ 315 ಲಕ್ಷ ರು., ಮೀನುಗಾರಿಕಾ ಕೊಂಡಿ ರಸ್ತೆ ದುರಸ್ತಿಗೆ 30 ಲಕ್ಷ ರು., ಕರಾವಳಿ ಅಭಿವೃದ್ಧಿ ಪ್ರಾಧಿಕಾರದಿಂದ 325 ಲಕ್ಷ ರು., ಪ್ರವಾಸೋದ್ಯಮದ ಅಭಿವೃದ್ಧಿಗೆ 50 ಲಕ್ಷ ರು., ಕಾಲು ಸಂಕ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯಿಂದ 268 ಲಕ್ಷ ರು., ಎಸ್‌ಸಿ ಕಾಲೊನಿ ಅಭಿವೃದ್ಧಿಗೆ 35 ಲಕ್ಷ ರು., ಎಸ್‌ಟಿ ಕಾಲೊನಿ ಅಭಿವೃದ್ಧಿಗೆ 15 ಲಕ್ಷ ರು., ಬಂದರು ತಡೆಗೋಡೆ ನಿರ್ಮಾಣಕ್ಕೆ 5 ಲಕ್ಷ ರು. ಅನುದಾನ ಬಂದಿದೆ. ಶಾಸಕರ ವಿಶೇಷ ನಿಧಿ (ಮಹಾನಗರ ಪಾಲಿಕೆ) 1,500 ಲಕ್ಷ ರು., ಶಾಸಕರ ವಿಶೇಷ ನಿಧಿ (ಲೋಕೋಪಯೋಗಿ) 1,000 ಲಕ್ಷ ರು., ಕೆರೆ ಅಭಿವೃದ್ಧಿಗೆ ಮೂಡಕ್ಕೆ 264 ಲಕ್ಷ ರು., ದೇವಸ್ಥಾನ ಅಭಿವೃದ್ಧಿಗೆ 80 ಲಕ್ಷ ರು., ಮಳೆ ಹಾನಿಗೆ 300 ಲಕ್ಷ ರು., ಶಿಕ್ಷಣ ಇಲಾಖೆಗೆ 33 ಲಕ್ಷ ರು., ಸಮಾಜ ಕಲ್ಯಾಣ ಇಲಾಖೆಯಿಂದ ಅಂಬೇಡ್ಕರ್‌ಭವನ ಅಭಿವೃದ್ಧಿಗೆ 80 ಲಕ್ಷ ರು., ಕುಡ್ಸೆಂಪ್ ಇಲಾಖೆಯಿಂದ ನೀರು ಸರಬರಾಜಿಗೆ 729 ಕೋಟಿ ರು., ಕುಡ್ಸೆಂಪ್ ಒಳಚರಂಡಿ ಅಭಿವೃದ್ಧಿಗೆ 217 ಕೋಟಿ ರು., ಮಳೆ ಹಾನಿಗೆ 900 ಲಕ್ಷ ರು., ಸಣ್ಣ ನೀರಾವರಿ ಮೂಲಕ ರಾಜಕಾಲುವೆಗಳಿಗೆ 370 ಕೋಟಿ ರು., ಅಲ್ಪಸಂಖ್ಯಾತ ಇಲಾಖೆಗೆ 20 ಕೋಟಿ ರು., ಶಿಕ್ಷಣ ಇಲಾಖೆಗೆ 13 ಕೋಟಿ ರು., ಆರೋಗ್ಯ ಇಲಾಖೆಗೆ 35 ಕೋಟಿ ರು., ಯುವಜನ ಸಬಲೀಕರಣ ಇಲಾಖೆಗೆ 370 ಲಕ್ಷ ರು., ಪ್ರವಾಸೋದ್ಯಮ ಇಲಾಖೆಗೆ 100 ಲಕ್ಷ ರು., ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 10 ಕೋಟಿ ರು., ಹೀಗೆ ಸರ್ವ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಮೂಲಕ ಒಟ್ಟಾರೆಯಾಗಿ 2019 ರಿಂದ 2021 ರ ವರೆಗೆ ಮಂಗಳೂರು ನಗರ ದಕ್ಷಿಣಕ್ಕೆ ಸುಮಾರು 5,200 ಕೋಟಿ ರು.ಗೂ ಹೆಚ್ಚು ಅನುದಾನ ನೀಡಿದ್ದ ಹೆಗ್ಗಳಿಕೆ ಅವರದ್ದು.

ನಾನು ಮೊದಲ ಬಾರಿ ಶಾಸಕನಾದಾಗ....

ಮೊದಲ ಬಾರಿ ಶಾಸಕನಾಗಿದ್ದ ನಾನು, ಕ್ಷೇತ್ರದ ಜನರ ಬೇಡಿಕೆ, ಆಶೋತ್ತರಗಳನ್ನು ಈಡೇರಿಸುವ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿ ಬಿ.ಎಸ್.ವೈ ಯವರ ಬಳಿ ಕಡತ ಸಹಿತ ಹೋದಾಗೆಲ್ಲ ಅತ್ಯಂತ ಆತ್ಮೀಯವಾಗಿ ಮಾತನಾಡಿಸಿ, ಜನಸೇವೆ ಹಾಗೂ ಅಭಿವೃದ್ಧಿಗೆ ನನ್ನ ಬೆಂಬಲ ಸದಾ ಇರುತ್ತದೆ ಎಂದು ಯಾವುದೇ ವಿಳಂಬವಿಲ್ಲದೇ ಅಗತ್ಯ ಅನುದಾನ ಮಂಜೂರು ಮಾಡಿ ಕೊಡುತ್ತಿದ್ದರು. ಅಂತಹ ಸಹಕಾರ ದಿಂದಲೇ ಮಂಗಳೂರು ನಗರದ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ, ರಸ್ತೆ, ಚರಂಡಿ, ರಾಜಕಾಲುವೆ, ಶಾಲಾ ಕಟ್ಟಡಗಳು, ಆರೋಗ್ಯ ಕೇಂದ್ರಗಳು, ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಗಿವೆ.



ಜಪ್ಪಿನಮೊಗರು ಎನ್ ಎಚ್ 66ರಿಂದ ನಗರದ ಮೋರ್ಗನ್ ಗೇಟ್ ವರೆಗೆ ಮಹಾಕಾಳಿಪಡ್ಪು ರೈಲ್ವೆ ಕೆಳ ಸೇತುವೆ ನಿರ್ಮಾಣದಿಂದ ಸ್ಥಳೀಯರು ಸೇರಿದಂತೆ ಸಾರ್ವಜನಿಕರು ಅನೇಕ ವರ್ಷಗಳಿಂದ ಅನುಭವಿಸುತ್ತಿದ್ದ ಬಹು ದೊಡ್ಡ ಸಮಸ್ಯೆಗೆ ಪರಿಹಾರ ಸಿಕ್ಕಿದ್ದು ಎಲ್ಲರ ಮೊಗದಲ್ಲಿ ಸಂತಸ ತರಿಸಿದೆ. ಈ ಮಹತ್ಕಾರ್ಯಕ್ಕೂ ಅನುದಾನ ಬಿಡುಗಡೆ ಗೊಳಿಸಿದ್ದು ಯಡಿಯೂರಪ್ಪನವರ ಸರಕಾರ ಎಂಬುದನ್ನು ಮರೆಯುವಂತಿಲ್ಲ.

ಜಗತ್ತನ್ನೇ ತಲ್ಲಣಗೊಳಿಸಿದ್ದ ಕೋವಿಡ್ ಮಹಾಮಾರಿ ಕಾಲದಲ್ಲಿ ಕ್ಷೇತ್ರದ ಜನಸಾಮಾನ್ಯರಿಗೆ ಯಾವುದೇ ತೊಂದರೆಯಾಗದಂತೆ ಸಕಲ ಕ್ರಮಕೈಗೊಳ್ಳುವ ಬಗ್ಗೆ ಜನಪ್ರತಿನಿಧಿಗಳ, ಅಧಿಕಾರಿಗಳ ವಿಡಿಯೋ ಕಾನ್ಫರೆನ್ಸ್ ಸಭೆ ನಡೆಸಿ ಅಗತ್ಯ ಸೂಚನೆ, ಅನುದಾನ, ಒದಗಿಸುವಲ್ಲಿ ತೀವ ಕಾಳಜಿ ವಹಿಸಿದ್ದರು. ಕ್ಷೇತ್ರದಲ್ಲಿ ಆರ್ಥಿಕ ಸಂಕಷ್ಟಕ್ಕೀಡಾಗಿದ್ದ ಆಟೋ-ಟ್ಯಾಕ್ಸಿ ಚಾಲಕರು, ನೇಕಾರರು, ಹೂ ಬೆಳೆಗಾರರು ಮಾರಾಟಗಾರರು, ಶಿಕ್ಷಕರು ಸೇರಿದಂತೆ ಬಹುತೇಕ ಎಲ್ಲ ವರ್ಗದ ಜನರಿಗೆ ಸಿಎಂ ಯಡಿಯೂರಪ್ಪ ಅವರು ಪರಿಹಾರ ಘೋಷಿಸುವ ಮಹತ್ವದ ಕೆಲಸ ಮಾಡಿದರು.



ಮಾಜಿ ಸಿಎಂ ಯಡಿಯೂರಪ್ಪ ಜೊತೆ ಶಾಸಕ ವೇದವ್ಯಾಸ್ ಕಾಮತ್ ಮತ್ತಿತರರು

ರಾಜ್ಯದ ಅಭಿವೃದ್ಧಿಯ ಹರಿಕಾರ ಯಡಿಯೂರಪ್ಪ

ರಾಜ್ಯದ ಅಭಿವೃದ್ಧಿಯ ಹರಿಕಾರ, ಸೋಲರಿಯದ ನಾಯಕ. ದಕ್ಷಿಣ ಭಾರತದಲ್ಲಿ ಭಾರತೀಯ ಜನತಾ ಪಕ್ಷದ ಹೆಬ್ಬಾಗಿಲನ್ನು ತೆರೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಧೀಮಂತ ನಾಯಕ ಬಿ ಎಸ್ ಯಡಿಯೂರಪ್ಪನವರು ತಮ್ಮ ರಾಜಕೀಯ ಜೀವನದಲ್ಲಿ 50 ವರ್ಷಗಳನ್ನು ಪೂರೈಸಿರುವ ಸಂದರ್ಭದಲ್ಲಿ ಅವರನ್ನು ಗೌರವಿಸುವ ಸಮಾವೇಶ ನಡೆಯುತ್ತಿರುವುದು ಶ್ಲಾಘನೀಯ. ಅವರ 50 ವರ್ಷಗಳ ರಾಜಕೀಯ ಜೀವನವು ಇಂದಿನ ರಾಜಕಾರಣಿಗಳಿಗೆ ಕಲಿಕೆಯ ವಸ್ತುವಾಗಿದೆ. 1976ರಲ್ಲಿ ಗ್ರಾಮ ಮಟ್ಟದಲ್ಲಿ ರಾಜಕೀಯ ಜೀವನವನ್ನು ಆರಂಭಿಸಿರುವ ಅವರು 2007ರಿಂದ 2021 ರ ವರೆಗೆ ನಾಲ್ಕು ಬಾರಿ ಮುಖ್ಯ ಮಂತ್ರಿಯಾಗಿ, ಒಮ್ಮೆ ಉಪ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದು ಆ ಅವಧಿಯಲ್ಲಿ ಅವರು ರಾಜ್ಯಕ್ಕೆ ನೀಡಿರುವ ಕೊಡುಗೆ ಅಪಾರ , ಯಡಿಯೂರಪ್ಪನವರು ಮುಖ್ಯ ಮಂತ್ರಿಯಾಗಿದ್ದ ಅವಧಿಯಲ್ಲಿ ಮೂಡುಬಿದಿರೆ ಕ್ಷೇತ್ರಕ್ಕೆ ಸುಮಾರು 2000 ಕೋಟಿ ಅನುದಾನ ನೀಡಿದ್ದು ಇದರಿಂದ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ನಡೆದಿದೆ. ಮೂಡುಬಿದಿರೆಯಲ್ಲಿ ಪ್ರಜಾ ಸೌಧ ನಿರ್ಮಾಣ ಸೇರಿದಂತೆ ಹೆಚ್ಚಿನ ಅಭಿವೃದ್ಧಿ ಕಾರ್ಯಗಳಿಗೆ ಅನುದಾನವನ್ನು ಒದಗಿಸಿಕೊಟ್ಟಿದ್ದಾರೆ. ತಮ್ಮ 50 ವರ್ಷಗಳ ಸುಧೀರ್ಘ ರಾಜಕೀಯ ಅವಧಿಯಲ್ಲಿ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಹೆಚ್ಚಿನ ಕೊಡುಗೆಯನ್ನು ನೀಡಿದ್ದಾರೆ. ತಮ್ಮ ಮಾತಿನ ಮೂಲಕ ಆಡಳಿತ ಪಕ್ಷವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದು ಇಂದಿನ ರಾಜಕಾರಣಿಗಳು ಅವರಿಂದ ಕಲಿಯುವಂತಹದ್ದು ಬಹಳಷ್ಟಿದೆ. ತಮ್ಮ ಅಧಿಕಾರದ ಅವಧಿಯಲ್ಲಿ ಕರಾವಳಿ ಜಿಲ್ಲೆಯಲ್ಲಿ ಹೆಚ್ಚಿನ ದೇವಸ್ಥಾನಗಳಿಗೆ, ಅನುದಾನ ಬಿಡುಗಡೆ ಮಾಡಿ ಶಕ್ತಿ ತುಂಬಿದಿದಾರೆ



• **ಉಮಾನಾಥ ಕೋಟ್ಯಾನ್,** ಶಾಸಕರು ಮೂಲ್ಕಿ ಮೂಡುಬಿದಿರೆ ಕ್ಷೇತ್ರ

ರಾಜಾಹುಲಿ ಬಿಎಸ್‌ವೈ ಒಬ್ಬ ವ್ಯಕ್ತಿಯಲ್ಲ, ಕರ್ನಾಟಕದ ಶಕ್ತಿ: ಸತೀಶ್ ಕುಂಪಲ

ಕರ್ನಾಟಕದ ಮಂಡ್ಯ ಜಿಲ್ಲೆಯ ಬೂಕನಕೆರೆಯಲ್ಲಿ ಫೆಬ್ರವರಿ 27, 1943 ರಲ್ಲಿ ಜನಿಸಿದ ಯಡಿಯೂರಪ್ಪ ರವರು ತಮ್ಮ ಸಾಮಾಜಿಕ, ರಾಜಕೀಯ ಜೀವನವನ್ನು ಶಿವಮೊಗ್ಗದ ಶಿಕಾರಿಪುರದಲ್ಲಿ ಆರಂಭಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಗರಡಿಯಲ್ಲಿ ಬೆಳೆದ ಅವರು ಸಂಘದ ಶಿಸ್ತು, ಬದ್ಧತೆಯನ್ನು ಕರಗತವಾಗಿಸಿ ರಾಜಕೀಯದ ಎಲ್ಲಾ ಮಜಲುಗಳಲ್ಲಿ ಜವಾಬ್ದಾರಿಯನ್ನು ನಿರ್ವಹಿಸಿ ಉನ್ನತ ಸ್ಥಾನಕ್ಕೆ ಏರಿದ ದೀಮಂತ ನಾಯಕ.

ಪುರಸಭಾ ಸದಸ್ಯರಾಗಿ ರಾಜಕೀಯದಲ್ಲಿ ತಮ್ಮ ಹೆಜ್ಜೆಯನ್ನಿಟ್ಟು, ಅಧ್ಯಕ್ಷರಾಗಿ, ಶಾಸಕರಾಗಿ, ಸಂಸದರಾಗಿ, ವಿಪಕ್ಷ ನಾಯಕರಾಗಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಜನನಾಯಕನಾಗಿ ಹೊರಹೊಮ್ಮಿದವರು. ಭಾರತೀಯ ಜನತಾ ಪಾರ್ಟಿಯನ್ನು ರಾಜ್ಯದಲ್ಲಿ ಭದ್ರವಾಗಿ ತಳವೂರಲು ಸೈಕಲ್ ಮೂಲಕ ಪ್ರವಾಸ ನಡೆಸಿ ಬಿಜೆಪಿಗೆ ದಕ್ಷಿಣದಲ್ಲಿ ಅಧಿಕಾರದ ಹೆಬ್ಬಾಗಿಲನ್ನು ತೆರೆಯಲು ಕಾರಣೀಭೂತರಾದ ದಣಿವರಿಯದ ನಾಯಕ ರಾಜಾಹುಲಿ ಬಿ.ಎಸ್.ವೈ. ಮುಖ್ಯಮಂತ್ರಿಯಾಗಿ ಅವರು ರಾಜ್ಯಕ್ಕೆ ನೀಡಿರುವ ಕೊಡುಗೆ ಅಪಾರ, ಪ್ರಪ್ರಥಮ ಬಾರಿಗೆ ಕೃಷಿ ಬಜೆಟ್ ನೀಡಿದವರು. ಹೆಣ್ಣು ಮಕ್ಕಳಿಗೆ ಗೃಹಲಕ್ಷ್ಮೀ ಯೋಜನೆ ನೀಡಿದವರು. ಶಾಲಾ ಮಕ್ಕಳಿಗೆ ಸೈಕಲ್ ನೀಡಿದವರು. 35,000 ಸಾವಿರ ಕೋಟಿ ರು. ಆಸುಪಾಸು ಇದ್ದ ರಾಜ್ಯದ ಬಜೆಟನ್ನು ಲಕ್ಷ ಕೋಟಿ ರು.ಗೆ ತಂದವರು. ಆ ಮೂಲಕ ರಾಜ್ಯದಲ್ಲಿ ಅಭಿವೃದ್ಧಿಗೆ ಶರವೇಗ ನೀಡಿದ ಸರದಾರ ಬಿ.ಎಸ್.ವೈ.



ಸುವರ್ಣ ಗ್ರಾಮ ಯೋಜನೆ ಮೂಲಕ ಗ್ರಾಮಗಳ ಸಶಕ್ತೀಕರಣ, ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಮೂಲಕ ಹಳ್ಳಿ ಹಳ್ಳಿಗಳ ಸಂಪರ್ಕ ರಸ್ತೆಗಳ ನಿರ್ಮಾಣ, ಪ್ರಪ್ರಥಮ ಬಾರಿಗೆ ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ಮಠ, ಮಂದಿರಗಳಿಗೆ ಧಾರ್ಮಿಕ ದತ್ತಿ ಇಲಾಖೆ ಮೂಲಕ ಆರ್ಥಿಕ ಅನುದಾನ, ಪ್ರಾಕೃತಿಕ ವಿಕೋಪದಲ್ಲಿ ನಿವೇಶನ ಕಳಕೊಂಡವರಿಗೆ ಮನೆ ನಿರ್ಮಾಣಕ್ಕೆ 5 ಲಕ್ಷ ರುಪಾಯಿ, ಕೋರೋನಾ ಸಂಧರ್ಭದಲ್ಲಿ, ರಿಕ್ಷಾ ಚಾಲಕರಿಗೆ, ಕಾರ್ಮಿಕರಿಗೆ 5,000 ಸಾವಿರ ರುಪಾಯಿ ಖಾತೆಗೆ ಹಾಕುವುದರಮೂಲಕಬಡವರಪಾಲಿನಕಾಮಧೇನುವಾಗಿ ಅಧಿಕಾರ ನಡೆಸಿದವರು. ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ವಿಶೇಷ ವ್ಯಾಮೋಹವನ್ನು ಇಟ್ಟವರು ಬಿ.ಎಸ್.ವೈ. ಪ್ರಪ್ರಥಮ ಬಾರಿಗೆ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ 200 ಕೋಟಿ ರು. ಮೊತ್ತವನ್ನು ಮಂಗಳೂರು ಮಹಾನಗರ ಪಾಲಿಕೆಗೆ ನೀಡುವುದರ ಮೂಲಕ ನಗರದ ಅಭಿವೃದ್ಧಿಗೆ ಮುನ್ನುಡಿ ಇರಿಸಿದವರು. ಶ್ರಮಜೀವಿ ಮೀನುಗಾರರ ಸಂಕಷ್ಟಗಳಿಗೆ ಆಸರೆಯಾದವರು. ಮೀನುಗಾರರ ಸಾಲಮನ್ನಾ, ಮತ್ಸ ಯೋಜನೆ, ರಿಯಾಯಿತಿ ದರದಲ್ಲಿ ಡಿಸೇಲ್, ಬೋಟ್ ಖರೀದಿಗೆ ಸಬ್ಸಿಡಿ, ಮೂರ್ತೆದಾರರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ಇನ್ನೂ ಹಲವಾರು ಯೋಜನೆಗಳನ್ನು ನೀಡಿರುವ ಅದ್ಭುತ ನಾಯಕ, ಕಾಯಕಯೋಗಿ ಯಂತೆ ಕಾಲಿಗೆ ಚಕ್ರ ಕಟ್ಟಿದಂತೆ ಪಕ್ಷದ ಸಂಘಟನೆ ಮತ್ತು ಅಧಿಕಾರದ ಪಟ್ಟವನ್ನು ಸಮರ್ಥವಾಗಿ ಮತ್ತು ಜನಾನುರಾಗಿಯಾಗಿ ನಿರ್ವಹಿಸಿದವರು ನಮ್ಮ ಯಡಿಯೂರಪ್ಪಾಜಿ.

ಬಿಜೆಪಿಗೆ ದಕ್ಷಿಣದಲ್ಲಿ ಸಂಘಟನೆಯ ಬಲ ಮತ್ತು ಅಧಿಕಾರದ ಪೀಠವನ್ನು ನೀಡಿರುವ ಭಗೀರಥ ಬಿ.ಎಸ್. ವೈ. ಯವರ ಸಾಮಾಜಿಕ ಜೀವನದ ಸುವರ್ಣ ಮಹೋತ್ಸವವನ್ನು ಅಭಿಮಾನೋತ್ಸವವಾಗಿ ಮೇ 9 ರಂದು ಚಿತ್ರದುರ್ಗದಲ್ಲಿ ಅಭೂತಪೂರ್ವವಾಗಿ ಆಚರಿಸಲು ನಿರ್ಧರಿಸಿರುವುದು ಮಹಾ ಸಂತೋಷದ ವಿಚಾರ. ನಾಡು ಕಂಡ ಅಪರೂಪದ ನಾಯಕ ರಾಜಾಹುಲಿ ಬೂಕನಕೆರೆ ಸಿದ್ಧಲಿಂಗಪ್ಪ ಯಡಿಯೂರಪ್ಪ ವ್ಯಕ್ತಿಯಲ್ಲ ನಾಡಿನ ಶಕ್ತಿ.

• **ಸತೀಶ್ ಕುಂಪಲ,** ಜಿಲ್ಲಾಧ್ಯಕ್ಷರು, ಬಿಜೆಪಿ ದಕ್ಷಿಣ ಕನ್ನಡ

ಬಂಟ್ವಾಳದ ಅಭಿವೃದ್ಧಿಗೆ ಬಿಎಸ್‌ವೈ ಕೊಡುಗೆ ಜನಮನದಲ್ಲಿ ಅಚ್ಚಳಿಯದ ಹೆಸರು

ಬಂಟ್ವಾಳ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಹಲವು ವರ್ಷಗಳಲ್ಲಿ ನಡೆದ ಅನೇಕ ಅಭಿವೃದ್ಧಿ ಯೋಜನೆಗಳು ಜನರ ಬದುಕಿನಲ್ಲಿ ಮಹತ್ವದ ಬದಲಾವಣೆ ತರಲು ಕಾರಣವಾಗಿವೆ. ಬಂಟ್ವಾಳದ ಅಭಿವೃದ್ಧಿಗೆ ಸಾಕ್ಷಿಗಳಾಗಿರುವ ಈ ಯೋಜನೆಗಳಲ್ಲಿ ಹಲವು ಯೋಜನೆಗಳು ಬಿ.ಎಸ್.ಯಡಿಯೂರಪ್ಪ ಅವರ ಅಧಿಕಾರವಧಿಯಲ್ಲಿ ಎನ್ನುವುದು ಉಲ್ಲೇಖನೀಯ.

ಯಡಿಯೂರಪ್ಪ ರವರು ಉಪಮುಖ್ಯಮಂತ್ರಿ ಹಾಗೂ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಅವರ ಮಾರ್ಗದರ್ಶನದಿಂದ ಬಂಟ್ವಾಳ ಕ್ಷೇತ್ರಕ್ಕೆ ಒದಗಿದ ಅನೇಕ ಅಭಿವೃದ್ಧಿ ಯೋಜನೆಗಳನ್ನು ಬಂಟ್ವಾಳ ಕ್ಷೇತ್ರದ ಜನತೆ ಈಗಲೂ ಸ್ಮರಿಸುತ್ತಿದ್ದಾರೆ.

ಬಂಟ್ವಾಳದಲ್ಲಿ ಅಗ್ನಿಶಾಮಕ ದಳ ಸ್ಥಾಪನೆಯೂ ಜನರ ಬಹುಕಾಲದ ಬೇಡಿಕೆಯಾಗಿದ್ದು, ಈ ಅವಧಿಯಲ್ಲಿ ಅದು ನೆರವೇರಿತು. ಇದೀಗ ಬಂಟ್ವಳ, ವಿಟ್ಲ, ಪುತ್ತೂರು ಬೆಳ್ತಂಗಡಿ ಹಾಗೂ ಮಂಗಳೂರು ಆಸುಪಾಸಿನಲ್ಲಿ ನಡೆಯುವ ದುರಂತಗಳಿಗೆ ಈ ಅಗ್ನಿ ಶಾಮಕ ಠಾಣೆ ಆಪತ್ ಬಾಂಧವ ಎಂಬಂತಿದೆ. ಗ್ರಾಮೀಣಾಭಿವೃದ್ಧಿಗೂ ವಿಶೇಷ ಒತ್ತು ನೀಡಲಾಗಿತ್ತು. ಮೂಲಸೌಕರ್ಯ ಅಭಿವೃದ್ಧಿಯಲ್ಲಿಯೂ ಕ್ಷೇತ್ರಕ್ಕೆ ದೊಡ್ಡಮಟ್ಟದ ಯೋಜನೆಗಳು ಬಂದವು. ಸುಮಾರು 42 ಕೋಟಿ ರುಪಾಯಿ ವೆಚ್ಚದ ಕರ್ಪೆ ಕುಪ್ಪೆಪದವು ಸಂಪರ್ಕ ಸೇತುವೆ ಹಾಗೂ ಕಿಂಡಿ ಅಣೆಕಟ್ಟು ಯೋಜನೆ, ಬಂಟ್ವಾಳ ಪುರಸಭೆಗೆ ವಿಶೇಷ ಅನುದಾನ ಒದಗಿಸಿ ನಗರಾಭಿವೃದ್ಧಿಗೂ ಉತ್ತೇಜನ ನೀಡಲಾಯಿತು. ಈ ಎಲ್ಲಾ ಯೋಜನೆಗಳ ಹಿನ್ನೆಲೆಗಳಲ್ಲಿ ಆಯಾ ಕಾಲದಲ್ಲಿ ಶಾಸಕರಾಗಿದ್ದ ಮಾಜಿ ಸಚಿವ ಬಿ.ನಾಗರಾಜ ಶೆಟ್ಟಿ ಹಾಗೂ ಶಾಸಕ ರಾಜೇಶ್ ನಾಯ್ಕ್ ಅವರ ಪ್ರಯತ್ನಗಳು ಹಾಗೂ ಯಡಿಯೂರಪ್ಪ ಸರ್ಕಾರದ ಬೆಂಬಲ ಪ್ರಮುಖವಾಗಿತ್ತು ಎಂಬುದು ಹಲವರ ಅಭಿಪ್ರಾಯ. ಬಿ.ಎಸ್ .ಯಡಿಯೂರಪ್ಪ ಅವರು ಅಭಿವೃದ್ಧಿ ಯೋಜನೆಗಳ ಮೂಲಕ ಬಂಟ್ವಾಳ ಕ್ಷೇತ್ರಕ್ಕೆ ಹೊಸ ರೂಪ ನೀಡಿದ ಅವಧಿಯನ್ನು ಜನರು ಈಗಲೂ ನೆನಪಿಸಿಕೊಳ್ಳುತ್ತಿದ್ದಾರೆ.



ರಾಜ್ಯ ಕಂಡ ಅದ್ವಿತೀಯ ಕನಸುಗಾರ, ಹೋರಾಟಗಾರ, ನಿಜನಾಯಕ, ಕೆಚ್ಚೆದೆಯ ಮುಖ್ಯಮಂತ್ರಿ ಬಿಎಸ್.ಯಡಿಯೂರಪ್ಪ ಎಂದು ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಹೇಳಿದ್ದಾರೆ. ಪಕ್ಷ ಸಂಘಟನೆಯಿಂದ ತೊಡಗಿ ತನ್ನ ಹೋರಾಟ ಪ್ರವೃತ್ತಿಯಿಂದಲೇ ಅವರು ಮುಖ್ಯಮಂತ್ರಿಯಾಗಿದ್ದು, ಅದು ಅವರ ನಾಯಕತ್ವಕ್ಕೆ ನೈಜ ಸಾಕ್ಷಿ . ಯಡಿಯೂರಪ್ಪ ಅವರು, ಕರ್ನಾಟಕದ ಉಪಮುಖ್ಯಮಂತ್ರಿ ಹಾಗೂ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಡೆಸಿದ ಹಲವು ಅಭಿವೃದ್ಧಿ ಯೋಜನೆಗಳು ದೂರದೃಷ್ಟಿಯ ಯೋಜನೆಗಳಾಗಿದ್ದವು. ಬಂಟ್ವಾಳ ಕ್ಷೇತ್ರದ ಆರೋಗ್ಯ, ಶಿಕ್ಷಣ, ಮೂಲಭೂತ ಸೌಕರ್ಯಗಳ ಸುಧಾರಣೆಗಳಿಗೆ ಹಲವು ರೀತಿಯ ಕೊಡುಗೆಗಳನ್ನು ನೀಡಿರುವ ಯಡಿಯೂರಪ್ಪ ಅವರನ್ನು ಬಂಟ್ವಾಳದ ಜನತೆ ಸದಾ ನೆನಪಿನಲ್ಲಿ ಇರಿಸುತ್ತದೆ.

ಕರ್ನಾಟಕದಲ್ಲಿ ಬಿಜೆಪಿಯ ಶಿಲ್ಪಿ: ಬಿ.ಎಸ್. ಯಡಿಯೂರಪ್ಪ: ಹರೀಶ್ ಪೂಂಜ

ಬೆಳ್ತಂಗಡಿಯ ಚಿತ್ರಣವನ್ನೇ ಬದಲಿಸಿದ ನಾಯಕ | ಅಭಿವೃದ್ಧಿಗೆ ಸಲ್ಲಿಸಿದ ಪ್ರತಿ ಬೇಡಿಕೆಗೂ ಯಡಿಯೂರಪ್ಪ ಮುಕ್ತ ಮನಸ್ಸಿನಿಂದ ಸಹಿ

ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ, ಅಕ್ಷರಶಃ ಬಿಎಸ್‌ವೈ ಎಂದೇ ಕರ್ನಾಟಕದ ಮನೆಮಾತು. ಅಕ್ಕಿ ಗಿರಣಿಯ ಗುಮಾಸ್ತನಾಗಿ ಜೀವನ ಆರಂಭಿಸಿದ ಅವರು, ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ರಾಜ್ಯದ ಚುಕ್ಕಾಣಿ ಹಿಡಿದದ್ದು ಸಾಮಾನ್ಯ ಸಾಧನೆಯಲ್ಲ.

1983ರಲ್ಲಿ ಕೇವಲ 2 ಶಾಸಕರನ್ನು ಹೊಂದಿದ್ದ ಬಿಜೆಪಿಯನ್ನು 2008ರಲ್ಲಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ತಂದು ನಿಲ್ಲಿಸಿದ ಕೀರ್ತಿ ಯಡಿಯೂರಪ್ಪ ಅವರದು. ದಕ್ಷಿಣ ಭಾರತದಲ್ಲಿ ಬಿಜೆಪಿ ಗೆಲ್ಲಲು ಸಾಧ್ಯವೇ ಇಲ್ಲ ಎಂಬ ಮಾತನ್ನು ಸುಳ್ಳು ಮಾಡಿ, ಕರ್ನಾಟಕವನ್ನು ಬಿಜೆಪಿಯ ದಕ್ಷಿಣದ ಹೆಬ್ಬಾಗಿಲು ಆಗಿ ರೂಪಿಸಿದ ಶಿಲ್ಪಿ ಯಡಿಯೂರಪ್ಪ. ತಳಮಟ್ಟದಿಂದ ಮುಖ್ಯಮಂತ್ರಿ ಗದ್ದುಗೆಯವರೆಗಿನ ಅವರ 50 ವರ್ಷಗಳ ಪಯಣ, ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತನಿಗೂ ಸ್ಫೂರ್ತಿಯ ಸೆಲೆ.

ಸಮಗ್ರ ಕರ್ನಾಟಕದ ಏಳಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು ಜಾರಿಗೊಳಿಸಿದ ಯೋಜನೆಗಳು ಐತಿಹಾಸಿಕ.

ರೈತರಿಗೆ ವರದಾನ: 10 ಎಚ್‌ಪಿ ವರೆಗಿನ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, ₹25,000 ಕೋಟಿ ರು. ಕೃಷಿ ಸಾಲಮನ್ನಾ, ಭತ್ತ-ರಾಗಿಗೆ ಬೆಂಬಲ ಬೆಲೆ ಹೆಚ್ಚಳ. ಅವರ ಅವಧಿಯಲ್ಲಿ ನೀರಾವರಿ ಬಜೆಟ್ ₹2,000 ಕೋಟಿಯಿಂದ ₹17,000 ಕೋಟಿಗೆ ಏರಿತು.

ಭಾಗ್ಯಲಕ್ಷ್ಮಿ ಯೋಜನೆ: ಹೆಣ್ಣುಮಗು ಜನಿಸಿದರೆ ₹10,000 ಬಾಂಡ್, 18 ವರ್ಷಕ್ಕೆ ₹1 ಲಕ್ಷ. 20 ಲಕ್ಷ ಹೆಣ್ಣುಮಕ್ಕಳ ಬದುಕಿಗೆ ಭದ್ರತೆ.

ಮೂಲಸೌಕರ್ಯ ಕ್ರಾಂತಿ: ಬೆಂಗಳೂರು ಮೆಟ್ರೋ ಹಂತ-1ಕ್ಕೆ ಚಾಲನೆ, 8-ಪಥದ ಬೆಂಗಳೂರು-ಮೈಸೂರು ಹೆದ್ದಾರಿಗೆ ಅಡಿಗಲ್ಲು, ಮಂಗಳೂರು ವಿಮಾನ ನಿಲ್ದಾಣದ ಹೊಸ ಟರ್ಮಿನಲ್, ಅಪ್ಪರ್‌ಭದ್ರಾ ಮತ್ತು ಎತ್ತಿನಹೊಳೆ ಯೋಜನೆಗಳಿಗೆ ವೇಗ. ಬೆಂಗಳೂರು ಸಬ್-ಅರ್ಬನ್ ರೈಲು, ಪೆರಿಫೆರಲ್ ರಿಂಗ್ ರಸ್ತೆ, ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ ಯೋಜನೆಗಳಿಗೆ ಅನುಮೋದನೆ ನೀಡಿ ಮುಂದಿನ ಪೀಳಿಗೆಗೆ ದೂರದೃಷ್ಟಿಯ ಕೊಡುಗೆ ನೀಡಿದರು.

ಜಾಗತಿಕ ಮನ್ನಣೆ: 2010ರ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ₹3.92 ಲಕ್ಷ ಕೋಟಿ ಹೂಡಿಕೆ ಪ್ರಸ್ತಾಪ.

ಸಾಮಾಜಿಕ ಭದ್ರತೆ: ಶಾದಿ ಭಾಗ್ಯ, ಸಂಧ್ಯಾ ಸುರಕ್ಷಾ ಪಿಂಚಣಿ, ಕಿಸಾನ್ ಸಮ್ಮಾನ್ ಅಡಿ ರಾಜ್ಯದ ₹4,000 + ಕೇಂದ್ರದ ₹6,000 ಸೇರಿ ವರ್ಷಕ್ಕೆ ₹10,000.

ವಿಪತ್ತು ನಿರ್ವಹಣೆ: ಕೋವಿಡ್‌ನ ಎರಡೂ ಅಲೆಗಳಲ್ಲಿ ಬೆಂಗಳೂರನ್ನು ಲಸಿಕಾ ಅಭಿಯಾನದಲ್ಲಿ ಮುಂಚೂಣಿಗೆ ತಂದರು. 2019ರ ಉತ್ತರ ಕರ್ನಾಟಕ ಪ್ರವಾಹಕ್ಕೆ ₹1,869 ಕೋಟಿ ತುರ್ತು ಪರಿಹಾರ.

ಅಕ್ಕಿ ಗಿರಣಿಯ ಗುಮಾಸ್ತನಿಂದ ನಾಲ್ಕು ಬಾರಿ ಮುಖ್ಯಮಂತ್ರಿಯಾಗುವವರೆಗಿನ ಬಿಎಸ್‌ವೈ ಅವರ 50 ವರ್ಷಗಳ ರಾಜಕೀಯ ಪಯಣ ಆಧುನಿಕ ಕರ್ನಾಟಕವನ್ನು ರೂಪಿಸಿದೆ. ಅವರಿಲ್ಲದಿದ್ದರೆ, ದಕ್ಷಿಣ ಭಾರತದಲ್ಲಿ ಬಿಜೆಪಿ ವಿಸ್ತರಣೆಯ ಕನಸು ನನಸಾಗುತ್ತಿರಲಿಲ್ಲ. 2028ರಲ್ಲಿ ಕರ್ನಾಟಕದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ. ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಸ್ಥಾಪನೆಯಾಗುವ ವಿಶ್ವಾಸವಿದೆ. ಅದಕ್ಕೆ ಸ್ಫೂರ್ತಿ ಮತ್ತು ಶಕ್ತಿ ಬಿ.ಎಸ್. ಯಡಿಯೂರಪ್ಪ ಅವರೇ.

ಮೇ 1ರಂದು ನಡೆಯುವ ಅವರ 50 ವರ್ಷಗಳ ರಾಜಕೀಯ ಪಯಣದ ಸುವರ್ಣ ಸಂಭ್ರಮದಲ್ಲಿ ನಾವೆಲ್ಲರೂ ಪಾಲ್ಗೊಂಡು, ಕರ್ನಾಟಕದ ಈ ಅಪ್ರತಿಮ ನಾಯಕನಿಗೆ ಗೌರವ ಸಲ್ಲಿಸೋಣ

ಬೆಳ್ತಂಗಡಿಯ ಚಿತ್ರಣವನ್ನೇ ಬದಲಿಸಿದ ನಾಯಕ: 2007, 2008-2011 ಮತ್ತು 2019-2021ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಯಡಿಯೂರಪ್ಪ ಅವರು ಬೆಳ್ತಂಗಡಿ ವಿಧಾನಸಭಾ ಕ್ಷೇತ್ರಕ್ಕೆ ಸುಮಾರು ₹3,500 ಕೋಟಿ ರು. ಅನುದಾನ ನೀಡಿ ತಾಲೂಕಿನ ಭಾಗ್ಯರೇಖೆಯನ್ನೇ ಬದಲಿಸಿದರು. ಶಾಸಕ ಹರೀಶ್ ಪೂಂಜ ಅವರು ತಾಲೂಕಿನ ಅಭಿವೃದ್ಧಿಗೆ ಸಲ್ಲಿಸಿದ ಪ್ರತಿಯೊಂದು ಬೇಡಿಕೆಗೂ ಯಡಿಯೂರಪ್ಪ ಅವರು ಮುಕ್ತ ಮನಸ್ಸಿನಿಂದ ಸಹಿ ಹಾಕುತ್ತಿದ್ದರು. ಕಾಲುಸಂಕ ನಿರ್ಮಾಣದಿಂದ ಹಿಡಿದು ಹೆದ್ದಾರಿವರೆಗೆ ಬಿಎಸ್‌ವೈ ಕೊಡುಗೆ ಅಪಾರ. ಗ್ರಾಮೀಣ ರಸ್ತೆ ಮತ್ತು ಸೇತುವೆಗಳ ಜಾಲಚೆಕ್ ಡ್ಯಾಮ್, ಕಿಂಡಿ ಅಣೆಕಟ್ಟುಗಳ ಮೂಲಕ ನೀರಾವರಿಗೆ ಉತ್ತೇಜನ ಶಾಲಾ ಕಟ್ಟಡ ದುರಸ್ತಿ, ಹೊಸ ಕೊಠಡಿಗಳ ನಿರ್ಮಾಣ, ಪರಿಶಿಷ್ಟ ಪಂಗಡ ಕಾಲೊನಿಗಳಿಗೆ ಮೂಲಸೌಕರ್ಯ ಆಡಳಿತ ಪಕ್ಷವೋ, ವಿಪಕ್ಷವೋ ಎನ್ನದೆ ಎಲ್ಲ ಶಾಸಕರ ಕ್ಷೇತ್ರಕ್ಕೂ ಅಭಿವೃದ್ಧಿ ಅನುದಾನ ನೀಡಿದ ಏಕೈಕ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಅವರದು. ಕೋಟಿ ಕೋಟಿ ಅನುದಾನದ ಮಳೆ ಸುರಿಸಿ ರಾಜ್ಯದ ಅಭಿವೃದ್ಧಿಗೆ ವೇಗ ನೀಡಿದ ರೈತಬಂಧು, ಜನನಾಯಕ ಯಡಿಯೂರಪ್ಪ.

> 2007, 2008-2011 ಮತ್ತು 2019-2021ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗ
>
> 
>
> ಯಡಿಯೂರಪ್ಪ ಅವರು ಬೆಳ್ತಂಗಡಿ ವಿಧಾನಸಭಾ ಕ್ಷೇತ್ರಕ್ಕೆ ಸುಮಾರು ₹3,500 ಕೋಟಿ ರು. ಅನುದಾನ ನೀಡಿ ತಾಲೂಕಿನ ಭಾಗ್ಯರೇಖೆಯನ್ನೇ ಬದಲಿಸಿದರು. ಅಭಿವೃದ್ಧಿಗೆ ಸಲ್ಲಿಸಿದ ಪ್ರತಿಯೊಂದು ಬೇಡಿಕೆಗೂ ಯಡಿಯೂರಪ್ಪ ಅವರು ಮುಕ್ತ ಮನಸ್ಸಿನಿಂದ ಸಹಿ ಹಾಕುತ್ತಿದ್ದರು.



ಬಿಎಸ್‌ವೈ ಅವಧಿಯಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರ

ಕರಾವಳಿ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ನಗರ ಮತ್ತು ಗ್ರಾಮಾಂತರ ಪ್ರದೇಶದ ಸರ್ವತೋಮುಖ ಅಭಿವೃದ್ಧಿ ಹಿನ್ನಲೆಯಲ್ಲಿ ಸರ್ಕಾರಕ್ಕೆ ಸೂಕ್ತ ಸಲಹೆ, ಅಭಿಪ್ರಾಯಗಳನ್ನು ನೀಡಲು ಅಭಿವೃದ್ಧಿ ಪ್ರಾಧಿಕಾರ ರಚಿಸುವ ಉದ್ದೇಶದಿಂದ ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 2008ರಲ್ಲಿ ರಚಿಸಲಾಯಿತು. 2009ರಲ್ಲಿ ಪ್ರಾಧಿಕಾರದ ಅಧ್ಯಕ್ಷರಿಗೆ ರಾಜ್ಯ ಸಚಿವರ ಸ್ಥಾನಮಾನ ನೀಡಲಾಗಿತ್ತು.

ಮಂಗಳೂರು ಪೊಲೀಸ್ ಕಮಿಷನರೇಟ್

ಹಲವು ದಶಕಗಳ ಬೇಡಿಕೆಯಾಗಿದ್ದ ಮಂಗಳೂರು ಪೊಲೀಸ್ ಕಮಿಷನರೇಟ್‌ಗೆ ಅನುಮೋದನೆಯನ್ನು ಬಿ.ಎಸ್.ಯಡಿಯೂರಪ್ಪ ಅವರ ಬಿಜೆಪಿ ಸರ್ಕಾರದ ಆಡಳಿತದಲ್ಲಿ ನೀಡಲಾಯಿತು. ಡಾ.ವಿ.ಎಸ್.ಆಚಾರ್ಯ ಅವರು ಗೃಹಸಚಿವರಾಗಿದ್ದ ವೇಳೆ 2012ರಲ್ಲಿ ಮಂಗಳೂರು ಕಮಿಷನರೇಟ್ ಅಸ್ತಿತ್ವಕ್ಕೆ ಬಂತು. ಆ ಮೂಲಕ ಕ್ಷಿಪ್ರ ಬೆಳವಣಿಗೆ ಕಾಣುತ್ತಿರುವ ಮಂಗಳೂರು ನಗರ ಕೇಂದ್ರಿತವಾಗಿ ಪೊಲೀಸ್ ಆಯುಕ್ತಾಲಯ ಅಸ್ತಿತ್ವಕ್ಕೆ ಬಂತು.

ಬಿಎಸ್‌ವೈ ಸಿಎಂ ಅವಧಿ: ಕರಾವಳಿ ಕರ್ನಾಟಕ ಅಭಿವೃದ್ಧಿ ಪರ್ವ

ಬಿ.ಎಸ್.ಯಡಿಯೂರಪ್ಪ ಕರ್ನಾಟಕದ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ದ.ಕ. ಜಿಲ್ಲೆಗೆ ನೇರ ಮತ್ತು ಪರೋಕ್ಷವಾಗಿ ಹಲವು ಅಭಿವೃದ್ಧಿ ಯೋಜನೆಗಳು, ಮೂಲಸೌಕರ್ಯ ಸುಧಾರಣೆಗಳು ಮತ್ತು ಧಾರ್ಮಿಕ- ಶೈಕ್ಷಣಿಕ ಕ್ಷೇತ್ರಗಳಿಗೆ ಉತ್ತೇಜನ ನೀಡಿದ್ದರು. ದಕ್ಷಿಣ ಕನ್ನಡ ಜಿಲ್ಲೆ ಈಗಾಗಲೇ ಶಿಕ್ಷಣ, ಬ್ಯಾಂಕಿಂಗ್ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದರೂ, ಅವರ ಆಡಳಿತದಲ್ಲಿ ಕೆಲವು ಪ್ರಮುಖ ಯೋಜನೆಗಳಿಗೆ ವೇಗ ಸಿಕ್ಕಿತ್ತು. ಪಕ್ಷವನ್ನು ಸಂಘಟನಾತ್ಮಕವಾಗಿಯೂ ಕರಾವಳಿಯಲ್ಲಿ ಬಲಿಷ್ಠಗೊಳ್ಳುವಂತೆ ಮಾಡಿದ್ದು ಬಿಎಸ್‌ವೈ.

ದಕ್ಷಿಣ ಕನ್ನಡ ಜಿಲ್ಲೆಗೆ ಯಡಿಯೂರಪ್ಪರ ಪ್ರಮುಖ ಕೊಡುಗೆಗಳು

1. **ರಾಷ್ಟ್ರೀಯ ಹೆದ್ದಾರಿ ಮತ್ತು ರಸ್ತೆ ಅಭಿವೃದ್ಧಿ:** ಮಂಗಳೂರುಬೆಂಗಳೂರು ಹೆದ್ದಾರಿ ಸಕಲೇಶಪುರ ಸುಬ್ರಹ್ಮಣ್ಯಮಂಗಳೂರು ಮಾರ್ಗದ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಮಟ್ಟದಲ್ಲಿ ಸಹಕಾರ ನೀಡಿದ್ದರು. ಚಾರ್ಮಾಡಿ ಘಾಟ್ ಭಾಗದಲ್ಲಿ ರಸ್ತೆ ಕಾಮಗಾರಿಗಳಿಗೆ ಅನುದಾನ. ಪುತ್ತೂರು, ಸುಳ್ಯ, ಬೆಳ್ತಂಗಡಿ ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಅನುದಾನ.

2. **ಮಂಗಳೂರು ನಗರಾಭಿವೃದ್ಧಿ:** ಸ್ಮಾರ್ಟ್ ಸಿಟಿ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ಹಣಕಾಸು ನೆರವು. ನಗರ ಒಳಚರಂಡಿ, ರಸ್ತೆ, ನೀರು, ಡಿಜಿಟಲ್ ವ್ಯವಸ್ಥೆಗಳ ಅಭಿವೃದ್ಧಿಗೆ ಯಡಿಯೂರಪ್ಪ ಉತ್ತೇಜನ ನೀಡಿದ್ದರು.

ಕುಡಿಯುವ ನೀರು ಯೋಜನೆಗಳು: ನೇತ್ರಾವತಿ ನದಿಯಿಂದ ಮಂಗಳೂರು ನಗರಕ್ಕೆ ನೀರು ಪೂರೈಕೆ ಸುಧಾರಣೆ. ಡ್ಯಾಂನ್ನು ಎತ್ತರಿಸಲು ಅನುಮೋದನೆ ಲಭಿಸಿತು.

> - ದಕ್ಷಿಣ ಕನ್ನಡ ಜಿಲ್ಲೆ ಶಿಕ್ಷಣದ ಕೇಂದ್ರವಾಗಿರುವುದರಿಂದ ಖಾಸಗಿ ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳ ವಿಸ್ತರಣೆಗೆ ಅನುಕೂಲಕರ ನೀತಿಗಳನ್ನು ಜಾರಿಗೆ ತಂದರು. ಈ ವೇಳೆ ಪ್ರಮುಖ ಶಿಕ್ಷಣ ಕೇಂದ್ರಗಳು ಪ್ರಯೋಜನ ಪಡೆದವು. ಮೀನುಗಾರರಿಗೆ ಡೀಸೆಲ್ ಸಬ್ಸಿಡಿ, ಬಂದರು ಅಭಿವೃದ್ಧಿಗೆ ನೆರವು, ಮೀನುಗಾರರ ಮನೆ ಯೋಜನೆಗಳು. ಚಂಡಮಾರುತ ಮತ್ತು ಮಳೆ ಹಾನಿಗೆ ಪರಿಹಾರ ಪ್ಯಾಕೇಜ್, ಪ್ರಮುಖ ಬಂದರು ಪ್ರದೇಶಗಳ ಅಭಿವೃದ್ಧಿಗೆ ನೆರವು.
> - ದೇವಸ್ಥಾನಗಳ ಅಭಿವೃದ್ಧಿಗೆ ಅನುದಾನ ಪ್ರಮುಖ ಸಂಗತಿ. ಅದರಲ್ಲೂ ಕುಕ್ಕೆ ಸುಬ್ರಹ್ಮಣ್ಯ, ಧರ್ಮಸ್ಥಳ ಭಾಗದಲ್ಲಿ ಪ್ರವಾಸೋದ್ಯಮ ಮತ್ತು ರಸ್ತೆ ಅಭಿವೃದ್ಧಿಗೆ ಅನುದಾನ ಒದಗಿಸಿರುವುದು ಯಡಿಯೂರಪ್ಪ ಅವರ ಸಾಧನೆ

3. **ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ:** ದಕ್ಷಿಣ ಕನ್ನಡ ಜಿಲ್ಲೆ ಶಿಕ್ಷಣದ ಕೇಂದ್ರವಾಗಿರುವುದರಿಂದ ಖಾಸಗಿ ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳ ವಿಸ್ತರಣೆಗೆ ಅನುಕೂಲಕರ ನೀತಿಗಳನ್ನು ಜಾರಿಗೆ ತಂದರು. ಈ ವೇಳೆ ಪ್ರಮುಖ ಶಿಕ್ಷಣ ಕೇಂದ್ರಗಳು ಪ್ರಯೋಜನ ಪಡೆದವು.

4. **ಮೀನುಗಾರಿಕೆ ಕ್ಷೇತ್ರಕ್ಕೆ ಬೆಂಬಲ:** ಮೀನುಗಾರರಿಗೆ ಡೀಸೆಲ್ ಸಬ್ಸಿಡಿ, ಬಂದರು ಅಭಿವೃದ್ಧಿಗೆ ನೆರವು, ಮೀನುಗಾರರ ಮನೆ ಯೋಜನೆಗಳು. ಚಂಡಮಾರುತ ಮತ್ತು ಮಳೆ ಹಾನಿಗೆ ಪರಿಹಾರ ಪ್ಯಾಕೇಜ್, ಪ್ರಮುಖ ಬಂದರು ಪ್ರದೇಶಗಳ ಅಭಿವೃದ್ಧಿಗೆ ನೆರವು.

5. **ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರ:** ದೇವಸ್ಥಾನಗಳ ಅಭಿವೃದ್ಧಿಗೆ ಅನುದಾನ ಪ್ರಮುಖ ಸಂಗತಿ. ಅದರಲ್ಲೂ ಕುಕ್ಕೆ ಸುಬ್ರಹ್ಮಣ್ಯ, ಧರ್ಮಸ್ಥಳ ಭಾಗದಲ್ಲಿ ಪ್ರವಾಸೋದ್ಯಮ ಮತ್ತು ರಸ್ತೆ ಅಭಿವೃದ್ಧಿಗೆ ಅನುದಾನ.

ಕರಾವಳಿ ಪ್ರವಾಸೋದ್ಯಮ: ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ವೇಗ ದೊರಕಿದ್ದೇ ಯಡಿಯೂರಪ್ಪ ಸಿಎಂ ಅವಧಿಯಲ್ಲಿ. ಪಿಲಿಕುಳ, ಪಣಂಬೂರು ಬೀಚ್ ಮುಂತಾದ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗೆ ಉತ್ತೇಜನ ನೀಡಿದರು.

6. **ಕೈಗಾರಿಕೆ ಮತ್ತು ಹೂಡಿಕೆ:** ಮಂಗಳೂರು ಪೆಟ್ರೋಕೆಮಿಕಲ್ ಮತ್ತು ಕೈಗಾರಿಕಾ ವಲಯಗಳಿಗೆ ಬೆಂಬಲ. ಐಟಿ ಮತ್ತು ಸೇವಾ ವಲಯಕ್ಕೆ ಉತ್ತೇಜನ.

7. **ಆರೋಗ್ಯ ಕ್ಷೇತ್ರ:** ಕೋವಿಡ್ ಅವಧಿಯಲ್ಲಿ ಮಂಗಳೂರಿನ ವೆನ್ಲಾಕ್ ಆಸ್ಪತ್ರೆ ಸೇರಿದಂತೆ ಪ್ರಮುಖ ಸರ್ಕಾರಿ ಆಸ್ಪತ್ರೆಗಳಿಗೆ ಹೆಚ್ಚುವರಿ ಐಸಿಯು ವ್ಯವಸ್ಥೆ ಕಲ್ಪಿಸಿದ್ದಾರೆ.

8. **ಕೃಷಿ ಮತ್ತು ತೋಟಗಾರಿಕೆ:** ಕರಾವಳಿ ಜನತೆಯ ಪ್ರಮುಖ ವಾಣಿಜ್ಯ ಬೆಳೆಯಾದ ಅಡಕೆ ಮತ್ತು ತೆಂಗು ಬೆಳೆಗಾರರಿಗೆ ನೆರವು ನೀಡಿದ್ದಾರೆ. ಅಡಕೆ ಬೆಳೆ ಹಾನಿಗೆ ಪರಿಹಾರ ಪ್ಯಾಕೇಜ್ ಬಿಡುಗಡೆಗೊಳಿಸಿದ್ದಾರೆ.

ಮೂಡುಬಿದಿರೆ ಕ್ಷೇತ್ರಕ್ಕೆ 2000 ಕೋಟಿ ರು. ಅನುದಾನ

ಮೂಡುಬಿದಿರೆ ಒಂಟಿ ಕಟ್ಟೆ ಕಂಬಳಕ್ಕೆ ಅನುದಾನ | ರಸ್ತೆ ಅಭಿವೃದ್ಧಿಗೆ ಹಣಕಾಸು



ಸಿಎಂ ಆಗಿದ್ದ ಯಡಿಯೂರಪ್ಪ ಅವರು ಮೂಡುಬಿದಿರೆ ಕ್ಷೇತ್ರಕ್ಕೆ ಆಗಮಿಸಿದ್ದ ವೇಳೆ ಶಾಸಕ ಉಮಾನಾಥ್ ಕೋಟ್ಯಾನ್ ಅವರಿಂದ ಗೌರವ.

ಅಭಿವೃದ್ಧಿಯ ಹರಿಕಾರ, ಮಾಜಿ ಮುಖ್ಯ ಮಂತ್ರಿ ಬಿ ಎಸ್ ಯಡಿಯೂರಪ್ಪನವರ ಅವಧಿಯಲ್ಲಿ ರಾಜ್ಯಾದ್ಯಂತ ಹೆಚ್ಚಿನ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಕ್ಕೆ ಭರಪೂರ ಅನುದಾನ ಬಿಡುಗಡೆಯಾಗಿತ್ತು. 2018 ರವರೆಗೆ ಕಾಂಗ್ರೆಸ್ ಮತ್ತು ಜೆಡಿಎಸ್ ವಶದಲ್ಲಿದ್ದ ಮೂಡುಬಿದಿರೆ ಕ್ಷೇತ್ರದಲ್ಲಿ ಪ್ರಥಮ ಬಾರಿಗೆ 2018ರಲ್ಲಿ ಬಿಜೆಪಿಯ ಉಮಾನಾಥ ಕೋಟ್ಯಾನ್ ಗೆಲ್ಲುವ ಮೂಲಕ ಮೂಡುಬಿದಿರೆ ಕ್ಷೇತ್ರವು ಬಿಜೆಪಿಯ ಭದ್ರ ಕೋಟೆಯಾಗಿ ಪರಿವರ್ತನೆಯಾಗಿ 2023ರಲ್ಲಿ ಕೂಡ ಉಮಾನಾಥ ಕೋಟ್ಯಾನ್ ಗೆಲವನ್ನು ಸಾಧಿಸಿದ್ದರು. ಯಡಿಯೂರಪ್ಪ ನವರು ಮುಖ್ಯಮಂತ್ರಿಯಾಗಿದ್ದಅವಧಿಯಲ್ಲಿ ಸುಮಾರು 2000 ಕೋಟಿ ರು. ಅನುದಾನವು ಮೂಡುಬಿದಿರೆ ಕ್ಷೇತ್ರಕ್ಕೆ ಹರಿದು ಬಂದಿದ್ದು ಹೆಚ್ಚಿನ ಅಭಿವೃದ್ಧಿ ಕಾರ್ಯವು ಕ್ಷೇತ್ರದಲ್ಲಿ ನಡೆದಿದೆ. ಮೂಲ್ಕಿ ಮತ್ತು ಮೂಡುಬಿದಿರೆ ಸೇರಿದಂತೆ ಎರಡು ಕ್ಷೇತ್ರವನ್ನು ಹೊಂದಿರುವ ಮೂಡುಬಿದಿರೆ ಕ್ಷೇತ್ರದ ಮೂಡುಬಿದಿರೆಯಲ್ಲಿ ನೂತನ ಪ್ರಜಾ ಸೌಧ, ಪ್ರವಾಸಿ ಕೇಂದ್ರ ನಿರ್ಮಾಣವಾಗಿದ್ದು ಮೂಲ್ಕಿಯಲ್ಲಿ ನೂತನ ಪ್ರಜಾ ಸೌಧದ ಶಿಲಾನ್ಯಾಸ ನಡೆದಿತ್ತು. ಯಡಿಯೂರಪ್ಪನವರ ಅವಧಿಯಲ್ಲಿ ಮೂಡುಬಿದಿರೆ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯಿಂದ 352 ಕೋಟಿ ರು., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 71 ಕೋಟಿ ರು., ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 14 ಕೋಟಿ 38ಲಕ್ಷ 77 ಸಾವಿರ, ಕರ್ನಾಟಕ ಗೃಹ ಮಂಡಳಿಯಿಂದ 21 ಕೋಟಿ.31ಲಕ್ಷ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗದಿಂದ 218 ಕೋಟಿ 75 ಲಕ್ಷ, ಸಣ್ಣ ನೀರಾವರಿ ಇಲಾಖೆಯಿಂದ 78 ಕೋಟಿ ರು., ಪ್ರವಾಸೋದ್ಯಮ ಇಲಾಖೆಯಿಂದ 12 ಕೋಟಿ 47 ಲಕ್ಷ ರು., ಕರಾವಳಿ ಅಭಿವೃದ್ಧಿ ಪ್ರಾಧಿಕಾರದಿಂದ 7 ಕೋಟಿ ರು.,., ಮೀನುಗಾರಿಕಾ ಇಲಾಖೆಯಿಂದ 4 ಕೋಟಿ 43ಲಕ್ಷ ರು, ಮುಜರಾಯಿ ಇಲಾಖೆಯಿಂದ 2 ಕೋಟಿ.61 ಲಕ್ಷ ರು., ರಾಷ್ಟ್ರೀಯ ಹೆದ್ದಾರಿ ಇಲಾಖೆಯಿಂದ 330 ಕೋಟಿ ರು., ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ 36 ಕೋಟಿ ರು., ಪೌರಾಡಳಿತ ಇಲಾಖೆಯಿಂದ 35 ಕೋಟಿ ರು, ಕೃಷಿ ಇಲಾಖೆಯಿಂದ 3 ಕೋಟಿ ಸೇರಿದಂತೆ ವಿವಿಧ ಇಲಾಖೆಗಳಿಂದ ಅನುದಾನ ಬಂದಿರುತ್ತದೆ. ಯಡಿಯೂರಪ್ಪನವರ ಭಾಗ್ಯಲಕ್ಷ್ಮೀ ಬಾಂಡ್ ನಿಂದ ಹೆಚ್ಚಿನ ಹೆಣ್ಣು ಮಕ್ಕಳಿಗೆ ಪ್ರಯೋಜನವಾಗಿರುತ್ತದೆ. ಅವರ ಅವಧಿಯಲ್ಲಿ ರಾಜ್ಯ ಹೆದ್ದಾರಿ ಸೇರಿದಂತೆ ಹೆಚ್ಚಿನ ರಸ್ತೆಗಳು ಅಭಿವೃದ್ಧಿ ಗೊಂಡಿದೆ.

ನವ ಉಡುಪಿಯ ನಿರ್ಮಾಣಕ್ಕೆ ಬಿಎಸ್‌ವೈ ವಿಶೇಷ ಕೊಡುಗೆ: ಶಾಸಕ ಯಶ್‌ಪಾಲ್



ಕರ್ನಾಟಕದಲ್ಲಿ ಅಭಿವೃದ್ಧಿ ಶಕೆ ಆರಂಭಿಸಿದ ಮುತ್ಸದ್ದಿ ನಾಯಕ, ಸರ್ವರಿಗೂ ಸಮಬಾಳು ಸಮಪಾಲು ಧ್ಯೇಯದ ಪಾಲಕ, ಬಿ.ಎಸ್. ಯಡಿಯೂರಪ್ಪ ಕರಾವಳಿ ಅಭಿವೃದ್ಧಿಗೆ ನೀಡಿದ ಕೊಡುಗೆ ಅವಿಸ್ಮರಣೀಯ. ಕರಾವಳಿ ಜಿಲ್ಲೆಗಳ ಅಭಿವೃದ್ಧಿಯಲ್ಲಿ ವಿಶೇಷ ಕಾಳಜಿ ಇತ್ತು. ಇಲ್ಲಿನ ಯಾವುದೇ ಬೇಡಿಕೆಗಳಿಗೆ ಅವರು ತಕ್ಷಣ ಸ್ಪಂದಿಸಿ ಈಡೇರಿಸುತಿದ್ದರು. ನಾಡು ಕಂಡ ಅಪರೂಪದ ರಾಜಕಾರಣಿ ಕೀರ್ತಿಶೇಷ ಡಾ. ವಿ.ಎಸ್. ಆಚಾರ್ಯರ ಆಶಯದಂತೆ ಉಡುಪಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಯಡಿಯೂರಪ್ಪ ಭರಪೂರ ಅನುದಾನ ನೀಡಿದ್ದರು. ಆದ್ದರಿಂದಲೇ ಉಡುಪಿ ಜಿಲ್ಲೆ ಇಂದು ರಾಜ್ಯದಲ್ಲೇ ಗುರುತಿಸುವಷ್ಟು ಅಭಿವೃದ್ಧಿ ಕಂಡಿದೆ. ಮಣಿಪಾಲದಲ್ಲಿ ಸುಸಜ್ಜಿತ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣ, ಉಡುಪಿ ನಗರಸಭೆಯ ಅಮೃತ ಮಹೋತ್ಸವಕ್ಕೆ ನಗರೋತ್ಥಾನ ಯೋಜನೆಯಡಿ 25 ಕೋಟಿ ರು. ಅನುದಾನ, ಮಲ್ಪೆ ಮೀನುಗಾರಿಕಾ ಬಂದರಿನ 3ನೇ ಹಂತದ ವಿಸ್ತರಣೆ, ಮೀನುಗಾರಿಕಾ ಬೋಟುಗಳಿಗೆ ಸಬ್ಸಿಡಿ ಡೀಸೆಲ್ ಕೋಟಾವನ್ನು 50 ಸಾವಿರ ಕಿಲೋ ಲೀಟರ್‌ನಿಂದ ಹಂತ ಹಂತವಾಗಿ 1.25 ಲಕ್ಷ ಕಿಲೋ ಲೀಟರ್‌ಗಳಿಗೆ ಏರಿಕೆ, ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಕರಾವಳಿಯ 25 ಸಾವಿರ ಮಹಿಳಾ ಮೀನುಗಾರರ 70 ಕೋಟಿ ರು. ಸಾಲ ಮನ್ನಾ, ಉಡುಪಿ ಜಿಲ್ಲೆಯ ಮೀನುಗಾರರ ಪ್ರಮುಖ ಬೇಡಿಕೆಯಾಗಿದ್ದ ಹೆಜಮಾಡಿ ಮೀನುಗಾರಿಕಾ ಬಂದರು ಕಾಮಗಾರಿಗೆ 190 ಕೋಟಿ ರು. ಅನುದಾನ ಬಿಡುಗಡೆ ಮಾಡಿದ ಯಡಿಯೂರಪ್ಪ ನವ ಉಡುಪಿ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಿದ್ದಾರೆ. ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಕೃಷಿ ಮತ್ತು ಆರ್ಥಿಕ ರಂಗಗಳಲ್ಲಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದವರು, ತಮ್ಮ 50 ವರ್ಷ ರಾಜಕೀಯ ಜೀವನದಲ್ಲಿ ಹೋರಾಟದಿಂದ ಅಧಿಕಾರ ಪಡೆದು ಜನ ಮಾನಸದಲ್ಲಿ ಸದಾ ಅಚ್ಚಳಿಯದೇ ನೆನಪಿನಲ್ಲಿ ಉಳಿಯುವವರು. ಅಭಿಮಾನಪೂರ್ವಕ ಗೌರವಗಳು.

• **ಯಶ್‌ಪಾಲ್ ಎ. ಸುವರ್ಣ**, ಉಡುಪಿ ಶಾಸಕರು

ಬೈಂದೂರು ವಿಧಾನಸಭೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಯಡಿಯೂರಪ್ಪ ಚಾಲನೆ



- ಶಿವಮೊಗ್ಗ ಲೋಕಸಭಾ ಕ್ಷೇತ್ರ ಭಾಗ ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಹತ್ತಾರು ಯೋಜನೆ ಮೂಲಕ ಸಮಗ್ರ ಅಭಿವೃದ್ಧಿಗೆ ಚಾಲನೆ ನೀಡಿದ್ದು ಯಡಿಯೂರಪ್ಪ, ಮುಂದುವರಿಸಿದ್ದು ಸಂಸದ ಬಿ. ವೈ. ರಾಘವೇಂದ್ರ.
- ಗಂಗೊಳ್ಳಿಯಲ್ಲಿ 96 ಕೋಟಿ ರು. ವೆಚ್ಚದಲ್ಲಿ ಕೋಸ್ಟಲ್ ಬರ್ತ್ ನಿರ್ಮಾಣ, ಕೊಡೇರಿಯಲ್ಲಿ 63 ಕೋಟಿ ರು. ವೆಚ್ಚದಲ್ಲಿ ಕಿರುಬಂದರು ನಿರ್ಮಾಣ, ಗಂಗೊಳ್ಳಿ ಬಂದರಿನ ಜೆಟ್ಟಿ ನಿರ್ಮಾಣಕ್ಕೆ 12 ಕೋಟಿ ರು., ಮರವಂತೆಯಲ್ಲಿ ಹೊರಬಂದರಿಗೆ 130 ಕೋಟಿ ರು., ಹಳ್ಳಿಹೊಳೆಯಲ್ಲಿ ಸೇತುವೆಗೆ 4 ಕೋಟಿ ರು., ಮೀನುಗಾರಿಕಾ ರಸ್ತೆಗೆ 12 ಕೋಟಿ ರು., ಶಂಕರನಾರಾಯಣ ಸೇತುವೆಗೆ 15 ಕೋಟಿ ರು. ಅನುದಾನವನ್ನು ಒದಗಿಸಲಾಗಿದೆ.
- 89 ಕೋಟಿ ರು. ವೆಚ್ಚದಲ್ಲಿ ಸೌಪರ್ಣಿಕಾ ನದಿಗೆ ಬ್ಯಾರೇಜ್, 190 ಕೋಟಿ ರು. ವೆಚ್ಚದ ಸಿದ್ದಾಪುರ ಏತ ನೀರಾವರಿ, 73 ಕೋಟಿ ರು. ವೆಚ್ಚದ ಸೌಕೂರು ಏತ ನೀರಾವರಿ ಯೋಜನೆಗಳು, 8 ಕೋಟಿ ರು.ಗಳ ಬೈಂದೂರು ತಾಲೂಕು ನೂತನ ಆಡಳಿತ ಸೌಧ, 3 ಎಕ್ರೆ ಪ್ರದೇಶದಲ್ಲಿ 36.50 ಕೋಟಿ ರು.ಗಳಲ್ಲಿ ಐಟಿಐ ಕಾಲೇಜು ಮತ್ತು ಶಂಕರನಾರಾಯಣದಲ್ಲಿ 8 ಎಕ್ರೆ ಜಮೀನಿನಲ್ಲಿ 25 ಕೋಟಿ ರು.ಗಳ ವೆಚ್ಚದಲ್ಲಿ ಅಂಬೇಡ್ಕರ್‌ವಸತಿ ಶಾಲೆ ಆರಂಭ, 10 ಕೋಟಿ ರು. ವೆಚ್ಚದಲ್ಲಿ ವಿವಿಧ ಶಾಲೆಗಳ ಕೊಠಡಿ ನಿರ್ಮಾಣ ಮಾಡಲಾಗಿದೆ. ಅವರು 2022ರ ಬಜೆಟ್‌ನಲ್ಲಿ ಮರವಂತೆ ಬೀಚ್ ಅಭಿವೃದ್ಧಿಗೆ 10 ಕೋಟಿ ರು., ಸೋಮೇಶ್ವರ ಬೀಚ್‌ಗೆ 15 ಕೋಟಿ ರು. ಅನುದಾನವನ್ನು ನೀಡಿದ್ದರು.

ಬಿಎಸ್‌ವೈ ಅವಧಿ: ಉಡುಪಿ ಜಿಲ್ಲೆ ಅಭಿವೃದ್ಧಿ ಪರ್ವ

ಬಿ.ಎಸ್. ಯಡಿಯೂರಪ್ಪ ಅವರು ಉಪಮುಖ್ಯಮಂತ್ರಿ ಮತ್ತು ಮುಖ್ಯಮಂತ್ರಿಯಾಗಿ ಉಡುಪಿ ಜಿಲ್ಲೆಗೆ ನೂರಾರು ಕೊಡುಗೆ, ಯೋಜನೆ, ಸೌಲಭ್ಯಗಳನ್ನು ನೀಡಿದ್ದಾರೆ. ಅವರ ಕಾಲದಲ್ಲಿ ಉಡುಪಿ ಜಿಲ್ಲೆಯಲ್ಲಿ ಅಭಿವೃದ್ಧಿಯ ಪರ್ವವೇ ಆರಂಭವಾಯಿತು. ಅದರಲ್ಲಿ ಅತ್ಯಂತ ಪ್ರಮುಖವಾದುದು ಮಣಿಪಾಲದ ರಜತಾದ್ರಿಯಲ್ಲಿ ಜಿಲ್ಲಾ ಇಲಾಖೆಗಳ ಸಂಕೀರ್ಣದ ನಿರ್ಮಾಣ.

ಉಡುಪಿಗೆ 3000 ಕೋಟಿ: 2018ರಿಂದ ಉಡುಪಿ ವಿಧಾನ ಸಭಾ ಕ್ಷೇತ್ರದಲ್ಲಿ ರಘುಪತಿ ಭಟ್ ಶಾಸಕರಾಗಿದ್ದ 2 ಅವಧಿಯಲ್ಲಿ ಈ ಕ್ಷೇತ್ರವೊಂದಕ್ಕೆ ಸುಮಾರು 3000 ಕೋಟಿ ರು. ಅನುದಾನ ಬಂದಿದೆ.

ಉಡುಪಿ ನಗರಸಭೆಯ ಅಮೃತ ಮಹೋತ್ಸವದ ನೆನಪಿನಲ್ಲಿ 30 ಕೋಟಿ ರು.ಗಳ ವಿಶೇಷ ಅನುದಾನವನ್ನು ಬಿಎಸ್‌ವೈ ಸರ್ಕಾರ ನೀಡಿತ್ತು.

ಜಿಲ್ಲೆಯ ಬಡ ಪ್ರತಿಭಾವಂತ ವಿದ್ಯಾರ್ಥಿಗಳ ತಾಂತ್ರಿಕ ಶಿಕ್ಷಣಕ್ಕಾಗಿ ಮಣಿಪಾಲದಲ್ಲಿ 8 ಕೋಟಿ ರು. ವೆಚ್ಚದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ನ್ನು ಆರಂಭಿಸಿದೆ.



ಕೇವಲ ಒಂದು ಬಸ್ಸು ಸಂಚರಿಸುವಷ್ಟು ಅಗಲ ಕಿರಿದಾಗಿದ್ದ ಜಿಲ್ಲಾ ಕೇಂದ್ರದ ಉಡುಪಿ - ಮಣಿಪಾಲ ರಸ್ತೆಯನ್ನು ಚತುಷ್ಪಥಗೊಳಿಸಿದ್ದು, ಉಡುಪಿಯ ಅಭಿವೃದ್ಧಿಯ ಹೆಬ್ಬಾಗಿಲನ್ನೇ ತರೆಯುವಂತಾಯಿತು.

4 ಕೋಟಿ ರು. ವೆಚ್ಚದಲ್ಲಿ ಜಿಲ್ಲಾ ಕ್ರೀಡಾಂಗಣಕ್ಕೆ ಸಿಂಥೇಟಿಕ್ ಟ್ರ್ಯಾಕ್, ಈಜು ಕೊಳ, 3.75 ಕೋಟಿ ರು. ವೆಚ್ಚದಲ್ಲಿ ಇಂಡೋರ್‌ಸ್ಟೇಡಿಯಮ್‌ಗಳನ್ನು ಇದೇ ಅವಧಿಯಲ್ಲಿ ನಿರ್ಮಿಸಲಾಗಿದೆ.

ಮಲ್ಪೆ - ಪಡುಕರೆ ಸೇತುವೆ ನಿರ್ಮಾಣ, ಮಣಿಪಾಲ ಮಣ್ಣಪಳ್ಳದ ಅಭಿವೃದ್ಧಿ, ತೆಂಕನಿಡಿಯೂರು ಪಿಯು - ಪದವಿ ಕಾಲೇಜು, ಉಡುಪಿ ನಗರಕ್ಕೆ ನೀರುಣಿಸುವ ಸುವರ್ಣ ನದಿ 2ನೇ ಹಂತದ ಯೋಜನೆ, ಹತ್ತಾರು ಕಿರುಸೇತುವೆ, ಕಿಂಡಿಅಣೆಕಟ್ಟು, ರಸ್ತೆ ಇತ್ಯಾದಿ ಸಾವಿರಾರು ಕೋಟಿ ರು.ಗಳ ಅನುದಾನವನ್ನು ಬಿಎಸ್‌ವೈ ಸರ್ಕಾರ ನೀಡಿದೆ ಎಂದು ಮಾಜಿ ಶಾಸಕ ರಘುಪತಿ ಭಟ್ ನೆನಪಿಸಿಕೊಂಡಿದ್ದಾರೆ.

ಕಾಪುಗೆ 2500 ಕೋಟಿ ರು.: ಕಾಪು ವಿಧಾನಸಭಾ ಕ್ಷೇತ್ರಕ್ಕೆ ಬಿಎಸ್‌ವೈ ಸರ್ಕಾರ ನೀಡಿದ ಬಹುದೊಡ್ಡ ಕೊಡುಗೆ ಎಂದರೆ ಹೆಜಮಾಡಿ ಬಂದರು, ಈ ಯೋಜನೆಗೆ ಸುಮಾರು 183 ಕೋಟಿ ರು.ಗಳನ್ನು ಬಿಡುಗಡೆ ಮಾಡಲಾಗಿತ್ತು.

ಇದರ ಜೊತೆಗೆ ಬಜೆ ಅಣೆಕಟ್ಟು ಮತ್ತು ಕುಕ್ಕೆಹಳ್ಳಿ ಸೇತುವೆಗೆ ತಲಾ 10 ಕೋಟಿ ರು.ಗಳನ್ನು ಯಡಿಯೂರಪ್ಪ ನೀಡಿದ್ದರು. ಹಿರಿಯಡ್ಕ ಮತ್ತು ಕಾಪು ಸರ್ಕಾರಿ ಕಾಲೇಜುಗಳ ಕಟ್ಟಡ ಮತ್ತು ಮೇಲ್ದರ್ಜೆಗೇರಿಸಲು, ಕಾಪು ಕ್ಷೇತ್ರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೂ ಸಾಕಷ್ಟು ಅನುದಾನ ನೀಡಿದ್ದರು. ಮೀನುಗಾರರ ದೋಣಿಗಳಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಡಿಸೇಲ್ ಸಬ್ಸಿಡಿ ನೀಡಿದ್ದು ಯಡಿಯೂರಪ್ಪವರು ಎಂದು ಕಾಪು ಕ್ಷೇತ್ರದ ಮಾಜಿ ಶಾಸಕ ಲಾಲಾಜಿ ಮೆಂಡನ್ ಸ್ಮರಿಸಿದ್ದಾರೆ.

- ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳು ಜಿಲ್ಲೆಯ ಜನರಿಗೆ ಒಂದೇ ಸೂರಿನಡಿ ಸಿಗುವಂತೆ ಮಾಡಿದ ಯಶಸ್ವಿ ಪ್ರಯೋಗವದು. ಉಡುಪಿಯ ನಂತರ ರಾಜ್ಯದ ಇತರ ಅನೇಕ ಜಿಲ್ಲೆಗಳಿಗೂ ಇದು ಮಾದರಿಯಾಯಿತು.
- ಸುಮಾರು 6 ಎಕ್ರೆ ಪ್ರದೇಶದಲ್ಲಿ 3 ಬ್ಲಾಕ್‌ಗಳಲ್ಲಿ ಹರಡಿಕೊಂಡಿರುವ ಈ ಸರ್ಕಾರಿ ಸಂಕೀರ್ಣವನ್ನು 2010 – 11ರಲ್ಲಿ ನಿರ್ಮಿಸಲಾಯಿತು, ಆಗಿನ ಉಸ್ತುವಾರಿ ಸಚಿವ ಡಾ. ವಿ. ಎಸ್. ಆಚಾರ್ಯ ಅವರ ಮುತುವರ್ಜಿಯಲ್ಲಿ ರಾಜ್ಯದ ಪ್ರಥಮ ಜಿಲ್ಲಾ ಅಧಿಕಾರಿಗಳ ಕಚೇರಿ ಸಂಕೀರ್ಣಕ್ಕೆ ಬಿ.ವೈ. ಯಡಿಯೂರಪ್ಪ ಅವರು ಸುಮಾರು 80 ಕೋಟಿ ರು. ಅನುದಾನ ನೀಡಿದ್ದರು.
- ಅದೇ ರೀತಿ ಉಡುಪಿ ಪ್ರತ್ಯೇಕ ಜಿಲ್ಲೆಯಾಗಿದ್ದರೂ, ಇನ್ನೂ 120 ಹಾಸಿಗೆಗಳ ತಾಲೂಕು ಆಸ್ಪತ್ರೆಯಾಗಿಯೇ ಇದ್ದ ಉಡುಪಿ ಸರ್ಕಾರಿ ಆಸ್ಪತ್ರೆಯನ್ನು 250 ಹಾಸಿಗೆಗಳ ಜಿಲ್ಲಾ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವುದಕ್ಕೆ 150 ಕೋಟಿ ರು. ನೀಡಿದ್ದರು.
- ಬಿಎಸ್‌ವೈ ಅವಧಿಯಲ್ಲಿ ಉಡುಪಿ ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಿಗೆ ಸುಮಾರು 12 – 15 ಸಾವಿರ ಕೋಟಿ ರು. ಗೂ ಅಧಿಕ ಅನುದಾನ ಬಂದಿದೆ.

ಕಾರ್ಕಳ ಸ್ಥಿತ್ಯಂತರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಯಡಿಯೂರಪ್ಪ



2005ರಷ್ಟು ಹಿಂದೆಯೇ, ಅಂದರೆ ಸುನಿಲ್ ಕುಮಾರ್ ಅವರು ಶಾಸಕರಾಗಿ ಆಯ್ಕೆಯಾದ ಆರಂಭಿಕ ದಿನಗಳಲ್ಲಿ, ಕಾರ್ಕಳದ ಪುರಸಭಾ ವ್ಯಾಪ್ತಿಯ ಬಾಹುಬಲಿ ಪ್ರವಚನ ಮಂದಿರದಲ್ಲಿ ನಡೆದ ಮದುವೆ ಸಮಾರಂಭವೊಂದಕ್ಕೆ ಆಗಮಿಸಿ ಸ್ಥಳೀಯರೊಂದಿಗೆ ಆತ್ಮೀಯವಾಗಿ ಬೆರೆತಿದ್ದರು. ಇದು ಅವರ ಸರಳತೆ ಮತ್ತು ಸಾಮಾನ್ಯ ಕಾರ್ಯಕರ್ತರ ಮೇಲಿನ ಪ್ರೀತಿಯನ್ನು ಎತ್ತಿ ತೋರಿಸುತ್ತದೆ. ವಿ ಸುನಿಲ್ ಕುಮಾರ್ ಅವರ ಮದುವೆಯು ಇದೆ ಸಂದರ್ಭದಲ್ಲಿ ನಡೆದಿತ್ತು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಕಾರ್ಕಳ ಕ್ಷೇತ್ರದ ನಡುವೆ ದಶಕಗಳ ಕಾಲದ ಸುದೀರ್ಘ ಹಾಗೂ ಅರ್ಥಪೂರ್ಣ ಬಾಂಧವ್ಯವಿದೆ. ಈ ಸಂಬಂಧವು ಕೇವಲ ರಾಜಕೀಯಕ್ಕೆ ಸೀಮಿತವಾಗದೆ, ವೈಯಕ್ತಿಕ ಸ್ನೇಹ, ಸಾಂಸ್ಕೃತಿಕ ಗೌರವ ಮತ್ತು ಅಭಿವೃದ್ಧಿಯ ದೂರದೃಷ್ಟಿಯಿಂದ ಬೆಸೆದುಕೊಂಡಿದೆ. ರಾಜ್ಯ ರಾಜಕಾರಣದಲ್ಲಿ ಅಪ್ರತಿಮ ನಾಯಕರಾಗಿ ಬೆಳೆದ ಯಡಿಯೂರಪ್ಪ ಅವರು ಕಾರ್ಕಳದ ರಾಜಕೀಯ ಸ್ಥಿತ್ಯಂತರಗಳಲ್ಲಿ ಸದಾ ಸಕ್ರಿಯವಾಗಿ ಭಾಗವಹಿಸುತ್ತಾ ಬಂದಿದ್ದಾರೆ. ಕಾರ್ಕಳದ ಶಾಸಕ ವಿ. ಸುನಿಲ್ ಕುಮಾರ್‌ಅವರು ರಾಜಕೀಯವಾಗಿ ಬೆಳೆದುಬಂದ ಹಾದಿಯಲ್ಲಿ ಅವರಿಗೆ ಬೆನ್ನೆಲುಬಾಗಿ ನಿಂತವರು ಯಡಿಯೂರಪ್ಪ.

ಅಲ್ಲಿಂದ ಆರಂಭವಾದ ಈ ಬಾಂಧವ್ಯವು ಕಾಲಕ್ರಮೇಣ ಮತ್ತಷ್ಟು ಗಟ್ಟಿಯಾಗುತ್ತಾ ಸಾಗಿತು.

ಯಡಿಯೂರಪ್ಪ ಅವರು ಉಪಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕಾರ್ಕಳಕ್ಕೆ ನೀಡಿದ ಕೊಡುಗೆಗಳು ಇಂದಿಗೂ ಜನರ ನೆನಪಿನಲ್ಲಿ ಹಸಿರಾಗಿವೆ. 2006ರಲ್ಲಿ ಸಮ್ಮಿಶ್ರ ಸರಕಾರವಿದ್ದಾಗ ಕಾರ್ಕಳದ ಗಾಂಧಿ ಮೈದಾನದಲ್ಲಿ ನಡೆದ ಬೃಹತ್ ಮಹಿಳಾ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಅವರು, ಅದೇ ವೇದಿಕೆಯಲ್ಲಿ ಕಾರ್ಕಳಕ್ಕೆ ಮಹಿಳಾ ಪಾಲಿಟೆಕ್ನಿಕ್ ಕಾಲೇಜನ್ನು ಘೋಷಿಸುವ ಮೂಲಕ ಈ ಭಾಗದ ಹೆಣ್ಣುಮಕ್ಕಳ ಶಿಕ್ಷಣ ಮತ್ತು ಉದ್ಯೋಗದ ಕನಸಿಗೆ ದೊಡ್ಡ ಶಕ್ತಿ ತುಂಬಿದ್ದರು. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರು, ಮುಖ್ಯಮಂತ್ರಿಯಾಗಿದ್ದಾಗ ಮಿಯ್ಯಾರಿನಲ್ಲಿ ನಡೆದ ಬೃಹತ್ ಸಭಾ ಕಾರ್ಯಕ್ರಮ ಹಾಗೂ ಕೃಷಿ ಮೇಳಕ್ಕೆ ಭೇಟಿ ನೀಡಿ ರೈತರ ಸಮಸ್ಯೆಗಳಿಗೆ ನೇರವಾಗಿ ಸ್ಪಂದಿಸಿದ್ದರು. ರೈತರಿಗಾಗಿ ಪ್ರತ್ಯೇಕ ಬಜೆಟ್ ಮಂಡಿಸಿದ ಹೆಗ್ಗಳಿಕೆಯ ಯಡಿಯೂರಪ್ಪ ಅವರಿಗೆ ಕಾರ್ಕಳದ ಕೃಷಿಕರ ಬಗ್ಗೆಯೂ ಅಷ್ಟೇ ಅಭಿಮಾನವಿತ್ತು.

- ಸಾಮಾಜಿಕ ಸಮಾನತೆಯ ವಿಚಾರದಲ್ಲೂ ಯಡಿಯೂರಪ್ಪಾರ್ಕಳದಲ್ಲಿ ತಮ್ಮದೇ ಹೆಜ್ಜೆಗುರುತು ಮೂಡಿಸಿದ್ದಾರೆ. 2014ರಲ್ಲಿ ನಕ್ರೆ ದೇವರಗುಂಡಿ ದಲಿತ ಕಾಲೊನಿಗೆ ಭೇಟಿ ನೀಡಿ, ಅಲ್ಲಿನ ಜನರೊಂದಿಗೆ ಸಹಭೋಜನ ಮಾಡುವ ಮೂಲಕ ಸಾಮಾಜಿಕ ಸೌಹಾರ್ದತೆ ಸಂದೇಶ ಸಾರಿದ್ದರು. ಇದು ದೀನದಲಿತರ ನೋವಿಗೆ ಸ್ಪಂದಿಸುವ ಅವರ ಗುಣಕ್ಕೆ ನಿದರ್ಶನವಾಗಿತ್ತು. ನಿಟ್ಟೆ ಕಾಲೇಜಿನ ಸಂಕೀರ್ಣ ಉದ್ಘಾಟನೆಗೆ ಆಗಮಿಸಿ ಶೈಕ್ಷಣಿಕ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಿದ್ದರು. 2017ರ ಬಿಜೆಪಿ ರಥಯಾತ್ರೆಯ ಸಂದರ್ಭದಲ್ಲಿ ಕಾರ್ಕಳಕ್ಕೆ ಭೇಟಿ ನೀಡಿ ಪಕ್ಷ ಸಂಘಟನೆಗೆ ಹೊಸ ಚೈತನ್ಯ ತುಂಬಿದ ಅವರು, ಪ್ರತಿ ಬಾರಿ ಕ್ಷೇತ್ರಕ್ಕೆ ಭೇಟಿ ನೀಡಿದಾಗಲೂ ಕಾರ್ಯಕರ್ತರಲ್ಲಿ ಹೊಸ ಹುರುಪು ಮೂಡಿಸುತ್ತಿದ್ದರು. ಕಾರ್ಕಳದಂತಹ ಕ್ಷೇತ್ರದಲ್ಲಿ ಬಿಜೆಪಿ ಒಂದು ಬಲಿಷ್ಠ ಶಕ್ತಿಯಾಗಿ ಬೆಳೆಯಲು ಯಡಿಯೂರಪ್ಪ ಅವರ ನಿರಂತರ ಮಾರ್ಗದರ್ಶನ ಮುಖ್ಯ ಕಾರಣವಾಗಿದೆ.



ವಿಶೇಷವಾಗಿ, ಅಂದು ತೀರಾ ಕುಗ್ರಾಮವಾಗಿದ್ದ ಹೆರ್ಮುಂಡೆ ಭಾಗದ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆ ಸ್ಮರಣೀಯವಾಗಿದೆ. ದೇಶಕ್ಕೆ ಕೀರ್ತಿ ತಂದ ಖ್ಯಾತ ಕಬಡ್ಡಿ ಪಟು ಮಮತಾ ಪೂಜಾರಿ ಅವರ ಹುಟ್ಟೂರಾದ ಹೆರ್ಮುಂಡೆಗೆ ಸಂಪರ್ಕ ಕಲ್ಪಿಸುವ ಎಣ್ಣೆಹೊಳೆ ನದಿಗೆ ಸೇತುವೆ ಇಲ್ಲದೆ ಜನರು ಅನುಭವಿಸುತ್ತಿದ್ದ ಕಷ್ಟವನ್ನು ಅರಿತ ಯಡಿಯೂರಪ್ಪನವರು, ತಕ್ಷಣವೇ ವಿಶೇಷ ಅನುದಾನ ಬಿಡುಗಡೆಗೊಳಿಸಿದರು. ಈ ಸೇತುವೆ ನಿರ್ಮಾಣವು ಆ ಭಾಗದ ಸಾವಿರಾರು ಜನರ ದಶಕಗಳ ಕಾಲದ ಸಂಕಷ್ಟವನ್ನು ದೂರ ಮಾಡಿತು ಮತ್ತು ಕಾರ್ಕಳದ ಗ್ರಾಮೀಣ ಭಾಗದ ಸಂಪರ್ಕ ವ್ಯವಸ್ಥೆಗೆ ಹೊಸ ಆಯಾಮ ನೀಡಿತು. ಅಭಿವೃದ್ಧಿ ಎಂದರೆ ಕೇವಲ ನಗರಗಳಿಗೆ ಸೀಮಿತವಾಗಬಾರದು, ಅದು ಹಳ್ಳಿಗೂ ತಲುಪಬೇಕು ಎಂಬ ಅವರ ತತ್ವಕ್ಕೆ ಈ ಸೇತುವೆ ಒಂದು ಸಾಕ್ಷಿಯಾಗಿದೆ.

ಸ್ಥಳೀಯ ನಾಯಕತ್ವವನ್ನು ಬೆಳೆಸುವಲ್ಲಿ ಅವರು ತೋರುತ್ತಿದ್ದ ಆಸಕ್ತಿ ಅಪಾರ. ಕಾರ್ಯಕರ್ತರೊಂದಿಗೆ ನೇರ ಸಂಪರ್ಕ ಹೊಂದುವುದು ಹಾಗೂ ಕ್ಷೇತ್ರದ ಪ್ರತಿಯೊಂದು ಸಣ್ಣ ವಿಚಾರದಲ್ಲೂ ಕಾಳಜಿ ವಹಿಸುವುದು ಕಾರ್ಕಳದ ಜನರಲ್ಲಿ ಅವರಿಗೆ ವಿಶೇಷ ಗೌರವ ತಂದುಕೊಟ್ಟಿದೆ. ಪ್ರತಿ ಚುನಾವಣೆಯ ಸಂದರ್ಭದಲ್ಲೂ ಅವರ ಭೇಟಿಯು ಕಾರ್ಯಕರ್ತರಲ್ಲಿ ವಿಜಯದ ವಿಶ್ವಾಸವನ್ನು ತುಂಬುತ್ತಿತ್ತು. ಕಾರ್ಕಳದ ಸಂಪ್ರದಾಯ, ಕಂಬಳದಂತಹ ಜಾನಪದ ಕ್ರೀಡೆಗಳ ಬಗ್ಗೆಯೂ ಅವರು ಅಪಾರ ಗೌರವ ಹೊಂದಿದ್ದರು. ಹೀಗೆ ರಾಜಕೀಯ ನಾಯಕನಾಗಿ, ಅಭಿವೃದ್ಧಿಯ ಹರಿಕಾರನಾಗಿ ಮತ್ತು ಜನರ ನಾಯಕನಾಗಿ ಬಿ.ಎಸ್. ಯಡಿಯೂರಪ್ಪ ಹಾಗೂ ಕಾರ್ಕಳ ಕ್ಷೇತ್ರದ ನಡುವೆ ಇರುವ ಈ ಸಂಬಂಧವು ಮುಂದಿನ ದಿನಗಳಲ್ಲೂ ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿ ಉಳಿಯಲಿದೆ. ಕಾರ್ಕಳದ ಅಭಿವೃದ್ಧಿಯ ಪರ್ವದಲ್ಲಿ ಯಡಿಯೂರಪ್ಪ ಹೆಸರು ಮುಂಚೂಣಿಯಲ್ಲಿರುತ್ತದೆ, ಅವರು ಹಾಕಿಕೊಟ್ಟ ಭದ್ರ ಬುನಾದಿ ಮೇಲೆ ಇಂದು ಕಾರ್ಕಳವು ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆ. ಈ ಬಾಂಧವ್ಯವು ಕೇವಲ ಅಧಿಕಾರಕ್ಕಾಗಿ ಅಲ್ಲದೆ, ಜನ ಸೇವೆಯ ಮೂಲಕ ಗಟ್ಟಿ ಸ್ನೇಹದ ಸಂಕೇತವಾಗಿದೆ.